## ಸೋಮವಾರ, ೮ನೇ ನವೆಂಬರ್, ೧೯೪೮

ಭಾರತದ ಸಂವಿಧಾನ ರಚನಾಸಭೆಯು ನವದೆಹಲಿಯ ಸಂವಿಧಾನ ಸಭಾಂಗಣದಲ್ಲಿ ಬೆಳಗ್ಗೆ ೧೦ ಗಂಟೆಗೆ ಮಾನ್ಯ ಉಪಸಭಾಧ್ಯಕ್ಷರಾದ ಡಾ. ಎಚ್.ಸಿ. ಮುಖರ್ಜಿ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

### ಪ್ರಮಾಣವಚನ ಸ್ವೀಕರಿಸಿ ದಾಖಲೆಪುಸ್ತಕದಲ್ಲಿ ಸಹಿ ಹಾಕುವುದು :

ಕೆಳಕಾಣಿಸಿದ ಸದಸ್ಯರು ಪ್ರಮಾಣವಚನ ಸ್ವೀಕರಿಸಿ ದಾಖಲೆಪುಸ್ತಕದಲ್ಲಿ ಸಹಿ ಹಾಕಿದರು.

**ಶ್ರೀ ಎಚ್.ಪಿ. ಮೋದಿ** (ಬಾಂಬೆ : ಸಾಮಾನ್ಯ)

### ಕರಡು ಸಂವಿಧಾನಕ್ಕೆ ಸಂಬಂಧಿಸಿದ ಪ್ರಸ್ತಾವ

**ಮಾನ್ಯ ಉಪಸಭಾಧ್ಯಕ್ಷರು** (ಡಾ. ಎಚ್.ಸಿ. ಮುಖರ್ಜಿ) : ನಾವು ಇಂದು ಸಾಮಾನ್ಯ ಚರ್ಚೆ ಮುಗಿಸಬೇಕು ಎಂಬುದು ಸದನದ ನಿರ್ಣವಾಗಿದೆ. ನನ್ನ ಪಟ್ಟಿಯಲ್ಲಿ ಸುಮಾರು ಅರುವತ್ತು ಹೆಸರುಗಳಿವೆ ಮತ್ತು ಪ್ರತಿಯೊಬ್ಬರಿಗೂ ಅವಕಾಶ ಕೊಡುವುದಕ್ಕೆ ಸಾಧ್ಯವೇ ಇಲ್ಲ.

**ಅನೇಕ ಗೌರವಾನ್ವಿತ ಸದಸ್ಯರು** : ನೀವು ಹೇಳುವುದು ನಮಗೆ ಕೇಳಿಸುತ್ತಿಲ್ಲ, ಧ್ವನಿವರ್ಧಕ ಕೆಲಸ ಮಾಡುತ್ತಿಲ್ಲ ಎಂಬುದು ಸ್ಪಷ್ಟ.

**ಮಾನ್ಯ ಉಪಸಭಾಧ್ಯಕ್ಷರು** : ಮಾತನಾಡಬಯಸುವ ಪ್ರತಿಯೊಬ್ಬ ಸದಸ್ಯರಿಗೂ ಅವಕಾಶ ಕೊಡಲು ನನಗೆ ಸಾಧ್ಯವಿಲ್ಲ. ಆದುದರಿಂದ ನಾನು, ಅಲ್ಪಸಂಖ್ಯಾತ ಸಮುದಾಯಗಳ ಸದಸ್ಯರಿಗೆ ಮಾತನಾಡಲು ಮೊದಲು ಅವಕಾಶ ಕೊಡಲು ನಿರ್ಧರಿಸಿದ್ದೇನೆ. ಶ್ರೀ ಮಹಬೂಬ್ ಅಲಿಬೇಗ್.

**ಮಹಬೂಬ್ ಅಲಿಬೇಗ್ ಸಾಹೇಬ್ ಬಹಾದೂರ್** (ಮದ್ರಾಸ್ : ಮುಸ್ಲಿಮ್) : ಮಾನ್ಯ ಉಪಸಭಾಧ್ಯಕ್ಷರೆ, ಡಾ. ಅಂಬೇಡ್ಕರ್ ಅವರ ವಿಶ್ಲೇಷಣೆ ಮತ್ತು ಪರಾಮರ್ಶೆಗಳು ಗಮನಾರ್ಹವಾಗಿ ಸರಳವಾಗಿದೆ, ನೈಪುಣ್ಯದಿಂದ ಮತ್ತು ಸಾಕಷ್ಟು ಸಲಹಾತ್ಮಕ ಹಾಗೂ ವಿವರಣಾತ್ಮಕವಾಗಿದೆ. ಯಾರಾದರೂ ಅವರ ಅಭಿಪ್ರಾಯಗಳನ್ನು ಒಪ್ಪದಿರಬಹುದು, ಆದರೆ ಈ ಸದನದ ಪರಿಗಣನೆಗೆ ತಮ್ಮ ಪ್ರಸ್ತಾವವನ್ನು ಮಂಡಿಸುವಾಗ ಅವರು ಮಾಡಿದ ಭಾಷಣದ ಅನ್ಯೋನ್ಯ ನಿರ್ವಹಣೆಗೆ ಪ್ರಶಂಸಿಸದೇ ಇರಲಾರರು.

ಮಾನ್ಯರೆ, ನನಗೆ ಆತಂಕ, ನಾನು ಕರಡು ಸಂವಿಧಾನದಲ್ಲಿ ವಿವರಿಸಿದ ಸರ್ಕಾರದ ಸ್ವರೂಪವನ್ನಾಗಲಿ ಅಥವಾ ಸಂವಿಧಾನದ ಸ್ವರೂಪವನ್ನಾಗಲಿ ಅಥವಾ ಅವುಗಳನ್ನು ಸಮರ್ಥಿಸಿ ಡಾ. ಅಂಬೇಡ್ಕರ್ ಅವರು ಕೊಟ್ಟಿರುವ ಕಾರಣಗಳನ್ನಾಗಲಿ ಒಪ್ಪಲು ನನ್ನಿಂದಾಗುತ್ತಿಲ್ಲ.

ಮೊದಲನೆಯದಾಗಿ, ನಾನು ಸರ್ಕಾರದ ಸ್ವರೂಪದ ಬಗ್ಗೆ ಚರ್ಚಿಸುತ್ತೇನೆ. ಡಾ. ಅಂಬೇಡ್ಕರ್ ಅವರ ಅಭಿಪ್ರಾಯ, ಪ್ರಕಾರ ಬ್ರಿಟಿಷ್ ಸಂಸದೀಯ ಕಾರ್ಯಾಂಗವು ಅಮೆರಿಕನ್ ಸಂಸದಿಯೇತರ ಕಾರ್ಯಾಂಗಕ್ಕಿಂತ ಮೇಲು ಎನಿಸುತ್ತಿದೆ. ಹೇಗೆಂದರೆ, ಬ್ರಿಟಿಷ್ ಸಂಸದೀಯ ಕಾರ್ಯಾಂಗವು ಹೆಚ್ಚು ಹೊಣೆಗಾರಿಕೆಯುಳ್ಳದ್ದಾದರೂ

ಕಡಿಮೆ ಸ್ಥಿರವಾಗಿದೆ. ಅಮೆರಿಕನ್ ಸಂಸದೀಯೇತರ ಕಾರ್ಯಾಂಗವು ಹೆಚ್ಚು ಸ್ಥಿರವಾಗಿದೆ ಆದರೆ ಹೊಣೆಗಾರಿಕೆ ಕಡಿಮೆ, ಮಾನ್ಯರೆ, ಸಂದೀಯ ಕಾರ್ಯಾಂಗದ ಅನುಕೂಲಗಳನ್ನು ಉತ್ಪ್ರೇಕ್ಷಿಸಲಾಗಿದೆ ಮತ್ತು ದೋಷಗಳನ್ನು ಕೂಡ ಮಾಡಲಾಗಿದೆ ಎಂದು ನಾನು ಹೇಳಬೇಕಾಗುತ್ತಿದೆ. ಸಾಮಾನ್ಯ ಜ್ಞಾನದಿಂದ ಮತ್ತು ಅನುಭವದಿಂದ, ಹೇಳುವುದಾದರೆ ನಾವು ಕಳೆದ ಎರಡು ದಶಕಗಳಿಂದ ಯಾವುದರ ಅಡಿ ಕೆಲಸಮಾಡುತ್ತಿದ್ದೇವೆಯೋ, ಆ ಜವಾಬ್ದಾರಿಯುತ ಕಾರ್ಯಾಂಗವು ತೆಗೆದುಹಾಕಬಹುದಾದ ಸಂಸದೀಯ ಕಾರ್ಯಾಂಗವು ಆ ಪಕ್ಷದಲ್ಲಿರುವ ವಿರೋಧಿ ಗುಂಪುಗಳ ಕೃಪೆಯಲ್ಲಿದೆ ಎಂಬ ಸತ್ಯಾಂಶವು ನಮ್ಮ ಗಮನಕ್ಕೆ ಬಂದಿದೆ. ತನ್ನ ಮುಂದೆ ಇರುವ ಕಾರ್ಯಕ್ರಮವನ್ನು ನಡೆಸಲು ಕಾರ್ಯಾಂಗಕ್ಕೆ ಅತ್ಯಂತ ಕಡಿಮೆ ಸಮಯ ಉಳಿದಿದೆ. ಅವಿಶ್ವಾಸ ಪ್ರಸ್ತಾವಗಳ ಮೂಲಕ ತೆಗೆದುಹಾಕಬಹುದೆಂಬ ಭಯದಲ್ಲೇ ಯಾವಾಗಲೂ ಅದು ಇರುವಂತಾಗಿದೆ. ಮಾನ್ಯರೆ, ಅದೇ ಭ್ರಷ್ಟಾಚಾರದ ಬೀಜಗಳನ್ನು ಬಿತ್ತಬಹುದಾದ ಸಂದರ್ಭಗಳೂ ಇವೆ. ಭ್ರಷ್ಟ ಪಕ್ಷದ ಸದಸ್ಯನನ್ನು ಪ್ರಸಕ್ತ ಸಂವಿಧಾನದಡಿ ಅಥವಾ ಪ್ರಸ್ತಾವಿತ ಸಂವಿಧಾನದಡಿ ಮತದಾರರ ಸಮುದಾಯದಿಂದ ತೆಗೆದುಹಾಕಲು ಆಗುವುದಿಲ್ಲ. ಸಚಿವನಾಗಲಿ ಅಥವಾ ಸಚಿವರಾಗಲಿ ತಮ್ಮ ಪಕ್ಷದಲ್ಲಿನ ಹಲವು ವ್ಯಕ್ತಿಗಳ ಎಲ್ಲ ನ್ಯಾಯಯುತವಾದ ಮತ್ತು ನ್ಯಾಯಯುತವಲ್ಲದ ಬೇಡಿಕೆಗಳನ್ನು ತೃಪ್ತಿಪಡಿಸಲು, ಯಾವಾಗಲೂ ತುಂಬ ಎಚ್ಚರದಿಂದ ಇರಬೇಕಾಗುತ್ತದೆ. ಮಾನ್ಯರೆ, ಇದು ಕೆಲವು ಸಮಯದ ಹಿಂದೆ, ಸೈಮನ್ ಆಕ್ಟ್ ಆಯೋಗವೆಂದು ಕರೆಯಲಾದ ಹಾಗೂ ಭಾರತಕ್ಕೆ ಕಳುಹಿಸಲಾಗಿದ್ದ ಆಯೋಗದ ಅಭಿಪ್ರಾಯ ಕೂಡ ಆಗಿತ್ತು. ಸಚಿವಾಲಯವು ತನ್ನ ಸಂಸತ್ತಿನ ಮುಖಸ್ತುತಿ ಮಾಡುತ್ತಾ, ಅದನ್ನು ತೃಪ್ತಿಪಡಿಸುವುದರಲ್ಲಿ ಎಷ್ಟು ತೊಡಗಿರುತ್ತದೆಯೆಂದರೆ, ಅವರ ಆಡಳಿತ ನೋಡಿಕೊಳ್ಳಲು ಇಲ್ಲವೆ ಅವರ ಯೋಜನೆಗಳನ್ನು ಜಾರಿಗೆ ತರಲು ಸಮಯವೇ ಇರುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಅದು ಬಹಳ ಒಂದು ಗಂಭೀರವಾದ ದೋಷ. ಅಷ್ಟೇ ಅಲ್ಲದೆ ಪಕ್ಷದ ಹಲವಾರು ಸದಸ್ಯರು "ನಾವು ನಮ್ಮ ಆತ್ಮಸಾಕ್ಷಿಯಂತೆ ಮತ ಹಾಕಲಾರೆವು, ಪಕ್ಷದ ಶಿಸ್ತುಪಾಲನೆಗೆ (ವಿಪ್‌ಗೆ) ಬದ್ಧರಾಗಿದ್ದೇವೆ, ಆ ದೇವರೆ ನಮ್ಮನ್ನು ಈ ಪಕ್ಷ ವ್ಯವಸ್ಥೆಯಿಂದ ಕಾಪಾಡಲಿ" ಎಂದು ಹೇಳುವುದನ್ನು ಕೇಳಿದ್ದೇನೆ. ಹಲವು ಪ್ರಾಮಾಣಿಕ ಶಾಸಕರೂ ಇದನ್ನೇ ವ್ಯಕ್ತಪಡಿಸಿದ್ದಾರೆ. ಮಾನ್ಯರೆ, ನಾನು ಹೇಳಿದಂತೆ ಸ್ಥಿರತೆ ಎಂಬುದು ಇಲ್ಲವೇ ಇಲ್ಲ.

ಈ ಸಂಸದೀಯ ಕಾರ್ಯಾಂಗಕ್ಕೆ ವಿರುದ್ಧವಾಗಿ ನಾನು ಹೇಳಬಯಸುವ ಮೂರನೆಯ ಅಂಶವೇನೆಂದರೆ ಈ ಸಂಸದೀಯ ಕಾರ್ಯಾಂಗವು ದೇಶದ ವಿವಿಧ ವರ್ಗಗಳನ್ನು ಬಿಂಬಿಸಲಾರದು. ಈ ದೋಷಗಳು ಅತ್ಯಂತ ವಿನಾಶಕಾರಿಯಾಗಿವೆ, ಎಂದರೆ, ಯಾವ ಸರ್ಕಾರವು ತನ್ನ ಪಕ್ಷದ ಕೆಲವು ಭ್ರಷ್ಟ ಬೆಂಬಲಿಗರನ್ನು ತೃಪ್ತಿಪಡಿಸಲು ಸಮರ್ಥವಾಗಿರುವುದಿಲ್ಲವೋ, ಅದನ್ನು ರಾತ್ರೋ ರಾತ್ರಿ ಬೀಳಿಸಲಾಗುವುದೆಂಬ ಭಯದಲ್ಲಿ ಆ ಸರ್ಕಾರಕ್ಕಿಂತ ಸ್ಥಿರಸರ್ಕಾರ ಇರಬೇಕೆಂದು ಬಯಸುತ್ತೇನೆ. ಈಗ, ಪ್ರಜಾಪ್ರಭುತ್ವ ಸರ್ಕಾರದಲ್ಲಿ, ಕಾರ್ಯಾಂಗವು ಜವಾಬ್ದಾರಿಯುತವಾಗಿರಬೇಕೆಂಬುದು ನಿಜ. ಜವಾಬ್ದಾರಿ ಮತ್ತು ಸ್ಥಿರತೆ ಎರಡೂ ಉಳ್ಳ ಸರ್ಕಾರದ ಯಾವುದೇ ಇತರ ವ್ಯವಸ್ಥೆಯಲ್ಲಿ ಇದೆಯೇ ಎಂಬುದನ್ನು ನಾವು ನೋಡೋಣ. ನಿಸ್ಸಂಶಯವಾಗಿ ಅಮೆರಿಕನ್ ವ್ಯವಸ್ಥೆಯಲ್ಲಿ ಕಡಿಮೆ ಜವಾಬ್ದಾರಿ ಮತ್ತು ಹೆಚ್ಚು ಸ್ಥಿರತೆ ಇದೆ ಎಂಬುದು ನಿಜ. ಆದರೆ, ನೀವು ಇನ್ನೊಂದು ವ್ಯವಸ್ಥೆ ಸರ್ಕಾರವನ್ನು ನೋಡಿದರೆ, ಎಂದರೆ ಸ್ವಿಸ್ ಮಾದರಿಯ ಸರ್ಕಾರ, ಅಲ್ಲಿ ಚುನಾಯಿತ ಸಂಸತ್ತು ಇರುತ್ತದೆ, ಅದೇ ಕಾರ್ಯಾಂಗದ ಅಧಿಕಾರ ಚುನಾಯಿಸುತ್ತದೆ. ಅಲ್ಲಿ ಆ ಜವಾಬ್ದಾರಿಗೆ ಒತ್ತು ಕೊಡಲಾಗುತ್ತದೆ. ಅದು ಕಾರ್ಯಾಂಗವನ್ನು ಚುನಾಯಿಸಿದ ಮೇಲೆ, ಅದು ಕಾರ್ಯಾಂಗವನ್ನು ನಾಲ್ಕು ವರ್ಷಗಳ ಅವಧಿಯವರೆಗೆ ತೃಪ್ತಿಕರ ರೀತಿಯಲ್ಲಿ ತನ್ನ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಬಿಡುತ್ತದೆ. ಸಂಸತ್ತಿನ ತೀರ್ಮಾನಗಳಿಗೆ ಕಾರ್ಯಾಂಗವು ಬದ್ಧವಾಗಿರಬೇಕಾಗುತ್ತದೆ. ಆದರೆ ಅಮೆರಿಕನ್ ಅಧ್ಯಕ್ಷೀಯ ಕಾರ್ಯಾಂಗದ ಸಂದರ್ಭದಲ್ಲಿ ಹಾಗೆ ಇರುವುದಿಲ್ಲ. ಆದುದರಿಂದ, ನಾವು ಸ್ಥಿರತೆ ಮತ್ತು ಜವಾಬ್ದಾರಿ ಎರಡೂ ಇರಬೇಕೆಂದು ಬಯಸಿದಲ್ಲಿ "ಸ್ವಿಸ್" ವ್ಯವಸ್ಥೆಯ ಕಾರ್ಯಾಂಗ ಸೂಕ್ತವಾಗುತ್ತದೆ.

ಮಾನ್ಯರೆ, ಈಗ ಸಂವಿಧಾನದ ಸ್ವರೂಪ ಕುರಿತಂತೆ ಹೇಳುವುದಾದರೆ, ಕರಡು ಸಂವಿಧಾನದಲ್ಲಿ ಒಳಗೊಂಡಿರುವ ಸಂವಿಧಾನದ ಸ್ವರೂಪವನ್ನು ಒಪ್ಪಲು ನನ್ನಿಂದಾಗುತ್ತಿಲ್ಲ. ಕೇಂದ್ರವು ಬಲಿಷ್ಠವಿರಬೇಕು ಎಂದು ಜನ ಭಾವಿಸಿರುವಂತೆ ಕಂಡುಬರುತ್ತಿದೆ. ಮತ್ತು ಕೇಂದ್ರ ತುಂಬಾ ಬಲಿಷ್ಠವಿದ್ದರೆ ಕೇಂದ್ರ ಬಲಿಷ್ಠವಾಗುವ ದಾರಿಯಲ್ಲಿ ಯಾವಾಗಲೂ ಪ್ರಾಂತ್ಯಗಳು ಅಡ್ಡಿಯಾಗುತ್ತವೆ. ಅದು ಒಂದು ತಪ್ಪು ಅಭಿಪ್ರಾಯ. ಪ್ರಾಂತ್ಯಗಳನ್ನು ಸ್ವಾಯತ್ತಗೊಳಿಸಿದರೆ, ಕೇಂದ್ರವು ದುರ್ಬಲವಾಗುತ್ತದೆ ಎಂದೇನೂ ಅರ್ಥವಲ್ಲ! ನಮಗೆ ಇಲ್ಲಿ ಏನು ಕಂಡುಬರುತ್ತದೆ. ಪ್ರಾಂತ್ಯಗಳು, ವೈಭವೀಕರಿಸಿದ ಜಿಲ್ಲಾ ಮಂಡಲಿಗಳಲ್ಲದೆ ಬೇರೇನೂ ಅಲ್ಲ ಎಂಬುದು ನನ್ನ ಅಭಿಪ್ರಾಯ. ೨೭೫ನೇ ಅನುಚ್ಛೇದ ನೋಡಿ, ಅದರಲ್ಲಿ ತುರ್ತುಸ್ಥಿತಿಯಲ್ಲಿ ಎಲ್ಲ ಅಧಿಕಾರಗಳು ಕೇಂದ್ರದ ವಶವಾಗುತ್ತವೆ. ೨೨೬, ೨೨೭ ಮತ್ತು ೨೨೯ನೇ ಅನುಚ್ಛೇದಗಳನ್ನು ನೋಡಿ. ಕೇಂದ್ರವು ಎಲ್ಲ ವಿಷಯಗಳಲ್ಲಿ ಪ್ರಾಂತ್ಯಗಳಿಗೆ ಶಾಸನಮಾಡಬಹುದು; ಒಕ್ಕೂಟದ ಸುದೀರ್ಘ ಪಟ್ಟಿಯನ್ನು ಮತ್ತು ಸಹವರ್ತಿಪಟ್ಟಿಯನ್ನು ನೋಡಿ. ಮೇಲುಗೈ ಸಾಧಿಸಬಯಸುವ ಮತ್ತು ಒಕ್ಕೂಟ ವ್ಯವಸ್ಥೆಯನ್ನು ಏಕೀಕೃತ ವ್ಯವಸ್ಥೆಯಾಗಿ ಪರಿವರ್ತಿಸಬಯಸುವ ಕೇಂದ್ರ ಸರ್ಕಾರವು ಅದನ್ನು ಸುಲಭವಾಗಿ ಮಾಡುವುದು ಅದರ ಕೈಯಲ್ಲೇ ಎಂಬುದು ಸ್ಪಷ್ಟವಾಗುತ್ತದೆ. ಹೀಗೆ ಇಂಥ ಸರ್ಕಾರವು ನಿರಂಕುಶವಾಗುವ ಅಪಾಯವಿದೆ. ಕರಡು ಸಂವಿಧಾನದಲ್ಲಿ ಒಳಗೊಂಡಿರುವ ಸಂವಿಧಾನದ ಸ್ವರೂಪದಲ್ಲಿ ಇರುವ ಒಂದು ಅಪಾಯ ಇದು. ಈಗ ಇದಕ್ಕೆ ಸೇರಿಸಲು ಘೋಷಿಸಲಾಗಿರುವ ಮೂಲಭೂತ ಹಕ್ಕುಗಳ ಕಡೆ ನೋಡಿ. ಅವುಗಳನ್ನು ಮೂಲಭೂತ ಹಕ್ಕುಗಳು ಎಂದು ಕರೆಯಬಹುದೇ? ಮೂಲಭೂತ ಹಕ್ಕುಗಳು ಯಾವುವೆಂದರೆ ಸ್ವರೂಪ ಲಕ್ಷಣದಲ್ಲಿ ಮೂಲಭೂತವಾಗಿದ್ದು, ಅತ್ಯಂತ ಗಂಭೀರ ಸಂದರ್ಭಗಳ ಹೊರತಾಗಿ ಬದಲಾಯಿಸಲಾಗದಂಥವು ಆಗಿರಬೇಕು. ಆದರೆ ಇಲ್ಲಿ ಏನು ಕಂಡುಬರುತ್ತಿದೆ? ಈ ಮೂಲಭೂತ ಹಕ್ಕುಗಳಲ್ಲಿ ಅಧಿಕ ಪ್ರಭಾವ ಅಪವಾದಗಳ ನಿಬಂಧನೆಗಳಿಂದ ಸುತ್ತುವರಿಯಲ್ಪಟ್ಟಿದೆ. ಮೂಲಭೂತ ಹಕ್ಕುಗಳನ್ನು ಕುರಿತ ಅಧ್ಯಾಯದಲ್ಲಿ, ತುಸು ಗೊಂದಲವಿದೆ ಕೂಡ ಇದೆ. ಸರ್ಕಾರವು ಕೆಲವು ಸಂದರ್ಭಗಳಲ್ಲಿ ಮೂಲಭೂತ ಹಕ್ಕುಗಳನ್ನು ಅತಿಕ್ರಮಿಸಲಾಗದೇ ಎಂಬುದನ್ನು ಸರ್ವೋಚ್ಚನ್ಯಾಯಾಲಯ ನಿರ್ಧರಿಸುವ ಬದಲು, ಕರಡಿನಲ್ಲೇ ಉಪಬಂಧ ಕಲ್ಪಿಸಲಾಗಿದೆ ಎಂದು ಕಂಡುಬರುತ್ತದೆ ಎಂದು ಅನುಭವದಿಂದ ಹೇಳಲಾಗುತ್ತದೆ. ಮಾನ್ಯರೆ, ಸಂವಿಧಾನದ ಸ್ವರೂಪಕ್ಕೆ ಉಪಬಂಧಗಳಲ್ಲಿ ಅದು ಹೊಂದಿಕೊಳ್ಳುವಂಥ ಸಂವಿಧಾನ ಆಗಿರಬೇಕು ಎಂದು ಹೇಳಲಾಗಿದೆ. ಡಾ. ಅಂಬೇಡ್ಕರ್ ಅವರಿಗೆ ಗೌರವ ಸಲ್ಲಿಸುತ್ತ, ಅವರು ತಪ್ಪಿಸಲೇಬೇಕೆಂದು ಹೇಳುವ ಅನಮ್ಯತೆ ಮತ್ತು ಕಾನೂನುಬದ್ಧತೆ, ಇವು ಲಿಖಿತ ಸಂವಿಧಾನದ ವೈಶಿಷ್ಟ್ಯ ಎಂದು ಹೇಳಬಹುದೆ? ಬ್ರಿಟನ್ನಿನಲ್ಲಿರುವಂತೆ ಅದು ಒಂದು ಅಲಿಖಿತ ಸಂವಿಧಾನವಲ್ಲ. ಮಾನ್ಯರೆ, ಬ್ರಿಟನ್ ಸಂದರ್ಭದಲ್ಲಿ ಅದು ಇತಿಹಾಸದ ವಿಷಯ. ಅದು ಒಂದು ಅಲಿಖಿತ ಸಂವಿಧಾನ ಮತ್ತು ಅದು ಯಾವುದೇ ಲಿಖಿತ ಸಂವಿಧಾನವಿಲ್ಲದೇ ಬ್ರಿಟಿಷ್ ಜನರು ಕೆಲಸಮಾಡಿಕೊಂಡು ಹೋಗುವಂಥ ವೈಶಿಷ್ಟ್ಯಪೂರ್ಣ ಪ್ರತಿಭೆಗೆ ಹೊಂದಿಕೆಯಾಗುವಂಥದ್ದು ಮತ್ತು ವೈಶಿಷ್ಟ್ಯಪೂರ್ಣ ಸಂಸದೀಯ ಪ್ರಜಾಪ್ರಭುತ್ವವು, ಬ್ರಿಟಿಷ್ ಸರ್ಕಾರಕ್ಕೆ ಹೊಂದಿಕೆಯಾಗುವಂಥದ್ದು. ಡಾ. ಅಂಬೇಡ್ಕರ್ ಅವರು ಆಕ್ಷೇಪಿಸಿರುವಂತೆ, ಅನಮ್ಯತೆ ಮತ್ತು ಕಾನೂನುಬದ್ಧತೆಗಳು ಲಿಖಿತ ಸಂವಿಧಾನದ ಆವಶ್ಯಕ ಮತ್ತು ಅನಿವಾರ್ಯ ಲಕ್ಷಣಗಳು. ಯಾವುದೇ ಸರ್ಕಾರವು ಮೂಲಭೂತ ಹಕ್ಕುಗಳ ಮೇಲೆ ಕಟ್ಟಿಹಾಕಲು ಅವಕಾಶ ಮಾಡುವಷ್ಟು ನಮ್ಯವಾಗಿರಬೇಕೆಂಬುದನ್ನು ನಾವು ಇಷ್ಟಪಡುವುದಿಲ್ಲ. ಅವು ಹಾಗೆ ಅನೇಕ ವಿನಾಯಿತಿಗಳಿಂದ ಪ್ರತಿಬಂಧಿತವಾಗಿದ್ದರೆ ಅವು ಎಂದಿಗೂ ಲಿಖಿತ ಹಕ್ಕುಗಳಲ್ಲವೇ ಅಲ್ಲ. ಈ ಅನುಚ್ಛೇದಗಳಲ್ಲಿ ಮೂಲಭೂತ ಹಕ್ಕುಗಳೆಂದು ಏನು ಹೇಳಲಾಗಿದೆಯೊ ಅವು ನಿರುಪಯುಕ್ತವೆಂದು ನಿರೂಪಿಸಲಾಗಿದೆ. ಅಷ್ಟೇ ಅಲ್ಲದೇ ಈ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದಂತೆ ೧೫ನೇ ಪ್ರಕರಣದಲ್ಲಿ, ಇದರಲ್ಲಿ ಇರುವುದು ಯಾವುದೂ ಹಾಲಿ ಕಾನೂನುಗಳ ಕಾರ್ಯಾಚರಣೆಗೆ ಬಾಧಕವಾಗುವುದಿಲ್ಲ ಎಂದು ಹೇಳಲಾಗಿದೆ ಹಾಲಿ ಕಾನೂನುಗಳು ಎಷ್ಟು ಪ್ರತಿಗಾಮಿಗಳಾಗಿವೆ ಎಂದು

ನೀವು ಚೆನ್ನಾಗಿ ಬಲ್ಲಿರಿ. ಮೂಲಭೂತ ಹಕ್ಕುಗಳಿಗೆ ಅಸಂಗತವಾಗಿರುವ ಎಲ್ಲ ಕಾನೂನುಗಳು ಹೋಗಬೇಕು ಎಂದು ೮ನೇ ಅನುಚ್ಛೇದದಲ್ಲಿ ಹೇಳಿರುವುದರಲ್ಲಿ ಸಂದೇಹವೇ ಇಲ್ಲ. ಆದರೆ, ಹಾಲಿ ಕಾನೂನುಗಳು ಮೂಲಭೂತ ಹಕ್ಕುಗಳಿಗೆ ಪ್ರತಿಯಾಗಿ ಇರಬೇಕು ಎಂದು ೧೩ನೇ ಅನುಚ್ಛೇದದಲ್ಲಿ ಹೇಳಲಾಗಿದೆ. ಅಲ್ಲಿ ವಿರೋಧವಿದೆಯಲ್ಲದೆ ಗೊಂದಲವೂ ಇದೆ. ಮಾನ್ಯರೆ, ೮ನೇ ಅನುಚ್ಛೇದದ ಅಡಿಯಲ್ಲಿರುವ ಅಧಿನಿಯಮಗಳನ್ನು ಮತ್ತು ಅವುಗಳ ಪ್ರಕರಣಗಳನ್ನು ನಮೂದಿಸಲಾಗಿದೆಯೋ ಹಾಗೂ ಯಾವುದನ್ನು ಅನೂರ್ಜಿತಗೊಳಿಸಲಾಗಿದೆಯೋ ಅವುಗಳ ಪಟ್ಟಿಯನ್ನು ಕೊಟ್ಟಿದ್ದರೆ ನನಗೆ ಅರ್ಥವಾಗಬಹುದಿತ್ತು. ಆ ಪ್ರಕರಣದಲ್ಲಿ ಅದನ್ನು ಸ್ಪಷ್ಟಪಡಿಸಿಲ್ಲ. ಮಾನ್ಯರೆ, ಈ ಸಂದರ್ಭಗಳಲ್ಲಿ ಯಾವ ಮೂಲಭೂತ ಹಕ್ಕುಗಳೂ ಇಲ್ಲ ಎಂಬುದು ಎಂದು ನನಗೆ ಆತಂಕದ ಸಂಗತಿಯಾಗಿದೆ.

ಅಲ್ಪಸಂಖ್ಯಾತರ ಹಕ್ಕುಗಳಿಗೆ ಸಂಬಂಧಿಸಿದಂತೆ ಒಂದು ವಿಷಯವನ್ನು ನಾನು ಹೇಳಲೇಬೇಕಾಗಿದೆ. ಜನರ ವೈಯಕ್ತಿಕ ಕಾನೂನನ್ನು ರಕ್ಷಿಸುವ ಉಪಬಂಧಗಳ ಬಗ್ಗೆ ಎಲ್ಲಿಯೂ ನಮೂದು ಇರುವುದಿಲ್ಲ. ಮಾನ್ಯರೆ, ತಾವು ಬಲ್ಲಿರಿ, ಭಾರತದಲ್ಲಿ ಅನೇಕ ಸಮುದಾಯಗಳ ಜನರು ಅವರವರ ಧರ್ಮವನ್ನು ಆಧರಿಸಿದ ವೈಯಕ್ತಿಕ ಕಾನೂನುಗಳಿಂದ ನಿಯಂತ್ರಿಸಲ್ಪಡುತ್ತಿದ್ದಾರೆ. ವೈಯಕ್ತಿಕ ಕಾನೂನುಗಳನ್ನು ಕುರಿತೂ ಶಾಸನ ಮಾಡಲು ಸಾಧ್ಯವಿದೆ. ಅದು ಈ ಸರ್ಕಾರವು ಜಾತ್ಯತೀತವಾಗಲಿದ್ದು, ಅದು ಜನರ ಧಾರ್ಮಿಕ ಹಕ್ಕುಗಳಲ್ಲಿ ತಲೆ ಹಾಕುವುದಿಲ್ಲ ಎಂಬುದಕ್ಕೆ ವಿರೋಧವಾಗಿದೆ ಎಂದು ಹೇಳಲಾಗುತ್ತದೆ.

ಮಾನ್ಯರೆ, ಮೀಸಲಾತಿ ಕುರಿತಂತೆ ಒಂದು ಮಾತು ಹೇಳಬೇಕಾಗಿದೆ. ನನ್ನ ಕೆಲವು ಮುಸ್ಲಿಮ್ ಗೆಳೆಯರು, ಮುಖ್ಯವಾಗಿ ಶ್ರೀ ಕರೀಮುದ್ದೀನ್, ಅವರು ತಮ್ಮ ಸಮುದಾಯಕ್ಕಾಗಿ ಮೀಸಲಾತಿ ಬಯಸುವುದಿಲ್ಲ ಎಂದು ಹೇಳುತ್ತಾರೆ. ಆದರೆ, ನಾನು ಅವರೊಂದಿಗೆ ಮಾತನಾಡಿದಾಗ, ಪ್ರತ್ಯೇಕ ಮತಕ್ಷೇತ್ರಗಳು ಇಲ್ಲದಿರುವಾಗ, ಆಯ್ಕೆಯಾದ ವ್ಯಕ್ತಿಗಳು ಬಹುಸಂಖ್ಯಾತ ಸಮುದಾಯದವರಿಂದ ಚುನಾವಣೆಗೆ ನಿಲ್ಲಿಸಲ್ಪಟ್ಟ ಹಾಗೂ ಅವರಿಂದ ಆಯ್ಕೆಗೊಂಡವರಾಗಿರುತ್ತಾರೆಂದು ಅವರು ಹೇಳಿದರು. ಆದ್ದರಿಂದ ಮುಸ್ಲಿಮ್ ಅಭ್ಯರ್ಥಿಗಳು, ಮುಸ್ಲಿಮರನ್ನು ವಾಸ್ತವವಾಗಿ ಪ್ರತಿನಿಧಿಸುವವರಾಗಿ ಚುನಾಯಿತರಾಗದೇ ಇರಬಹುದು. ಬಹುಶಃ ಈ ಕಾರಣಕ್ಕಾಗಿ ಅವರು ಮೀಸಲಾತಿಯನ್ನು ಏಕೆ ಬಯಸುತ್ತಿಲ್ಲ ಎಂದು ತೋರುತ್ತದೆ. ಯಾವ ರೀತಿಯಲ್ಲಿ ಚುನಾಯಿತರಾದ ಮುಸ್ಲಿಮರು ನಿಜವಾಗಿ ಅವರ ಸಮುದಾಯವನ್ನು ಪ್ರತಿನಿಧಿಸುತ್ತಾರೆ ಎಂಬುದನ್ನು ಕಂಡುಕೊಂಡರೆ, ಯಾವ ಆಕ್ಷೇಪಣೆಯೂ ಇರುವುದಿಲ್ಲ. ಅಲ್ಪಸಂಖ್ಯಾತರ ವಿಷಯದಲ್ಲಿ ಒಂದು ಮಾರ್ಗೋಪಾಯವನ್ನು ಕಂಡುಕೊಳ್ಳಲಾಗಿದೆ, ಉದಾಹರಣೆಗೆ: ವರ್ಗಾಯಿಸಬಹುದಾದ ಏಕಮತ ಪದ್ಧತಿಯ ಮೂಲಕ ಅನುಪಾತೀಯ ಪ್ರಾತಿನಿಧ್ಯ ಎಂದು ಕರೆಯಬಹುದಾದ ವಿಧಾನವನ್ನು ಅನುಸರಿಸಿ ಚುನಾವಣೆ ನಡೆಯುವುದಾದರೆ, ಅಂತಹ ಸಾಧನವೊಂದನ್ನು ಸಂವಿಧಾನವನ್ನು ರೂಪಿಸುವ ಜವಾಬ್ದಾರಿಯುಳ್ಳ ಜನರು ಸಿದ್ಧಪಡಿಸಿ, ಅದನ್ನು ಅಧಿಕಾರದಲ್ಲಿರುವ ಪಕ್ಷವು ಜಾರಿಗೊಳಿಸಿದ್ದೇ ಆದರೆ. ಅದು ಬಹಳ ಕಾಲದವರೆಗೂ ಅನುಷ್ಠಾನದಲ್ಲಿರಬಹುದು. ಅಂತಹ ಸಾಧನವೊಂದು ಇಲ್ಲದಿರುವಾಗ ಹಾಗೂ ಪ್ರತ್ಯೇಕ ಚುನಾವಣಾ ಕ್ಷೇತ್ರಗಳು ಇಲ್ಲದಿರುವಾಗ, ಅಲ್ಪ ಸಂಖ್ಯಾತರ ಉಪಸಮಿತಿಯಲ್ಲಿ ಒಪ್ಪಿಕೊಳ್ಳಲಾಗಿರುವ ಈ ಮೀಸಲಾತಿಯನ್ನು ಕೈಬಿಟ್ಟಲ್ಲಿ, ನನ್ನ ಸಮುದಾಯದ ಅಭಿಪ್ರಾಯವನ್ನು ನಾನು ಧ್ವನಿಸುತ್ತಿದ್ದೇನೆ ಎಂದು ನಾನು ಭಾವಿಸುವುದಿಲ್ಲ. ಮಾನ್ಯರೆ, ಒಟ್ಟಾರೆ ಈ ಕರಡು ಸಾಕಷ್ಟು ತೃಪ್ತಿಕರವಾಗಿಲ್ಲ ಎಂದು ಭಾವಿಸುತ್ತೇನೆ. ಬಹುಮಟ್ಟಿಗೆ ಸರ್ಕಾರದ ಇಂಥ ನಿಶ್ಚಿತ ವ್ಯವಸ್ಥೆಯು ಫ್ಯಾಸಿಸಂಗೆ (ನಿರಂಕುಶ ಪ್ರಭುತ್ವಕ್ಕೆ) ಅಥವಾ ಸರ್ವಾಧಿಕಾರ ವ್ಯವಸ್ಥೆಗೆ ಎಡೆಮಾಡಿ ಮತ್ತು ಅದು ನಾಗರಿಕರ ಹಾಗೂ ಅಲ್ಪಸಂಖ್ಯಾತರ ಮೌಲಿಕ ಹಕ್ಕುಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದಾದದ್ದು ಆಗಿರುತ್ತದೆ.

**ಶ್ರೀ ಜೆಡ್.ಎಚ್. ಲಾರಿ** (ಸಂಯುಕ್ತ ಪ್ರಾಂತ್ಯಗಳು : ಮುಸ್ಲಿಮ್) ಮಾನ್ಯ ಉಪಸಭಾಧ್ಯಕ್ಷರೆ, ಕರಡು ಸಂವಿಧಾನ ಕುರಿತು ನನ್ನ ನಿವೇದನಗಳನ್ನು ಮಂಡಿಸುವ ಮೊದಲು, ನಾನು ಒಂದು ಪ್ರತಿಭಟನೆ ಮಂಡಿಸುತ್ತಿದ್ದೇನೆ.

ಸಂವಿಧಾನ ರಚನಾಸಭೆಯು ಭಾಷೆಯ ಪ್ರಶ್ನೆ ಕುರಿತು ಯಾವುದೇ ತೀರ್ಮಾನ ಕೈಗೊಳ್ಳಲು ಹಿಂಜರಿದಿದೆ ಮತ್ತು ಅದರ ಪರಿಗಣನೆಯನ್ನು ಮುಂದಿನ ಹಂತಕ್ಕೆ ಮುಂದೂಡಿದೆ. ಆದರೆ, ಕರಡು ರಚನಾ ಸಮಿತಿಯು, ಅದರದೇ ನಿರ್ಣಯದಂತೆ, ಸದನದ ಕಾರ್ಯಾಕಲಾಪಗಳಿಗೆ ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಿರಬೇಕೆಂಬ ಒಂದು ಖಂಡವನ್ನು ಸೇರಿಸಿದೆ. ಇಂದಿನ ಪತ್ರಿಕೆಯಲ್ಲಿ, ನಾನು ಒಂದು ವರದಿಯನ್ನು ನೋಡಿದೆ. ಅದೇನೆಂದರೆ, ಸಂಯುಕ್ತ ಪ್ರಾಂತ್ಯಗಳಿಂದ ಮತ್ತು ಬಿಹಾರಗಳಿಂದ ಬಂದಿರುವ ಮುಸ್ಲಿಮ್ ಸದಸ್ಯರು, ದೇವನಾಗರಿ ಲಿಪಿಯಲ್ಲಿರುವ ಹಿಂದಿಯು ಅಧಿಕೃತಭಾಷೆಯಾಗಿರಬೇಕು ಎಂದು ಒಪ್ಪಿರುವರು. ಆದುದರಿಂದ ಮೊದಲೇ ಆ ಹೇಳಿಕೆಯನ್ನು ನಿರಾಕರಿಸುವುದು ಆವಶ್ಯಕ ಮತ್ತು ನಾವು ಎರಡರಲ್ಲಿ ಯಾವುದಾದರೂ ಒಂದು ಲಿಪಿಯಲ್ಲಿರುವ ಹಿಂದೂಸ್ಥಾನಿ ಭಾಷೆಗೆ ಬದ್ಧರಾಗಿದ್ದೇವೆ ಮತ್ತು ಅದು ನಮ್ಮ ತಾಯ್ನಾಡಿನ ರಾಷ್ಟ್ರಭಾಷೆಯಾಗಿರಬೇಕು ಎಂದು ಸ್ಪಷ್ಟವಾಗಿ ಹೇಳಬೇಕು ಎಂದು ತಿಳಿಯುತ್ತೇನೆ. ಇಂಗ್ಲಿಷ್ ಬಗ್ಗೆ ಹೇಳುವುದಾದರೆ ಸದನದಲ್ಲಿ ಯಾರು ಹಿಂದೂಸ್ಥಾನಿಭಾಷೆಯಲ್ಲಿ ಸುಲಭವಾಗಿ ಮಾತನಾಡಿ ಚರ್ಚೆಗಳಲ್ಲಿ ಪಾಲ್ಗೊಳ್ಳಲಾಗುವುದಿಲ್ಲವೋ ಅವರಿಗೆ ನೆರವಾಗಲು ಕೆಲವು ವರ್ಷಗಳವರೆಗೆ ಇಂಗ್ಲಿಷನ್ನು ಉಳಿಸಿಕೊಳ್ಳುವುದು ಆವಶ್ಯಕ. ಮದ್ರಾಸಿನ ಒಬ್ಬ ಗೌರವಾನ್ವಿತ ಸದಸ್ಯರು ಭಾಷೆಯ ಸಾರ್ವಭೌಮತ್ವ ಇರಬಾರದು ಎಂದು ಹೇಳಿದ್ದು ಸರಿಯಾಗಿಯೇ ಇದೆ. ಆ ಕಾರಣಕ್ಕಾಗಿ, ಇಂಗ್ಲಿಷ್‌ನ ಜೊತೆ ಯಾವುದಾದರೊಂದು ಲಿಪಿಯಲ್ಲಿರುವ ಹಿಂದೂಸ್ಥಾನಿಭಾಷೆಯುನ್ನು ಸದನದ ಕಾರ್ಯಕಲಾಪಗಳಿಗಾಗಿ ಉಪಯೋಗಿಸುವ ಭಾಷೆಯಾಗಿರಬೇಕು.

ಕರಡು ಸಂವಿಧಾನದ ಬಗ್ಗೆ ಹೇಳುವುದಾದರೆ, ಪ್ರಜಾಪ್ರಭುತ್ವ ಜಾತ್ಯತೀತ ಗಣರಾಜ್ಯದಲ್ಲಿ ಮುಖ್ಯವಾಗಿ ಮಾರ್ಗದರ್ಶಕವಾಗಿ ಅದನ್ನು ಉಪಯೋಗಿಸಲು ಉದ್ದೇಶಿಸಲಾಗಿದೆ. ಅದರಲ್ಲಿನ ಅಂಶಗಳು, ಅಲ್ಲಿ ಒಳಗೊಂಡಿರುವ ಉಪಬಂಧಗಳ ಸ್ವರೂಪ ಮತ್ತು ಅಭಿಪ್ರಾಯಗಳು ಈ ಸದನವು ಸರ್ವಾನುಮತದಿಂದ ಅಂಗೀಕರಿಸಿದ ಮತ್ತು ದೇಶವು ಸಾರ್ವತ್ರಿಕವಾಗಿ ಪ್ರಶಂಸಿಸಿರುವ ನಿರ್ಣಯದ ಉದ್ದೇಶಗಳನ್ನು ಎಷ್ಟರ ಮಟ್ಟಿಗೆ ಬೆಂಬಲಿಸಲಾಗಿದೆ ಎಂಬುದನ್ನು ನಾವು ನೋಡಬೇಕು. ಕರಡು ಸಂವಿಧಾನದ ಉಪಬಂಧಗಳ ಮೌಲ್ಯಮಾಪನ ಮಾಡಲು ನಾವು ಕರಡು ಸಂವಿಧಾನವು ಹೇಗೆ ಮಾನವನಿಗೆ ಸ್ವಾಭಾವಿಕವಾಗಿ ಅಂತರ್ನಿಹಿತವಾಗಿರುವ ಹಕ್ಕುಗಳಿಗೆ ಭರವಸೆ ನೀಡುತ್ತದೆ, ಯಾವ ಹಕ್ಕುಗಳಿಲ್ಲದಿದ್ದರೆ ಜೀವಿಸುವುದಕ್ಕೆ ಬೆಲೆಯೇ ಇರುತ್ತಿರಲಿಲ್ಲವೋ ಆ ಹಕ್ಕುಗಳಿಗೆ ಭರವಸೆ ನೀಡುತ್ತದೆ ಎಂಬುದನ್ನು ಗಮನಿಸಬೇಕು. ಸರ್ವಾಧಿಕಾರಶಾಹಿ ಪದ್ಧತಿಗೆ ಬದಲಾಗಿ ಪ್ರಜಾಪ್ರಭುತ್ವ ಸ್ವರೂಪವನ್ನು ದುರುಪಯೋಗಿಸಿಕೊಳ್ಳುವ ಎಷ್ಟರ ಮಟ್ಟಿನ ಸಾಧ್ಯತೆಯ ವಿರುದ್ಧ ಈ ಉಪಬಂಧಗಳು ಎಷ್ಟರ ಮಟ್ಟಿಗೆ ರಕ್ಷಣೆ ನೀಡುತ್ತವೆ. ಅಲ್ಪಸಂಖ್ಯಾತರ ಬಗ್ಗೆ ಉದಾರತೆಯಲ್ಲದಿದ್ದರೂ, ಎಷ್ಟರ ಮಟ್ಟಿಗೆ ನ್ಯಾಯದ ಭರವಸೆ ನೀಡುತ್ತವೆ ಮತ್ತು ಕೊನೆಯದಾಗಿ, ದೇಶದಲ್ಲಿನ ವಿವಿಧ ರಾಷ್ಟ್ರೀಯ ಘಟಕಗಳ, ಸ್ವತಂತ್ರ ಅಭಿವೃದ್ಧಿಗೆ ಅವು ಎಷ್ಟರ ಮಟ್ಟಿಗೆ ಭರವಸೆ ನೀಡುತ್ತವೆ ಎಂಬುದನ್ನು ನಾವು ನೋಡಬೇಕು. ಉಪಬಂಧಗಳ ಮೌಲ್ಯಮಾಪನಮಾಡುವುದಕ್ಕಾಗಿ, ನಾವು ಎರಡು ವಿಷಯಗಳನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು, ಎಂದರೆ ಮೊದಲನೆಯದಾಗಿ, ನಿರ್ಣಯದ ಮಂಡನಕಾರರಾದ ಗೌರವಾನ್ವಿತ ಡಾ. ಅಂಬೇಡ್ಕರ್ ಅವರು ಮಂಡಿಸಿದ ಕೆಲವು ಅಂಗೀಕಾರಗಳು ಮತ್ತು ಎರಡನೆಯದಾಗಿ ಸ್ವಾತಂತ್ರ್ಯ ಗಳಿಸಿದ ಅನಂತರ ಕಳೆದ ಹದಿನೈದು ತಿಂಗಳುಗಳಲ್ಲಿ ಪ್ರಜಾಪ್ರಭುತ್ವದ ಕಾರ್ಯನಿರ್ವಹಣೆಯಲ್ಲಿ ಆಗಿರುವ ನಮ್ಮ ಅನುಭವ. ಕರಡು ಸಂವಿಧಾನದ ಆಧಾರವಾಗಿರುವ ನಿರ್ಣಯಗಳನ್ನು ಸದನವು ಅಂಗೀಕರಿಸಿದಾಗ ನಮಗೆ ಅಂತಹ ಯಾವ ಅನುಭವವೂ ಇರಲಿಲ್ಲ. ಆದರೆ, ಈಗ ನಮಗೆ ಅಂಥ ಅನುಭವ ಆಗಿದೆ. ಗೌರವಾನ್ವಿತ ಮಂಡನೆಕಾರರು ಮಂಡಿಸಿದ ಮೊದಲನೇ ಅಂಗೀಕಾರ, ಅದನ್ನು ಅವರ ಮಾತುಗಳಲ್ಲೇ ನಾನು ಹೇಳಬಯಸುತ್ತೇನೆ. "ಭಾರತದಲ್ಲಿ ಪ್ರಜಾಪ್ರಭುತ್ವವು ಭಾರತದ ಮಣ್ಣಿನ ಮೇಲೆ ಮಾಡಿರುವ ಕೇವಲ ಮೇಲು ಅಲಂಕರಣ, ಅದು ಆವಶ್ಯಕವಾಗಿ ಪ್ರಜಾಪ್ರಭುತ್ವವಾಗಿಲ್ಲ ............. "ಆಡಳಿತ ವಿಧಾನಗಳನ್ನು ನಿಗದಿಪಡಿಸಲು ಶಾಸನಸಭೆಗಳಲ್ಲಿ ವಿಶ್ವಾಸವಿಡುವುದು ವಿವೇಕವಲ್ಲ." ಗೌರವದೊಂದಿಗೆ, ಅವರು ಪ್ರಮುಖವಾಗಿ ಸರಿ ಎಂದು ನಾನು ಹೇಳುತ್ತೇನೆ.

**ಒಬ್ಬ ಗೌರವಾನ್ವಿತ ಸದಸ್ಯರು :** ಅವರು ಹೇಳಿದ್ದು ಸರಿಯಲ್ಲ.

**ಶ್ರೀ ಜೆಡ್.ಎಚ್. ಲಾರಿ :** ಈ ಸಂಬಂಧವಾಗಿ ಅನೇಕ ವಿಧಾನಮಂಡಲಗಳು ಅಂಗೀಕರಿಸಿರುವ ಹಲವು ಭದ್ರತಾ ಅಧಿನಿಯಮಗಳನ್ನು, ಅದರಲ್ಲೂ ಮುಖ್ಯವಾಗಿ ದಂಡಪ್ರಕ್ರಿಯಾ ಸಂಹಿತೆಯ ೪೯೧ನೇ ಪ್ರಕರಣದ ಅಡಿಯಲ್ಲಿ ಉಚ್ಚನ್ಯಾಯಾಲಯಕ್ಕೆ ಮೊರೆಹೋಗಲು ಇರುವ ಹಕ್ಕನ್ನು ಒಂದು ಪ್ರಾಂತ್ಯದಲ್ಲಿ ಹೊರತುಪಡಿಸಿರುವ ಭದ್ರತಾ ಅಧಿನಿಯಮ ಕುರಿತು ಹೇಳಲು ನಾನು ಬಯಸುತ್ತೇನೆ. ಮಾಡಿದ ಎರಡನೆಯ ಅಂಗೀಕಾರ, ಈ ರೀತಿ ಇದೆ, ಎಂದರೆ; ಸಾಂವಿಧಾನಿಕ ನೈತಿಕತೆಯು ಸ್ವಾಭಾವಿಕ ಮನೋಭಾವವಲ್ಲ. ಅದನ್ನು ಬೆಳೆಸಬೇಕು. ನಮ್ಮ ಜನ ಅದನ್ನು ಇನ್ನೂ ಕಲಿಯಬೇಕೆಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು.

ಕೇವಲ ಜನರಷ್ಟೇ ಅಲ್ಲ, ನಮ್ಮ ಸರ್ಕಾರಗಳು ಕೂಡ ಅದನ್ನು ಕಲಿಯಬೇಕು ಎಂದು ನಾನು ಹೇಳುತ್ತೇನೆ. ಇದನ್ನು ಸಾಬೀತುಪಡಿಸಲು ನಾನು ಕೇವಲ ಎರಡು ಪ್ರಸಂಗಗಳನ್ನು ಉದಾಹರಿಸುತ್ತೇನೆ. ಬಂಗಾಳದ ಕಲ್ಕತ್ತಾ ಉಚ್ಚನ್ಯಾಯಾಲಯವು ಮೊಕದ್ದಮೆಯ ಸಂದರ್ಭವನ್ನು ಅರಿತುಕೊಂಡು, ಬಂಧನ ಮತ್ತು ಸ್ಥಾನಬದ್ಧತೆಗೆ ಸಂಬಂಧಿಸಿದಂತೆ ಸರ್ಕಾರದ ಅಧಿಕಾರ ತಿಳಿಸುವ ಒಂದು ಅಧಿನಿಯಮದಲ್ಲಿ "ಸೂಕ್ತ" ಎಂಬ ಶಬ್ದದ ಪರಿಣಾಮವೇನು ಎಂಬುದನ್ನು ನಿರ್ಧರಿಸಲು ಒಂದು ಪೂರ್ಣ ನ್ಯಾಯಪೀಠವನ್ನು ನೇಮಕ ಮಾಡಿತು. ಆ ನ್ಯಾಯಪೀಠವು ಮರುದಿನವಷ್ಟೇ ಸಭೆ ಸೇರಬೇಕಿತ್ತು. ಆದರೆ, ಸರ್ಕಾರವು ಒಂದು ಅಧ್ಯಾದೇಶವನ್ನು ಹೊರಡಿಸಿ "ಸೂಕ್ತ" ಎಂಬ ಶಬ್ದವನ್ನು ತೆಗೆದುಹಾಕಿತು. ಆ ಸಂದರ್ಭದಲ್ಲಿ ಉಚ್ಚನ್ಯಾಯಾಲಯವು, ಪ್ರಾಂತ್ಯದ ಘನತೆವೆತ್ತ ರಾಜ್ಯಪಾಲರು ಅಧ್ಯಾದೇಶವನ್ನು ಜಾರಿಗೆ ತರುವುದು ಸಂಪೂರ್ಣವಾಗಿ ಅವರ ಅಧಿಕಾರ ವ್ಯಾಪ್ತಿಯಲ್ಲಿಯೇ ಇದೆ ಎಂಬುದು ನಿಸ್ಸಂಶಯ. ಆದರೆ ಅದು ಸಂವಿಧಾನಬದ್ಧ ನೈತಿಕತೆಗೆ ವಿರೋಧವಾಗಿದೆ ಎಂದು ಅಭಿಪ್ರಾಯಪಟ್ಟಿತು. ನಾನು ಸದನದ ಮುಂದೆ ಇಡಲಿರುವ ಎರಡನೆಯ ಪ್ರಸಂಗ ಎಂದರೆ, ಒಂದು ಸ್ವಾಯತ್ತ ಸಂಸ್ಥೆಯ ಮುಖ್ಯಸ್ಥರು ಎಂದರೆ ಅಲಿಗರ್ ವಿಶ್ವವಿದ್ಯಾನಿಲಯದ ಮುಖ್ಯಸ್ಥರನ್ನು, ಅವರು ವಿಶ್ವವಿದ್ಯಾನಿಲಯದ ನ್ಯಾಯಾಲಯದ ಮತ್ತು ಅವರು ಯಾವ ಸಮುದಾಯಕ್ಕೆ ಸೇರಿದರೋ ಅದರ ವಿಶ್ವಾಸವನ್ನು ಹೊಂದಿದ್ದರೂ ವಿಶ್ವವಿದ್ಯಾನಿಲಯವನ್ನು ಬಿಟ್ಟುಬಿಡಲು ಹಾಗೂ ಇನ್ನೊರ್ವ ವ್ಯಕ್ತಿಗೆ ಹುದ್ದೆಯನ್ನು ಬಿಟ್ಟುಕೊಡಲು ಅದೊಂದು ದಿನ ಕೇಳಿಕೊಳ್ಳಲಾಗಿತ್ತು. ಆದುದರಿಂದ ಈ ಉಪಬಂಧನೆಗಳ ಮೌಲ್ಯಮಾಪನ ಮಾಡುವಾಗ ನಾವು ಗೌರವಾನ್ವಿತ ಸಚಿವರು ಮಾಡಿದ ಎರಡು ಅಭಿಪ್ರಾಯಗಳನ್ನೂ ಹಾಗೂ ಕಳೆದ ಹದಿನೈದು ತಿಂಗಳುಗಳ ಅವಧಿಯಲ್ಲಿ ಪ್ರಜಾಪ್ರಭುತ್ವ ಸಂಸ್ಥೆಗಳು. ಇತ್ತೀಚಿಗೆ ಕಾರ್ಯನಿರ್ವಹಿಸುವ ಕೆಲಸದ ರೀತಿಯನ್ನು ಗಮನದಲ್ಲಿಟ್ಟುಕೊಳ್ಳಬೇಕು ಎಂದು ಹೇಳುತ್ತೇನೆ.

ಈಗ ಒಬ್ಬ ನಾಗರಿಕನ ಮೊದಲ ಅಗತ್ಯವೆಂದರೆ ಅವನ ಜೀವನಕ್ಕೆ ಭದ್ರತೆ ಇರಬೇಕು ಮತ್ತು ಅವನ ಸ್ವಾತಂತ್ರ್ಯದ ರಕ್ಷಣೆ ಇರಬೇಕು. ಈ ಉದಾತ್ತ ಸದನವು ಮೂಲಭೂತ ಹಕ್ಕುಗಳ ಕರಡನ್ನು ಪರಿಗಣಿಸುವಾಗ, ಕಾನೂನಿನ ಪ್ರಕ್ರಿಯೆಗನುಗುಣವಾಗಿ ಹೊರತು, ಯಾರೊಬ್ಬರೂ ಜೀವನದಿಂದ ಮತ್ತು ಸ್ವಾತಂತ್ರ್ಯದಿಂದ ವಂಚಿತರಾಗಬಾರದು ಎಂಬುದನ್ನು ನಿರೂಪಿಸಬೇಕು. ಈಗ ಆ ಪದಗಳಿಗೆ ಬದಲಾಗಿ "ಕಾನೂನಿನಿಂದ ಸ್ಥಾಪನೆಗೊಂಡ ಕಾರ್ಯವಿಧಾನ" ಎಂಬ ಪದಗಳನ್ನು ಸೇರಿಸಲಾಗಿದೆ. ವ್ಯಕ್ತಿಯ ಜೀವನ ಮತ್ತು ಸ್ವಾತಂತ್ರ್ಯಕ್ಕೆ ಬಾಧಕವಾಗುವಂತೆ ಶಾಸನ ರಚಿಸಲು ವಿಧಾನಮಂಡಲಕ್ಕೆ ಅವಕಾಶ ಕೊಡುವಂಥ "ಕಾರ್ಯವಿಧಾನಕ್ಕೆ ಅನುಸಾರವಾಗಿ" ಎಂಬುದನ್ನು ಈ ಅನುಚ್ಛೇದದಲ್ಲಿ ಸೇರಿಸಬೇಕೆಂದು ಇಚ್ಛಿಸುವ ವ್ಯಕ್ತಿಯ ಆಶಯವನ್ನು ಸಂಪೂರ್ಣವಾಗಿ ಇಲ್ಲವಾಗಿಸಿ, ಆ ವ್ಯಕ್ತಿಯು ವೈಯಕ್ತಿಕ ಸ್ವಾತಂತ್ರ್ಯ ಹಾಗೂ ಜೀವನದ ಹಕ್ಕಿನಿಂದ ವಂಚಿತನಾಗಬಹುದು. ಅದು ಆಶಯವನ್ನೇ ಶೂನ್ಯಗೊಳಿಸುತ್ತದೆ. ಆದುದರಿಂದ ಮೂಲ ಖಂಡವನ್ನು ಬದಲಿಸುವುದು ಸಂಪೂರ್ಣ ಅಗತ್ಯ. ಕರಡು ಸಂವಿಧಾನದ ಪೀಠಿಕೆಯಲ್ಲಿ ಜಪಾನಿ ಮತ್ತು ಐರಿಷ್ ಸಂವಿಧಾನಗಳ ಉಲ್ಲೇಖಮಾಡಲಾಗಿದೆ. ಆದರೆ ಆ ಸಂವಿಧಾನಗಳಿಗೆ ಜವಾಬ್ದಾರರಾದವರೇ ಪ್ರಕ್ರಿಯೆಯನ್ನು ಹಾಕಿಕೊಟ್ಟವರು.

ಉದಾಹರಣೆಗೆ: ಬಂಧಿತರಾದ ಪ್ರತಿಯೊಬ್ಬರಿಗೂ ಅವರ ಬಂಧನಕ್ಕೆ ಕಾರಣವನ್ನು ಕೊಡಬೇಕು ಹಾಗೂ ಕಾರಣ ತಿಳಿಯುವ ಹಕ್ಕು ಅವರಿಗೆ ಮಾತ್ರವಲ್ಲ, ನ್ಯಾಯಾಲಯಗಳಿಂದ ನ್ಯಾಯನಿರ್ಣಯಪಡೆಯಲೂ ಹಕ್ಕುಳ್ಳವರಾಗಿರುತ್ತಾರೆ. ಆದುದರಿಂದ, ಜಪಾನಿಯರ ಮತ್ತು ಐರಿಷ್ ಸಂವಿಧಾನಗಳಿಗೆ ಸಂಬಂಧಿಸಿದಂತೆ, ಅವರು ಕಾರ್ಯವಿಧಾವನ್ನು ನಿರೂಪಿಸಿದ್ದಾರೆ ಹಾಗೂ ಕಾರ್ಯವಿಧಾನವನ್ನು ನಿರೂಪಿಸಿದ ಅನಂತರ, ಸಂವಿಧಾನದಲ್ಲಿ, "ಕಾನೂನಿನಿಂದ ಸ್ಥಾಪಿತವಾದ ಕಾರ್ಯವಿಧಾನಕ್ಕನುಸಾರವಾಗಿ ಹೊರತು" ಯಾರೊಬ್ಬರು ಜೀವನದಿಂದ ಮತ್ತು ಸ್ವಾತಂತ್ರ್ಯದಿಂದ ವಂಚಿತರಾಗಬಾರದು ಎಂದು ಹೇಳಲಾಗಿದೆ. ನಾನು, ಐರ್ಲೆಂಡ್ ಮತ್ತು ಜಪಾನ್‌ಗಳ ಉದಾಹರಣೆಗಳು ಸುಸಂಗತವಾಗಿಲ್ಲ ಎಂದು ನಿವೇದಿಸುತ್ತೇನೆ.

ವೈಯಕ್ತಿಕ ಸ್ವಾತಂತ್ರ್ಯ ಮತ್ತು ಜೀವನದ ಅನಂತರ, ಮನೆಯ ಪಾವಿತ್ರ್ಯದ ವಿಷಯ ಬರುತ್ತಿದೆ. ಯಾರೊಬ್ಬರ ಮನೆಗೆ ಕೋಟೆಯಂಥ ರಕ್ಷಣೆ ಇದೆ ಎನ್ನುವುದಾದರೆ, ಅದು ಮನೆಯಾತನ ಪಾವಿತ್ರ್ಯವನ್ನು ತೋರಿಸುತ್ತದೆ. ಎಲ್ಲ ಪ್ರಜಾಪ್ರಭುತ್ವ ಪದ್ಧತಿಯ ಸಂವಿಧಾನಗಳಲ್ಲಿ ಕಾರಣಗಳನ್ನು ಕೊಡದೆ ಮನೆಗಳಲ್ಲಿ ಯಾವ ಶೋಧನೆಗಳನ್ನು ಅಥವಾ ವಶಮಾಡಿಕೊಳ್ಳುವುದನ್ನು ಮಾಡುವಂತಿಲ್ಲ ಎಂಬುದನ್ನು ನಿರೂಪಿಸಲಾಗಿರುತ್ತದೆ. ಕಾರಣ ನಮೂದಿಸಬೇಕೆಂದು ಹಾಗೂ ಯಾವ ವಸ್ತುಗಳನ್ನು ವಶಪಡಿಸಿಕೊಳ್ಳಬೇಕು ಎಂಬುದನ್ನು ತಿಳಿಸಬೇಕೆಂದು ಅಂಥವೇ ಅನುಚ್ಛೇದಗಳು ನಮ್ಮ ಸಂವಿಧಾನದಲ್ಲಿಯೂ ಕಂಡುಬರಬೇಕು.

ಪ್ರಾಥಮಿಕ ಶಿಕ್ಷಣ ಪಡೆಯುವ ಹಕ್ಕು, ಪ್ರತಿಯೊಬ್ಬ ವ್ಯಕ್ತಿಯ ಮತ್ತೊಂದು ಆವಶ್ಯಕತೆ. ಮೂಲಭೂತ ಹಕ್ಕುಗಳಲ್ಲಿ ಅದೊಂದು ಇಲ್ಲ. ರಾಜ್ಯ ನೀತಿಯ ನಿರ್ದೇಶಕತತ್ವಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನೊದಗಿಸುವುದು ರಾಜ್ಯದ ಪ್ರಯತ್ನವಾಗಿರಬೇಕು ಎಂದು ಇದೆ. ನನ್ನ ನಿವೇದನೆ ಎಂದರೆ, ಇದು ಒಟ್ಟಾರೆ ಅಪರ್ಯಾಪ್ತವಾಗಿದೆ. ಆವಶ್ಯಕವಾದುದು ಯಾವುದೆಂದರೆ ಪ್ರಾಥಮಿಕ ಶಿಕ್ಷಣ ಒದಗಿಸುವುದು ರಾಜ್ಯದ ಕರ್ತವ್ಯವಾಗಿದೆ ಮತ್ತು ಅಂತಹ ಒಂದು ಉಪಬಂಧವನ್ನು ಮೂಲಭೂತ ಅನುಚ್ಛೇದಗಳ ಮೂಲಕ ಸಂವಿಧಾನದಲ್ಲಿ ಸೇರಿಸಬೇಕು.

ನಾನೀಗ ೧೩ನೇ ಅನುಚ್ಛೇದಕ್ಕೆ ಬರುತ್ತೇನೆ. ಅದು ವಾಕ್‌ಸ್ವಾತಂತ್ರ್ಯ, ಸಭೆ ಸೇರುವ ಅಥವಾ ಸಂಘ ಕಟ್ಟುವ ಸ್ವಾತಂತ್ರ್ಯ ಕುರಿತದ್ದಾಗಿದೆ. ಅವುಗಳನ್ನು ಅಂಗೀಕರಿಸಲಾಗಿದ್ದರೂ ಅವುಗಳನ್ನು ಶೂನ್ಯಗೊಳಿಸುವಂಥ ನಿಬಂಧನೆಗಳಿಂದ ಹಾಗೂ ನಿಯಮಗಳಿಂದ ಅವುಗಳನ್ನು ನಿರ್ಬಂಧಿಸಲಾಗಿದೆ. "ಸಾರ್ವಜನಿಕ ಸುವ್ಯವಸ್ಥೆ ಹಾಗೂ ನೈತಿಕತೆಯ ಸೂಕ್ತ ಅಗತ್ಯಗಳಿಗೆ ಒಳಪಟ್ಟು" ಎಂಬ ಪದಗಳನ್ನು ಸೇರಿಸಿರುವುದು ಸಾಕಷ್ಟಾಗುತ್ತಿದೆ ಎಂದು ನಾನು ಭಾವಿಸುತ್ತೇನೆ. ಗೌರವಾನ್ವಿತ ಮಂಡನಕಾರರು, ಅಮೆರಿಕದಲ್ಲಿ ಈ ಹಕ್ಕುಗಳನ್ನು ನ್ಯಾಯಾಲಯಗಳ ನಿರ್ಣಯಗಳಿಂದ ಹತೋಟಿಯಲ್ಲಿಡಲಾಗಿದೆ, ಆದರೆ ಆ ಹಕ್ಕುಗಳನ್ನು ನ್ಯಾಯಾಲಯ ನಿರ್ಣಯಗಳಿರುವ ಹತೋಟಿಯಲ್ಲಿಡುವಾಗ ಅವುಗಳನ್ನು, ರಾಜ್ಯದ ಆವಶ್ಯಕತೆಗಳಿಂದ ಬಿಟ್ಟುಕೊಡಲಾಗಿದೆ ಎಂದು ಹೇಳಿದ್ದಾರೆ. "ಸಾರ್ವಜನಿಕ ಸುವ್ಯವಸ್ಥೆ ಹಾಗೂ ನೈತಿಕತೆಯ ಸೂಕ್ತ ಅಗತ್ಯಗಳಿಗೆ ಒಳಪಟ್ಟು" – ಎಂಬ ಪದಗಳಿಗೆ ಸೇರ್ಪಡೆ ಸಾಕೆಂದು ನಾನು ಭಾವಿಸುತ್ತೇನೆ. ಕರಡು ಸಂವಿಧಾನದಲ್ಲಿ ಅಂಗೀಕರಿಸುವಂತೆ ಮೂಲಭೂತ ಹಕ್ಕುಗಳು ಅನಿರ್ದಿಷ್ಟವಾದವು, ಸಾಕಷ್ಟಾಗಿಲ್ಲ ಮತ್ತು ಕೆಲವು ವಿವರಗಳಲ್ಲಿ ಅಸ್ಪಷ್ಟ ಎಂದು ನಿವೇದಿಸುತ್ತಿದ್ದೇನೆ.

ನಾನು ತಮ್ಮ ಮುಂದೆ ತರಲಿರುವ ಮುಂದಿನ ವಿಷಯ ಪ್ರಜಾಪ್ರಭುತ್ವದ ಅವಳಿ ಸಿದ್ಧಾಂತಗಳು. ಅಂದರೆ, ಪ್ರತಿಯೊಬ್ಬರಿಗೂ ಪ್ರಾತಿನಿಧ್ಯ ಇರುವ ಹಕ್ಕನ್ನು ಅವರು ಹೊಂದಿರುತ್ತಾರೆ ಹಾಗೂ ಬಹುಮತಕ್ಕೆ ರಾಜ್ಯಾಡಳಿತ ನಡೆಸುವ ಹಕ್ಕು ಇರುವುದು. ಆದುದರಿಂದ ಮತದಾನಪದ್ಧತಿ ಹೇಗಿರಬೇಕೆಂದರೆ ಪ್ರತಿಯೊಬ್ಬರಿಗೂ ಪ್ರಾತಿನಿಧ್ಯ ದೊರಕುವ ಭರವಸೆ ಇರಬೇಕು. ಇದು ವಯಸ್ಕರ ಮತದಾನದ ಮಹತ್ತ್ವ, ಆದರೆ, ಅಳವಡಿಸಿರುವ ವಿಧಾನ ಅಂದರೆ, ಒಬ್ಬ ಸದಸ್ಯನನ್ನು ಆಯ್ಕೆಮಾಡುವ ಮತದಾರ ಕ್ಷೇತ್ರದಲ್ಲಿ ವಾಸ್ತವವಾಗಿ ಶೇ.೪೯ರಷ್ಟು ಮತದಾರರ ಮತದಾನದ ಹಕ್ಕನ್ನು ಕಸಿದುಕೊಂಡಂತಾಗುತ್ತಿದೆ. ಒಬ್ಬ ಸದಸ್ಯನನ್ನು ಆಯ್ಕೆಮಾಡುವ ಮತದಾರ ಕ್ಷೇತ್ರದಲ್ಲಿ ಶೇ.೪೯ಕ್ಕೂ ಹೆಚ್ಚು ಇರುವ ಅಲ್ಪಸಂಖ್ಯಾತ ಮತದಾರರ ಹಕ್ಕನ್ನು ಕಸಿದುಕೊಳ್ಳುವ ಸಾಧ್ಯತೆಯೂ

ಇರುತ್ತದೆ. ನಾನು ರಾಜಕೀಯ ಅಲ್ಪಸಂಖ್ಯಾತರನ್ನು ಕುರಿತು ಮಾತನಾಡುತ್ತಿದ್ದೇನೆ. ರಾಜಕೀಯ ಅಲ್ಪಸಂಖ್ಯಾತರು ಕೂಡ ಪ್ರಾತಿನಿಧ್ಯ ಸಂಸ್ಥೆಗಳಲ್ಲಿ ಪ್ರಾತಿನಿಧ್ಯ ಪಡೆಯಲು ಹಕ್ಕುಳ್ಳವರಾಗಿರುತ್ತಾರೆ. ಆದುದರಿಂದ, ಈ ಸಂವಿಧಾನದಲ್ಲಿ ಹಾಕಿಕೊಟ್ಟಿರುವ ಪದ್ಧತಿಯನ್ನು ಪರಿಷ್ಕರಣೆ ಮಾಡುವ ಅಗತ್ಯವಿದೆ. ಇಂಗ್ಲೆಂಡಿನಲ್ಲಿ ಇದು ಜಾರಿಯಲ್ಲಿ ಇರುತ್ತದೆ ಎಂದು ಹೇಳಬಹುದು; ಆದರೆ, ಗೌರವಾನ್ವಿತ ಮಂಡನಕಾರರು ಉಲ್ಲೇಖಿಸಿರುವ ಕೆಲವು ಮೂಲ ನಿಜಾಂಶಗಳತ್ತ, ಸದನದ ಗಮನ ಸೆಳೆಯುವುದಕ್ಕಾಗಿ ತಿಳಿಸುತ್ತಿದ್ದೇನೆ ಮತ್ತು ವರ್ಗಾಯಿಸಬಹುದಾದ ಏಕೈಕಮತದ ಮೂಲಕ ಅಥವಾ ಸಂಚಿತಮತದಾನದ ಮೂಲಕ ಅನುಪಾತೀಯ ಪ್ರಾತಿನಿಧ್ಯವನ್ನು ಅನುಷ್ಠಾನಗೊಳಿಸುವುದಕ್ಕೆ ಸಂಬಂಧಿಸಿದಂತೆ ಐರಿಷ್, ಸ್ವಿಸ್ ಮತ್ತು ಈಗ ಫ್ರಾನ್ಸನ್ನು ಅನುಸರಿಸುವುದು ಹೆಚ್ಚು ಸೂಕ್ತ ಎಂದು ಹೇಳಬಹುದಾಗಿದೆ. ಅಂತಹ ಪದ್ಧತಿಯಿರಬೇಕಾಗಿ ಬಹುಪಕ್ಷಗಳ ಅಸ್ತಿತ್ವಕ್ಕೆ ಎಡೆಮಾಡಿಕೊಡುತ್ತಿದೆ. ಇದು ಐರ್ಲೆಂಡಿನಲ್ಲಿ ೨೫ ವರ್ಷಗಳ ಕಾಲ ರೂಢಿಯಲ್ಲಿತ್ತು ಮತ್ತು ಹದಿನೈದು ವರ್ಷಗಳಿಗೂ ಹೆಚ್ಚು ಕಾಲ ಒಂದೇ ಪಕ್ಷವು ದೇಶದ ಆಡಳಿತ ನಡೆಸಿದಾಗ ಅಲ್ಲಿ ಎರಡು ಪಕ್ಷಗಳಿಗಿಂತ ಹೆಚ್ಚು ಪಕ್ಷಗಳು ಇರಲಿಲ್ಲ ಎಂಬುದು ಪ್ರತಿಯೊಬ್ಬರಿಗೂ ತಿಳಿದಿದೆ. ಅನುಪಾತೀಯ ಪ್ರಾತಿನಿಧ್ಯ ಪದ್ಧತಿ ಇಲ್ಲದಿದ್ದಾಗಲೂ ಫ್ರಾನ್ಸ್‌ನಲ್ಲಿ ಅತ್ಯಧಿಕ ಪಕ್ಷಗಳು ಇದ್ದವು. ನಮಗೆ ಯಾವುದು ಸಹಜವಾಗಿ ಹೆಚ್ಚು ಪ್ರಗತಿಪರ ಪ್ರವೃತ್ತಿಯುಳ್ಳದ್ದೋ ಮತ್ತು ನಿಜವಾಗಿಯೂ ಪ್ರಜಾಪ್ರಭುತ್ವ ಆಗಿರುವುದೋ ಆ ತತ್ತ್ವವನ್ನು ಅಳವಡಿಸಿಕೊಳ್ಳುವುದು ಅತ್ಯುತ್ತಮ.

ನಾನು ಸಂವಿಧಾನದ ಮತ್ತೊಂದು ಅಂಶಕ್ಕೆ ಬರತ್ತೇನೆ; ಸುಗ್ರೀವಾಜ್ಞೆ ಕುರಿತಾಗಿದೆ. ವಿಧಾನಮಂಡಲದಲ್ಲಿ ಸಮಾಲೋಚಿಸದೇ ಜಾರಿಗೆ ತಂದ ನಿಯಮವೇ ಸುಗ್ರೀವಾಜ್ಞೆ, ಎಂದು ನಾವು ದೂರುವ ಕಾಲ ಬಂದಿತ್ತು. ರಾಷ್ಟ್ರಪಿತ ಹೇಳಿದುದನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ. ಎಂದರೆ "ಬ್ರಿಟಿಷ್ ಆಡಳಿತದಲ್ಲಿ ವೈಸ್‌ರಾಯರು ಕಾನೂನುಗಳನ್ನು ಮಾಡಿ ಅವುಗಳನ್ನು ಕಾರ್ಯಗತಮಾಡಲು ಸುಗ್ರೀವಾಜ್ಞೆ ಹೊರಡಿಸಬಹುದಿತ್ತು. ಶಾಸಕಾಂಗದ ಮತ್ತು ಕಾರ್ಯಾಂಗದ ಕಾರ್ಯಗಳನ್ನು ಸಂಯೋಜಿಸುವುದ ವಿರುದ್ಧ ಭಾರಿ ಕೂಗು ಎಬ್ಬಿಸಲಾಗಿತ್ತು. ಬದಲಾವಣೆಗೆ ಅಗತ್ಯಪಡಿಸಲು ಏನೂ ಆಗಬೇಕಾಗಿಲ್ಲ ಎಂಬುದು ನಮ್ಮ ಅಭಿಪ್ರಾಯ. "ಶಾಸನಸಭೆಗಳು ಮಾತ್ರ ಕಾನೂನುಗಳನ್ನು ಮಾಡಬೇಕು" ಶಾಸನಸಭೆಯ ಅಧಿವೇಶನ ಸೇರದಿದ್ದಾಗ, ತುರ್ತುಸ್ಥಿತಿ ಉದ್ಭವಿಸಿದರೆ ಸುಗ್ರೀವಾಜ್ಞೆಯನ್ನು ಘೋಷಿಸಬೇಕಾಗುತ್ತದೆ. ಆದರೆ, ಕಾಲ ಮತ್ತು ಸಂದರ್ಭದ ಯಾವುದೇ ಮಹತ್ತ್ವ ಇರಬೇಕಾಗಿಲ್ಲ ಹಾಗೂ ಇನ್ನೆರಡು ದಿವಸಗಳಲ್ಲಿ ಸಭೆ ಸೇರುವ ಸಂದರ್ಭವಿದ್ದರೆ ಸುಗ್ರೀವಾಜ್ಞೆಯ ಅಗತ್ಯವಿಲ್ಲ. ಒಂದು ವೇಳೆ ಆವಶ್ಯಕತೆ ಇದ್ದಿದ್ದಲ್ಲಿ, ಹಾಗೂ ಅದು ದೂರವಾಗಿದ್ದರೆ ಅದರಿಂದ ಏನಾದರೂ ಪರಿಣಾಮವಾಗುತ್ತಿದೆಯೆ? ಸುಗ್ರೀವಾಜ್ಞೆ ಹೊರಡಿಸುವ ಅಧಿಕಾರಗಳನ್ನು ಉಪಯೋಗಿಸಬೇಕಾದ ಕಾರಣದಿಂದ ವಿಧಾನಸಭೆಗಳು ರಬ್ಬರ್‌ಸ್ಟಾಂಪ್ ಆಗಿವೆ. ನಮ್ಮ ಪ್ರಾಂತ್ಯದಲ್ಲಿ ಸುಗ್ರೀವಾಜ್ಞೆಯ ಮೂಲಕ ಜಾರಿಗೆ ತರಬೇಕಾದ ಯಾವುದೇ ಶಾಸನದ ಅಗತ್ಯ ಇರಲಿಲ್ಲ. ಆದರೆ, ಸಂಸದೀಯ ಪದ್ಧತಿಯ ಸರ್ಕಾರದಲ್ಲಿ ಸಚಿವಸಂಪುಟವು ವಾಸ್ತವವಾಗಿ ಬಹುಮತದಿಂದ ಶಾಸನವನ್ನು ನಿರ್ಧರಿಸುತ್ತದೆ. ಒಮ್ಮೆ ಸಚಿವಸಂಪುಟವು ಸುಗ್ರೀವಾಜ್ಞೆಯನ್ನು ಸಿದ್ಧಪಡಿಸಿದ ಮೇಲೆ ಅದು ಒಂದು ಶಾಸನ ರೂಪದಲ್ಲಿ ಹೊರಬರುತ್ತದೆ. ಬಹುಮತ ಪಕ್ಷವು ಹಿಂದಕ್ಕೆ ಹೋಗುವುದು ಸಾಧ್ಯವಿಲ್ಲವಾಗಿರುವುದರಿಂದ ಸಚಿವಸಂಪುಟವೇ ಶಾಸನವನ್ನು ನಿರ್ಧರಿಸುತ್ತದೆ, ಅದಕ್ಕೆ ಅನುಸಾರವಾಗಿ ಸುಗ್ರೀವಾಜ್ಞೆ ಹೊರಡಿಸುವ ಅಧಿಕಾರ ಅಗತ್ಯಪಡಿಸುವ ಉಪಬಂಧದ ಅಗತ್ಯವಿಲ್ಲವೆಂದು ನಿವೇದಿಸುತ್ತೇನೆ.

ತುರ್ತುಪರಿಸ್ಥಿತಿಯ ಅನಿರೀಕ್ಷಿತ ಸಂದರ್ಭವಿದ್ದರೆ, ತುರ್ತುಪರಿಸ್ಥಿತಿಗೆ ಸಂಬಂಧಿಸಿದ ಖಂಡ ಇರಬೇಕೆಂಬುದರಲ್ಲಿ ಸಂಶಯವಿಲ್ಲ. ಆದರೆ, ಕರಡು ಸಂವಿಧಾನದಲ್ಲಿ ತಿಳಿಸಿರುವಂತೆ ತರ್ತುಪರಿಸ್ಥಿತಿಗೆ ವಿಶಾಲವ್ಯಾಪ್ತಿ ಇದೆ. ಅದು ಕೇವಲ ವಾಸ್ತವ ಹಿಂಸೆಯಲ್ಲ, ಅಮೆರಿಕದಲ್ಲಿ ಇರುವಂತೆ, ವಾಸ್ತವ ದಾಳಿಯಷ್ಟೆ ಅಲ್ಲ, ಆದರೆ ಹಿಂಸೆಯ ಅಪಾಯವೇ ತರ್ತುಪರಿಸ್ಥಿತಿಯ ಘೋಷಣೆಗೆ ಅಗತ್ಯಪಡಿಸುವುದಕ್ಕೆ ಸಾಕು. ಈ ಅಂಶಗಳು ಅಪಾಯಕಾರಿಯಾಗಿದ್ದು ಇವುಗಳನ್ನು ವರ್ಜಿಸಬೇಕು.

ನಾನೀಗ ಅಲ್ಪಸಂಖ್ಯಾತರ ಹಕ್ಕುಗಳ ಬಗ್ಗೆ ತಿಳಿಸುವ ಕರಡಿನ ಭಾಗಕ್ಕೆ ಬರುತ್ತೇನೆ. ಈ ಹಕ್ಕುಗಳ ಬಗ್ಗೆ ಹೇಳುವಾಗ, ಮೊದಲನೆಯ ವಿಷಯ, ನೋಡಬೇಕಾಗಿರುವುದು ಸ್ಥಾನಗಳ ಮೀಸಲಾತಿ. ಅದು ಸಂವಿಧಾನದ ಅಸದೃಶ ಅಂಶ, ಅಂದರೆ ಸಂಬಂಧಪಟ್ಟ ಅಲ್ಪಸಂಖ್ಯಾತ ಸಮುದಾಯವು ತನ್ನ ಪ್ರತಿನಿಧಿಗಳನ್ನು ನಿರ್ಧರಿಸುವಲ್ಲಿ ಯಾವುದಾದರೂ ಹಕ್ಕು ಅಥವಾ ಧ್ವನಿ ಇದೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳದೇ ಅಲ್ಪಸಂಖ್ಯಾತರನ್ನು ಸ್ಥಾನಗಳ ಮೀಸಲಾತಿ ವ್ಯವಸ್ಥೆಯ ಮೂಲಕ ರಕ್ಷಿಸಬೇಕು ಎಂದು ಹೇಳಲಾಗಿದೆ. ಇದು ಅರ್ಥರಹಿತ ಮತ್ತು ವಂಚನೆ ಕೂಡ. ಅಲ್ಪಸಂಖ್ಯಾತರನ್ನು ರಕ್ಷಿಸುವ ಒಂದೇ ಮಾರ್ಗ ಎಂದರೆ ಅನುಪಾತೀಯ ಪ್ರಾತಿನಿಧ್ಯ ವ್ಯವಸ್ಥೆಯನ್ನು ಅಳವಡಿಸುವುದೇ ಆಗಿದೆ. ೧೯೪೮ರ ಮಾರ್ಚ್‌ನಲ್ಲಿ ನಡೆದ ದುಂಡುಮೇಜಿನ ಸಭೆಯಲ್ಲಿ ಒಬ್ಬ ಲೇಖಕರು, ಈ ಪದ್ಧತಿಯ ಬಗ್ಗೆ ಮತ್ತು ಐರ್ಲೆಂಡ್‌ನಲ್ಲಿ ಅದರ ಅನುಷ್ಠಾನದ ಬಗ್ಗೆ ಉಲ್ಲೇಖಿಸುತ್ತಾ, ಇದು ಒಂದು ಸ್ಥಿರಸರ್ಕಾರದ ಆವಶ್ಯಕತೆಗಳಿಗೆ ಸಂಬಂಧಿಸಿದಂತೆ ಅಲ್ಪಸಂಖ್ಯಾತರಿಗೆ ನ್ಯಾಯಪರಿಹಾರದ ಪ್ರಶ್ನೆಯನ್ನು ಬಗೆಹರಿಸಿದೆ ಎಂದು ಹೇಳಿದರು.

ಈಗ ನಾನು ಸೇವೆಗಳ ಬಗ್ಗೆ ತಿಳಿಸುತ್ತೇನೆ. ಎಂತಹ ವಿಚಿತ್ರ ವೈದೃಶ್ಯ! ವಿಧಾನಮಂಡಲದಲ್ಲಿ ಶಾಸನಬದ್ಧ ಮೀಸಲಾತಿಗಳನ್ನು ನೀವು ಪಡೆದಿರುವುದು ನಿರರ್ಥಕ. ಆದರೆ, ನೀವು ಸೇವೆಗಳ ವಿಷಯಕ್ಕೆ ಬಂದಾಗ ಅವುಗಳನ್ನು ಪರಿಗಣಿಸಲಾಗುತ್ತದೆ ಎಂದಷ್ಟೇ ಹೇಳಲಾಗುತ್ತಿದೆ. ಇದು ಒಂದು ತುಂಬ ಶ್ರದ್ಧಾಭಕ್ತಿಯ ಆಶಯ. ಸಂಯುಕ್ತ ಪ್ರಾಂತ್ಯಗಳಲ್ಲಿ ಮತ್ತು ಇತರ ಪ್ರಾಂತ್ಯಗಳಲ್ಲಿ ಕಳೆದ ಹದಿನೈದು ತಿಂಗಳುಗಳಲ್ಲಿ ಆಗಿರುವ ಅನುಭವವು ಶ್ರದ್ಧಾಭಕ್ತಿಯ ಆಶಯಗಳಷ್ಟೇ ಸಾಲದು ಎಂದು ತೋರಿಸಿಕೊಟ್ಟಿವೆ. ಶಾಸನಬದ್ಧ ಮೀಸಲಾತಿಗಳೇ ಬೇಕು. ವಿಧಾನಮಂಡಲದಿಂದ ಮೀಸಲಾತಿ ತೆಗೆದುಹಾಕಿ ಮತ್ತು ದೇವರಿಗಾಗಿಯಾದರೂ ಸೇವೆಗಳಲ್ಲಿ ನಮಗೆ ಮೀಸಲಾತಿ ಕೊಡಿ. ಇಲ್ಲಿ ನಾನು ಸಂಯುಕ್ತ ಪ್ರಾಂತ್ಯಗಳ ಮುಸ್ಲಿಮರಿಗಾಗಿ ಮಾತ್ರ ಮಾತನಾಡುತ್ತಿಲ್ಲ. ಆದರೆ, ಅಲ್ಲಸಂಖ್ಯಾತ ಜನರಿಗಾಗಿಯೂ ಈ ಮಾತು ಹೇಳುತ್ತಿದ್ದೇನೆ. ತಾವು ಆಂಗ್ಲೋ-ಇಂಡಿಯನ್ನರಿಗೆ ಮೀಸಲಾತಿ ನೀಡಲು ಒಪ್ಪುತ್ತೀರಿ; ಆದರೆ ಮುಸ್ಲಿಮರಿಗೆ ನಿರಾಕರಿಸುವಿರಿ. ಏಕೆ, ಈ ತಾರತಮ್ಯ? ಸಂಯುಕ್ತ ಪ್ರಾಂತ್ಯಗಳಲ್ಲಿನ ಪರಿಸ್ಥಿತಿ ತೆಗೆದುಕೊಳ್ಳಿ. ನೀವು ಕಳೆದ ಹನ್ನೆರಡು ತಿಂಗಳುಗಳಲ್ಲಿಯ ಫಲಿತಾಂಶಗಳನ್ನು ಅವಲೋಕಿಸಿ. ಎಲ್ಲೋ ಶೇ. ೫ರಷ್ಟು ಮುಸ್ಲಿಮರನ್ನು ಸೇವೆಗಳಲ್ಲಿ ತೆಗೆದುಕೊಳ್ಳಲಾಗಿದೆ. ನೀವು ಅಲ್ಲಿ ಕೆಲಸದಿಂದ ಬಿಡುಗಡೆ ಮಾಡಿದವುಗಳನ್ನು ಮತ್ತು ವಜಾಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಅದು ಶೇ. ೭೫ ಆಗುತ್ತದೆ. ಆದರೆ, ನೀವು ಹೊಸ ನೇಮಕಾತಿ ಲೆಕ್ಕ ತೆಗೆದುಕೊಂಡರೆ ಅದು ಶೇ. ೫ರಷ್ಟು ಮಾತ್ರ.

**ಶ್ರೀ ವಿಶ್ವಂಭರ ದಯಾಳ್ ತ್ರಿಪಾಠಿ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಪಾಕಿಸ್ತಾನದಲ್ಲಿ ನಿಮ್ಮ ನಾಯಕರು ಏನು ಮಾಡುತ್ತಿದ್ದಾರೆ?

**ಶ್ರೀ ಜೆಡ್.ಎಚ್. ಲಾರಿ** : ನನ್ನ ಗೆಳೆಯ ನನ್ನನ್ನು ಪಾಕಿಸ್ತಾನವನ್ನು ಅನುಸರಿಸಲು ಬಯಸುತ್ತಾರೆ. ನಾನು ಹಾಗೆ ಮಾಡಲಾರೆ.

**ಮಾನ್ಯ ಉಪಸಭಾಧ್ಯಕ್ಷರು** : ಆರ್ಡ್‌ರ್, ಆರ್ಡ್‌ರ್. (ಸದ್ದು ಸದ್ದು)

**ಶ್ರೀ ಜೆಡ್.ಎಚ್. ಲಾರಿ** : ನಾನು ನನ್ನ ಹಕ್ಕುಗಳನ್ನು ಪಾಕಿಸ್ತಾನಕ್ಕೆ ಅಡಮಾನ ಮಾಡಿಕೊಟ್ಟಿಲ್ಲ. ನಾನು ಇಲ್ಲಿ ಭಾರತದ ನಾಗರಿಕ. ಪಾಕಿಸ್ತಾನವು ಏನು ಮಾಡುತ್ತದೆ ಅಥವಾ ಏನು ಮಾಡುವುದಿಲ್ಲ ಎಂಬುದು ನನಗೆ ಸಂಬಂಧಿಸಿಲ್ಲ.

**ಒಬ್ಬ ಗೌರವಾನ್ವಿತ ಸದಸ್ಯರು** : ನೀವು ಇಂದು ಬುದ್ಧಿವಂತರಾಗಿ ಬೆಳೆದಿದ್ದೀರಿ.

**ಮಾನ್ಯ ಉಪಸಭಾಧ್ಯಕ್ಷರು** : ಆರ್ಡ್‌ರ್, ಆರ್ಡ್‌ರ್. (ಸದ್ದು ಸದ್ದು)

**ಶ್ರೀ ಜೆಡ್.ಎಚ್. ಲಾರಿ** : ಈ ಭಾಗಗಳಲ್ಲಿನ ಮುಸ್ಲಿಮರು ಪಾಕಿಸ್ತಾನಕ್ಕೆ ವಲಸೆ ಹೋಗುತ್ತಿದ್ದಾರೆಂದು ನಾವು ಎಂದೂ ಹೇಳಿಲ್ಲ. ನಾವು ಈ ಮಣ್ಣಿನಮಕ್ಕಳು ಆದ್ದರಿಂದ ನಾವು ಭಾರತದ ನಾಗರಿಕ ಹಕ್ಕುಗಳನ್ನು ಕೇಳುತ್ತಿದ್ದೇವೆ.

**ಶ್ರೀ ವಿಶ್ವಂಭರ ದಯಾಳ್ ತ್ರಿಪಾಠಿ** : ನಿಮ್ಮ ಯು.ಪಿ. ನಾಯಕರು ಕೂಡ ತಪ್ಪಿಸಿಕೊಂಡಿದ್ದಾರೆ!

**ಶ್ರೀ ಜೆಡ್.ಎಚ್. ಲಾರಿ** : ಈ ಮಾತುಗಳು ಎಷ್ಟು ಸಂಕುಚಿತ ಹಾಗೂ ಪ್ರಜಾಪ್ರಭುತ್ವಕ್ಕೆ ವಿರುದ್ಧವಾದವು ಎಂಬುದನ್ನು ತೋರಿಸುತ್ತವೆ.

**ಮಾನ್ಯ ಉಪಸಭಾಧ್ಯಕ್ಷರು** : ಸದ್ದು ಸದ್ದು.

**ಶ್ರೀ ಜೆಡ್.ಎಚ್. ಲಾರಿ** : ನಾನು ಆದೇಶಕ್ಕೆ ಬದ್ಧನಿದ್ದೇನೆ. ನನಗೆ ಕೊಟ್ಟಿದ್ದ ಸಮಯ ತುಂಬಾ ಕಡಿಮೆ ಎಂದು ಹೇಳುತ್ತಿದ್ದೇನೆ.

**ಮಾನ್ಯ ಉಪಸಭಾಧ್ಯಕ್ಷರು** : ಅದು ಈಗಾಗಲೇ ಮುಗಿದಿದೆ !

**ಶ್ರೀ ಜೆಡ್.ಎಚ್. ಲಾರಿ** : ನನಗೆ ದಯಮಾಡಿ ಎರಡು ನಿಮಿಷವನ್ನು ಹೆಚ್ಚಿಗೆ ಕೊಡಿ.

ಈಗ ಸಂಪುಟದ ಪ್ರಶ್ನೆ ಇದೆ. ಅಲ್ಲಿ ಶಾಸನಬದ್ಧ ಪ್ರಾತಿನಿಧ್ಯ ಇರುವುದಿಲ್ಲ. ಸಂಸದೀಯ ಸರ್ಕಾರದ ವ್ಯವಸ್ಥೆಯಲ್ಲಿ ಅದನ್ನು ಒಪ್ಪಿಕೊಳ್ಳಲಾಗದು. ಆದರೆ, ನೀವು ಅನುಪಾತೀಯ ಪ್ರಾತಿನಿಧ್ಯವನ್ನು ಅಳವಡಿಸಿಕೊಂಡ ಮೇಲೆ, ಪುನಃ ನಾವು ಅಧ್ಯಕ್ಷೀಯ ಪದ್ಧತಿಯನ್ನು ಅನುಸರಿಸುವುದು ಸೂಕ್ತವೇ ಅಲ್ಲ ಎಂಬುದನ್ನು ತಾವು ಪರಿಗಣಿಸಬೇಕು ಆದರೆ, ಸಂವಿಧಾನದ ಪ್ರಸಕ್ತ ವ್ಯವಸ್ಥೆಯಲ್ಲಿ ಶಾಸನಬದ್ಧ ಮೀಸಲಾತಿ ಸಾಧ್ಯವಿಲ್ಲ ಎಂದು ನಾನು ಒಪ್ಪುತ್ತೇನೆ ಮತ್ತು ಅತ್ಯುತ್ತಮವಾದ ಏನನ್ನು ಮಾಡಬಹುದೋ ಅದನ್ನು ಮಾಡಿಯಾಗಿದೆ.

ಕಡೆಯದಾಗಿ, ವಿಧಾನಮಂಡಲದಲ್ಲಿ ಒಂದು ವಿರೋಧಪಕ್ಷವಿರುವುದನ್ನು ಮಾನ್ಯಮಾಡಲು ಯಾವುದಾದರೂ ಉಪಬಂಧ ಇರಬೇಕು ಎಂಬುದನ್ನು ಈ ಸದನವು ಪರಿಗಣಿಸಬೇಕು ಎಂದು ನಾನು ಕೋರುತ್ತೇನೆ. ಇತ್ತೀಚೆಗೆ, ಸಮಾಜವಾದಿಗಳು ಕಾಂಗ್ರೆಸ್ಸನ್ನು ತ್ಯಜಿಸಿದುದರಿಂದ ಅದು ಆ ಪಕ್ಷದ ಬಹುಮತವನ್ನು ಸೂಚಿಸುತ್ತದೆ ಎಂದು ಹೇಳಿರುವುದು ಜವಾಬ್ದಾರಿಯುಳ್ಳವರ ಖಚಿತ ಅಭಿಪ್ರಾಯವೆಂದು ನಾನು ಹೇಳಲಾರೆ. ಬಹುಮತವುಳ್ಳ ಪಕ್ಷವು ಅಂತಹ ಒಂದು ವಿರೋಧಪಕ್ಷವನ್ನು ತುಂಬ ಔದಾರ್ಯದಿಂದ ಕೊಡುಗೆ ಕೊಟ್ಟಿದೆ ಎಂದು ನಾನು ಹೇಳುತ್ತಿಲ್ಲ. ದಕ್ಷಿಣ ಆಫ್ರಿಕಾ, ಅಥವಾ ಇಂಗ್ಲೆಂಡ್ ಅಥವಾ ಇತರ ದೇಶಗಳಲ್ಲಿ ಇಂಥ ಸಂದರ್ಭದಲ್ಲಿ ವಿರೋಧಪಕ್ಷದ ನಾಯಕನ ಸ್ಥಾನಮಾನವನ್ನು ಒಪ್ಪಿಕೊಳ್ಳಲಾಗುತ್ತಿತ್ತು ಮತ್ತು ಒಪ್ಪಿಕೊಳ್ಳುವುದೆಂದರೆ ಅವರಿಗೂ ಇತರ ದೇಶಗಳಲ್ಲಿರುವಂತೆ ಸಂಬಳವನ್ನು ಕೊಡಬೇಕಾಗುತ್ತದೆ ಎಂದು ಹೇಳಬೇಕಾಗುತ್ತಿದೆ. ಮುಂಬರುವ ವ್ಯವಸ್ಥೆಯಲ್ಲಿ, ನನ್ನಂತಹವರು ಹಿಂದಕ್ಕೆ ಸರಿಯುವಂತಿಲ್ಲ. ಆದುದರಿಂದ ಅದರಲ್ಲಿ ನಮಗೆ ಆಸಕ್ತಿಯಿಲ್ಲ ಆದರೆ, ಪ್ರಜಾಪ್ರಭುತ್ವದ ದೃಷ್ಟಿಯಿಂದ ಹೇಳುವುದಾದರೆ ಸಮರ್ಥ ವಿರೋಧವಿರಬೇಕು ಹಾಗೂ ಅದು ರಚನಾತ್ಮಕವಾಗಿರಬೇಕು ಮತ್ತು ದೇಶ ಮತ್ತು ತಾಯ್ನಾಡಿಗೆ ತನ್ನ ಕರ್ತವ್ಯ ನಿರ್ವಹಿಸುವ ಹೊಣೆಗಾರಿಕೆಯನ್ನು ಒಪ್ಪಿಕೊಳ್ಳಬೇಕು ಮತ್ತು ಸಂವಿಧಾನದಲ್ಲಿಯೇ ಅದಕ್ಕೆ ಒಂದು ಸ್ಥಾನಮಾನ ಕೊಟ್ಟಾಗ ಮಾತ್ರ ಅದಕ್ಕೆ ಭರವಸೆ ಸಿಕ್ಕಬಹುದು.

ಕರಡು ರಚನಾಸಮಿತಿಯು ನೀಡಿರುವ ಮತ್ತಷ್ಟು ತಿದ್ದುಪಡಿಗಳಲ್ಲಿ ರಾಷ್ಟ್ರಪತಿಗಳಿಗೆ ಸಲಹೆ ನೀಡಲು ಒಂದು ಸಲಹಾಸಮಿತಿಯ ನೇಮಕಕ್ಕೆ ಸಲಹೆ ಮಾಡಿರುವುದನ್ನು ನಾನು ಗಮನಿಸಿದ್ದೇನೆ ಮತ್ತು ಅಲ್ಲಿ ವಿರೋಧಪಕ್ಷದ ನಾಯಕರ ಸ್ಥಾನವನ್ನು ಮಾನ್ಯಮಾಡಲಾಗಿದೆ. ಆದರೆ, ಒಕ್ಕೂಟದ ಮತ್ತು ರಾಜ್ಯಗಳ ಸಂವಿಧಾನದಲ್ಲಿ ಕೂಡ ಅವರ ಸ್ಥಾನಕ್ಕೆ ಮನ್ನಣೆ ನೀಡಬೇಕು.

ಈ ಕೆಲವು ನಿವೇದನೆಗಳೊಂದಿಗೆ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ. ನಾನು ಡಾ. ಅಂಬೇಡ್ಕರರ ಕೆಲವು ಅಭಿಪ್ರಾಯಗಳನ್ನು ಉಲ್ಲೇಖಿಸಿರುತ್ತೇನೆ. ಆದರೆ, ನನ್ನ ದೇಶದ ಜನರ ಒಳ್ಳೆತನದಲ್ಲಿ ನನಗೆ ನಂಬಿಕೆ ಇದೆ ಮತ್ತು ಈ ತಾಯ್ನಾಡಿನಲ್ಲಿ ವಾಸಿಸುತ್ತಿರುವವರ ಸದಾಚಾರ ಮನೋಭಾವದಲ್ಲಿ ನಂಬಿಕೆ ಇದೆ ಮತ್ತು ನಾನು ಅವರು ಸಂಕಷ್ಟದ ಪರಿಸ್ಥಿಯನ್ನು ಮೀರಿ ನಿಲ್ಲುತ್ತಾರೆಂದು ಆಶಿಸುತ್ತೇನೆ ಹಾಗೂ ಅವರು ಈಗ ಆ ಸಂಕಷ್ಟದ ಪರಿಸ್ಥಿತಿಯನ್ನು ದಾಟಿದ್ದಾರೆ. ಈಗ ಆ ಭಾವೋದ್ವೇಗಗಳು ಶಾಂತವಾಗಿವೆ; ಅವರು ಹೆಚ್ಚು

ವಾಸ್ತವಿಕ ಮತ್ತು ಹೆಚ್ಚು ಸಮಾಧಾನಕರ ಮನೋಭಾವದಿಂದ ಕಾರ್ಯಪ್ರವೃತ್ತರಾಗಿ, ದೇಶದ ಬಹುಸಂಖ್ಯಾತರ ಮತ್ತು ಅಲ್ಪಸಂಖ್ಯಾತರ ನಡುವೆ ಸರಿ ಸಮತೋಲನ ಸಾಧಿಸಿದ್ದಾರೆ. ಸೈದ್ಧಾಂತಿಕವಾಗಿಯಷ್ಟೇ ಅಲ್ಲದೇ ವಾಸ್ತವಿಕವಾಗಿಯೂ. ನಾವು ಭಾರತವನ್ನು ಮಹಾನ್ ರಾಷ್ಟ್ರವಾಗಿ ಮಾಡಲು ಗಮನವನ್ನು ಕೇಂದ್ರೀಕರಿಸಬಹುದಾಗಿದೆ.

**ಶ್ರೀ ಹುಸೇನ್ ಇಮಾಮ್** (ಬಿಹಾರ : ಮುಸ್ಲಿಮ್) : ಈ ಸಂವಿಧಾನವನ್ನು ನಮಗೆ ನಾವೇ ಸಮರ್ಪಿಸಿಕೊಂಡಿರುವ ಈ ಸಂದರ್ಭದಲ್ಲಿ ಸಂವಿಧಾನ ಕುರಿತಂತೆ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಹಿಂದಿನ ಭಾಷಣಕಾರರು, ನಾನು ಕೇಳಬೇಕೆಂದಿದ್ದ ಅನೇಕ ಪ್ರಶ್ನೆಗಳನ್ನು ಉಲ್ಲೇಖಿಸಿರುವುದರಿಂದ ಬಹುಮಟ್ಟಿಗೆ ನನ್ನ ಹೊಣೆಯನ್ನು ಹಗುರಗೊಳಿಸಿದ್ದಾರೆ.

ಕರಡು ರಚನಾಸಮಿತಿಯ ಅಧ್ಯಕ್ಷರ ಸ್ಥಾನ ನಿರ್ವಹಿಸುವುದು ಬಹಳ ಕಷ್ಟ ಎಂದು ನಾನು ಹೇಳಲೇಬೇಕಾಗುತ್ತದೆ. ಸೋವಿಯತ್ ಸಂವಿಧಾನವನ್ನು ನಕಲು ಮಾಡದ್ದಕ್ಕೆ ಎಡಗಡೆಯಿಂದಲೂ ಮತ್ತು ಗ್ರಾಮಪಂಚಾಯಿತಿಯನ್ನು ಒಂದು ಘಟಕವಾಗಿ ಪರಿಗಣಿಸಿ ಹಿಂದಿನ ವ್ಯವಸ್ಥೆಯನ್ನು ಪುನಃ ತರದಿದ್ದುದಕ್ಕೆ ಬಲಪಂಥೀಯರೂ ಅವರ ಮೇಲೆ ವಾಗ್ದಾಳಿ ಮಾಡಿದ್ದಾರೆ. ಭಾರತೀಯರು ಈಡಾಗುವ ಎಲ್ಲ ರೋಗಗಳ ನಿವಾರಣೆಗಾಗಿ ಸಂವಿಧಾನದಲ್ಲಿ ಅವಕಾಶ ಒದಗಿಸಲೇಬೇಕು ಎಂದು ನಮ್ಮ ಕೆಲವರು ಗೆಳೆಯರು ಬಯಸಿದಾಗ ಅವರ ಮನಸ್ಸಿನಲ್ಲಿ ಸ್ವಲ್ಪಮಟ್ಟಿಗೆ ಗೊಂದಲವಿದೆ ಎಂದು ನಾನು ಹೇಳಬಹುದೇ? ಸಂವಿಧಾನವು ಆಹಾರ ಹಾಗೂ ಬಟ್ಟೆ ಒದಗಿಸತಕ್ಕದೆಂಬುದು ಸಂವಿಧಾನದ ಜವಾಬ್ದಾರಿಯಲ್ಲ. ಈ ಸಂವಿಧಾನ ರಚನಾಸಭೆಯ ಪ್ರತಿಷ್ಠಿತ ಸದಸ್ಯರು ಈ ಉದ್ದೇಶಕ್ಕಾಗಿ ಈ ಸಂವಿಧಾನದಲ್ಲಿ ಯಾವುದೇ ಉಪಬಂಧ ಇರುವುದಿಲ್ಲ ಎಂದು ವಿಷಾದಿಸಿದರು. ಮಾನ್ಯರೆ, ಸಂವಿಧಾನವು ಯಾವ ದೇಶಕ್ಕೆ ಅನ್ವಯವಾಗುತ್ತಿದೆಯೋ ಅದರ ಅಗತ್ಯಗಳನ್ನು ಆಧರಿಸಿರುತ್ತದೆ. ಎಂಬುದು ನನ್ನ ವಿನಮ್ರ ಹೇಳಿಕೆ. ನಮ್ಮವೇ ಆದ ಸಂದರ್ಭ ಸನ್ನಿವೇಶಗಳಿಗೆ ವಿಶಿಷ್ಟವಾದ ಅಗತ್ಯಗಳನ್ನು ಈ ಸಂವಿಧಾನವು ಒದಗಿಸುವುದೇ ಎಂಬುದನ್ನು ನಾವು ನೋಡಬೇಕು.

ನನಗೆ ಕಂಡುಬಂದ ಮೊದಲನೇ ಕೊರತೆ ಎಂದರೆ, ಜನರ ಸಾರ್ವಭೌಮತ್ವದ ಬಗ್ಗೆ ಏನೂ ಹೇಳಿಯೇ ಇಲ್ಲ. ಜನರಿಂದಲೇ ಎಲ್ಲ ಅಧಿಕಾರಗಳನ್ನು ಪಡೆದುಕೊಂಡಿರುವುದರಿಂದ ಮತ್ತು ಎಲ್ಲ ಸಂವಿಧಾನಗಳೂ ಜನರ ಇಚ್ಛೆಯನ್ನು ಆಧರಿಸಿರುವುದರಿಂದ ಜನರ ಸಾರ್ವಭೌಮತ್ವ ಸಿದ್ಧಾಂತವನ್ನು ನೀವು ಒಪ್ಪಿಕೊಳ್ಳುವ ಹೊರತು ಫಲಿತಾಂಶವು ಗೊಂದಲಮಯವಾಗಿರುತ್ತದೆ.

ಇದು ಗೊಂದಲವಾಗಿ ಪರಿಣಮಿಸಿದೆ. ಉದಾಹರಣೆಗೆ: ಈ ಮೊದಲು ಯಾವ ಪ್ರದೇಶಗಳನ್ನು ಭಾರತೀಯ ಸಂಸ್ಥಾನಗಳು ಮತ್ತು ಬ್ರಿಟಿಷ್ ಇಂಡಿಯನ್ ಪ್ರಾಂತ್ಯಗಳು ಎಂದು ಕರೆಯುತ್ತಿದ್ದೆವೋ ಅವೆರಡನ್ನೂ ನೋಡುವ ರೀತಿ ನ್ಯಾಯೋಚಿತವೂ ಆಗಿರಲಿಲ್ಲ, ನ್ಯಾಯಯುತವೂ ಆಗಿರಲಿಲ್ಲ. ಯಾರು ಸ್ವರಾಜ್ಯ ಅಥವಾ ಸ್ವಯಂ ಆಡಳಿತದ ಸಾಧನೆಗೆ ಮುಖ್ಯವಾಗಿ ಹೋರಾಡಿದರೋ ಅವರಿಗೆ, ಭಾರತೀಯ ಸಂಸ್ಥಾನಗಳಲ್ಲಿ ಪ್ರಾಂತ್ಯಗಳಲ್ಲಿರುವ ಜನರಿಗಿಂತ ಕಡಿಮೆ ಅಧಿಕಾರ ದೊರಕಿದೆ; ಭಾರತೀಯ ಪ್ರದೇಶಗಳಲ್ಲಿರುವ ನಾವು, ಹೋರಾಟದಲ್ಲಿ ಭಾಗವಹಿಸಿದಷ್ಟೂ ಪ್ರಾಂತ್ಯಗಳ ಜನ ಭಾಗವಹಿಸಿರಲಿಲ್ಲವೆಂದು ಕಂಡುಬಂದಿದೆ. ಕೆಲವು ಸಂಸ್ಥಾನಗಳ ಸೀಮಾ ಸುಂಕ ಆದಾಯವನ್ನು ಕೇಂದ್ರ ಅನುದಾನಗಳ ಮೂಲಕ ಕಟ್ಟಿಕೊಡಬೇಕಾಗಿದೆ. ನಮಗೆಲ್ಲ ಒಂದೇ ನಾಗರಿಕತ್ವ ಎಂದು ಹೇಳಲಾಗಿದೆ. ಅದು ಭಾರತದ ನಾಗರಿಕತ್ವ; ಒಂದು ನಾಗರಿಕತ್ವದ ಹಕ್ಕುಗಳಿಗೆ ಸಂಬಂಧಿಸಿದಂತೆ ರಾಜ್ಯಗಳ ಜನರು ವಿವಿಧ ಹಕ್ಕುಗಳು ಹೊಂದಲು ಸಾಧ್ಯವೇ? ಭಾರತೀಯ ಸಂಸ್ಥಾನಗಳಲ್ಲಿ ಜನ ಆದಾಯ ತೆರಿಗೆಯಿಂದ ಮುಕ್ತರಾಗಿದ್ದರೆ ಆದಾಯ ತೆರಿಗೆ ಏನಿದ್ದರೂ ಬ್ರಿಟಿಷ್-ಇಂಡಿಯನ್ ಪ್ರಾಂತ್ಯಗಳಿಗೆ ಮಾತ್ರ ಅನ್ವಯವಾಗುತ್ತಿದೆ. ಒಂದೊ ಅಥವಾ ಎರಡೋ ಭಾರತೀಯ ಸಂಸ್ಥಾನಗಳಿಗಷ್ಟೇ ಅನ್ವಯವಾಗುತ್ತಿದ್ದು ಅವನ್ನು ಹೊರತುಪಡಿಸಿ ಬೇರೆ ಸಂಸ್ಥಾನಗಳಲ್ಲಿ ಕಾರ್ಪೋರೇಷನ್

ತೆರಿಗೆಯನ್ನು ವಿಧಿಸಿರಲಿಲ್ಲ. ಆದುದರಿಂದ ಒಂದೇ ಬಗೆಯ ಆಧಿಪತ್ಯದಲ್ಲಿ ಏಕರೂಪತೆ ಇರಬೇಕು ಎಂದು ನಾನು ಸಲಹೆ ಮಾಡುತ್ತೇನೆ. ಕರಡು ಸಂವಿಧಾನಕ್ಕೆ ಸಂಬಂಧಿಸಿದಂತೆ ಅದು ನನ್ನ ಮೊದಲ ಮೂಲಭೂತ ಆಕ್ಷೇಪಣೆಯಾಗಿದೆ.

ಎರಡನೆಯದಾಗಿ, ಡಾ. ಅಂಬೇಡ್ಕರ್ ಅವರೇ ಎತ್ತಿ ತೋರಿಸದಂತೆ, ಪ್ರಾಂತ್ಯಗಳು ಮತ್ತು ಸಂಸ್ಥಾನಗಳ ನಡುವೆ ಯಾವುದೇ ಭೇದವಿರಬಾರದು. ಭಾರತೀಯ ಸಂಸ್ಥಾನಗಳಿಗೆ ಸೈನ್ಯವನ್ನು ನಿರ್ವಹಿಸುವ ಹಕ್ಕನ್ನು ಕೊಟ್ಟಿರುವುದು ತಪ್ಪು. ಭಾರತವು ಚಲನಶೀಲ ಸ್ಥಿತಿಯಲ್ಲಿದೆ. ಸರ್ದಾರ್ ಪಟೇಲರ ತೀಕ್ಷ್ಣಮತಿ ಮತ್ತು ದೃಢತೆಗೆ ವಂದನೆಗಳು. ಅವರು ಭಾರತೀಯ ಸಂಸ್ಥಾನಗಳ ಸಮಸ್ಯೆಯನ್ನು ಸಮಗ್ರವಾಗಿ ಪರಿಹರಿಸಿದ್ದಾರೆ. ಅವು ಇನ್ನು ಮುಂದೆ ದಾರಿಯಲ್ಲಿ ಅಡ್ಡಗೋಡೆಯಾಗಿ ಉಳಿಯುವುದಿಲ್ಲ. ನಿನ್ನೆ ದಿನ ಜೋಧಪುರ ಸಂಸ್ಥಾನದ ಪ್ರಧಾನಿ ಮತ್ತು ಮಧ್ಯಭಾರತದಿಂದ ಒಬ್ಬರು ಪ್ರತಿನಿಧಿಗಳು, ಮಾತನಾಡಿದ್ದು ಕೇಳಿ ಹರ್ಷವಾಯಿತು; ಅವರು ಭಾರತೀಯ ಪ್ರಾಂತ್ಯಗಳಲ್ಲಿ ಏಕರೂಪತೆಯು ಇರಬೇಕೆಂಬ ವಿಚಾರವನ್ನು ತಾವಾಗಿಯೇ ಪ್ರಸ್ತಾವಿಸಿದ್ದರು. ಭಾರತೀಯ ಸಂಸ್ಥಾನಗಳ ನಾಗರಿಕರಿಗೆ ಸರ್ವೋಚ್ಚನ್ಯಾಯಾಲಯದ ದ್ವಾರಗಳು ಏಕೆ ಮುಚ್ಚಬೇಕು ಎಂಬುದಕ್ಕೆ ಕಾರಣವಿಲ್ಲ. ಅವರೂ ಭಾರತೀಯ ನಾಗರಿಕರಾಗಿದ್ದಾರೆ, ಅವರೂ ತಮ್ಮ ಹಿತಾಸಕ್ತಿಗಳ ಮತ್ತು ಹಕ್ಕುಗಳ ನ್ಯಾಯತೀರ್ಮಾನಕ್ಕೆ ನಾವು ಈ ನ್ಯಾಯಾಲಯಕ್ಕೆ ಹೋಗಲು ನಮಗೆ ಹಕ್ಕು ಇರುವಂತೆ ಅವರಿಗೂ ಅಷ್ಟೇ ಹಕ್ಕಿದೆ. ಇವೆಲ್ಲದಕ್ಕೂ ನಾವು ಜನರ ಆಧಿಪತ್ಯವನ್ನಾಗಲಿ ಇಲ್ಲವೆ ಏಕರೂಪತೆ ಇರುವ ಒಂದು ವ್ಯವಸ್ಥೆಯಲ್ಲಿ ಪ್ರತಿಯೊಬ್ಬರೂ ಕಾನೂನಿನ ದೃಷ್ಟಿಯಲ್ಲಿ ಮತ್ತು ಜವಾಬ್ದಾರಿಯಲ್ಲಿ, ಸಮಾನರು ಎಂಬ ತತ್ತ್ವವನ್ನು ಅಂಗೀಕರಿಸದಿರುವ ಅಂಶವೇ ಕಾರಣ.

ಡಾ. ಅಂಬೇಡ್ಕರ್ ಅವರು ಸಂವಿಧಾನ ಕಾನೂನಿನಲ್ಲಿ ತಜ್ಞರು ಅನುಭವಿಗಳು ಆಗಿರುವ ಸಂಸದೀಯೇತರ ಕಾರ್ಯನಿರ್ವಾಹಕನ ಜವಾಬ್ದಾರಿಯು, ಸಂಸದೀಯ ಕಾರ್ಯನಿರ್ವಾಹಕನದಕ್ಕಿಂತ ಕಡಿಮೆಯೇನಲ್ಲ ಎಂಬ ವಿಷಯವನ್ನೂ ಗಮನಿಸಿಲ್ಲ ಎಂಬುದು ನನಗೆ ಅಚ್ಚರಿಯಾಗಿದೆ. ಅದನ್ನು ಪರೀಕ್ಷಿಸಿದರೆ, ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಪ್ರತಿನಿಧಿಗಳ ಸದನ (ಹೌಸ್ ಆಫ್ ರೆಪ್ರೆಸೆಂಟೆಟಿವ್ಸ್) ಸಮಿತಿಗಳು ಮತ್ತು ಸೆನೆಟ್ ಇವು ಹೌಸ್ ಆಫ್ ಕಾಮನ್ಸ್ ಚಲಾಯಿಸಿದ ನಿಯಂತ್ರಣಕ್ಕಿಂತ ಹೆಚ್ಚು ನಿಯಂತ್ರಣಗಳನ್ನು ಚಲಾಯಿಸುತ್ತವೆ ಎಂಬುದು ಕಂಡುಬರುತ್ತದೆ. ಯು.ಎಸ್.ಎ. ನಲ್ಲಿ ಕಾರ್ಯನಿರ್ವಾಹಕನು, ಅಧ್ಯಕ್ಷರ ನಾಲ್ಕು ವರ್ಷಗಳ ಅವಧಿ ಅನಂತರ ಮಾತ್ರ ತಿದ್ದುಪಡಿ ತರಬಹುದು ಎಂದು ಹೇಳುವುದು ತಪ್ಪಾಗುತ್ತದೆ. ಆತನು ದೈನಂದಿನ ನಿಯಂತ್ರಣಕ್ಕೆ ಒಳಪಟ್ಟಿರುತ್ತಾನೆ ಮತ್ತು ಅ ನಿಯಂತ್ರಣವು, ಬ್ರಿಟಿಷ್ ಪಾರ್ಲಿಮೆಂಟ್‌ನಲ್ಲಿನ ಸಂದರ್ಭದಲ್ಲಿರುವುದಕ್ಕಿಂತ, ಸೆನೆಟ್ ಸಮಿತಿಗಳ ಮತ್ತು ಹೌಸ್ ಆಫ್ ರೆಪ್ರೆಸೆಂಟೆಟಿವ್ಸ್ ಸಂದರ್ಭದಲ್ಲಿಯದಕ್ಕಿಂತ ತುಂಬ ಹೆಚ್ಚು. ಅಧ್ಯಕ್ಷ ವಿಲ್ಸನ್ ಅವರು, ಲೀಗ್ ಆಫ್ ನೇಷನ್ಸ್‌ನಲ್ಲಿ ತಮ್ಮ ಮಂಡಿಸಬೇಕಾಗಿದ್ದ ಪ್ರಸ್ತಾವವಾದ್ದರಿಂದ ಸೆನೆಟ್ ಸಮಿತಿಯು ಸಮ್ಮತಿಸಲಿಲ್ಲವಾದದ್ದರಿಂದ ಅವರು ಅದನ್ನು ಮಂಡಿಸಲು ವಿಫಲರಾಗಿದ್ದ ಉದಾಹರಣೆ, ಎಲ್ಲರಿಗೂ ತಿಳಿದಿದೆ. ಇತರ ದೇಶಗಳಿಗೆ ರಾಯಭಾರಿಗಳ ನೇಮಕವೂ ಕೂಡ ಸೆನೆಟಿನ ನಿಯಂತ್ರಕ್ಕೊಳಪಟ್ಟಿರುತ್ತದೆ. ಆದುದರಿಂದ, ಅಧ್ಯಕ್ಷೀಯ ಸಂಸದೀಯೇತರ ವ್ಯವಸ್ಥೆಯಲ್ಲಿ ನಿಯಂತ್ರಣ ಇರುವುದಿಲ್ಲ ಎಂಬುದು ಮತ್ತು ನಿಯಂತ್ರಣವೇನಾದರೂ ಇದ್ದರೆ, ಅದು ತುಂಬ ದೂರ, ಅಂದರೆ ನೇರ ಸಂಬಂಧವಿಲ್ಲದಾಗಿರುತ್ತದೆ ಎಂದು ಹೇಳುವುದು ತಪ್ಪು. ಬ್ರಿಟಿಷ್ ಸಂಸದೀಯ ನಿಯಂತ್ರಣ ವ್ಯವಸ್ಥೆಯಲ್ಲಿ ಹೆಚ್ಚು ಅನ್ಯೋನ್ಯವಿಲ್ಲವಾದರೂ, ಅದು ಅನ್ಯೋನ್ಯವೇ ಆಗಿದೆ. ಈ ಅಂಶವನ್ನು ಮತ್ತೆ ಚರ್ಚಿಸಲು ನಾನು ಬಯಸುವುದಿಲ್ಲ, ಏಕೆಂದರೆ ಈ ವಿಷಯವಾಗಿ ಪುನಃ ಚರ್ಚಿಸುವಾಗ ನನಗೆ ಆಗ ಅವಕಾಶಗಳು ಇವೆ.

ಈ ಸಂಬಂಧವಾಗಿ ನಾನು ಮೊದಲೇ ಹೇಳಿದಂತೆ ಸಂವಿಧಾನವನ್ನು ದೇಶದ ಅಗತ್ಯಗಳಿಗೆ ತಕ್ಕಂತೆ ರೂಪಿಸಬೇಕು ಎಂದು ನಾನು ಹೇಳಬೇಕಾಗಿದೆ. ಭಾರತದಲ್ಲಿರುವ ಪರಿಸ್ಥಿತಿಗಳನ್ನು ಪರೀಕ್ಷಿಸಬೇಕೆಂದು

ನಾಯಕರನ್ನು ನಾನು ಕೇಳುತ್ತೇನೆ. ಸಂಯುಕ್ತ ಪ್ರಾಂತ್ಯಗಳನ್ನು ಅಂದರೆ ಭಾರತದ ಕೇಂದ್ರ ಭಾಗವನ್ನು ನೋಡಿ ಅಲ್ಲಿ ನೀವು ಒಂದೇ ಒಂದು ರಾಜಕೀಯ ಪಕ್ಷ ಇದೆ, ಅದೇ ಸಮಾಜವಾದಿ ಪಕ್ಷ ಅತ್ಯಂತ ಬಲಿಷ್ಠ ಪಕ್ಷವಾಗಿದೆ ಎನ್ನಲಾಗಿದೆ. ಸ್ಥಳೀಯ ಮಂಡಲಿಗಳ ಮತ್ತು ಜಿಲ್ಲಾ ಮಂಡಲಿಗಳ ಚುನಾವಣೆಗಳ ಫಲಿತಾಂಶವೇನಾಯಿತು? ಅವು ಪೆಟ್ಟು ತಿಂದವು; ಸಂಸತ್ತಿಗೆ ನಡೆದ ಚುನಾವಣೆಗಳಲ್ಲಿ ಖಾಲಿ ಮಾಡಿದ್ದ ಹನ್ನೆರಡು ಸ್ಥಾನಗಳ ಪೈಕಿ ಅದು ಪ್ರತಿಯೊಂದು ಸ್ಥಾನವನ್ನು ಕಳೆದುಕೊಂಡಿತು. ನೀವು ಸಂಸದೀಯ ಪ್ರಜಾಪ್ರಭುತ್ವವನ್ನು ನಿರ್ವಹಿಸಬಹುದಾದ ರೀತಿ ಇದೇ ಏನು? ಸಂಸದೀಯ ಪ್ರಜಾಪ್ರಭುತ್ವಲ್ಲಿ, ಒಂದು ಸಮರ್ಥ ವಿರೋಧಪಕ್ಷ ಇರಲೇಬೇಕು ಎಂಬುದು ಆವಶ್ಯಕ. ನೀವು ಏಕಸ್ಥಾನ ಮತ ಕ್ಷೇತ್ರಗಳು ಇರುವುದಾದರೆ ಸಮರ್ಥ ವಿರೋಧಪಕ್ಷ ಇರಲು ಸಾಧ್ಯವೇ ಇಲ್ಲ. ಅನುಪಾತೀಯ ಪ್ರಾತಿನಿಧ್ಯ ಪದ್ಧತಿಯ ಮೂಲಕ ಮಾತ್ರ ಭಾರತವು ಸರ್ವಾಧಿಕಾರ ದೇಶವಾಗಿ ಆಗುವ ಅಪಾಯವನ್ನು ತಪ್ಪಿಸಬಹುದು. ಭಾರತದಲ್ಲಿ ಪ್ರಜಾಪ್ರಭುತ್ವವನ್ನು ಕಾಯ್ದುಕೊಂಡು ಬರಬೇಕಾದರೆ, ಸಮರ್ಥ ವಿರೋಧಪಕ್ಷಕ್ಕೆ ಅವಕಾಶ ಇರುವಂಥ ಒಂದು ವ್ಯವಸ್ಥೆಯನ್ನು ನೀವು ನಿರ್ಮಾಣಮಾಡಬೇಕು ಎಂದು ವಿನಮ್ರ ಮನವಿ. ಕಾಂಗ್ರೆಸಿನ ಜನಪ್ರಿಯತೆ, ಪ್ರತಿಷ್ಠೆ ಮತ್ತು ಹೆಸರು ಇವು ಎಷ್ಟು ದೊಡ್ಡದಾಗಿವೆ ಎಂದರೆ, ಕಾಂಗ್ರೆಸ್ಸನ್ನು ವಿರೋಧಿಸಿ ಒಳಬರಲು ಯಾರೊಬ್ಬರಿಗೂ ಸಾಧ್ಯವಿಲ್ಲದುದಾಗಿದೆ. ಮತ್ತು ಇದರ ಫಲವಾಗಿಯೇ ಇಂಗ್ಲೆಂಡಿನಲ್ಲಿ ಅನೇಕ ಸಲ ಕಂಡುಬಂದಿರುವಂತೆ, ಬಹಳಷ್ಟು ಮತದಾರರು ಮತದಾನದ ಹಕ್ಕು ಕಳೆದುಕೊಂಡಿದ್ದ ಸಂದರ್ಭದಲ್ಲಿ ತ್ರಿಕೋನ ಸ್ಪರ್ಧೆ ನಡೆದ ಕಡೆಗಳಲ್ಲಿ ಸೋತ ಅಭ್ಯರ್ಥಿಗಳ ಮತಗಳು ಒಟ್ಟಾಗಿದ್ದರೆ, ಗೆಲುವು ಸಾಧಿಸಿದವರಿಗಿಂತ ಹೆಚ್ಚು ಸ್ಥಾನಗಳನ್ನು ಪಡೆಯಬಹುದಾಗಿತ್ತು. ತ್ರಿಕೋನ ಸ್ಪರ್ಧೆಗಳು ನಡೆಯುತ್ತಿಲ್ಲ ಎಂದು ಒಪ್ಪಿಕೊಂಡರೂ ಕ್ಷೇತ್ರದ ಬಹಳಷ್ಟು ಮತದಾರರು ಮತದಾನದ ಹಕ್ಕು ಕಳೆದುಕೊಳ್ಳುತ್ತಾರೆ. ನಿಮಗೆ ಶೇ.೬೦ ಮತ್ತು ಶೇ.೪೦ರಷ್ಟು ಮತಗಳು ಬಂದಿದ್ದರೂ, ಶೇ.೪೦ರಷ್ಟು ಮತದಾನವಾಗಿದ್ದರೆ, ದೇಶದಲ್ಲಿ ಪ್ರಾತಿನಿಧ್ಯ ಇರುವುದಿಲ್ಲ, ಅನುಪಾತೀಯ ಪ್ರಾತಿನಿಧ್ಯ ಪದ್ಧತಿಯಲ್ಲಿ ಅಂದರೆ, ಯೂರೋಪಿನ ಅನೇಕ ಮುಂದುವರಿದ ದೇಶಗಳಲ್ಲಿ ಇರುವಂತೆ ಅಭಿಪ್ರಾಯದಲ್ಲಿಯ ಪ್ರತಿಯೊಂದು ಬದಲಾವಣೆಯಲ್ಲಿ ನಿಮಗೆ ಪ್ರಾತಿನಿಧ್ಯ ಇರುತ್ತದೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** (ಮದ್ರಾಸ್ : ಸಾಮಾನ್ಯ) : ಸಾರ್ವತ್ರಿಕ ಚುನವಣೆಗಳಲ್ಲಿ ಅನುಪಾತೀಯ ಪ್ರಾತಿನಿಧ್ಯ ಇರುವ ಯೂರೋಪಿನ ರಾಷ್ಟ್ರಗಳು ಯಾವುವು?

**ಶ್ರೀ ಹುಸೇನ್ ಇಮಾಮ್** : ಯು.ಎಸ್.ಎ. ನಲ್ಲಿ ಅನುಪಾತೀಯ ಪ್ರಾತಿನಿಧ್ಯ ಪದ್ಧತಿ ಇದೆ.

**ಗೌರವಾನ್ವಿತ ಅನೇಕ ಸದಸ್ಯರು** : ಇಲ್ಲ, ಇಲ್ಲ.

**ಶ್ರೀ ಹುಸೇನ್ ಇಮಾಮ್** : ಅಂಥ ಪದ್ಧತಿ ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಇದೆ (ಗದ್ದಲ : ಇಲ್ಲ, ಇಲ್ಲ) ಯಾವ ದೇಶದಲ್ಲಿ ಅದು ಇಲ್ಲದಿದ್ದರೂ, ಇತರರು ಏನು ಮಾಡಿದ್ದಾರೆ ಎಂಬುದನ್ನು ನಾವು ಅನುಸರಿಸದೇ ಅದು ನಮಗೆ ಆವಶ್ಯವಿದ್ದರೆ, ಅದನ್ನು ಅನುಸರಿಸಬಹುದಾಗಿದೆ. ಆರಂಭದಲ್ಲಿ ನಾನು ಹೇಳಿದಂತೆ, ದೇಶದ ಅಗತ್ಯಗಳಿಗೆ ಸೂಕ್ತವಾಗುವ ಸಂವಿಧಾನವನ್ನು ರೂಪಿಸಬೇಕು ಮತ್ತು ಇತರರು ಏನು ಮಾಡುತ್ತಿದ್ದಾರೆ, ಅದಕ್ಕೆ ಸಮನಾಗಿ ಮಾಡುವ ಆವಶ್ಯಕತೆ ಇಲ್ಲ.

ಹಿಂದಿನ ಭಾಷಣಕಾರರು ಮಾಡಿದ ಭಾಷಣದ ಒಂದು ಅಂಶವನ್ನು ನಾನು ವಿವರಿಸಬಹುದಾಗಿದೆ, ಅದು ಯಾವುದೆಂದರೆ, ಅಲ್ಪಸಂಖ್ಯಾತರ ವೈಯಕ್ತಿಕ ಕಾನೂನನ್ನು ರಕ್ಷಿಸಬೇಕು ಎಂಬುದಾಗಿದೆ. ಬಹುಸಂಖ್ಯಾತರಿಗೆ ಅಂಥ ರಕ್ಷಣೆ ಬೇಕಾಗಿಲ್ಲ. ಏಕೆಂದರೆ, ಅವರು ಬಹುಸಂಖ್ಯಾತರು ಮತ್ತು ಅವರ ಪೂರ್ಣ ಸಮ್ಮತಿ ಮತ್ತು ಅನುಮೋದನೆ ಇಲ್ಲದೆ ಯಾವುದೂ ಅಂಗೀಕಾರವಾಗುವುದಿಲ್ಲ. ಅದೇ ಅಲ್ಪಸಂಖ್ಯಾತರಿಗೆ, ಈ ಸವಲತ್ತು, ಇರುವುದಿಲ್ಲ ಆದ್ದರಿಂದ, ಮುಸ್ಲಿಮರು ಮತ್ತಿತರ ಅಲ್ಪಸಂಖ್ಯಾತರಿಗೆ ಈ ಸವಲತ್ತು ಇಲ್ಲದಿರುವುದರಿಂದ ಮುಸ್ಲಿಮರು ಮತ್ತಿತರ ಅಲ್ಪಸಂಖ್ಯಾತರ ವೈಯಕ್ತಿಕ ಕಾನೂನು ಬೇಕೆಂದು ಯಾರು ಅಪೇಕ್ಷಿಸುತ್ತಾರೋ

ಅವರು ಅದನ್ನು ಬಹುಸಂಖ್ಯಾತರ ಅನುಮೋದನೆ ಇಲ್ಲದೆ ಹಾಗೂ ಶಾಸನಸಭೆಯ ಅಡೆತಡೆಯಿಲ್ಲದೇ ರಕ್ಷಿಸಿಕೊಳ್ಳಬೇಕಾಗಿದೆ.

ಮೀಸಲಾತಿಯ ಪ್ರಶ್ನೆ ಕುರಿತು ಶ್ರೀ ಲಾರಿ ಅವರು ಶಾಸನಸಭೆಯಲ್ಲಿ ಸೂಕ್ತಪ್ರಾತಿನಿಧ್ಯ ವಿಧಾನ ಇಲ್ಲದಿರುವಾಗ ಮೀಸಲಾತಿ ಒಳ್ಳೆಯದಲ್ಲ ಎಂದು ಹೇಳಿದ್ದಾರೆ. ಆದುದರಿಂದ ದೇಶದಲ್ಲಿ ವಿರೋಧಪಕ್ಷವನ್ನು ಸಂರಕ್ಷಿಸಬೇಕಾದುದು ತುಂಬ ಆವಶ್ಯಕವಾಗಿದ್ದು, ಅದೇ ರೀತಿ ಅನುಪಾತೀಯ ಪ್ರಾತಿನಿಧ್ಯವನ್ನು ಸಂರಕ್ಷಿಸುವುದರಿಂದ ಅಲ್ಪಸಂಖ್ಯಾತರ ಆಸಕ್ತಿಯನ್ನು ಸಂರಕ್ಷಿಸಿದಂತಾಗುತ್ತದೆ. ಅನುಪಾತೀಯ ಪ್ರಾತಿನಿಧ್ಯವನ್ನು ಸಾಕಷ್ಟು ದೊಡ್ಡ ಸಂಖ್ಯೆಯಲ್ಲಿ ಒದಗಿಸಿದರೆ, ಅಲ್ಪಸಂಖ್ಯಾತರಿಗೆ ಮೀಸಲಾತಿ ನೀಡುವ ಅಗತ್ಯವಿರುವುದಿಲ್ಲ.

ಉದಾಹರಣೆಗೆ: ಪ್ರತಿ ಜಿಲ್ಲೆಯಲ್ಲಿ ಒಂದು ಅಥವಾ ಎರಡು ಮತಕ್ಷೇತ್ರಗಳನ್ನು, ಪ್ರತಿಯೊಂದರಲ್ಲಿ ಹತ್ತು ಅಥವಾ ಹನ್ನೆರಡು ಸ್ಥಾನಗಳಿರುವ ಬಹುಸದಸ್ಯ ಮತಕ್ಷೇತ್ರಗಳನ್ನಾಗಿ ಮಾಡಬಹುದು ಮತ್ತು ಜರ್ಮನಿಯಲ್ಲಿ ಕೆಲ ಕಾಲದವರೆಗೆ ಈ ಮೊದಲು ಇದ್ದ ಪಟ್ಟಿಗಳ ವ್ಯವಸ್ಥೆ ನಮ್ಮಲ್ಲಿಯೂ ಇದ್ದರೆ, ಅದರಿಂದ ಇನ್ನೂ ಹೆಚ್ಚಿನ ಉದ್ದೇಶ ಈಡೇರುತ್ತದೆ. ಏಕೆಂದರೆ, ಮತದಾನವು ಪಕ್ಷಗಳ ಆಧಾರದ ಮೇರೆಗೆ ನಡೆಯುತ್ತದೆ. ಆದರೆ ವ್ಯಕ್ತಿಗಳ ಆಧಾರದ ಮೇಲಲ್ಲ. ನಾವು ವೈಯಕ್ತಿಕಕ್ಕಿಂತ ಸಾಮೂಹಿಕವಾಗಿ ಹೆಚ್ಚು ಪ್ರಾತಿನಿಧ್ಯ ಬಯಸುತ್ತೇವೆ. ಫ್ರಾನ್ಸಿನಲ್ಲಿ ಕಂಡುಬಂದ ದೃಶ್ಯವು ಭಾರತದಲ್ಲಿ ಪುನರಾವರ್ತಿತವಾಗಲು ನಾವು ಬಯಸುವುದಿಲ್ಲ. ಆದರೆ, ಪ್ರಜಾಪ್ರಭುತ್ವ ವಿರೋಧಿಯಾಗುವಂಥ ಏಕಪಕ್ಷದ ಸರ್ಕಾರ ನಮಗೆ ಇರಬೇಕೆಂದು ಬಯಸುವುದಿಲ್ಲ.

ಮಾನ್ಯರೆ, ನಾನು ನನ್ನ ಮಾತುಗಳನ್ನು ಮುಗಿಸುವ ಮೊದಲು ಭಾಷೆಯ ಪ್ರಶ್ನೆ ಕುರಿತು ಕೆಲವು ಮಾತುಗಳನ್ನು ಹೇಳಲು ಬಯಸುತ್ತೇನೆ. ಈ ವಿಷಯ ಕುರಿತು ಪ್ರಸಕ್ತ ಭಾವನೆಗಳನ್ನು ವಿರೋಧಿಸಿ ಏನೊಂದೂ ಹೇಳ ಹೋಗುವುದಿಲ್ಲ. ಸದ್ಯದ ಸಮಯದಲ್ಲಿ ಇಂಗ್ಲಿಷ್‌ಭಾಷೆಯು ಮುಂದುವರಿಯಬೇಕೆಂಬುದು ದಕ್ಷಿಣದವರ ವಾದ. ಆದರೆ, ಹಿಂದಿಗೆ ಸಂಬಂಧಿಸಿದಂತೆ, ಹಿಂದಿ ಎಂದರೇನು ಎಂದು ತಿಳಿದರೆ ಯಾವ ಭಿನ್ನಾಭಿಪ್ರಾಯವಿರುವುದಿಲ್ಲ. ನಾನು, ಸರ್ದಾರ್ ಪಟೇಲರು ಮಾತನಾಡಿದ ಭಾಷೆಯನ್ನು ಅಳವಡಿಸಲು ವೈಯಕ್ತಿಕವಾಗಿ ತಯಾರಿದ್ದೇನೆ ಮತ್ತು ಬಾಂಬೆಯಲ್ಲಿ ಇತ್ತೀಚಿನ ಅವರ ಭಾಷಣವನ್ನು ಆ ಭಾಷೆಯಲ್ಲಿ ಮಾಡಿದರು. ಅವರು ಉರ್ದು ಮಾತನಾಡುವ ಪ್ರದೇಶದಿಂದ ಬಂದಿರುವುದಿಲ್ಲ. ಅವರು ಒಬ್ಬ ಗುಜರಾತಿ. ಜನರು ಎಲ್ಲೆಲ್ಲಿಯೂ ಮಾತನಾಡುವ ಭಾಷೆಯನ್ನು ಅವರು ಮಾತನಾಡುತ್ತಾರೆ. ಚೌಪಾಟಿಯಲ್ಲಿ ಅವರ ಭಾಷಣದ ರೇಡಿಯೋ ಪ್ರಸಾರವನ್ನು ಕೇಳುವ ಸಂದರ್ಭ ನನಗಿತ್ತು ಮತ್ತು ಅದು ಹಿಂದೂಸ್ಥಾನಿಯಲ್ಲದೆ ಬೇರಾವುದೂ ಅಲ್ಲ ಎಂದು ನನಗೆ ತಿಳಿದಿದೆ. ಅಥವಾ ನೀವು ಅದನ್ನು ಯಾವ ಹೆಸರಿನಿಂದ ಬೇಕಾದರೂ ಕರೆಯಿರಿ. ನನಗೆ ಚೌಪಾಟಿಯಲ್ಲಿ ಅವರು ಮಾತನಾಡಿದ ಭಾಷೆ "ಹಿಂದೂಸ್ಥಾನಿ". ಅದು ಅವರ ಅಧೀನದ ಇಲಾಖೆ, ಆಕಾಶವಾಣಿಯಲ್ಲಿ ಬಳಸುವ ಭಾಷೆಗಿಂತ ಜನರು ಚೆನ್ನಾಗಿಯೇ ಅರ್ಥಮಾಡಿಕೊಳ್ಳುವ ಭಾಷೆ ಇದಾಗಿದೆ.

ಮಾನ್ಯರೆ, ಈ ವಿಷಯದಲ್ಲಿ ಕೂಡಾ, ನಾವು ಗಾಂಧಿಯವರ ಪರಿಕಲ್ಪನೆಯನ್ನು ಅನುಸರಿಸುತ್ತಿದ್ದೇವೆ ಎಂದು ನಮಗೆ ತಿಳಿದುಬಂದಿದೆ. ಆದರೆ, ಕಡೆಯ ಕ್ಷಣದವರೆಗೂ ಮಹಾತ್ಮ ಗಾಂಧಿಯವರು 'ಹಿಂದೂಸ್ಥಾನಿ' ಭಾಷೆ ಪರವಾಗಿದ್ದರು ಎಂಬುದನ್ನು ಜನ ಮರೆತಿದ್ದಾರೆ. ಅವರು ದೇವನಾಗರಿ ಲಿಪಿ ಮತ್ತು ಉರ್ದು ಲಿಪಿ ಈ ಎರಡರಲ್ಲೂ ಹಿಂದೂಸ್ಥಾನಿಯನ್ನು ಬರೆಯುತ್ತಿದ್ದರು. ದೇವನಾಗರಿ ಲಿಪಿಗೆ ಸಂಬಂಧಿಸಿದಂತೆ, ಅದಕ್ಕೆ ಯಾವ ವಿರೋಧವೂ ಇಲ್ಲ, ಅದು ಅತ್ಯಂತ ಉತ್ತಮ ಮಾಧ್ಯಮವಾಗಿದೆ. ಆದರೆ, ಭಾಷೆ ಕುರಿತು ಸಮಸ್ಯೆ ಏಕೆ? ಹಿಂದಿಯನ್ನು (ನೀವು ಹಿಂದೂಸ್ಥಾನಿ ಎಂದು ಕರೆಯಬಹುದು) ಅದಕ್ಕೆ ಸಂಸ್ಕೃತದ ದೊಡ್ಡ ದೊಡ್ಡ ಶಬ್ದಗಳನ್ನು ಬೆರೆಸದೇ ಸಾಮಾನ್ಯ ಲಿಂಗಸೂಚಕ ಶಬ್ದಗಳನ್ನು ಸೇರಿಸಿದರೆ, ಅದು ಹಿಂದೂಸ್ಥಾನಿ ಭಾಷೆಯಾಗುತ್ತದೆ. ನಾನು ಹೇಳಿದಂತೆ, ಉಪಪ್ರಧಾನಿಯವರು ಅಂದರೆ ಉರ್ದು ಮಾತನಾಡದಿರುವ

ಪ್ರಾಂತ್ಯದಿಂದ ಬಂದಿರುವ ಅವರ ಭಾಷೆಯು ನಮ್ಮ ನಿರ್ಣಾಯಕ ಅಂಶ ಮತ್ತು ಮಾರ್ಗದರ್ಶಿ ಆಗಬೇಕು. ಸಂವಿಧಾನ ರಚನಾಸಭೆಯ ಸದಸ್ಯರು, ಮಹಾತ್ಮ ಗಾಂಧಿಯವರ ಕೊನೆಯ ಇಚ್ಛೆಯಾಗಿದ್ದ ಮತ್ತು ಇಂದು ಭಾರತದಲ್ಲಿ ಬಹಳಷ್ಟು ಜನರು ಒಪ್ಪಿಕೊಂಡಿರುವ, ದೇವನಾಗರಿ ಮತ್ತು ಉರ್ದು, ಎರಡೂ ಲಿಪಿಯಲ್ಲಿ ಬರೆಯುವ ಹಿಂದೂಸ್ಥಾನಿಯನ್ನು ಒಪ್ಪಲು ಇಚ್ಛಿಸುವುದಾದರೆ ಅದನ್ನು ರಾಷ್ಟ್ರಭಾಷೆಯಾಗಿ ಅಂಗೀಕರಿಸಬೇಕು ಎಂದು ನಾನು ಸಲಹೆ ಮಾಡುತ್ತೇನೆ.

ಮಾನ್ಯರೆ, ಸಂವಿಧಾನವನ್ನು ಒಮ್ಮೆ ಮಾತ್ರ ರೂಪಿಸಲಾಗುತ್ತದೆ. ಅದು ಮತ್ತೊಂದು ದಿನ ಮಾಡುವಂಥದಲ್ಲ. ಆದುದರಿಂದ ಅದನ್ನು ರೂಪಿಸುವುದರಲ್ಲಿ ಯಾವುದೇ ಆವೇಶ ಮತ್ತು ಯಾವುದೇ ದ್ವೇಷ ಅಥವಾ ಮಾನಸಿಕ ಬಿಗುಮಾನಗಳಿಲ್ಲದೇ ಅತ್ಯಂತ ಹೆಚ್ಚು ಪರಿಗಣನೆಯಿಂದ ಶಾಂತಮನಸ್ಸಿನ ಪರಿಗಣನೆಯಿಂದ ನಾವು ಸಿದ್ಧಪಡಿಸಿರುವುದು ಸರಿ ಮತ್ತು ಸೂಕ್ತವಾದುದಾಗಿದೆ. ಅವರು ಹಿಂದೆ ನಡೆದುದನ್ನು ಮರೆತು ಕ್ಷಮಿಸಬೇಕೆಂದು ನಾನು ಸದನಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯರೆ, ಪಾಕಿಸ್ತಾನವನ್ನು ಅಸ್ತಿತ್ವಕ್ಕೆ ತರುವಲ್ಲಿ ನಾವೇ ಜವಾಬ್ದಾರರಾಗಿದ್ದೇವೆ ಎಂಬುದನ್ನು ಪ್ರತಿ ದಿನ ನೆನಪು ಮಾಡಿಕೊಡುತ್ತಿರುವುದು ತುಂಬ ನೋವು ಉಂಟುಮಾಡುತ್ತದೆ. ಅದರ ದೃಷ್ಟಿಯಲ್ಲಿ ಯಾರೊಬ್ಬರ ಹಾಗೆ ಕಾಂಗ್ರೆಸ್ ಒಂದು ಪಕ್ಷವಾಗಿತ್ತು. ಆ ದೃಷ್ಟಿಯಿಂದ, ನಾನು ಮುಸ್ಲಿಮರನ್ನು ಒತ್ತೆಯಾಳುಗಳಂತೆ ನೋಡಬಾರದೆಂದು ಕೋರುತ್ತೇನೆ. ಅವರನ್ನು ಭಾರತದಲ್ಲಿ ವಾಸಿಸಲು ಹಕ್ಕುಳ್ಳ ಮತ್ತು ಭಾರತದ ಸವಲತ್ತು ಸೌಕರ್ಯಗಳನ್ನು ಅನುಭವಿಸಲು ಹಕ್ಕುಳ್ಳವರೆಂದು ಹಾಗೂ ಅವರೂ ಭಾರತದ ನಾಗರಿಕರೆಂದು ನೋಡಬೇಕು.

**ಬೇಗಂ ಐಜಾಜ್ ರಸೂಲ್** (ಸಂಯುಕ್ತ ಪ್ರಾಂತ್ಯಗಳು : ಮುಸ್ಲಿಮ್) : ಮಾನ್ಯರೆ, ನಾನು ಗೌರವಾನ್ವಿತ ಡಾ. ಅಂಬೇಡ್ಕರ್ ಅವರನ್ನು ಕರಡು ಸಂವಿಧಾನ ಕುರಿತು ಸರಳ ಮತ್ತು ಉಜ್ಜ್ವಲ ರೀತಿಯಲ್ಲಿ ನಿರೂಪಿಸಿದ್ದಕ್ಕೆ ಅಭಿನಂದಿಸುತ್ತೇನೆ. ಅವರು ಮತ್ತು ಕರಡು ರಚನಾಸಮಿತಿಯು ಮಾಡಿದ ಕಾರ್ಯ ಸಾಮಾನ್ಯವಾದುದಲ್ಲ, ಅಂಥ ಕಾರ್ಯನಿರ್ವಹಿಸಿದ್ದಕ್ಕಾಗಿ ಅಭಿನಂದಿಸಲೇಬೇಕು.

ಮಾನ್ಯರೆ, ನನಗೆ ಸಂವಿಧಾನ ರಚನಾಕಾರ್ಯದಲ್ಲಿ ಸಹಕರಿಸಲು ದೊರೆತದ್ದು ಅದೊಂದು ಮಹದವಕಾಶ ಎಂದು ನಾನು ಭಾವಿಸುತ್ತೇನೆ. ಸಂದರ್ಭದ ಘನತೆ ಗಾಂಭೀರ್ಯಗಳನ್ನು ನಾನು ಬಲ್ಲೆ. ಎರಡು ಶತಮಾನಗಳ ಗುಲಾಮಗಿರಿ ಅನಂತರ ಭಾರತವು ಬಂಧನದ ಕತ್ತಲೆಯಿಂದ ಸ್ವಾತಂತ್ರ್ಯದ ಬೆಳಕಿನಲ್ಲಿ ಹೊರ ಹೊಮ್ಮಿದೆ ಮತ್ತು ಈ ಐತಿಹಾಸಿಕ ಸಂದರ್ಭದ ದಿನದಂದು ನಾವೆಲ್ಲ ಸ್ವತಂತ್ರ ಭಾರತಕ್ಕೆ ಸಂವಿಧಾನ ರಚಿಸಲು ಸೇರಿದ್ದೇವೆ, ಅದು ನಮ್ಮ ಭವಿಷ್ಯತ್ತಿನ ಗುರಿಗೆ ಆಕಾರ ಕೊಡುವ ಮತ್ತು ಈ ಬೃಹತ್ ಉಪಖಂಡದಲ್ಲಿ ವಾಸಿಸುತ್ತಿರುವ ಮುನ್ನೂರು ದಶಲಕ್ಷ ಜನರ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸ್ಥಾನಮಾನವನ್ನು ನಿರೂಪಿಸುತ್ತದೆ. ಆದುದರಿಂದ ನಾವು ನಮ್ಮ ಜವಾಬ್ದಾರಿಗಳ ಬಗ್ಗೆ ಸಂಪೂರ್ಣ ಬಲ್ಲವರಾಗಬೇಕು ಹಾಗೂ ಇಲ್ಲಿ ವಾಸಿಸುವ ಜನರ ಅಗತ್ಯಗಳು, ಬೇಡಿಕೆಗಳು, ಸಂಸ್ಕೃತಿ ಮತ್ತು ಪ್ರತಿಭೆಗೆ ಅತ್ಯಂತ ಉತ್ತಮವಾಗಿ ಹಾಗೂ ಸೂಕ್ತವಾಗುವ ವ್ಯವಸ್ಥೆಯನ್ನು ರೂಪಿಸುವ ದೃಷ್ಟಿಯಿಂದ ಎಷ್ಟು ಸಾಧ್ಯವೋ ಅಷ್ಟು ಉತ್ತಮವಾಗಿ ಕಾರ್ಯನಿರ್ವಹಿಸಲು ಸಜ್ಜಾಗಬೇಕು.

ಯು.ಎಸ್.ಎ., ಇಂಗ್ಲೆಂಡ್, ಆಸ್ಟ್ರೇಲಿಯ, ಕೆನಡಾ, ಸ್ವಿಟ್ಜರ್‌ಲ್ಯಾಂಡ್ ಮೊದಲಾದ ದೇಶಗಳ ಸಂವಿಧಾನದಿಂದ ಬಹಳಷ್ಟು ಉಪಬಂಧಗಳನ್ನು ಎರವಲು ಪಡೆಯಲಾಗಿದೆ ಎಂಬ ಅಂಶ ಕುರಿತು ಬಹಳಷ್ಟು ಹೇಳಲಾಗಿದೆ. ಮಾನ್ಯರೆ, ರಾಷ್ಟ್ರದ ಹೆಚ್ಚಿನ ಹಿತದೃಷ್ಟಿಯಿಂದ ಮತ್ತು ದೇಶದ ಕ್ಷೇಮ ಹಾಗೂ ಸಮೃದ್ಧಿಯನ್ನು ಗಮನಿಸಿ ಹೇಳುವುದಾದರೆ ಹೀಗೆ ಎರವಲು ಪಡೆಯುವುದರಲ್ಲಿ ಏನೂ ತಪ್ಪಿಲ್ಲ ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಕರಡು ಸಂವಿಧಾನವನ್ನು ಸದ್ಯದ ಆಡಳಿತಕ್ಕೆ ತಕ್ಕಂತೆ ರೂಪಿಸಲಾಗಿದೆ ಎಂಬುದು ನಿಸ್ಸಂಶಯ. ಆದರೆ, ಇದು ಆಯಾ ವಿಷಯಗಳ ಸ್ವರೂಪದಲ್ಲಿಯೇ ಇರಬೇಕಷ್ಟೆ. ಒಟ್ಟಾರೆ, ನಾವು ಎಲ್ಲರೂ, ಸರ್ಕಾರದ

ಮತ್ತು ಆಡಳಿತದ ಒಂದು ನಿಶ್ಚಿತ ವ್ಯವಸ್ಥೆಗೆ ಒಗ್ಗಿ ಹೋಗಿದ್ದೇವೆ. ಒಂದು ವೇಳೆ ಕರಡು ಸಂವಿಧಾನವು ಸರ್ಕಾರದ ಇಡೀ ರಚನೆಯನ್ನು ಬದಲಾಯಿಸಿದ್ದರೆ, ಆಗ ಸಂಪೂರ್ಣ ಅರಾಜಕತೆ ಇರುತ್ತಿತ್ತು. ಭಾರತವು ಪ್ರಜಾಪ್ರಭುತ್ವ ಸ್ವರೂಪಕ್ಕೆ ಹೊಸದಾಗಿ ಸೇರ್ಪಡೆಯಾದ ರಾಷ್ಟ್ರ. ಅದರ ಜನ ಶತಮಾನಗಳ ಕಾಲ ಸರ್ವಾಧಿಕಾರದ ಆಡಳಿತಕ್ಕೆ ಒಗ್ಗಿ ಹೋಗಿದ್ದರಿಂದ ಅವರು ರೂಢಿಮಾಡಿಕೊಂಡಿದ್ದ ಮಾರ್ಗದಲ್ಲೆ ಬದಲಾದ ಸ್ಥಿತಿಗಳಿಗನುಗುಣವಾಗಿ ಅಲ್ಲಲ್ಲಿ ಬದಲಾವಣೆಗಳನ್ನು ಮಾಡಿಕೊಂಡು ಹೆಚ್ಚುಕಡಿಮೆ ಇನ್ನಷ್ಟು ಕಾಲ ಹಾಗೆಯೇ ಮುಂದುವರಿಸಲು ಸಾಧ್ಯವಿರುವ ಅತ್ಯುತ್ತಮ ಸಾಧನ. ಮುಖ್ಯ ವಿಷಯವೇನೆಂದರೆ, ಜನರಿಂದಲೇ ಈ ಅಧಿಕಾರ ಪಡೆದುಕೊಳ್ಳಲಾಗಿದೆ ಮತ್ತು ಭಾರತದ ಭವಿಷ್ಯ ರೂಪಿಸುವವರೂ ಜನರೇ ಅಥವಾ ಹಾಳುಮಾಡುವವರೂ ಜನರೇ ಆಗಿದ್ದಾರೆ.

ಡಾ. ಅಂಬೇಡ್ಕರ್ ಅವರು ಗ್ರಾಮರಾಜಕೀಯ ಕುರಿತು ನೀಡಿದ ಹೇಳಿಕೆಯ ಬಗ್ಗೆ ಅನೇಕರು ಟೀಕೆ ಮಾಡಿದ್ದಾರೆ. ಮಾನ್ಯರೆ, ನಾನು ಅವರ ಅಭಿಪ್ರಾಯವನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಯಾವುವೇ ಕಾರ್ಪೊರೇಟ್ ಸಂಸ್ಥೆಗಳಿಗೆ ಮತ್ತು ಗ್ರಾಮಪಂಚಾಯಿತಿಗಳಿಗೆ ವಿರುದ್ಧವಾಗಿ ನಾಗರಿಕ ಹಕ್ಕಿನ ಕಡೆಗಿರುವ ಆಧುನಿಕ ಪ್ರವೃತ್ತಿಯು ಅತ್ಯಂತ ಸ್ವೇಚ್ಛಾಚಾರದ್ದಾಗಿರಬಹುದು.

ಮಾನ್ಯರೆ, ಮೂಲಭೂತ ಹಕ್ಕುಗಳಿಗೆ ಬಂದರೆ, ಯಾವುದನ್ನು ಒಂದು ಕೈಯಿಂದ ಕೊಡಲಾಗಿದೆಯೊ ಅದನ್ನು ಇನ್ನೊಂದು ಕೈಯಿಂದ ತೆಗೆದುಕೊಂಡುಬಿಡಲಾಗಿದೆ ಎಂದು ಕಂಡುಬರುತ್ತದೆ. ಮೂಲಭೂತ ಹಕ್ಕುಗಳು ಹೇಗೆ ಇರಬೇಕೆಂದರೆ ಅವು ಕಾಯ್ದಿರಿಸುವಿಕೆಗಳಿಗೆ ಗುರಿಯಾಗಬಾರದು ಮತ್ತು ಶಾಸನಸಭೆಯ ಅಧಿನಿಯಮಗಳ ಮೂಲಕ ಬದಲಾವಣೆಗಳಿಗೆ ಒಳಗಾಗಬಾರದು. ನಾಗರಿಕನ ಪೌರಸ್ವಾತಂತ್ರ್ಯಗಳ ಪೈಕಿ ಕಡೇಪಕ್ಷ ಕೆಲವು ಹಕ್ಕುಗಳನ್ನಾದರೂ ಸಂವಿಧಾನದ ಮೂಲಕ ಸಂರಕ್ಷಿಸಬೇಕಾದುದು ಆವಶ್ಯಕ ಮತ್ತು ಶಾಸನಸಭೆಯು ಅದನ್ನು ತೆಗೆದುಹಾಕುವಂತೆ ಇರಬಾರದು. ಇದರ ಬದಲು ಈ ಹಕ್ಕುಗಳಿಗೆ ಸಂಬಂಧಿಸಿದಂತೆ ಉಪಬಂಧಗಳು, ನಿಬಂಧನೆಗಳಿಂದ ಮತ್ತು ವಿನಾಯಿತಿಗಳಿಂದ ತುಂಬಿರುವುದು ನಮಗೆ ಕಂಡುಬರುತ್ತದೆ. ಇದರರ್ಥ ಇಂದು ಏನು ಕೊಡಲಾಗಿದೆಯೊ, ಅದನ್ನು ಮತ್ತೊಂದು ದಿನ ಕಾಯಿದೆ ಮೂಲಕ ಸುಲಭವಾಗಿ ಬದಲಾಯಿಸಬಹುದು.

ಮೂಲಭೂತ ಹಕ್ಕುಗಳನ್ನು ಮತ್ತು ನಿರ್ದೇಶಕ ತತ್ತ್ವಗಳನ್ನು ಅಕ್ಷರಶಃ ಮತ್ತು ಅದೇ ಮನೋಭಾವದಿಂದ ಎಲ್ಲ ಪ್ರಾಂತ್ಯಗಳಲ್ಲೂ ಪಾಲಿಸಿಕೊಂಡು ಬರಲಾಗುತ್ತಿದೆಯೇ ಎಂಬುದನ್ನು ತಿಳಿದುಕೊಳ್ಳಲು ಯಾವುದಾದರೊಂದು ವಿಧದ ಏಜೆನ್ಸಿಗೆ ಅವಕಾಶ ನೀಡುವುದು ಆವಶ್ಯಕ ಎಂದು ನನಗೆ ಅನಿಸುತ್ತದೆ. ಹಾಗೆ ಮಾಡಲಾಗದಿದ್ದರೆ ಅಂತಹ ಏಜೆನ್ಸಿಯು ಇಲ್ಲದಿರುವುದರಿಂದಾಗಿ ತಮ್ಮ ತಮ್ಮ ಸಮುದಾಯ ಹಿತಾಸಕ್ತಿಗಳನ್ನು ಕಾಯ್ದುಕೊಂಡು ಬರುವ ಉದ್ದೇಶದಿಂದ ಕೋಮುವಾರು ಸಂಸ್ಥೆಗಳು ಹುಟ್ಟಿಕೊಳ್ಳಲು ಎಡೆಮಾಡಿಕೊಟ್ಟಂತೆ ಆಗುತ್ತದೆ. ಮೂಲಭೂತ ಹಕ್ಕುಗಳನ್ನು ಮತ್ತು ನಿರ್ದೇಶಕತತ್ತ್ವಗಳನ್ನು ಸಮರ್ಪಕವಾಗಿ ಅನುಸರಿಸುತ್ತಿಲ್ಲದ ಸಂದರ್ಭಗಳನ್ನು ಸರ್ಕಾರದ ಗಮನಕ್ಕೆ ತರುವುದು ನಾನು ಸಲಹೆ ಮಾಡಿದಂಥ ಏಜೆನ್ಸಿಯ ಕೆಲಸವಾಗಿರಬೇಕು. ನಾನು ಹೇಳಿರುವ ಈ ವಿಷಯವನ್ನು ಈ ಉನ್ನತ ಸಭೆಯು, ಖಂಡ–ಖಂಡವಾಗಿ ಕರಡು ಸಂವಿಧಾನವನ್ನು ನಾವು ಚರ್ಚಿಸುವಾಗ ಗಂಭೀರವಾಗಿ ಪರಿಗಣಿಸಲಾಗುತ್ತದೆ ಎಂದು ನಾನು ಆಶಿಸುತ್ತೇನೆ.

ಮಾನ್ಯರೆ, ಮಹಿಳೆ ಎಂಬ ಕಾರಣದಿಂದ ಯಾವುದೇ ತಾರತಮ್ಯಮಾಡುವುದಿಲ್ಲ ಎಂಬ ನಿಜಾಂಶವು ಒಬ್ಬ ಮಹಿಳೆಯಾಗಿ, ನನಗೆ ಅತ್ಯಂತ ತೃಪ್ತಿ ತಂದಿದೆ. ವಿಷಯಗಳ ಸಮರ್ಥನೆ ಮಾಡುವಾಗ, ಅಂತಹ ಒಂದು ಉಪಬಂಧವನ್ನು ಕರಡು ಸಂವಿಧಾನದಲ್ಲಿ ಮಾಡಿರಬೇಕಿತ್ತು ಮತ್ತು ಹೊಸ ಸಂವಿಧಾನದ ಅಡಿಯಲ್ಲಿ ಮಹಿಳೆಯರು ಸಮಾನ ಅವಕಾಶದ ಕಡೆಗೆ ನೋಡುವಂತಾಗುತ್ತದೆ ಎಂಬ ಭರವಸೆ ನನಗೆ ಇದೆ.

ಮಾನ್ಯರೆ, ನಾನು ಸಂವಿಧಾನದ ವಿವರಗಳನ್ನು ವಿವರಿಸಲು ಹೋಗುವುದಿಲ್ಲ; ಏಕೆಂದರೆ, ನಾನು, ಸಂವಿಧಾನವನ್ನು ಖಂಡ–ಖಂಡವಾಗಿ ಚರ್ಚಿಸುವಾಗ ಅಂಥ ಅನೇಕ ಉಪಬಂಧಗಳ ಬಗ್ಗೆ ಚರ್ಚಿಸಲಿದ್ದೇನೆ.

ಆದರೆ ಕಳೆದ ಎರಡು ಅಥವಾ ಮೂರು ದಿನಗಳಿಂದ ಈ ಸದನದಲ್ಲಿ ಪ್ರಸ್ತಾವಿಸಿದ್ದ ಮತ್ತು ಚರ್ಚಿಸಿದ್ದ ಕೆಲವು ಮೂಲಭೂತ ವಿಷಯಗಳು ಇವೆ, ಅವುಗಳನ್ನು ನಾನು ಉಲ್ಲೇಖಿಸಬಹುದಾಗಿದೆ.

ಮಾನ್ಯರೆ, ಅಲ್ಪಸಂಖ್ಯಾತರಿಗೆ ಸ್ಥಾನಗಳ ಮೀಸಲಾತಿ ಪ್ರಶ್ನೆ ಈ ಸದನದ ಗಮನ ಸೆಳೆದಿದೆ. ಮಾನ್ಯರೆ, ಕಳೆದ ವರ್ಷ, ಅಲ್ಪಸಂಖ್ಯಾತರ ಉಪಸಮಿತಿಯ ಶಿಫಾರಸುಗಳ ಮೇಲೆ, ಸದನವು ಕೆಲವು ಸಮುದಾಯಗಳಿಗೆ ಸ್ಥಾನಗಳ ಮೀಸಲಾತಿ ತತ್ತ್ವಕ್ಕೆ ಒಪ್ಪಿಗೆ ನೀಡಿತ್ತು ಎಂಬುದು ನಿಜ. ಆಗ ನಾನು ಕೂಡ ಸ್ಥಾನಗಳ ಮೀಸಲಾತಿಯನ್ನು ವಿರೋಧಿಸಿದೆ ಮತ್ತು ಇಂದು ಕೂಡ, ಹೊಸ ಜಂಟಿ–ಮತಕ್ಷೇತ್ರಗಳ ರಚನೆಯ ಸಂದರ್ಭದಲ್ಲಿ ಯಾವುದೇ ಅಲ್ಪಸಂಖ್ಯಾತರಿಗೆ ಸ್ಥಾನಗಳ ಮೀಸಲಾತಿ ನೀಡುವುದು ಸಂಪೂರ್ಣವಾಗಿ ಅರ್ಥರಹಿತ ಎಂದು ನಾನು ಪುನಃ ಹೇಳುತ್ತೇನೆ. ನಾವು, ಬಹುಸಂಖ್ಯಾತ ಸಮುದಾಯದ ವಿಶ್ವಾಸವನ್ನು ಅವಲಂಬಿಸಬೇಕಾಗುತ್ತದೆ. ಆದುದರಿಂದ, ಮುಸ್ಲಿಮರ ಬಗ್ಗೆ ಮಾತನಾಡುತ್ತಾ, ಸ್ಥಾನಗಳ ಮೀಸಲಾತಿ ಕೇಳುವುದು ಅರ್ಥವಿಲ್ಲದ್ದು ಎಂದು ನನಗೆ ಅನಿಸುತ್ತದೆ. ಆದರೆ ಬಹುಸಂಖ್ಯಾತರು ಯಾವುದೇ ಅಲ್ಪಸಂಖ್ಯಾತರ ವಿರುದ್ಧ ತಾರತಮ್ಯ ತೋರಬಾರದು ಎಂಬುದನ್ನು ಅರ್ಥಮಾಡಿಕೊಳ್ಳುವುದು ಅವರ ಕರ್ತವ್ಯವೆಂದು ಡಾ. ಅಂಬೇಡ್ಕರ್ ಅವರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಮಾನ್ಯರೆ, ಬಹುಸಂಖ್ಯಾತರು ಯಾವುದೇ ಅಲ್ಪಸಂಖ್ಯಾತರ ವಿರುದ್ಧ ತಾರತಮ್ಯ ತೋರಬಾರದು ಎಂಬ ತತ್ತ್ವವನ್ನು ಒಪ್ಪಿದಲ್ಲಿ, ಮುಸ್ಲಿಮರಿಗೆ ಸಂಬಂಧಿಸಿದಂತೆ ನಾವು ಯಾವ ಸ್ಥಾನಗಳ ಮೀಸಲಾತಿಯನ್ನೂ ಕೇಳುವುದಿಲ್ಲ ಎಂದು ನಾನು ಭರವಸೆ ಕೊಡಬಲ್ಲೆ. ನಮ್ಮ ಹಿತಾಸಕ್ತಿಗಳು ಸಂಪೂರ್ಣವಾಗಿ ಬಹುಸಂಖ್ಯಾತರ ಹಿತಾಸಕ್ತಿಗಳಿಗೆ ಸಮಾನವಾಗಿವೆ ಮತ್ತು ಬಹುಸಂಖ್ಯಾತರು ಎಲ್ಲ ಅಲ್ಪ ಸಂಖ್ಯಾತರೊಂದಿಗೆ ನ್ಯಾಯಸಮ್ಮತವಾಗಿ ಮತ್ತು ಚೆನ್ನಾಗಿ ವ್ಯವಹರಿಸುವರು ಎಂದು ನಾವು ಭಾವಿಸುತ್ತೇವೆ. ಅದೇ ರೀತಿ ಕೆಲವು ಗೌರವಾನ್ವಿತ ಸದಸ್ಯರು ತಮ್ಮ ಭಾಷಣಗಳಲ್ಲಿ ಸ್ಪಷ್ಟವಾಗಿ ಹೇಳಿದಂತೆ, ಸೇವೆಗಳಲ್ಲಿ ಅಲ್ಪ ಸಂಖ್ಯಾತರಿಗೆ ಸ್ಥಾನಗಳ ಮೀಸಲಾತಿ ತುಂಬ ಅಗತ್ಯವಾದ ವಿಷಯ ಮತ್ತು ಈ ಸದನದ ಸದಸ್ಯರಾದ ನಾವು ಆ ಪ್ರಶ್ನೆಯನ್ನು ಕುರಿತು ವ್ಯವಹರಿಸುವಾಗ ಪರಿಗಣಿಸಲಾಗುವುದೆಂದು ಆಶಿಸುತ್ತೇವೆ.

ಮಾನ್ಯರೆ, ಈ ಸದನದ ಗಮನ ಸೆಳೆದಿರುವ ಇನ್ನೊಂದು ಪ್ರಶ್ನೆ ಇದೆ, ಅದೇ ಭಾಷೆಯ ಪ್ರಶ್ನೆ. ಮಾನ್ಯರೆ, ಭಾಷೆಯ ಪ್ರಶ್ನೆಯು ಅದರ ಬಹುಸ್ವರೂಪದಲ್ಲೇ ಅತ್ಯಂತ ಪ್ರಮುಖ ಪ್ರಶ್ನೆಯಾಗಿದೆ. ಏಕೆಂದರೆ, ಈ ದೇಶದಲ್ಲಿ ವಾಸಿಸುತ್ತಿರುವ ಜನರಿಗೆ ಹೆಚ್ಚು ಸಮ್ಮತವಾಗುವ ಯಾವುದಾದರೊಂದು ಸಾಧನವನ್ನು ನಾವು ಬಳಸಬೇಕಷ್ಟೆ. ದೇಶದ ಭಾಷೆಯು, ದೇಶದ ಜನ ಹೆಚ್ಚಾಗಿ ಮಾತನಾಡುವ ಮತ್ತು ಅರ್ಥಮಾಡಿಕೊಳ್ಳುವ ಭಾಷೆಯಾಗಿರಬೇಕು ಎಂಬುದು ನಿಜ ಮತ್ತು ಬಹುಸಂಖ್ಯೆಯ ಜನರು ಅರ್ಥಮಾಡಿಕೊಂಡಿರುವ ಮತ್ತು ಮಾತನಾಡುವ ಭಾಷೆ, ಹಿಂದಿ ಎಂಬ ನಿಜಾಂಶವನ್ನು ನಾನು ತಿರಸ್ಕರಿಸುವುದಿಲ್ಲ (ಕೇಳಿ, ಕೇಳಿ). (ಸದ್ದು, ಸದ್ದು). ಆದರೆ, ಮಾನ್ಯರೆ, 'ಹಿಂದಿ' ಶಬ್ದದ ಬಗ್ಗೆ ಇಂದು ವ್ಯಾಖ್ಯಾನಿಸುತ್ತಿರುವ ಬಗೆ ತುಂಬ ತಪ್ಪು ವ್ಯಾಖ್ಯಾನವಾಗಿದೆ. ಹಾಗೆ ನೋಡಿದರೆ ಹಿಂದಿ ಮತ್ತು ಹಿಂದೂಸ್ಥಾನಿ ನಡುವೆ ಬಹಳ ವ್ಯತ್ಯಾಸವೇನಿಲ್ಲ. ದೇಶದಲ್ಲಿ ಮಾತನಾಡುವ ಭಾಷೆ, ಹಿಂದೂಗಳ ಭಾಷೆಯಾಗಿರಲಿ ಮುಸ್ಲಿಮರದ್ದಾಗಿರಲಿ, ಅದು ತುಂಬ ವಿಭಿನ್ನ ಭಾಷೆಯಾಗಿರಬಹುದು, ಅದನ್ನು ತಜ್ಞರು ಹಿಂದಿ ಎಂದು ವಿವರಿಸುತ್ತಾರೆ ಎಂಬ ವಾಸ್ತವಾಂಶಕ್ಕೆ ಪ್ರತಿಯೊಬ್ಬರೂ ಸಾಕ್ಷಿಯಾಗಿದ್ದಾರೆ. ಯಾವುದರ ಬಗ್ಗೆ ಹೇಳಲಾಗಿದೆ ಎಂದರೆ, ಸಂಸ್ಕೃತ ಬೆರೆತಿರುವ ಹಿಂದಿ, ಇದನ್ನು ಜನರ ಒಂದು ಸಣ್ಣ ವರ್ಗದವರು ಅರ್ಥಮಾಡಿಕೊಳ್ಳುತ್ತಾರೆ ಅಷ್ಟೇ. ನಾವು ಹಳ್ಳಿಗಳನ್ನು ತೆಗೆದುಕೊಂಡರೆ, ಅಲ್ಲಿ ಮಾತನಾಡುವ ಭಾಷೆ ಹಿಂದಿ ಎಂದು ಕರೆಯುವ ಭಾಷೆಗಿಂತ ತುಂಬ ವಿಭಿನ್ನವಾಗಿದ್ದು.

ಮಾನ್ಯರೆ, ಈ ದೇಶದಲ್ಲಿ ಈಗ ವಾಸಿಸುತ್ತಿರುವ ನಲವತ್ತು ದಶಲಕ್ಷ ಮುಸ್ಲಿಮರು ತಮ್ಮ ಭಾಷೆಯನ್ನು ಕೂಡಲೇ ಬದಲಾಯಿಸಿಕೊಳ್ಳಬೇಕೆಂದು ಕೇಳಿಕೊಳ್ಳಬಹುದು ಎಂದು ನಾನು ಹೇಳುವುದಿಲ್ಲ. ನಾವು ದೇವನಾಗರಿ ಲಿಪಿಯಲ್ಲಿ ಹಿಂದಿಯನ್ನು ಕಲಿಯಬೇಕಾಗುತ್ತದೆ. ಎಂಬುದನ್ನು ನಾನು ಒಪ್ಪುತ್ತೇನೆ. ಆದರೆ ಬದಲಾವಣೆಯನ್ನು

ಅನುಷ್ಠಾನಗೊಳಿಸಬೇಕಾದರೆ ಸ್ವಲ್ಪ ಸಮಯವನ್ನು ಕೊಡಬೇಕಾಗುತ್ತದೆ. ನಮಗೆ ಚಿರಪರಿಚಿತವಲ್ಲದ ಭಾಷೆಯಲ್ಲಿ ರಾಜ್ಯದ ಎಲ್ಲ ವ್ಯವಹಾರಗಳನ್ನು ಹಾಗೂ ವಿಧಾನಮಂಡಲದ ಕಾರ್ಯಕಲಾಪಗಳನ್ನು ಇದ್ದಕ್ಕಿದ್ದಂತೆ ನಡೆಸಬೇಕೆಂದು ಹೇಳುವುದು ಸಮಂಜಸವೆಂದು ಕಾಣಿಸುವುದಿಲ್ಲ. ಆದುದರಿಂದ ಈ ವಿಷಯವನ್ನು ಶಾಂತವಾಗಿ ಮತ್ತು ಉದ್ವೇಗಗೊಳ್ಳದೆ ಪರಿಗಣಿಸಬೇಕೆಂದು ನಾನು ಭಾವಿಸುತ್ತೇನೆ. ಹಾಗೆ ನೋಡಿದರೆ, ಇದು ಈ ಕ್ಷಣದಲ್ಲಿಯೇ ಅಥವಾ ಭಾವನೆಗಳ ಅಥವಾ ಉದ್ವೇಗದ ನೆಲೆಯಲ್ಲಿ ನಿರ್ಧರಿಸಬಹುದಾದ ವಿಷಯವೇನಲ್ಲ. ನಾವು ದೇಶದ ಅಗತ್ಯಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕಾಗಿದೆ. ರಾಷ್ಟ್ರಪಿತ ಗಾಂಧಿಯವರು ಎರಡೂ ಲಿಪಿಗಳಲ್ಲಿ ಬರೆದ ಹಿಂದೂಸ್ಥಾನಿ ಪರವಾಗಿ ಕಡೆಯವರೆಗೂ ವಾದಿಸಿದರು ಹಾಗೂ ಈ ದೇಶದಲ್ಲಿ ಜನಕೋಟಿಗೆ ಅತ್ಯಂತ ಸೂಕ್ತವಾದ ಮತ್ತು ಸಮ್ಮತಿಸಬಹುದಾದ ಒಂದೇ ಭಾಷೆ ಎಂದು ತಿಳಿಸಿದರು. ಆದುದರಿಂದ ನಾನು ದೇವನಾಗರಿ ಲಿಪಿಯಲ್ಲಿ ಹಿಂದಿಯನ್ನು ಅಂತಿಮವಾಗಿ ದೇಶದ ಸಾಮಾನ್ಯಭಾಷೆಯಾಗಿ (ರಾಷ್ಟ್ರಭಾಷೆ) ಒಪ್ಪಿಕೊಳ್ಳಬಹುದು, ಬದಲಾವಣೆಗೆ ಒಂದು ನಿಶ್ಚಿತ ಕಾಲಮಿತಿಯನ್ನೂ ಎಂದರೆ ಹದಿನೈದು ವರ್ಷಗಳಷ್ಟು ಕಾಲಾವಕಾಶವನ್ನು ಕೊಡಬೇಕು ಮತ್ತು ಅಲ್ಲಿವರೆಗೆ ಹಿಂದೂಸ್ಥಾನಿಯ ಎರಡೂ ಲಿಪಿಗಳಲ್ಲಿ ಭಾರತದ ಭಾಷೆಯಾಗಿ ಉಳಿಯಬೇಕು ಎಂದು ಶಿಫಾರಸು ಮಾಡುತ್ತೇನೆ.

ಮಾನ್ಯರೆ, ಕೊನೆಯದಾಗಿ, ಈ ಸಂವಿಧಾನದಲ್ಲಿ ನಾವು ಏನು ಅಳವಡಿಸುತ್ತೇವೆಯೋ, ಅದು, ಸಮಸ್ತ ಜನರಿಗೂ ಸಮಾನ ಅವಕಾಶಗಳು, ಸುಖ ಮತ್ತು ಸಮೃದ್ಧಿಗಳು ದೊರಕುವಂತೆ ಮಾಡಿ ಭಾರತವನ್ನು ಬಲಿಷ್ಠ ಮತ್ತು ಸಮೃದ್ಧ ರಾಷ್ಟ್ರವಾಗುವಂತೆ ಮಾಡಲು ಕೇಂದ್ರೀಕರಿಸುವಂತೆ ನೋಡಿಕೊಳ್ಳಬೇಕು. ಹಾಗೆ ಮಾಡಿದರೆ ಭಾರತವು ಶಾಂತಿ ಮತ್ತು ಪ್ರಗತಿ ಪಥದಲ್ಲಿ, ವಿಶ್ವದ ದೇಶಗಳನ್ನು ಮುನ್ನಡೆಸಬಹುದು ಎಂದು ಹೇಳುತ್ತೇನೆ.

**ಡಾ. ಮನಮೋಹನ್ ದಾಸ್** (ಪಶ್ಚಿಮ ಬಂಗಾಳ : ಸಾಮಾನ್ಯ) : ಮಾನ್ಯ ಉಪಸಭಾಧ್ಯಕ್ಷರೆ, ಈ ಸದನದಲ್ಲಿ ನಮ್ಮ ಸಮರ್ಥ ಕಾನೂನು ಸಚಿವರು ಮತ್ತು ಕರಡು ರಚನಾಸಮಿತಿ ಅಧ್ಯಕ್ಷರು ಆದ ಡಾ.ಅಂಬೇಡ್ಕರ್ ಅವರು ಕರಡು ಸಂವಿಧಾನವನ್ನು ಮಂಡಿಸಿ ಕೆಲವು ದಿನಗಳಾಗಿವೆ. ಈ ಕೆಲವು ದಿನಗಳ ಅವಧಿಯಲ್ಲಿ ಕರಡು ಸಂವಿಧಾನವು, ಈ ಸದನದ ಅನೇಕ ಸದಸ್ಯರ ಕಟು ಟೀಕೆಗೆ ಗುರಿಯಾಗಿದೆ. ಕರಡು ಸಂವಿಧಾನ ಅಂಗೀಕರಿಸುವಲ್ಲಿ ಈ ಸದನದ ಸಕ್ಷಮತೆ ಮತ್ತು ವಿಶ್ವಾಸಾರ್ಹತೆಯನ್ನು ಪ್ರಶ್ನಿಸಿದ ಕೆಲವೇ ಕೆಲವು ಸದಸ್ಯರನ್ನು ಬಿಟ್ಟರೆ ಇತರ ಎಲ್ಲ ಸದಸ್ಯರು ಸರ್ವಾನುಮತದಿಂದ ತೀರ್ಮಾನಿಸಿದರು. ಸೂಕ್ತ ಅನುಷ್ಠಾನದ ಪ್ರಾರಂಭದ ಹಂತದಲ್ಲಿ ಕೆಲವು ಖಂಡಗಳಲ್ಲಿ ಕೆಲವು ಬದಲಾವಣೆಗಳನ್ನು ಸೇರ್ಪಡೆಗಳನ್ನು ಮತ್ತು ಕೆಲವು ಬಿಟ್ಟು ಬಿಡುವುದನ್ನು ಮಾಡಿ ಕರಡು ಸಂವಿಧಾನಕ್ಕೆ ಸಮ್ಮತಿ ನೀಡಿದರು. ಸಂವಿಧಾನದಲ್ಲಿ ನಮಗೆ ಕಂಡುಬಂದ ಅತ್ಯಂತ ಪುನರ್ ಭರವಸೆಯ ಲಕ್ಷಣಗಳಲ್ಲಿ ಒಂದು ಎಂದರೆ ಏಕೆ ನಾಗರಿಕತ್ವ ಇರುವ ವಿಷಯ. ಕರಡು ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರು ಹೇಳಿದಂತೆ ಕರಡುಸಮಿತಿಯು ನಮಗೆ ಒಂದೇ ಪೌರತ್ವ, ಅಂದರೆ ಭಾರತದ ಪೌರತ್ವವನ್ನು ಕೊಟ್ಟಿದೆ ಆದರೆ, ಅಮೆರಿಕ ಸಂವಿಧಾನದಲ್ಲಿ ಈ ರೀತಿ ಇಲ್ಲ. ಪ್ರಾಂತೀಯತೆಯ ಈ ದಿನಗಳಲ್ಲಿ, ಪ್ರತಿಯೊಂದು ಪ್ರಾಂತ್ಯವೂ ತನ್ನ ನೆರೆಯ ಪ್ರಾಂತ್ಯಗಳ ವೆಚ್ಚದಲ್ಲಿ ಪ್ರವರ್ಧಿಸಲು ಬಯಸುತ್ತಿರುವಾಗ ಹಾಗೂ ನಾವು ನಮ್ಮ ನೆರೆಯ ಪ್ರಾಂತ್ಯಗಳ ಸಹಾನುಭೂತಿ ಮತ್ತು ವಿಶ್ವಾಸಗಳನ್ನು ಕಳೆದುಕೊಂಡಾಗ ಇದು ನಿಜವಾಗಿಯೂ ಪುನರ್ ಭರವಸೆಯ ಮಹತ್ತ್ವದ ಅಂಶವಾಗಿದೆ. ಪಶ್ಚಿಮಬಂಗಾಳದ ಒಬ್ಬ ಸದಸ್ಯನಾಗಿ ಈ ಸಂವಿಧಾನವು ಅಂಗೀಕೃತವಾದ ಕೂಡಲೇ ಏಕಪೌರತ್ವದ ಖಂಡ ಹಾಗೂ ಇಡೀ ಭಾರತದಲ್ಲಿ ಅದಕ್ಕೆ ಇರುವ ಸಮಾನ ಹಕ್ಕುಗಳು ಮತ್ತು ಸವಲತ್ತುಗಳೂ ಅಂಗೀಕೃತವಾಗಿ, ನಮ್ಮ ನೆರೆಯ ಪ್ರಾಂತ್ಯಗಳ ಬಾಗಿಲು ನಿಮಗಾಗಿ ತೆರೆದುಕೊಳ್ಳುತ್ತವೆ, ಇದರಿಂದಾಗಿ ಪೂರ್ವಪಾಕಿಸ್ತಾನದ ನಮ್ಮ ನತದೃಷ್ಟ ಸೋದರರು ನಮ್ಮ ನೆರೆಯ ಪ್ರಾಂತ್ಯಗಳಲ್ಲಿ ಉಸಿರಾಡುವ ಅವಕಾಶ ಕಂಡುಕೊಳ್ಳುವರು ಎಂದು ತಿಳಿಸಲು ವಿಶೇಷವಾಗಿ ಉತ್ಸಾಹಿತನಾಗಿದ್ದೆ.

ಅಲ್ಪಸಂಖ್ಯಾತರ ಸಮಸ್ಯೆ ಕುರಿತಂತೆ ಮತ್ತೊಂದು ಅಂಶವನ್ನು ತಿಳಿಸಲು ನಾನು ಕೋರುತ್ತೇನೆ. ಕರಡು ಸಂವಿಧಾನದಲ್ಲಿ ಅಲ್ಪಸಂಖ್ಯಾತರಿಗೆ ಕೊಡಲಾಗಿರುವ ರಕ್ಷಣೆಗಳು ಕೆಲ ಮಟ್ಟಿಗೆ ಕೋಪಕ್ಕೆಡೆ ಮಾಡಿದೆ. ಈ ದೇಶದಲ್ಲಿ ಅಲ್ಪಸಂಖ್ಯಾತರು ಇದ್ದಾರೆ ಎಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಭಾರತದಿಂದ ಈ ಅಲ್ಪಸಂಖ್ಯಾತರನ್ನು ಯಾವುದೇ ರೀತಿಯಿಂದಲೂ ತೊಡೆದು ಹಾಕಲು ಸಾಧ್ಯವಿಲ್ಲ. ಮಾನ್ಯರೆ, ತಮಗೆ ತಿಳಿದಿರುವಂತೆ, ಪ್ರಜಾಪ್ರಭುತ್ವ ಎಂದರೆ ಬಹುಸಂಖ್ಯಾತರು ಆಡಳಿತ ನಡೆಸುವ ಸಾಧನ. ಬಹುಸಂಖ್ಯಾತರು ಯಾವಾಗಲೂ ಆಳುತ್ತಾ ಮತ್ತು ಅಲ್ಪಸಂಖ್ಯಾತರು ಬಹುಸಂಖ್ಯಾತರ ಕೃಪೆಯಲ್ಲಿರುತ್ತಾರೆ. ಬಹುಸಂಖ್ಯಾತರು ಈ ಅಲ್ಪಸಂಖ್ಯಾತರಿಂದ ಭಯಪಡುವ ಅಗತ್ಯವಿಲ್ಲ. ಬಹುಸಂಖ್ಯಾತರು, ಈ ಅಲ್ಪಸಂಖ್ಯಾತರನ್ನು ರಕ್ಷಿಸುವುದು ಮತ್ತು ಅವಶ್ಯವಾದರೆ ರಕ್ಷಣೆ ಕೊಡುವುದು ಅನಿವಾರ್ಯವಾಗಿಸುತ್ತದೆ ಎಂದು ನಾನು ತಿಳಿಯುತ್ತೇನೆ. ಹೀಗಾಗಿ ಅವರ ಹೃದಯಗಳಲ್ಲಿ ವಿಶ್ವಾಸ, ಭದ್ರತೆಯ ಪರಿಜ್ಞಾನ ಸೃಷ್ಟಿಯಾಗಿರುತ್ತದೆ. ಇಂದು ಭಾರತದ ಅಲ್ಪಸಂಖ್ಯಾತರು ಬಹುಸಂಖ್ಯಾತರಿಂದ ಏನನ್ನು ಕೇಳುವರು ಮತ್ತು ಅಪೇಕ್ಷಿಸುವರು ಎಂದರೆ, ತಮ್ಮ ಅವರ ಸಮಸ್ಯೆಗಳನ್ನು ಸಹಾಯಭೂತಿಯಿಂದ ನೋಡಬೇಕೆಂದು, ವಿರೋಧಿ ಮನೋಧರ್ಮದಿಂದಲ್ಲ.

ಮಾನ್ಯರೆ, ಈ ಸದನದ ಒಬ್ಬ ಖ್ಯಾತವೆತ್ತ ಸದಸ್ಯರು ವಿಶ್ವದ ಇತರ ದೇಶಗಳ ಸಂವಿಧಾನಗಳ ಹಲವಾರು ವಿಷಯಗಳನ್ನು ಭಾರತದ ಕರಡು ಸಂವಿಧಾನದಲ್ಲಿ ಎರವಲು ಪಡೆಯಲಾಗಿದೆಯೇ ಎಂಬ ಪ್ರಶ್ನೆ ಕೇಳಿದ್ದಾರೆ. ಆದರೆ, ದೇಶದ ಮಣ್ಣಿನಿಂದಲೇ ಆವಿರ್ಭವಿಸಿರುವ ನಮ್ಮ ಸಾಂಸ್ಕೃತಿಕ ಪರಂಪರೆಯಿಂದ, ಏನನ್ನೂ ತೆಗೆದುಕೊಂಡಿಲ್ಲವೆಂದು ಹಾಗೂ ಅದರಲ್ಲಿಯೂ ಗ್ರಾಮಪಂಚಾಯಿತಿ ವ್ಯವಸ್ಥೆಯಿಂದ ಏನೊಂದನ್ನು ತೆಗೆದುಕೊಂಡಿಲ್ಲ ಎಂದು ಕೇಳಿದಾಗ, ಈ ಪ್ರಶ್ನೆ ತುಂಬ ಸಮಂಜಸವಾಗಿದೆ. ನಾವು ಭಾವನಾತ್ಮಕ ಮತ್ತು ಆದರ್ಶವಾದಿ ಜನಾಂಗದವರಾಗಿ ಪ್ರಾಚೀನ ಮತ್ತು ಹಿಂದಿನ ಪ್ರತಿಯೊಂದು ವಿಷಯದಲ್ಲಿಯೂ ಸ್ವಾಭಾವಿಕ ಒಲವು ಮತ್ತು ಪ್ರೀತಿ ಇಟ್ಟುಕೊಂಡಿದ್ದೇವೆ. ನಮ್ಮ ಕರಡು ಸಂವಿಧಾನ ರಚನಾಸಮಿತಿಯ ಅಧ್ಯಕ್ಷರು, ಕರಡು ಸಂವಿಧಾನದಲ್ಲಿ ಗ್ರಾಮಪಂಚಾಯತಿ ವ್ಯವಸ್ಥೆ ಸೇರಿಸದಿರುವುದಕ್ಕೆ ಕೆಲವು ಗಣ್ಯವ್ಯಕ್ತಿಗಳಿಂದ ಟೀಕೆಗೊಳಗಾಗಿದ್ದಾರೆ, ಅವರೆಲ್ಲರೂ ಈ ಸಂವಿಧಾನವು ಏಕವ್ಯಕ್ತಿಯು ರಚಿಸಿದ ಕೃತಿಯಾಗಿದೆ ಎಂದು ಸುಲಭವಾಗಿ ಭಾವಿಸಿರುವಂತಿದೆ; ಸಂವಿಧಾನ ರಚಿಸುವ ಸಂಸ್ಥೆಯೊಂದಿದೆ, ಅದೇ ಕರಡು ರಚನಾಸಮಿತಿ. ಇದು ಸಂವಿಧಾನಗಳನ್ನು ರೂಪಿಸಲು ಯಾವಾಗಲೂ ಮಾರ್ಗದರ್ಶಿಯಾಗಿರುವುದನ್ನು ಅವರು ಮರೆತಿದ್ದಾರೆ. ಮಾನ್ಯರೆ, ಕರಡು ರಚನಾಸಮಿತಿಯ ಅಧ್ಯಕ್ಷರೂ ಸೇರಿದಂತೆ ಎಲ್ಲ ಸದಸ್ಯರೂ ನಮ್ಮ ಸಂವಿಧಾನದಲ್ಲಿ ಈ ಗ್ರಾಮಪಂಚಾಯಿತಿ ವ್ಯವಸ್ಥೆಯನ್ನು ಸೇರಿಸಲು ಮರೆತಿದ್ದಾರೆ ಎಂಬುದು ವಿಚಿತ್ರವಾಗಿದೆ ಎಂದು ಭಾವಿಸುತ್ತೇನೆ. ಗ್ರಾಮಪಂಚಾಯಿತಿ ವ್ಯವಸ್ಥೆ ಕುರಿತು ಅವರೆಲ್ಲರೂ ಪೂರ್ವಗ್ರಹಿತರಾಗಿದ್ದಾರೆ. ಈ ಗ್ರಾಮಪಂಚಾಯಿತಿ ವ್ಯವಸ್ಥೆ ಕುರಿತಂತೆ ವಿಧಾನಮಂಡಲಗಳು ಏನು ಇಷ್ಟಪಡುತ್ತವೆಯೋ, ಅದನ್ನು ರೂಪಿಸಲು ಪ್ರಾಂತೀಯ ಶಾಸನಸಭೆಗಳಿಗೆ ಕರಡು ರಚನಾಸಮಿತಿಯು ಉದ್ದೇಶಪೂರ್ವಕವಾಗಿ ಬಿಟ್ಟುಬಿಟ್ಟಿದೆ ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ.

ಮಾನ್ಯರೆ, ಆ ದಿಕ್ಕಿನಲ್ಲಿ ಈಗಾಗಲೇ ಕ್ರಮ ತೆಗೆದುಕೊಂಡು ಶಾಸನ ರಚಿಸಿರುವ ಪ್ರಾಂತ್ಯಗಳಿವೆ. ಮಾನ್ಯರೆ, ಇದಕ್ಕೆ ಉದಾಹರಣೆ: ಸಂಯುಕ್ತ ಪ್ರಾಂತ್ಯಗಳ ಗ್ರಾಮಪಂಚಾಯಿತಿ ವಿಧೇಯಕ. ನಮ್ಮ ಸಂವಿಧಾನದಲ್ಲಿ ಪ್ರಾಂತೀಯ ಶಾಸನಸಭೆಗಳು ಆ ದಿಕ್ಕಿನಲ್ಲಿ ಗ್ರಾಮಪಂಚಾಯಿತಿಗಳಿಗೆ ಸಂಬಂಧಿಸಿದಂತೆ ಅಧಿನಿಯಮವನ್ನು ಅಂಗೀಕರಿಸಲು ಇರುವ ಅಧಿಕಾರವನ್ನು ತೆಗೆದುಹಾಕಿಲ್ಲ. ನಮ್ಮ ಪ್ರಾಂತೀಯ ಶಾಸನಸಭೆಗಳು ಈ ಗ್ರಾಮ ಪಂಚಾಯಿತಿ ವ್ಯವಸ್ಥೆಯು ನಮ್ಮ ದೇಶಕ್ಕೆ ಅತ್ಯಂತ ಒಳ್ಳೆಯದನ್ನು ಮಾಡುತ್ತದೆ ಎಂದು ತಿಳಿದರೆ, ಅಂಥ ಶಾಸನಸಭೆಗಳು ಅಂಥ ವಿಧೇಯಕವನ್ನು ತಮ್ಮ ಶಾಸನಸಭೆಗಳಲ್ಲಿ ಮಂಡಿಸುವ ಹಾಗೂ ಅದನ್ನು ಅಂಗೀಕರಿಸುವ ಸ್ವಾತಂತ್ರ್ಯ ಇದ್ದೇ ಇದೆ. ಆದುದರಿಂದ ಮಾನ್ಯರೆ, ಕರಡು ರಚನಾಸಮಿತಿಯ ಅಧ್ಯಕ್ಷರ ಮೇಲೆ ಮಾಡಿರುವ ಟೀಕೆಗಳ ಸುರಿಮಳೆ ಅನಗತ್ಯವಾದುದು, ನ್ಯಾಯೋಚಿತವಲ್ಲದ್ದು, ಸಂಕುಚಿತವಾದುದು ಮತ್ತು ಇದು ಗಾಂಭೀರ್ಯರಹಿತವಾದುದು ಎಂದು ನಾನು ಭಾವಿಸುತ್ತೇನೆ.

ಗ್ರಾಮಪಂಚಾಯಿತಿ ವ್ಯವಸ್ಥೆಯನ್ನು ಉತ್ಸಾಹದಿಂದ ಬೆಂಬಲಿಸುವ ಬೆಂಬಲಿಗರಿರುವ ಎಲ್ಲ ಗೌರವಾನ್ವಿತ ಸ್ನೇಹಿತರಿಗೆ ಕೆಲವೊಂದು ಎಚ್ಚರಿಕೆಯ ಮಾತುಗಳನ್ನು ಹೇಳಲು ನಾನು ಹೇಳಬಯಸುತ್ತೇನೆ. ಎಲ್ಲಿಯವರೆಗೆ ನಮ್ಮ ಗ್ರಾಮಗಳ ಜನರು ವಿದ್ಯಾವಂತರಾಗುವುದಿಲ್ಲವೋ, ರಾಜಕೀಯವಾಗಿ ಪ್ರಜ್ಞಾವಂತರಾಗುವುದಿಲ್ಲವೋ, ತಮ್ಮ ಪೌರಹಕ್ಕುಗಳ ಮತ್ತು ಜವಾಬ್ದಾರಿಗಳ ಬಗ್ಗೆ ಪ್ರಜ್ಞಾವಂತರಾಗುವುದಿಲ್ಲವೋ ಮತ್ತು ತಮ್ಮ ಹಕ್ಕುಗಳ ಮತ್ತು ಸವಲತ್ತು ಬಗ್ಗೆ ಪ್ರಜ್ಞಾವಂತರಾಗುವುದಿಲ್ಲವೋ ಅಲ್ಲಿಯವರೆಗೂ ಈ ಗ್ರಾಮಪಂಚಾಯಿತಿ ವ್ಯವಸ್ಥೆಯಿಂದ ಒಳ್ಳೆಯದು ಆಗುವುದಕ್ಕಿಂತ ಹೆಚ್ಚು ಹಾನಿಯುಂಟಾಗುತ್ತದೆ. ಗ್ರಾಮಪಂಚಾಯಿತಿ ವ್ಯವಸ್ಥೆಯು ಮೊದಲಿನಿಂದಲೂ ಇತ್ತು ಮತ್ತು ಶತಶತಮಾನಗಳಿಂದಲೂ ಇದೆ ಎಂದು ನಾನು ಹೇಳಿದರೆ, ತೀವ್ರ ಟೀಕೆಗೆ ನಾನೇ ಅವಕಾಶ ಕೊಟ್ಟಂತೆ ಎಂದು ನನಗೆ ಗೊತ್ತಿದೆ. ಅದು ನಮ್ಮ ದೇಶದ ಕಲ್ಯಾಣಕ್ಕೆ ಎಷ್ಟು ಕೊಡುಗೆ ನೀಡಿದೆ, ನಮ್ಮ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಉನ್ನತಿಗೆ ಎಷ್ಟು ಕೊಡುಗೆ ನೀಡಿದೆ? ಈ ವ್ಯವಸ್ಥೆಯನ್ನು, ನಮ್ಮ ಗ್ರಾಮೀಣ ಜನ ಸೂಕ್ತವಾಗಿ ಶಿಕ್ಷಣಪಡೆಯುವ ಮೊದಲೇ ಅನುಷ್ಠಾನಗೊಳಿಸಿದರೆ, ಆಗ ಮಾನ್ಯರೆ, ಪಂಚಾಯಿತಿ ವ್ಯವಸ್ಥೆಯಿಂದ ದೊರಕುವ ಎಲ್ಲ ಅಧಿಕಾರಗಳನ್ನು ಮತ್ತು ವಿಶೇಷಾಧಿಕಾರಗಳನ್ನು ಸ್ಥಳೀಯ ಪ್ರಭಾವೀ ವರ್ಗಗಳ ಜನರೇ ತಮ್ಮದಾಗಿಸಿಕೊಂಡು ಅವುಗಳನ್ನು ಸ್ವಾರ್ಥ ಉದ್ದೇಶಗಳಿಗೆ ಬಳಸಿಕೊಳ್ಳುವರು. ಈ ವ್ಯವಸ್ಥೆಯು ಗ್ರಾಮದ ಜಮೀನುದಾರರಿಗೆ, ಗ್ರಾಮೀಣ ತಾಲ್ಲೂಕುದಾರರಿಗೆ, ಮಹಾಜನರಿಗೆ ಮತ್ತು ಹಣ ಲೇವಾದೇವಿಗಾರು ಅಷ್ಟೇನೂ ಸುಸಂಸ್ಕೃತರಲ್ಲದವರನ್ನು ಹಾಗೂ ಶಿಕ್ಷಣ ಪಡೆಯದವರನ್ನು ಹಾಗೂ ವರ್ಗಗಳ ಜನರು, ಗ್ರಾಮಗಳ ಬಡವರ್ಗದವರನ್ನು ದರೋಡೆ ಮಾಡಲು, ಶೋಷಣೆ ಮಾಡಲು ಅವಕಾಶ ಕೊಡುವುದು.

ಮಾನ್ಯರೆ, ಈ ಮಾತುಗಳೊಂದಿಗೆ, ನಾನು ಕರಡು ಸಂವಿಧಾನವನ್ನು ಮುಂದಿರಿಸಿರುವ ಪ್ರಸ್ತಾವವನ್ನು ಪರಿಗಣಿಸುವುದಕ್ಕಾಗಿ ಕರಡು ರಚನಾಸಮಿತಿಯ ಅಧ್ಯಕ್ಷರು ನಾನು ತುಂಬುಹೃದಯದಿಂದ ಸಮ್ಮತಿಸುತ್ತೇನೆ. ಮಾನ್ಯರೆ, ಈ ಸದನದಲ್ಲಿ ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ಕೊಟ್ಟಿದ್ದಕ್ಕಾಗಿ ನಿಮಗೆ ನನ್ನ ವಂದನೆಗಳು.

**ಶ್ರೀ ವಿ.ಐ. ಮುನಿಸ್ವಾಮಿ ಪಿಳ್ಳೈ** (ಮದ್ರಾಸ್ : ಸಾಮಾನ್ಯ) : ಮಾನ್ಯ ಉಪಸಭಾಧ್ಯಕ್ಷರೆ, ಈ ಮಹಾನ್ ಸಭೆಯಲ್ಲಿ ಅಥವಾ ಹೊರಗಿನ ಯಾರೊಬ್ಬರೂ ಕರಡು ಸಂವಿಧಾನವನ್ನು ಈ ಸದನದ ಸಮ್ಮತಿಗಾಗಿ ಮಂಡಿಸಿರುವ ಕರಡು ರಚನಾಸಮಿತಿಯ ಪ್ರಯತ್ನಗಳನ್ನು ಮತ್ತು ಸಲ್ಲಿಸಿದ ಸೇವೆಗಳನ್ನು ಕಡೆಗಣಿಸಲಾರರು. ಈ ಕರಡು ರಚನಾಸಮಿತಿಯು ಇಂದು ಜಗತ್ತಿನಲ್ಲಿ ಲಭ್ಯವಿರುವ ಅನೇಕ ಸಂವಿಧಾನಗಳನ್ನು ಅರಗಿಸಿಕೊಳ್ಳಲು ಸಮರ್ಥವಾಗಿತ್ತೆಂದು ಹಾಗೂ ಈ ದೊಡ್ಡ ಉಪಖಂಡದ ಉನ್ನತಿಗೆ ಅಗತ್ಯವಿರುವ ಉಪಬಂಧಗಳನ್ನು ಅವುಗಳಿಂದ ಆಯ್ದುಕೊಂಡಿದೆ ಎಂದು ತಿಳಿದು ಭಾವಿ ಜನಾಂಗವು ಹೆಮ್ಮೆಪಡುತ್ತದೆ.

ಮಾನ್ಯರೆ, ಅನೇಕ ಪ್ರಕರಣಗಳನ್ನು ಗಮನಿಸಿದ ಯಾರೇ ಆರಲಿ, ಈ ಹಿಂದೆ ಉಪೇಕ್ಷೆಗೊಳಗಾಗಿದ್ದ ಸಾಮಾನ್ಯ ವ್ಯಕ್ತಿಯನ್ನು, ಸಮುದಾಯಗಳನ್ನು ರಕ್ಷಿಸಲಾಗಿದೆಯೇ ಎಂದು, ಪೌರ ಸೌಕರ್ಯಗಳನ್ನು ಒದಗಿಸಲಾಗಿದೆಯೇ ಎಂದು ಗಮನಿಸುತ್ತಾರೆ. ಈ ಸಂವಿಧಾನ ಓದಿದರೆ, ವಿಶ್ವದ ಯಾವುದೇ ಸಂವಿಧಾನದಲ್ಲಿ ಲಭ್ಯವಿರದ ಎರಡು ಅಪೂರ್ವ ವಿಷಯಗಳು ಇದರಲ್ಲಿ ಇರುವುದು ಯಾರಿಗಾದರೂ ಕಂಡುಬರುತ್ತದೆ. ಮೊದಲನೆಯದು, ಅಸ್ಪೃಶ್ಯತೆಯ ನಿರ್ಮೂಲನೆ. ಹರಿಜನ ಸಮುದಾಯದ ಒಬ್ಬ ಸದಸ್ಯನಾಗಿ ನಾನು ಇದನ್ನು ಸ್ವಾಗತಿಸುತ್ತೇನೆ. ಅಸ್ಪೃಶ್ಯತೆಯು ರಾಷ್ಟ್ರದ ಜೀವನಾಡಿಗಳನ್ನೇ ತಿಂದುಬಿಟ್ಟಿದೆ ಮತ್ತು ಹಿಂದೂ ಸಮುದಾಯದ ಎಲ್ಲ ಹೆಮ್ಮೆ ಮತ್ತು ಸವಲತ್ತುಗಳಿದ್ದರೂ, ಬಾಹ್ಯ ಜಗತ್ತು, ಭಾರತವನ್ನು ಒಂದು ಅನುಮಾನದಿಂದ ನೋಡುತ್ತಿದೆ. ಈ ಉಪಬಂಧವನ್ನು ನಾನು ಸ್ವಾಗತಿಸುತ್ತೇನೆ. ಏಕೆಂದರೆ, ಇದು ಬಹುಸಂಖ್ಯಾತ ಸಮುದಾಯದ ಹಿರಿಮೆಯನ್ನು ತೋರಿಸುತ್ತದೆ. ಅಂದರೆ, ರಾಷ್ಟ್ರದ ಘನತೆ ಅಂಟಿರುವ ಬೂಷ್ಟು ಇದೇ ಎಂದು ತಿಳಿದು ಅಸ್ಪೃಶ್ಯತೆಯ ಈ ಕಳಂಕವನ್ನು ತೊಡೆದುಹಾಕಲು ಅವರು ಮುಂದೆ ಬಂದಿದ್ದಾರೆ. ಅಸ್ಪೃಶ್ಯತೆಯನ್ನು ನಿರ್ಮೂಲನ ಮಾಡಲು

ಸಾಕಷ್ಟು ಪ್ರಚಾರಮಾಡಲಾಗಿದೆ ಎಂದು ಹೇಳುವ ಹಾಗೂ ಮತ್ತಷ್ಟು ಪ್ರಚಾರದ ಅಗತ್ಯವಿಲ್ಲ ಎನ್ನುವ ಜನ ಇಂದು ಭಾರತದಲ್ಲಿ ಇದ್ದಾರೆ. ಆದರೆ, ಮಾನ್ಯರೆ, ನೀವು ಹಳ್ಳಿಗಳ ಕಡೆ ಹೋದರೆ, ಅಸ್ಪೃಶ್ಯತೆ ಇನ್ನೂ ಅತಿರೇಕವಾಗಿದೆ ಮತ್ತು ಸಂವಿಧಾನದಲ್ಲಿ ಇಂತಹ ವಿಶೇಷಾಧಿಕಾರ ಇರುವುದು ಸ್ವಾಗತಾರ್ಹ ಎಂದು ನಾನು ಪ್ರಾಮಾಣಿಕವಾಗಿ ಭಾವಿಸುತ್ತೇನೆ.

ಎರಡನೆಯ ಅಂಶ ಜೀತಪದ್ಧತಿಯನ್ನು ರದ್ದುಪಡಿಸಿರುವುದು (ಬೇಗಾರ್). ಹಳ್ಳಿಯಲ್ಲಿ ಸಾಮಾನ್ಯ ಉದ್ದೇಶಗಳಿಗೆ ಕೆಲಸಗಾರರು ಬೇಕಾಗಿದ್ದರೆ, 'ಹರಿಜನ' ಎಂಬ ಈ ಅತ್ಯಂತ ನತದೃಷ್ಟನನ್ನು ಹಿಡಿದು ತಂದು ಅವನಿಂದ ಎಲ್ಲ ರೀತಿಯ ಗುಲಾಮಗಿರಿ ಮತ್ತು ಕೀಳು ಮಟ್ಟದ ಕೆಲಸ ಯಾವಾಗಲೂ ಮಾಡಿಸುತಿದ್ದರು. ಈ ಸಂವಿಧಾನದಲ್ಲಿನ ಉಪಬಂಧಗಳ ಮೂಲಕವಾಗಿ ಸಮಾಜದ ಸರಹದ್ದಿನಾಚೆಯೇ ಇದ್ದ ಈ ಸಮುದಾಯದ ಉನ್ನತಿಗೆ ಅವಕಾಶ ಕಲ್ಪಿಸಲಾಗಿದೆ ಎಂಬ ಭರವಸೆ ನನಗಿದೆ. ರಾಷ್ಟ್ರದ ಚೈತನ್ಯವನ್ನೇ ನುಂಗಿ ಹಾಕುತ್ತಿದ್ದ ಶಿಲೀಂಧ್ರಗಳನ್ನು ಕಂಡುಹಿಡಿದ ಮಹಾನ್ ಶಿಲೀಂಧ್ರಶಾಸ್ತ್ರಜ್ಞನಂತಿರುವ ರಾಷ್ಟ್ರಪಿತ ಮಹಾತ್ಮ ಗಾಂಧಿಯವರಿಗೆ ಈ ಗೌರವ ಸಲ್ಲುತ್ತದೆ. ಅವರು ಈ ಪಿಡುಗನ್ನು ನಿರ್ಮೂಲನಮಾಡಲು ಕೆಲವು ಪ್ರಸ್ತಾವಗಳನ್ನು ಮಾಡಿದರು. ಕರಡು ರಚನಾಸಮಿತಿಯು ಅಸ್ಪೃಶ್ಯತೆಯ ಹಾಗೂ ಈ ನತದೃಷ್ಟ ಸಮುದಾಯದ ಮೇಲಿನ ಬಲವಂತದ ದುಡಿಮೆಯ (ಜೀತಪದ್ಧತಿಯ) ನಿರ್ಮೂಲನಕ್ಕಾಗಿ ನಿಬಂಧನೆಗಳನ್ನು ಮಾಡಿರುವುದು ನನಗೆ ಸಂತೋಷವಾಗಿದೆ.

ಮಾನ್ಯರೆ, ಕರಡು ಸಂವಿಧಾನದಲ್ಲಿ, ಅಸ್ಪೃಶ್ಯತೆಯ ನಿರ್ಮೂಲನವನ್ನು ಕಾನೂನುಗಳಿಂದ ಮಾಡಬಹುದು ಎಂದು ಹೇಳಲಾಗಿದೆ. ಕೇವಲ ಕಾನೂನುಗಳು ಸಾಲದು ಎಂದು ನಾನು ಆಗ್ರಹಿಸುತ್ತೇನೆ. ವಿಶೇಷ ಕಾನೂನುಗಳನ್ನೇ ಮಾಡಬೇಕಾಗುತ್ತದೆ. ನನ್ನ ಪ್ರಾಂತ್ಯದಲ್ಲಿ ವಿಧಾನಮಂಡಲವು, ನಾಗರಿಕ ಅಸಮರ್ಥತೆಗಳನ್ನು ತೆಗೆಯಲು ಒಂದು ಅಧಿನಿಯಮವನ್ನು ಅಂಗೀಕರಿಸುವಲ್ಲಿ ಉತ್ತಮ ಕೆಲಸಮಾಡಿತ್ತು; ಆದರೆ, ಈ ಅಧಿನಿಯಮವನ್ನು ಜಾರಿಗೆ ತರುವಾಗ, ಈ ಅಧಿನಿಯಮದ ಪ್ರಕಾರ ಯಾವ ಸೌಲಭ್ಯಗಳನ್ನು ನೀಡಬೇಕೆಂದು ಹೇಳಲಾಗಿತ್ತೋ ಅವುಗಳನ್ನು ಕೊಡಲು ಸರ್ಕಾರಕ್ಕೂ ಸಾಧ್ಯವಾಗಲಿಲ್ಲ. ಆದುದರಿಂದ, ಅಸ್ಪೃಶ್ಯತೆಯನ್ನು ನಿವಾರಿಸಲು ಬಲವಂತದ ದುಡಿಮೆ (ಜೀತಪದ್ಧತಿಯನ್ನು) ತಪ್ಪಿಸಲು ನೀವು ನಿಜವಾಗಿ ಬಯಸಿದರೆ ವಿಶೇಷ ಕಾನೂನುಗಳನ್ನು ತರಬೇಕು ಎಂದು ನಾನು ಮನವಿ ಮಾಡುತ್ತೇನೆ.

ಈ ದೇಶದಲ್ಲಿ ಎಲ್ಲರಿಗೂ ಮತ್ತು ವಿಶೇಷವಾಗಿ ನತದೃಷ್ಟ ಅಲ್ಪಸಂಖ್ಯಾತ ಸಮುದಾಯಗಳಿಗೆ ಕೊಡಲಾಗಿರುವ ಮೂಲಭೂತ ಹಕ್ಕುಗಳ ಬಗ್ಗೆ ಹೇಳುವುದಾದರೆ, ಸಲಹಾಸಮಿತಿ, ಅಲ್ಪಸಂಖ್ಯಾತಸಮಿತಿ ಮತ್ತು ಮೂಲಭೂತ ಹಕ್ಕುಗಳ ಸಮಿತಿ, ಇವು, ವಿಷಯವನ್ನು ಸಮಗ್ರವಾಗಿ ಪರಿಶೀಲಿಸಿ ಕೆಲವು ವಿಧಾನಗಳನ್ನು ಅಳವಡಿಸಿವೆ ಮತ್ತು ಅವುಗಳನ್ನು ಈ ಉನ್ನತ ಸಭೆಯು ಸಮ್ಮತಿಸಿದೆ.

ಜನರ ಕೆಲವು ಪಂಗಡಗಳು ಮೀಸಲಾತಿಯ ಅಗತ್ಯವಿಲ್ಲ ಎಂದು ಹೇಳುತ್ತಿವೆ. ಆದರೆ, ಈ ಅಲ್ಪಸಂಖ್ಯಾತ ಸಮುದಾಯಗಳ ನತದೃಷ್ಟ ಪರಿಸ್ಥಿತಿಯನ್ನು ನೋಡಿದ ಎಲ್ಲರೂ ಯಾವುದನ್ನು ಅಲ್ಪಸಂಖ್ಯಾತ ಸಮುದಾಯವು ಈಗಾಗಲೇ ಸಮ್ಮತಿಸಿರುವ ಮೀಸಲಾತಿಯನ್ನು, ಉನ್ನತ ಸಭೆಯಿಂದ ಅಂಗೀಕರಿಸಿದೆಯೋ ಅದು ಇರಲೇಬೇಕು ಎಂದು ಭಾವಿಸಿದ್ದಾರೆ. ಅಲ್ಪಸಂಖ್ಯಾತರ ರಕ್ಷಣೆ ಕುರಿತಂತೆ ಜಂಟಿಮತಕ್ಷೇತ್ರಗಳಲ್ಲಿ ಸಮುದಾಯಗಳಿಗೆ ವಯಸ್ಕರ ಮತದಾನಪದ್ಧತಿಯನ್ನು ನೀಡುವುದು ಈ ಉನ್ನತ ಸಭೆಯ ಸದ್ಭಾವನೆಯಾಗಿದೆ. ಆದಾಗ್ಯೂ ಆರ್ಥಿಕವಾಗಿ ಬಡತನದಲ್ಲಿರುವ ಮತ್ತು ಶಿಕ್ಷಣದಲ್ಲೂ ದುರ್ಬಲರಾಗಿವ ಈ ಸಮುದಾಯವನ್ನು ಉನ್ನತಿಗೇರಿಸಲು, ಈ ಸಂದರ್ಭಗಳಲ್ಲಿ ಮಾಡಬಹುದಾದ ಅತ್ಯುತ್ತಮ ಕೆಲಸ ಎಂಬುದನ್ನು ಯಾರೊಬ್ಬರೂ ನಿರಾಕರಿಸಲಾರರು. ವಯಸ್ಕರ ಮತದಾನಪದ್ಧತಿಯನ್ನು ಕೈಬಿಡುವುದಕ್ಕೆ ಮಾಡುವ ಪ್ರಯತ್ನ ಯಾವುದೇ ಇರಲಿ, ಅದು ಒಂದು ಮಹಾಪಾಪ. ಅಲ್ಪಸಂಖ್ಯಾತರ ರಕ್ಷಣೆಯ ವಿಷಯದಲ್ಲಿ, ಈಗ ಏನು ಕರಡು ಸಂವಿಧಾನದಲ್ಲಿ ಒದಗಿಸಲಾಗಿದೆಯೋ ಅದು ಸ್ವಾಗತಾರ್ಹ ಎಂದು ನಾನು ತಿಳಿದಿದ್ದೇನೆ. ಆದರೆ, ಈ ರಕ್ಷಣೆಗಳ ವಿರುದ್ಧ

ಪ್ರಾಂತ್ಯಗಳಲ್ಲಿ ಪ್ರಬಲ ಭಾವನೆ ಇನ್ನೂ ಇದೆ. ಅವುಗಳನ್ನು ಎಲ್ಲ ವಿಧಗಳಲ್ಲೂ ಜಾರಿಗೆ ತರಬೇಕು ಎಂದು ನಾನು ಪ್ರಾಮಾಣಿಕವಾಗಿ ಭಾವಿಸುತ್ತೇನೆ.

ಗ್ರಾಮೀಣ ಜನರ ಆರ್ಥಿಕ ಸ್ಥಿತಿಗೆ ಬಂದರೆ, ವಿಶೇಷವಾಗಿ ಉಳುವವರು ಮತ್ತು ಕೃಷಿಕಾರ್ಮಿಕರ ಕುರಿತಂತೆ ಕರಡು ಸಂವಿಧಾನದಲ್ಲಿ ಗ್ರಾಮವನ್ನು ಒಂದು ಘಟಕವಾಗಿ ಪರಿಗಣಿಸಲು ಯಾವುದೇ ಉಪಬಂಧ ಮಾಡಿರುವುದು ನನಗೆ ಕಂಡುಬರುತ್ತಿಲ್ಲ. ಆದರೆ, ಶೋಷಣೆ ಮತ್ತಿತರ ವಿಷಯಗಳಿಂದಾಗಿ, ಗ್ರಾಮಗಳು ಹಾಳುಬಿದ್ದ ಸ್ಥಿತಿಯಲ್ಲಿವೆ. ಯಾವುದೇ ಸಂವಿಧಾನ ರಚನಾ ಸಂಸ್ಥೆಯ ಅತ್ಯಂತ ದೊಡ್ಡ ಕರ್ತವ್ಯವೆಂದರೆ ಗ್ರಾಮಗಳು ಸುಸ್ಥಿತಿಯಲ್ಲಿರುವುದನ್ನು ಗಮನಿಸುವುದಾಗಿದೆ. ಗ್ರಾಮ ಅಧಿಕಾರಿಗಳ ಮಣೆಗಾರರ ಕರ್ಣಂ ಅವರ ನೇಮಕವು ಆನುವಂಶೀಯ ಪದ್ಧತಿಯಾಗಿರುವ ಕಾರಣ, ಅವರು ಗ್ರಾಮಗಳನ್ನಾಳುವ ಜನರಾಗಿದ್ದಾರೆ. ಭಾರತದ ಪ್ರಾಂತ್ಯಗಳ ನಿರ್ವಹಣೆಗೆ ಮೇಲಿನ ಸ್ತರದಲ್ಲಿ ಒಂದು ಸಂವಿಧಾನವನ್ನು ರಚಿಸಿ, ನಾವು ಗ್ರಾಮಗಳ ಪುನರ್‌ನಿರ್ಮಾಣಕ್ಕಾಗಿಯೇ ಬಿಟ್ಟರೆ, ನಾವು ತಪ್ಪು ಮಾಡುತ್ತಿದ್ದೇವೆ ಎಂದು ನನಗೆ ಅನಿಸುತ್ತದೆ. ಗ್ರಾಮವನ್ನು ಒಂದು ಸ್ವಯಮಾಡಳಿತ ಘಟಕವನ್ನಾಗಿ ಮಾಡಲೇಬೇಕು ಎಂಬುದು ಮಹಾತ್ಮ ಗಾಂಧಿಯವರ ಬಯಕೆಯೂ ಆಗಿದೆ. ಈ ಸದನದ ಮುಂದೆ ಏನು ಮಂಡಿಸಲಾಗಿದೆಯೋ ಅದನ್ನು ಈ ಉನ್ನತ ಸಭೆಯು ಪುನಃ ಪರಿಗಣಿಸುತ್ತದೆ ಮತ್ತು ಸ್ವಯಮಾಡಳಿತ ಸಂಸ್ಥೆಗಳ ಪ್ರವರ್ಗದಡಿ, ಗ್ರಾಮ ಅಥವಾ ಗ್ರಾಮ ಸಮೂಹವು ಬರುವಂತೆ ಸೂಕ್ತ ತಿದ್ದುಪಡಿಗಳನ್ನು ನಾವು ಮಾಡುತ್ತೇವೆ ಎಂಬ ಭರವಸೆ ನನಗೆ ಇದೆ. ಜಿಲ್ಲಾ ಮಂಡಲಿಗಳಲ್ಲಾಗಲಿ ಅಥವಾ ಮುನಿಸಿಪಾಲಿಟಿಗಳಲ್ಲಿಯಾಗಲಿ ಗ್ರಾಮದ ಅಥವಾ ತಾಲ್ಲೂಕಿನ ಜನಪ್ರತಿನಿಧಿಗಳು ಇರುವುದಿಲ್ಲ. ನನ್ನ ಪ್ರಾಂತ್ಯದಲ್ಲಿ ಕೆಲವು ಸಂದರ್ಭಗಳಿಂದಾಗಿ ಕಲೆಕ್ಟರ್‌ಗಳನ್ನು ಜಿಲ್ಲಾ ಮಂಡಲಿಯ ಆಡಳಿತ ನೋಡಿಕೊಳ್ಳಲು ಕೇಳಿಕೊಳ್ಳಲಾಗಿದೆ. ಈ ಕಲೆಕ್ಟರ್‌ಗಳಿಗೆ ಇತರ ಜವಾಬ್ದಾರಿ ಕೆಲಸದ ಹೊರೆಯನ್ನು ಎಷ್ಟು ಹೊರಿಸಲಾಗಿರುತ್ತದೆ ಎಂದರೆ ಅವರು ಜಿಲ್ಲಾ ಮಂಡಲಿ ಆಡಳಿತ ನಿರ್ವಹಿಸಲು ವಿಶೇಷ ಅಧಿಕಾರಿಯ ನೇಮಕಮಾಡಬೇಕಾಗುತ್ತದೆ. ಈಗ ರಚಿಸಿರುವ ಸಂಸ್ಥೆ ಜನಪ್ರಿಯ ಸಂಸ್ಥೆಯಲ್ಲ. ಗ್ರಾಮ ಘಟಕವನ್ನು ಲೆಕ್ಕಕ್ಕೆ ತೆಗೆದುಕೊಳ್ಳಲೇಬೇಕು ಎಂದು ನಾನು ಭಾವಿಸುತ್ತೇನೆ.

ಸಚಿವರ ನೇಮಕ ವಿಷಯದಲ್ಲಿ ರಾಷ್ಟ್ರಪತಿಗಳಿಗೆ ಪೂರ್ಣ ಅಧಿಕಾರಗಳನ್ನು ಕೊಡಲಾಗಿದೆ. ೧೯೩೫ರ ಭಾರತ ಸರ್ಕಾರದ ಅಧಿನಿಯಮದ ಉಪಬಂಧಗಳನ್ನು ನೀವು ನೋಡಿದರೆ, ರಾಜ್ಯಪಾಲರು ಅಥವಾ ರಾಷ್ಟ್ರಪತಿಯವರು ತಮ್ಮ ಸಚಿವರನ್ನು ಆಯ್ಕೆಮಾಡಿಕೊಳ್ಳುವಾಗ ಅಲ್ಪಸಂಖ್ಯಾತರ ಸಮುದಾಯಗಳ ಕೋರಿಕೆಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುವಂತೆ ಉಪಬಂಧಮಾಡಿರುವುದನ್ನು ನೀವು ಕಾಣುತ್ತೀರಿ. ಈ ಕರಡು ಸಂವಿಧಾನದಲ್ಲಿ ಅಂತಹ ಯಾವುದೇ ಉಪಬಂಧ ಇರುವುದನ್ನು ನಾನು ಕಂಡಿಲ್ಲ. ಈ ಕರಡು ಸಂವಿಧಾನದ ಮೇಲೆ ಮತ್ತಷ್ಟು ಚರ್ಚೆಗಳಾದಲ್ಲಿ, ಈ ಸಚಿವರ ಹುದ್ದೆಗಳಿಗೆ ಅಲ್ಪಸಂಖ್ಯಾತ ಸಮುದಾಯಗಳ ಕೋರಿಕೆಗಳನ್ನು ಪರಿಗಣಿಸುವ ಅಂತಹ ಯಾವುದಾದರೂ ಉಪಬಂಧ ಮಾಡಲಾಗುವುದೆಂಬ ಭರವಸೆ ನನಗೆ ಇದೆ. ಮಾನ್ಯರೆ, ಈ ಉಪೇಕ್ಷಿತ ಸಮುದಾಯಗಳಿಗೆ ಅತ್ಯುತ್ತಮ ಸೇವೆಯನ್ನು ಒದಗಿಸುವುದಕ್ಕಾಗಿ ಒಂದು ರಾಜಕೀಯ ಅಧಿಕಾರವು ಅವಕಾಶವನ್ನು ಕೊಡಬಹುದು ಎಂದು ನಾನು ನಂಬುತ್ತೇನೆ. ಅಖಿಲ ಭಾರತ ಸೇವೆಗಳ ವಿಷಯದಲ್ಲಿ ಕೂಡಾ ಪ್ರಕರಣ ೧೦ರಲ್ಲಿ ಹಿಂದುಳಿದ ಸಮುದಾಯಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕು ಎಂದು ಹೇಳಲಾಗಿದೆ. ಆದರೆ, ನೀವು ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಹಿಂದುಳಿದ ಸಮುದಾಯಗಳ ಪಟ್ಟಿಯನ್ನು ಗಮನಿಸಿದರೆ, ಅನುಸೂಚಿತ ಜಾತಿಗಳು ಅದರಲ್ಲಿ ಒಳಗೊಂಡಿರುವುದಿಲ್ಲ. ಅದನ್ನೂ ಸರಿಪಡಿಸಬೇಕು ಎಂದು ನಾನು ಭಾವಿಸುತ್ತೇನೆ.

ಕೊನೆಯದಾಗಿ, ರಾಷ್ಟ್ರಭಾಷೆ ಕುರಿತು ವಿವಾದವಿದೆ. ನನ್ನದೇ ಸಮುದಾಯವನ್ನು ಉದಾಹರಣೆಯಾಗಿ ತೆಗೆದುಕೊಂಡರೆ, ಜನಸಂಖ್ಯೆಯ ಶೇಕಡ ಒಂದರಷ್ಟು ಕೂಡಾ ಹಿಂದಿ ಅಥವಾ ಹಿಂದೂಸ್ಥಾನಿಗೆ ಕಲಿಯಲು ಹೋಗಿರುವರೆಂದು ನಾನು ಭಾವಿಸಿಲ್ಲ.

ಮಾನ್ಯರೆ, ಈ ಉನ್ನತ ಸಭೆಯು ಈ ವಿಷಯವನ್ನು ಸೂಕ್ತವಾಗಿ ಚರ್ಚಿಸಬೇಕು ಮತ್ತು ಒಂದು ಪ್ರಾಂತ್ಯದ ಮೇಲೆ ಅಥವಾ ಜಿಲ್ಲೆ ಅಥವಾ ರಾಜ್ಯದ ಮೇಲೆ ಅಲ್ಲಿ ಸ್ವಾಗತವಿಲ್ಲದಿದ್ದರೆ, ಯಾವುದೇ ಭಾಷೆಯನ್ನು ಹೇರಬಾರದು ಎಂದು ನಾನು ಭಾವಿಸುತ್ತೇನೆ.

ಈ ಕೆಲವು ಅಭಿಪ್ರಾಯಗಳನ್ನು ತಿಳಿಸುತ್ತ ಕರಡು ರಚನಾಸಮಿತಿಯ ಅಧ್ಯಕ್ಷರನ್ನು ಹಾಗೂ ಸದಸ್ಯರನ್ನು ಈ ಸಭೆಯಲ್ಲಿ ಕರಡು ಸಂವಿಧಾನವನ್ನು ಮಂಡಿಸುವಲ್ಲಿ ಅವರು ಸಲ್ಲಿಸಿದ ಮಹತ್ತ್ವದ ಸೇವೆಗೆ ಅಭಿನಂದಿಸುತ್ತೇನೆ ಮತ್ತು ಈ ಸದನವು ಪ್ರಸ್ತಾವಕ್ಕೆ ಒಪ್ಪಿಗೆ ನೀಡಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

**ಶ್ರೀಮತಿ ದಾಕ್ಷಾಯಣಿ ವೇಲಾಯುಧನ್** (ಮದ್ರಾಸ್ : ಸಾಮಾನ್ಯ) : ಮಾನ್ಯ ಉಪಸಭಾಧ್ಯಕ್ಷರೆ, ಈಗ ಕರಡು ಸಂವಿಧಾನವು, ಸಾಮಾನ್ಯ ಚರ್ಚೆಗಾಗಿ ನಮ್ಮ ಮುಂದಿದೆ. ಅದರ ಮೇಲೆ ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ತಾವು ನನಗೆ ಅನುಮತಿ ನೀಡಬೇಕೆಂದು ಕೋರುತ್ತೇನೆ. ಕರಡು ರಚನಾಸಮಿತಿಯ ಸಮರ್ಥರೂ ಮತ್ತು ವಾಙ್ಮಯಿಗಳೂ ಆದ ಅಧ್ಯಕ್ಷರು, ತಮ್ಮ ಪ್ರಾಮಾಣಿಕ ಕರ್ತವ್ಯದಿಂದ ನವಭಾರತದ ನಿರ್ಮಾಣದ ಮಹಾನ್ ಕಾರ್ಯವನ್ನು ಸ್ತುತ್ಯರ್ಹವಾಗಿ ಮಾಡಿದ್ದಾರೆ. ಯಾವ ತತ್ತ್ವಗಳ ಮೇರೆಗೆ ಅಧಿಕಾರ ವರ್ಗಾವಣೆಯಾಯಿತೋ ತತ್ತ್ವಗಳನ್ನು ಮೀರಿಹೋಗಲು ಅವರು ಬಯಸಿದ್ದರೆ ಅವರು ಹಾಗೆ ಮಾಡಬಹುದಾಗಿದ್ದರೂ ಹಾಗೆ ಮಾಡಲಿಲ್ಲ. ಆದುದರಿಂದ ಅವರ ವಿರುದ್ಧ ಮೂಡಿದ ಯಾವುವೇ ಟೀಕೆಗಳು ಒಟ್ಟಾರೆ ಸಂಕುಚಿತ ಮತ್ತು ಅನುಚಿತವಾಗಿ ಮಾಡಿದವುಗಳೆಂದು ನಾನು ತಿಳಿಯುತ್ತೇನೆ. ಯಾವುದೇ ನಿಂದೆ ಇದ್ದರೂ ಅದು ಇಲ್ಲಿ ಹಾಜರಿರುವ ನಮಗೂ ಮತ್ತು ಸಂವಿಧಾನ ರಚನೆಯ ಉದ್ದೇಶಕ್ಕಾಗಿ ಯಾರನ್ನು ಕಳುಹಿಸಲಾಯಿತೋ ಅವರಿಗೂ ಮತ್ತು ಯಾರ ಮೇಲೆ ಈ ಸಭೆಗೆ ನಮ್ಮನ್ನು ಕಳುಹಿಸಿದಾಗ ಸ್ವಾತಂತ್ರ್ಯಕ್ಕಾಗಿ ಅನೇಕ ಕಷ್ಟನಷ್ಟಗಳನ್ನು ಅನುಭವಿಸಿ ಭರವಸೆಗಳನ್ನಿಟ್ಟುಕೊಂಡ ಈ ನೆಲದ ಲಕ್ಷಾಂತರ ಅಮಾಯಕ ಜನರು ಇಂಥ ಜವಾಬ್ದಾರಿ ವಹಿಸಿಕೊಟ್ಟಿರುವ ಅವರಿಗೆ ಮಾತ್ರ ಹೋಗುತ್ತದೆ, ಎಂದು ನಾನು ಭಾವಿಸಿದ್ದೇನೆ. ಆದರೆ ಇದರರ್ಥ ಕರಡು ಕುರಿತಂತೆ ನಾನು ಯಾವುದೇ ಟೀಕೆಗೆ ಗುರಿಯಾಗಿಲ್ಲ ಎಂದಲ್ಲ. ಸಂವಿಧಾನ ರಚನಾ ಸಭೆಯು ಅದರ ರಚನೆಯಾದಾಗಿನಿಂದಲೂ ಸಂವಿಧಾನ ರಚಿಸುವುದಕ್ಕಿಂತ ಇತರ ವಿಷಯಗಳಲ್ಲಿ ಹೆಚ್ಚು ಆಸಕ್ತಿ ತೋರಿಸಿತ್ತೇ ಎಂಬ ಹಿಂಜರಿಕೆ ಇದೆ. ನಾವು ದಿನವೂ ನಮ್ಮ ಮಹಾನ್ ನಾಯಕರು ಮಾಡಿದ ಭಾಷಣಗಳನ್ನು ಮತ್ತು ಅವರ ಆದರ್ಶಗಳು ಹಾಗೂ ಸಿದ್ಧಾಂತಗಳನ್ನು ಕೇಳುತ್ತಿದ್ದೆವು, ಆದರೆ, ಸಂವಿಧಾನದಲ್ಲಿ ಅವರ ಆದರ್ಶಗಳು ಮತ್ತು ಸಿದ್ಧಾಂತಗಳು ಇಲ್ಲದಿರುವುದು ಕಂಡುಬರುತ್ತಿದೆ. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಖ್ಯಾತಿಪಡೆದ ನಾಯಕರು ಸಭೆಯಲ್ಲಿ ಇದ್ದಾರೆ. ಆದರೆ, ನಮ್ಮ ಸಂವಿಧಾನದಲ್ಲಿ ಆ ತತ್ತ್ವಗಳು ಮತ್ತು ಆದರ್ಶಗಳು ಇಲ್ಲದಿರುವುದನ್ನು ನಾವು ಕಾಣುತ್ತೇವೆ; ಅಂತಹ ಒಂದು ಕರಡನ್ನು ನಮ್ಮ ಮುಂದೆ ಇರಿಸಲಾಗಿದೆ ಎಂಬುದು ಒಂದು ದೊಡ್ಡ ದುರಂತ ಹಾಗೂ ಕರಡು ರಚನಾಸಮಿತಿಯ ಸದಸ್ಯರು ಕೂಡ ನಮ್ಮ ಮುಂದೆ ಮಂಡಿಸಿರುವ ಕರಡನ್ನು ಪೂರಾ ಓದಿದ್ದಾರೆಯೇ ಎಂಬುದು ನನಗೆ ತಿಳಿಯುತ್ತಿಲ್ಲ.

ಸಾಮಾನ್ಯ ಟೀಕೆ ಎಂದರೆ ಈ ಕರಡು, ೧೯೩೫ರ ಅಧಿನಿಯಮದ ಪ್ರತಿರೂಪ ಎಂದು, ಆದರೆ, ನಾವು ಸಂಸದೀಯ ಆಡಳಿತ ವ್ಯವಸ್ಥೆ ಎಂಬ ಹೆಸರಿನಿಂದ ಕರೆಯಲಾಗುವ ಬ್ರಿಟಿಷ್ ಸಾರ್ವಭೌಮತ್ವ ಆಡಳಿತವು ಪರಂಪರಾಗತವಾದ ವ್ಯವಸ್ಥೆ ಎಂಬ ನಿಜಾಂಶವನ್ನು ಮರೆಯಲಾಗದು. ನಾವು ಅದನ್ನು ಅವಲಂಬಿಸಿದ್ದುದೇ ತೊಂದರೆಗೆ ಕಾರಣ ಮತ್ತು ನಾವು ಸಂವಿಧಾನವನ್ನು ಜಾರಿಗೆ ತಂದ ಮೇಲೂ ಅದನ್ನು ಅವಲಂಬಿಸಬೇಕಾಗುತ್ತದೆ. ಈ ತೊಂದರೆಯು ಒಂದೇ ಅಂಶಕ್ಕೆ ಸಂಬಂಧಿಸಿದೆ, ಅದೆಂದರೆ, ಬ್ರಿಟಿಷ್ ಆಡಳಿತಗಾರರು ಭಾರತಕ್ಕೆ ಕೇಂದ್ರೀಕೃತವಾಗಿ ಮತ್ತು ಪ್ರಾಂತೀಯವಾಗಿ ಏಕ ಘಟಕವಾಗಿ ಇಡಲು ಬಯಸಿದ್ದರು ಆದರೆ ನಮ್ಮ ಗೊಂದಲದ ವಾತಾವರಣ ಮತ್ತು ಆತಂಕ ಇವು ಭಾರತವನ್ನು ಕೇಂದ್ರೀಕೃತವಾಗಿ ಮತ್ತು ಪ್ರಾಂತೀಯವಾಗಿ ಒಂದು ಬಲಿಷ್ಠ ಘಟಕವಾಗಿ ತರುವಂತೆ ಮಾಡಿದವು. ಇದರಿಂದಾಗಿ ಈ ಅಧಿಕಾರದ

ಕೇಂದ್ರೀಕರಣ ಎಲ್ಲ ತೊಂದರೆಗಳಿಗೆ ಎಡೆ ಮಾಡಿಕೊಟ್ಟಿತು. ಭಾರತವನ್ನು ಒಂದು ಬಲಿಷ್ಠ ಘಟಕವಾಗಿ ಮಾಡುವ ವಿಧಾನಗಳು ಎರಡು. ಒಂದು ಅಧಿಕಾರದ ಕೇಂದ್ರೀಕರಣದ ವಿಧಾನ ಮತ್ತು ಇನ್ನೊಂದು ವಿಕೇಂದ್ರೀಕರಣ ವಿಧಾನ. ಆದರೆ, ಕೇಂದ್ರೀಕರಣವು ಸಂಸದೀಯ ವ್ಯವಸ್ಥೆಯ ಮೂಲಕ ಮಾತ್ರ ಸಾಧ್ಯ. ಅದು ಈಗ "ಪ್ರಜಾಪ್ರಭುತ್ವ ವ್ಯವಸ್ಥೆ" ಎಂಬ ಸುರಕ್ಷಿತ ಪದಗಳ ಅಡಿಯಲ್ಲಿ ನಡೆಯುತ್ತಿದೆ. ಆದರೆ ಈ ಕರಡಿನಲ್ಲಿ ಪ್ರಜಾಪ್ರಭುತ್ವ ಎಂಬುದಾಗಲಿ ಅದೇ ರೀತಿ ವಿಕೇಂದ್ರೀಕರಣ ಎಂಬುದಾಗಿ ಒಟ್ಟಾರೆ ಕಾಣುತ್ತಿಲ್ಲ. ಮೂವತ್ತು ಕೋಟಿ ಜನರಿರುವ ಈ ದೊಡ್ಡ ದೇಶಕ್ಕಾಗಿ, ಅದಕ್ಕಿರುವ ಮಹಾನ್ ಸಂಸ್ಕೃತಿಯ ಹಿನ್ನೆಲೆ ಮತ್ತು ವಿಶ್ವಕ್ಕೆ ಮಹಾನ್ ತತ್ತ್ವಗಳನ್ನು ಹಾಗೂ ಬೋಧನೆಗಳನ್ನು ಮಾಡಿದ ಮಹಾನ್ ವ್ಯಕ್ತಿಗಳು ಈ ನೆಲದಲ್ಲಿ ಜನಿಸಿದ್ದರೂ ಸಂವಿಧಾನವನ್ನು ರೂಪಿಸುವಲ್ಲಿ ನಮಗೆ ವಿದೇಶೀಯವಾಗಿರುವ ಒಂದು ಸಂವಿಧಾನವನ್ನು ರೂಪಿಸಲು ಸಾಧ್ಯವಾಗಿರುವುದು ಒಂದು ದೊಡ್ಡ ದುರಂತ. ಕರಡು ರಚನಾಸಮಿತಿಯ ಅಧ್ಯಕ್ಷರು ಮಾಡಿದ ವಾದಗಳೆಲ್ಲವೂ ಮನವರಿಕೆಯಾಗುವಂಥವಾಗಿರಲಿಲ್ಲ. ಅವರು, ಕರಡು ಸಂವಿಧಾನ ರಚಿಸುವಲ್ಲಿ ತುಂಬ ನಿಧಾನ ಎಂದು ಹೇಳಿದ್ದಾರೆ. ಅವರ ವಾದಗಳು ಸಮರ್ಥನೀಯವಲ್ಲ ಎಂಬುದನ್ನು ತೋರಿಸುವ ಉದಾಹರಣೆಗಳನ್ನು ಕೊಡಬಲ್ಲೆ. ಒಕ್ಕೂಟದ ರಾಷ್ಟ್ರಪತಿಯವರು ರಾಜ್ಯಸಭೆಗೆ ಹದಿನೈದು ಸದಸ್ಯರನ್ನು ನಾಮನಿರ್ದೇಶನ ಮಾಡಬಹುದು ಎಂದು ಕರಡು ರಚನಾಸಮಿತಿಯು ಶಿಫಾರಸು ಮಾಡಿದೆ. ವಿಧಾನಮಂಡಲದ ಅಧಿಕಾರಾವಧಿಯು ನಾಲ್ಕುವರ್ಷಗಳಿಗಿಂತ ಹೆಚ್ಚಿಗೆ ಇರಬೇಕು ಎಂಬುದು ಇನ್ನೊಂದು ವಾದ ಆಗಿದೆ. ಕರಡಿನಲ್ಲಿ, ರಾಜ್ಯಪಾಲರ ಆಯ್ಕೆ ಅಥವಾ ಚುನಾವಣೆ ಕುರಿತ ಇನ್ನೊಂದು ತಪ್ಪುಗ್ರಹಿಕೆ ಇದೆ. ಶಾಸನಸಭೆಗೆ ಜವಾಬ್ದಾರರಾಗಿರುವ ರಾಜ್ಯಪಾಲರನ್ನು ಮತ್ತು ಮುಖ್ಯಮಂತ್ರಿಗಳನ್ನು ಜನರೇ ಚುನಾಯಿಸಿದಲ್ಲಿ ಆಗ ಈ ಇಬ್ಬರ ನಡುವೆ ಘರ್ಷಣೆ ಇರುತ್ತದೆ ಎಂದು ಸಮಿತಿಯು ಭಾವಿಸುತ್ತದೆ. ಆದರೆ ಅವರು ಸೂಚಿಸಿರುವ ಪರಿಹಾರವು ಕಾಯಿಲೆಗಿಂತ ಕೆಟ್ಟದಾಗಿದೆ. ರಾಜ್ಯಪಾಲರ ಆಯ್ಕೆಗಾಗಿ ನಾಲ್ಕು ಜನರ ಹೆಸರಿರುವ ಒಂದು ಪಟ್ಟಿಯಿಂದ ರಾಷ್ಟ್ರಪತಿಯವರು ಆ ನಾಲ್ವರಲ್ಲಿ ಒಬ್ಬರನ್ನು ರಾಜ್ಯಪಾಲರನ್ನಾಗಿ ಆಯ್ಕೆಮಾಡಬೇಕು. ಕೇಂದ್ರದಲ್ಲಿ ಕಾಂಗ್ರೆಸ್ ರಾಷ್ಟ್ರಪತಿಯಾಗಿದ್ದರೆ, ಮತ್ತು ಒಂದು ಪ್ರಾಂತ್ಯದಲ್ಲಿ ಸಮಾಜವಾದಿ ಪಕ್ಷವು ಇದ್ದು ಸಮಾಜವಾದಿ ಪಕ್ಷವು ತಮ್ಮ ಪಕ್ಷದಿಂದ ಮೂವರನ್ನು ಶಿಫಾರಸು ಮಾಡಿ ಕಾಂಗ್ರೆಸ್‌ನಿಂದ ಒಬ್ಬರನ್ನು ಶಿಫಾರಸು ಮಾಡಿದರೆ, ನಿಶ್ಚಿತವಾಗಿ ಕೇಂದ್ರದಲ್ಲಿ ರಾಷ್ಟ್ರಾಧ್ಯಕ್ಷರು ಕಾಂಗ್ರೆಸ್ ಪಕ್ಷದವರನ್ನು ರಾಜ್ಯಪಾಲರ ಸ್ಥಾನಕ್ಕೆ ಆಯ್ಕೆಮಾಡುತ್ತಾರೆ. ನಿಶ್ಚಿತವಾಗಿ ಇದು ಘರ್ಷಣೆಗೆಡೆ ಮಾಡುತ್ತದೆ. ಈ ರಾಜ್ಯಪಾಲರ ನೇರ ನೇಮಕಮಾಡುವುದನ್ನು ಭಾರತ ಸರ್ಕಾರ ಅಧಿನಿಯಮದಿಂದ ತೆಗೆದುಕೊಳ್ಳಲಾಗಿದೆ ಅದರಿಂದ ನಾವು ಆ ಅಧಿನಿಯಮದಲ್ಲಿರುವ ಒಂದು ಅರ್ಧವಿರಾಮವನ್ನು ಬಿಟ್ಟಿಲ್ಲ ಎಂಬುದನ್ನು ತೋರಿಸುತ್ತದೆ.

ಮಾನ್ಯರೆ, ಹೊಸ ಸಂವಿಧಾನದಡಿ ಕೇಂದ್ರದ ಆಡಳಿತವಿರುವ ಪ್ರದೇಶಗಳು ಏಕಿರಬೇಕು ಎಂಬುದು ನನಗೆ ಅರ್ಥವಾಗುತ್ತಿಲ್ಲ. ಬ್ರಿಟಿಷರು ಈ ಪ್ರದೇಶಗಳನ್ನು ದೇಶದಲ್ಲಿ ಸೇನಾ ಆಡಳಿತ ನಡೆಸುವುದಕ್ಕಾಗಿಯೇ ಇಟ್ಟುಕೊಂಡಿದ್ದರು. ಅಂತಹ ಪ್ರದೇಶಗಳನ್ನು ಪ್ರಸಕ್ತ ಸಂವಿಧಾನದಡಿ ಏಕೆ ನಾವು ಅದೇ ರೀತಿ ಇಟ್ಟುಕೊಂಡಿರಬೇಕು ಎಂದು ನನಗೆ ತಿಳಿಯುತ್ತಿಲ್ಲ. ಈ ಪ್ರಾಂತ್ಯಗಳನ್ನು ಅಕ್ಕಪಕ್ಕದ ಪ್ರಾಂತ್ಯಗಳೊಂದಿಗೆ ವಿಲೀನಗೊಳಿಸುವುದು ಉತ್ತಮ, ಹಾಗೆ ಮಾಡುವುದರಿಂದ ನಾವು ಏನೊಂದನ್ನೂ ಕಳೆದುಕೊಳ್ಳುವುದಿಲ್ಲ. ಅದಕ್ಕಾಗಿಯೇ ಕರಡು ರಚನಾಸಮಿತಿಯವರು ಅಂತಹ ಒಂದು ಖಂಡವನ್ನು ಸೇರಿಸಿರುವಂತೆ ಕಂಡುಬರುತ್ತದೆ. ಅದರ ಫಲವೇ ಅದು ಈಗ ಚರ್ಚೆಗೆ ನಮ್ಮ ಮುಂದೆ ಬಂದಿದೆ.

ನಾನು ಈ ಹಂತದಲ್ಲಿ ಸಮಾಜವಾದಿ ಬೇಡಿಕೆ ಕುರಿತು ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಸಮಾಜವಾದಿಗಳು ಎರಡನೆಯ ದೊಡ್ಡ ಪಕ್ಷ; ಅದು ಒಂದು ವಿರೋಧಪಕ್ಷವೆಂದು ಅಧಿಕೃತ ಮನ್ನಣೆ ಪಡೆಯಬಯಸಿದೆ. ಈ ದೇಶದಲ್ಲಿ ಆ ಪಕ್ಷದಲ್ಲಿ ಹೊಂದಿರುವ ದೊಡ್ಡ ಸಂಖ್ಯೆಯ ಅನುಯಾಯಿಗಳು

ಇರುವುದನ್ನು ನಿರಾಕರಿಸುವಂತಿಲ್ಲ. ಅವರು ಭವಿಷ್ಯದಲ್ಲಿ ಒಂದು ಸಂವಿಧಾನಬದ್ಧ ವಿಪಕ್ಷವಾಗಿರಲು ಬಯಸಿರುವುದಾಗಿ ಘೋಷಿಸಿದ್ದಾರೆ. ಆದರೆ, ಈ ಸಂವಿಧಾನ ರಚನಾಸಭೆಯನ್ನು ಹೂತುಬಿಡಬೇಕೆಂಬ ಅವರ ಬೇಡಿಕೆಯನ್ನು ನಾನು ಒಪ್ಪುವುದಿಲ್ಲ ಎಂದು ನಾನು ಹೇಳಲೇಬೇಕಾಗಿದೆ. ಈ ಬಗ್ಗೆ ನಾನು ಒಂದು ಸಲಹೆ ಮಾಡಬೇಕಾಗಿದೆ. ಪ್ರಸ್ತುತ ಸಂವಿಧಾನವು ಜಾರಿಗೆ ಬಂದಾಗ ಸಾರ್ವತ್ರಿಕ ಚುನಾವಣೆಗಳ ಮೂಲಕ ಸಾರ್ವಜನಿಕರ ಮುಂದೆ ಈ ವಿಷಯವನ್ನು ಇಡಲಾಗುತ್ತದೆ. ಆಗ ಈ ಸಂವಿಧಾನವನ್ನು ಅದರ ಅಂಗೀಕಾರಕ್ಕಾಗಲಿ ಅಥವಾ ನಿರಾಕರಣೆಗಾಗಲಿ ಅದನ್ನು ಚುನಾವಣಾ ವಿಷಯವಾಗಿ ಮಾಡಬಹುದು. ಬಹುಸಂಖ್ಯೆ ಮತದಾರರು ಸಂವಿಧಾನಕ್ಕೆ ಸಮ್ಮತಿಸಿದರೆ, ಆಗ ನಾವು ಇಡೀ ದೇಶವೇ ಅದನ್ನೊಪ್ಪಿದೆ ಎಂದು ತೆಗೆದುಕೊಳ್ಳಬೇಕು. ಬಹುಸಂಖ್ಯೆ ಮತದಾರರು ಅದನ್ನು ನಿರಾಕರಿಸಿದರೆ, ಇಡೀ ದೇಶವೇ ಅದನ್ನು ನಿರಾಕರಿಸಿದೆ ಎಂದು ತೆಗೆದುಕೊಳ್ಳಬೇಕು. ಮತ್ತು ಅಧಿಕಾರಕ್ಕೆ ಬರುವ ಪಕ್ಷವು ಮತ್ತು ಆ ತರುವಾಯ ರಚಿತವಾಗುವ ವಿಧಾನ ಮಂಡಲವು ಈ ಸಂವಿಧಾನವನ್ನು ಪರಿಗಣನೆಗೆ ತೆಗೆದುಕೊಳ್ಳಬಹುದು ಮತ್ತು ಅವಶ್ಯವಿರುವ ತಿದ್ದುಪಡಿಗಳನ್ನು ಮಾಡಬಹುದು. ಮಾನ್ಯರೆ, ಕಾಂಗ್ರೆಸ್ ಪಕ್ಷವು ಇಂದು ಅಧಿಕಾರದಲ್ಲಿರುವ ಪಕ್ಷವಾಗಿದ್ದು, ಅಂತಹ ಒಂದು ಕಾರ್ಯನೀತಿಯನ್ನು ಸಮ್ಮತಿಸುವುದು ಮತ್ತು ಸಂವಿಧಾನ ರಚನೆಗೆ ಸಂಬಂಧಿಸಿದಂತೆ ನಮ್ಮ ನಿಲುವಿನಲ್ಲಿ ಪ್ರಜಾಪ್ರಭುತ್ವ ಅಂಶಗಳಿಲ್ಲದಿರುವ ವಿಷಯಗಳ ಬಗ್ಗೆ ನಿಂದಿಸದಂತೆ ನೋಡಬೇಕೆಂದು ನನ್ನ ಅಭಿಪ್ರಾಯ.

**ಶ್ರೀ ದೇಶಬಂಧು ಗುಪ್ತ** (ದೆಹಲಿ) : *[ಮಾನ್ಯ ಉಪಸಭಾಧ್ಯಕ್ಷರೆ, ಕ್ಷಮಿಸಿ, ಸದನದ ಅನೇಕ ಸದಸ್ಯರಿಂದ ಅಭಿನಂದನೆಗಳನ್ನು ಸ್ವೀಕರಿಸಿರುವ ಕರಡು ರಚನಾಸಮಿತಿಯ ಅಧ್ಯಕ್ಷ ಡಾ. ಅಂಬೇಡ್ಕರ್ ಅವರನ್ನು ನಾನು ಅಭಿನಂದಿಸುವುದಿಲ್ಲ. ಮುಖ್ಯ ಆಯುಕ್ತರ ಪ್ರಾಂತ್ಯಕ್ಕೆ ಸಂಬಂಧಿಸಿದಂತೆ ಕರಡು ರಚನಾಸಮಿತಿಯು ಮಾಡಿರುವ ಶಿಫಾರಸುಗಳ ಭಾಗವನ್ನು ನಾನು ಎಚ್ಚರಿಕೆಯಿಂದ ಓದಿದ್ದೇನೆ. ನಾನು ಈ ಭಾಗಕ್ಕಷ್ಟೆ ನನ್ನ ಅಭಿಪ್ರಾಯಗಳನ್ನು ಸೀಮಿತಗೊಳಿಸಲು ಇಚ್ಛಿಸುತ್ತೇನೆ ಮತ್ತು ಈ ಸದನದ ಸದಸ್ಯರು ಅದನ್ನು ಅತಿ ಸೂಕ್ಷ್ಮವಾಗಿ ನೋಡಬೇಕು ಎಂದು ಆಶಿಸುತ್ತೇನೆ.

ಮಾನ್ಯ ಉಪಸಭಾಧ್ಯಕ್ಷರೆ, ಸಂವಿಧಾನ ರಚನಾಸಭೆಯ ಮುಂದೆ ಮುಖ್ಯ ಆಯುಕ್ತರ ಪ್ರಾಂತ್ಯಗಳ ಸಮಸ್ಯೆಯನ್ನು ತಂದಾಗ, ಆಡಳಿತದ ವ್ಯವಸ್ಥೆಯು ಈಗ ಜಾರಿಯಲ್ಲಿರುವಂತೆಯೇ ಉಳಿಯಲಿ ಎಂದು ಕರಡು ರಚನಾಸಮಿತಿಯು ಶಿಫಾರಸು ಮಾಡಿತ್ತು. ನೀವು ತಿಳಿದಂತೆ ಹಿಂದೂಸ್ಥಾನ ಬದಲಾಗಿದೆ; ದೇಶ ಸ್ವತಂತ್ರವಾಗಿದೆ ಆದರೆ ದೆಹಲಿ ಮತ್ತು ಇತರ ಮುಖ್ಯ ಆಯುಕ್ತರ ಪ್ರಾಂತ್ಯಗಳಲ್ಲಿ ಗಣನೀಯ ಪ್ರಮಾಣದ ಜನಸಂಖ್ಯೆ ಇದ್ದರೂ, ಆಡಳಿತದಲ್ಲಿ ಜನರಿಗೆ ಹೇಳಿಕೊಳ್ಳಲು ಅವಕಾಶವೇ ಇಲ್ಲ. ಅವರ ಆಡಳಿತ ವ್ಯವಸ್ಥೆಯಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ. ಸಂವಿಧಾನ ರಚನಾಸಭೆಯಲ್ಲಿ ನಮ್ಮ ಮುಂದೆ ಅಂತಹ ಒಂದು ಶಿಫಾರಸು ಮಾಡಿದಾಗ, ಮುಖ್ಯ ಆಯುಕ್ತರ ಪ್ರಾಂತ್ಯಗಳ ಪ್ರತಿನಿಧಿಗಳು ತಮ್ಮ ಧ್ವನಿ ಎತ್ತಿದಾಗ ಸಂವಿಧಾನ ರಚನಾಸಭೆ ಒಂದು ವಿಶೇಷ ಉಪಸಮಿತಿ ನೇಮಕಮಾಡಿತು. ಅಲ್ಲಿ ಇರುವಂಥ ಸ್ಥಿತಿಗಳನ್ನು ತಿಳಿದು ಅದಕ್ಕೆ ಅನುಗುಣವಾಗಿ ಸಂವಿಧಾನ ರೂಪಿಸುವ ಕೆಲಸವನ್ನು ಅದಕ್ಕೆ ವಹಿಸಿಕೊಡಲಾಯಿತು. ಮಾನ್ಯರೆ, ವಿಶೇಷ ಉಪಸಮಿತಿಯ ಅಧ್ಯಕ್ಷರಾದ, ಡಾ. ಪಟ್ಟಾಭಿ ಸೀತಾರಾಮಯ್ಯ ಇವರು ನಮ್ಮ ಪ್ರಸಕ್ತ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷರು. ಆಯ್ಕೆಮಾಡಿದ ಈ ಸದನದ ಒಬ್ಬ ಹಿರಿಯ ಸದಸ್ಯರು. ಈ ವಿಶೇಷ ಉಪಸಮಿತಿಯು, ನಮ್ಮ ಸಂವಿಧಾನ "ಪಂಡಿತರಾದ" ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರ ಸೇವೆಗಳನ್ನು ಪಡೆದಿದೆ. ಅದೂ ಅಲ್ಲದೆ ನಮ್ಮ ಇನ್ನೊರ್ವ ಸಂವಿಧಾನ "ಪಂಡಿತರಾದ" ಶ್ರೀ ಕೆ. ಸಂತಾನಮ್ ಅವರು ಕೂಡ ಅದರ ಸದಸ್ಯರಲ್ಲೊಬ್ಬರಾಗಿದ್ದರು. ಅವರು ಸದಾ ಸಂವಿಧಾನ ವಿಷಯದಲ್ಲಿ ಹೆಚ್ಚು ಆಸಕ್ತಿ ತೆಗೆದುಕೊಂಡವರು (ನಗು). (ನೀವು ಅನುಮಾನಿಸಿರುವಿರಾ?) ಸಮಿತಿಯ ಪ್ರತಿಯೊಬ್ಬ ಸದಸ್ಯರೂ ಅದರಲ್ಲಿ ಆಸಕ್ತಿ ವಹಿಸಿದ್ದಾರೆ ಮತ್ತು ಅವರು ಸರ್ವಾನುಮತದಿಂದ ಶಿಫಾರಸುಗಳನ್ನು ಮಾಡಿದ್ದಾರೆ. ಸಮಿತಿಯು ಹಲವು ಸಭೆಗಳನ್ನು

ನಡೆಸಿ, ಈ ಸಮಸ್ಯೆಯನ್ನು ಪರಿಗಣಿಸಿದೆ. ಪ್ರಶ್ನೆಯನ್ನು ಎಲ್ಲ ರೀತಿಯಿಂದ ಅತಿ ಸೂಕ್ಷ್ಮವಾಗಿ ಪರೀಕ್ಷಿಸಿ ಅದು ಸರ್ಕಾರದ ಆ ತೊಂದರೆಗಳನ್ನು ಪರಿಗಣಿಸಿದೆ. ಅದರಿಂದಾಗಿ, ಅವರು ಮುಖ್ಯ ಆಯುಕ್ತರ ಪ್ರಾಂತ್ಯಗಳನ್ನು ತಟಸ್ಥ ರೀತಿಯಲ್ಲಿ ನೋಡುವುದು ಸೂಕ್ತ ಎಂದು ಪರಿಗಣಿಸಿದ್ದರು. ಅಂತೆಯೇ, ಎಲ್ಲ ವಿಷಯಗಳನ್ನು ಗಣನೆಗೆ ತೆಗೆದುಕೊಂಡು, ಶಿಫಾರಸುಗಳನ್ನು ಸಲ್ಲಿಸಲಾಯಿತು. ಅವರಲ್ಲಿ ಈ ಪ್ರದೇಶಗಳ ಜನರು ತಾವು ಇತರ ಪ್ರಾಂತ್ಯಗಳಲ್ಲಿ ಜನರಿಗೆ ಈಗಾಗಲೇ ಇರುವಂಥವೇ. ಅದೇ ಹಕ್ಕುಗಳು ತಮಗೂ ಬೇಕೆಂದು ಮತ್ತು ಇದು ಬೇಡ ಎಂಬುದಕ್ಕೆ ಯಾವುದೇ ಕಾರಣವಿರಲಿಲ್ಲ ಎಂದು ಸ್ಪಷ್ಟವಾಗಿ ಹೇಳಿದೆ. ಆದರೂ ದೆಹಲಿಯು, ಅದರದೇ ಆದ ವಿಶಿಷ್ಟ ಸ್ಥಾನ ಹೊಂದಿದೆ ಎಂಬುದನ್ನು ಗಣನೆಗೆ ತೆಗೆದುಕೊಂಡು, ದೆಹಲಿ ಮತ್ತಿತರ ಅಂಥವೇ ಪ್ರಾಂತ್ಯಗಳನ್ನು ಲೆಫ್ಟಿನೆಂಟ್ ಗವರ್ನರರ ಪ್ರಾಂತ್ಯಗಳೆಂದು ಒಪ್ಪಿಕೊಳ್ಳಬೇಕೆಂದು ಶಿಫಾರಸು ಮಾಡಿರುವರು ಮತ್ತು ಲೆಫ್ಟಿನೆಂಟ್ ಗವರ್ನರರ ನೇಮಕ ಕುರಿತಂತೆ ಕೇಂದ್ರವು ಅವರ ಮೇಲೆ ನಿಯಂತ್ರಣ ಹೊಂದಿರಬೇಕು ಎಂದು ಅಂಗೀಕರಿಸಲಾಯಿತು. ಅಂತೆಯೇ, ರಾಜ್ಯಪಾಲರನ್ನು ಚುನಾಯಿಸುವ ಬದಲು ಒಂದು ಗಣರಾಜ್ಯದ ರಾಷ್ಟ್ರಪತಿಗಳು ಅವರನ್ನು ನೇಮಕಮಾಡಬೇಕು ಎಂದು ನಿರ್ಣಯಿಸಲಾಯಿತು.

ಒದಗಿಸಲಾಗಿರುವ ಇನ್ನೊಂದು ರಕ್ಷಣೆ ಎಂದರೆ ಇತರ ಪ್ರಾಂತ್ಯಗಳಲ್ಲಿ ಇರದ ರಕ್ಷಣೆಯನ್ನು ಇವುಗಳಿಗೆ ಒದಗಿಸಬೇಕು. ಪ್ರಾಂತ್ಯಗಳ ಸಂವಿಧಾನವನ್ನು ವಿಭಿನ್ನವಾಗಿ ರೂಪಿಸಬೇಕು ಮತ್ತು ಯಾವ ರೀತಿ ಎಂದರೆ, ಪ್ರಾಂತೀಯ ಮತ್ತು ಕೇಂದ್ರ ಪಟ್ಟಿಯ ಸಮವರ್ತಿ ಪಟ್ಟಿ ಆಗಿರಬೇಕು; ಹಾಗೆ ಮಾಡಿದರೆ ಕೇಂದ್ರವು ತಾನು ಇಚ್ಛಿಸಿದಂತೆ ಪ್ರಾಂತೀಯ ಶಾಸನಸಭೆ ಅಂಗೀಕರಿಸಿದ ಯಾವುದೇ ಶಾಸನದಲ್ಲಿ ಮಧ್ಯೆ ಪ್ರವೇಶಿಸಲು ಪೂರ್ಣ ಅಧಿಕಾರ ಹೊಂದಿರಬೇಕು. ಅದೂ ಅಲ್ಲದೆ, ಪ್ರಾಂತ್ಯವು ತನ್ನದೇ ಪ್ರತ್ಯೇಕವಾದ ಆಡಳಿತವ್ಯಾಪ್ತಿ ಹೊಂದಬಾರದು.

ಅವಕಾಶ ಕಲ್ಪಿಸಿರುವ ಇನ್ನೊಂದು ವಿಷಯ, ಅದರ ಬಜೆಟ್‌ನ್ನು ಕೇಂದ್ರದ ಮುಂದೆ ತರಬೇಕೆಂಬುದು ಮತ್ತು ರಾಷ್ಟ್ರಪತಿಗಳು ಅದರಲ್ಲಿ ಮಧ್ಯೆ ಪ್ರವೇಶಿಸಲು ಹಕ್ಕು ಹೊಂದಿರಬೇಕು. ಇಷ್ಟೆ ಅಲ್ಲ, ಇನ್ನೂ ಮತ್ತೊಂದು ರಕ್ಷಣೆ ಇದೆ. ಅದು ಲೆಫ್ಟಿನೆಂಟ್ ಗವರ್ನರ್ ಮತ್ತು ಸಚಿವರ ನಡುವೆ ಯಾವುದೇ ವಿಷಯದಲ್ಲಿ ಏನಾದರೂ ಭಿನ್ನಾಭಿಪ್ರಾಯ ಉದ್ಭವಿಸಿದರೆ ಅದನ್ನು ರಾಷ್ಟ್ರಪತಿಗಳಿಗೆ ಒಪ್ಪಿಸಬೇಕಾಗುತ್ತದೆ. ವಿಷಯದ ಮೇಲಿನ ಅವರ ನಿರ್ಣಯವೇ ಅಂತಿಮ ಎಂದು ಪರಿಗಣಿಸಲಾಗುತ್ತದೆ. ಕರಡು ರಚನಾಸಮಿತಿಯು, ರಾಜಧಾನಿ ನಗರ ದೆಹಲಿ, ಇದರ ಸ್ಥಳೀಯ ಆಡಳಿತವು, ಸುಲಭಸಾಧ್ಯವಾಗುವುದಿಲ್ಲವೆಂದು ಅಭಿಪ್ರಾಯಕ್ಕೆ ಬಂದು, ಕೇಂದ್ರದ ಅಧಿಕಾರಗಳಿಗೆ ಹೆಚ್ಚಿನ ಗಮನಕೊಟ್ಟು ಸಮಿತಿಯು ಪ್ರೌಢತೆಯಿಂದ ಸಿದ್ಧಪಡಿಸಿದ ತನ್ನ ಶಿಫಾರಸುಗಳನ್ನು ಸಲ್ಲಿಸಿದ ಈ ಪ್ರಶ್ನೆಯನ್ನು ಬಿಟ್ಟುಬಿಡುವುದು ಆವಶ್ಯಕವೆಂದು ಭಾವಿಸಿದ್ದುದು ಎಂದು ನನಗೆ ಅರ್ಥವಾಗುತ್ತಿಲ್ಲ. ಕರಡು ರಚನಾಸಮಿತಿಯು ವಿಶೇಷ ಸಮಿತಿಯ ಸರ್ವಾನುಮತ ಶಿಫಾರಸುಗಳಿಗೆ ಮನ್ನಣೆ ಕೊಡುವುದಕ್ಕೆ ಅಥವಾ ಯಾವುದಾದರೂ ಬೇರೆ ಮಾರ್ಗವನ್ನು ಕಂಡುಕೊಳ್ಳುವುದಕ್ಕೆ ಪ್ರಯತ್ನಿಸುವುದಕ್ಕೆ ಬದಲು, ತನ್ನ ಪೂರ್ವಗ್ರಹಕ್ಕೆ ಅನುಗುಣವಾಗಿ ವರ್ತಿಸಿತು ಮತ್ತು ಅದು ಗಮನ ಕೊಡವಂಥ ವಿಷಯವಲ್ಲ ಎಂದು ಪರಿಗಣಿಸಿದೆ ಎಂದು ನನಗೆ ತೋರುತ್ತದೆ. ಈ ಮಹನೀಯರು ದೆಹಲಿ ಮತ್ತು ಇತರ ಮುಖ್ಯ ಆಯುಕ್ತರ ಪ್ರಾಂತ್ಯಗಳ ಜನರನ್ನು ಸಮಾಧಾನಪಡಿಸುವುದಕ್ಕಷ್ಟೇ ವಿಶೇಷ ಸಮಿತಿಯನ್ನು ನೇಮಕಮಾಡಲಾಗಿದೆ ಎಂಬ ಅನಿಸಿಕೆಯಲ್ಲಿದ್ದರು ಎಂದು ನನಗೆ ತೋರುತ್ತದೆ. ಆದುದರಿಂದಲೇ ಅದರ ಶಿಫಾರಸುಗಳನ್ನು ಕಸದಬುಟ್ಟಿಗೆ ಎಸೆಯಲಾಗಿದೆ. ಸಂವಿಧಾನ ರಚನಾಸಭೆಯ ಹಲವು ಸದಸ್ಯರು ದೆಹಲಿಯಲ್ಲಿಯೇ ಸಾಕಷ್ಟು ವೇಳೆಯನ್ನು ಕಳೆಯುವಂಥವರು, ದೆಹಲಿಯ ೨೦ ಲಕ್ಷ ಜನರು ತಮ್ಮ ಆಡಳಿತದ ಬಗ್ಗೆ ಅವರಿಗೆ ಹೇಳುವುದು ಇದೆ ಎಂಬುದನ್ನು ಗಮನಿಸಲೇಬೇಕು ಎಂದೇಕೆ ಭಾವಿಸಲಿಲ್ಲ? ಒಂದು ವೇಳೆ ದೆಹಲಿಯ ಯಾವುದೊಂದು ಭಾಗದಲ್ಲಿ ಚಳವಳಿ ನಡೆದ ಸಂದರ್ಭದಲ್ಲಿ, ಗೃಹಸಚಿವ ಮತ್ತು ಪ್ರಧಾನಮಂತ್ರಿ ಅದನ್ನು ನಿಲ್ಲಿಸಲು ಧಾವಿಸಬೇಕು ಎಂಬುದು ಚೆನ್ನಾಗಿ ಕಾಣುವುದೇ? ಆಡಳಿತದ ಹೊಸ ವ್ಯವಸ್ಥೆಯಡಿ ಕೂಡ ದೆಹಲಿಯ ಸಣ್ಣಪುಟ್ಟ

ವ್ಯವಹಾರಗಳನ್ನು ಇತ್ಯರ್ಥಪಡಿಸಲು ಸಂಪುಟ ಸಚಿವರನ್ನು ಕರೆಸಬೇಕೆ ಮತ್ತು ದೆಹಲಿಯ ಜನ ಯಾವುದೇ ಧ್ವನಿ ಎತ್ತಬಾರದು, ಇದು ಸೂಕ್ತವೇ? ಆಸ್ಟ್ರೇಲಿಯದಲ್ಲಿ ಇಂಥ ಸಂದರ್ಭಗಳು ಇರಲಿಲ್ಲವಾಗಿ, ಭಾರತದಲ್ಲೂ ಕೂಡ ಹಾಗೆ ಮಾಡಲಾಗಲಿಲ್ಲ ಎಂದು ಹೇಳಲಾಗಿದೆ. ನಾವು ಇತರ ದೇಶಗಳ ಸಂವಿಧಾನದಿಂದ ಪ್ರಯೋಜನಪಡೆಯಲು ಪ್ರಯತ್ನಿಸಬೇಕಲ್ಲದೇ ಬರಿಯ ನಕಲು ಮಾಡುವುದಲ್ಲ ಎಂದು ನಾನು ಭಾವಿಸಿದ್ದೇನೆ. ಆಸ್ಟ್ರೇಲಿಯದ ಉದಾಹರಣೆ ತೋರಿಸಲಾಗಿದೆ, ಆದರೆ, ಅದರ ರಾಜಧಾನಿಯ ಜನಸಂಖ್ಯೆ ಕೇವಲ ೮೦೦೦ ಮತ್ತು ೧೯೪೪ರಲ್ಲಿ ಅದರ ಜನಸಂಖ್ಯೆಯು ಅಂದಾಜು ೧೨೦೦೦ ಇತ್ತು. ಅದರ ಜನಸಂಖ್ಯೆ, ದೆಹಲಿಯ ಸಮೀಪ ಇರುವ ನರೇಲಾ ಎಂಬ ಪಟ್ಟಣದಕ್ಕಿಂತ ಕಡಿಮೆ. ನೀವು ಆಸ್ಟ್ರೇಲಿಯದ ಉದಾಹರಣೆಯನ್ನು ಅನುಸರಿಸಬಯಸಿದರೆ ಎಲ್ಲ ವಿಧದಲ್ಲೂ ನರೇಲಾವನ್ನೇ ನಿಮ್ಮ ರಾಜಧಾನಿಯಾಗಿ ಮಾಡಿಕೊಳ್ಳಿ ಮತ್ತು ಅಲ್ಲಿ ನಿಮ್ಮ ಅಧಿಕಾರವನ್ನು ಚಲಾಯಿಸಿರಿ. ಇದಕ್ಕೆ ದೆಹಲಿಯ ಜನರ ಆಕ್ಷೇಪಣೆಯೇನೂ ಇಲ್ಲ. ಇನ್ನೊಂದು ಉದಾಹರಣೆ ವಾಷಿಂಗ್‌ಟನ್‌ದಾಗಿದೆ. ಈ ಉದಾಹರಣೆ ಕೆಲಮಟ್ಟಿಗೆ ಉತ್ತಮ ಎನಿಸಬಹುದು. ಆದರೆ ದೆಹಲಿ ಮತ್ತು ವಾಷಿಂಗ್‌ಟನ್ ಎರಡನ್ನೂ ಒಂದೇ ರೀತಿ ತೂಗಿ ನೋಡಲಾಗದು. ದೆಹಲಿ ಒಂದು ವಾಣಿಜ್ಯ ಮತ್ತು ಕೈಗಾರಿಕಾ ನಗರ. ಅದು ೨೦ ಲಕ್ಷದಷ್ಟು ಜನಸಂಖ್ಯೆ ನಗರ. ಅದೇ ವಾಷಿಂಗ್‌ಟನ್‌ನ ಜನಸಂಖ್ಯೆ ಸರಿಸುಮಾರು ೮ ಲಕ್ಷ. ವಾಷಿಂಗ್‌ಟನ್ನನ್ನು ರಾಜಧಾನಿಯ ಉದ್ದೇಶಕ್ಕಾಗಿ ಕಟ್ಟಲಾಗಿದೆ. ದೆಹಲಿ ಶತಶತಮಾನಗಳಿಂದ ಇರುವ ಅಂದರೆ ಸಾವಿರಾರು ವರ್ಷಗಳ ಹಳೆಯ ನಗರ. ಅದಕ್ಕೆ ಅದರದೇ ಆದ ಸಂಸ್ಕೃತಿ ಇದೆ. ಮತ್ತು ಅದರ ಜನಸಂಖ್ಯೆಗೆ ಅದರದೇ ಆದ ಕೋರಿಕೆಗಳು ಇವೆ.

ಅಮೆರಿಕ ಮತ್ತು ಆಸ್ಟ್ರೇಲಿಯದಲ್ಲಿ ಮಾಡಿಲ್ಲದಿರುವುದರಿಂದ ದೆಹಲಿಯಲ್ಲಿಯೂ ಹಾಗೆ ಏನೂ ಮಾಡಲಾಗುತ್ತಿಲ್ಲ ಎಂದು ಹೇಳುವ ಮೂಲಕ, ಇಡೀ ಪ್ರಶ್ನೆಯನ್ನೇ ಕೈಬಿಟ್ಟಿರುವುದು ದೆಹಲಿಯ ನಾಗರಿಕರಿಗೆ ಭಾರಿ ಅನ್ಯಾಯಮಾಡಿದಂತಾಗಿದೆ ಎಂದು ನನಗೆ ಎನಿಸುತ್ತದೆ. ಮಾಸ್ಕೋ ಒಂದು ಪ್ರತ್ಯೇಕ ಪ್ರಾಂತ್ಯವಾಗಿದೆ ಮತ್ತು ಅಲ್ಲಿ ತನ್ನದೇ ಆದ ಪ್ರಾಂತೀಯ ಆಡಳಿತ ಇದೆ ಎಂಬುದು ನಿಜಾಂಶನಲ್ಲವೇ ಎಂದು ನಾನು ಕೇಳಬಯಸುತ್ತೇನೆ. ಯು.ಎಸ್.ಎಸ್.ಆರ್.ನ ರಾಜಧಾನಿಯಾಗಿ ಮಾಸ್ಕೋದಲ್ಲಿ ಪ್ರತ್ಯೇಕ ಆಡಳಿತ ಇರಬಹುದಾದರೆ, ದೆಹಲಿಯಲ್ಲಿ ಏಕೆ ಅಂಥ ಪ್ರತ್ಯೇಕ ಆಡಳಿತ ಇರಬಾರದು? ದಕ್ಷಿಣ ಆಫ್ರಿಕಾದ ಒಕ್ಕೂಟದಲ್ಲಿ ನಾಲ್ಕು ಪ್ರತ್ಯೇಕ ಪ್ರಾಂತ್ಯಗಳಿರುವುದು ಸತ್ಯಾಂಶವಲ್ಲವೆ? ಅದು ಕೂಡಾ ರಾಜಧಾನಿ ನಗರ; ಒಂದು ಪ್ರಾಂತ್ಯದ ರಾಜಧಾನಿ ಕೂಡಾ ಎಂಬುದು ಸತ್ಯಾಂಶ ಅಲ್ಲವೆ? ಅಂದ ಮೇಲೆ ಹಾಗೆ ಭಾರತದಲ್ಲಿ ಏಕೆ ಮಾಡಲಾಗದು? ನಮ್ಮ ಮುಂದೆ ಕೇವಲ ಎರಡು ಉದಾಹರಣೆಗಳನ್ನು ತೋರಿಸಲಾಗಿದ್ದರೂ ಈ ಎರಡರ ಪೈಕಿ ಒಂದು ಸ್ಥಳದಲ್ಲಿಯ ಜನಸಂಖ್ಯೆ ೮೦೦೦; ಆಸ್ಟ್ರೇಲಿಯ ರಾಜಧಾನಿ ಮತ್ತು ದೆಹಲಿ ನಡುವೆ ಏನು ಹೋಲಿಕೆ ಇದ್ದೀತು? ಎಂದು ದೆಹಲಿಯ ಪ್ರಕರಣವನ್ನು ೮೦೦೦ ಜನಸಂಖ್ಯೆ ಇರುವ ಒಂದು ಪಟ್ಟಣದೊಂದಿಗೆ ಹೋಲಿಸಿ, ಒಂದೇ ನಿಮಿಷದಲ್ಲಿ ಅಂಥ ಪ್ರಶ್ನೆಯನ್ನು ವಜಾಮಾಡುವುದು ಅನ್ಯಾಯವಲ್ಲವೆ? ಎಂದು ಅತ್ಯಂತ ಗೌರವದಿಂದ ನಾನು ಇದನ್ನು ಕೇಳಬಯಸುತ್ತೇನೆ.

ಈ ಸಂವಿಧಾನ ರಚನಾಸಭೆಯು, ಜನರ ಪ್ರತಿನಿಧಿಯಾಗಿದ್ದು, ಜನರ ಧ್ವನಿಗೆ ಕಿವಿಗೊಡದಿದ್ದರೆ, ಅವರು ತಮ್ಮ ಧ್ವನಿಯನ್ನು ಸದಸ್ಯರು ಕೇಳಿಸಿಕೊಳ್ಳುವಂತೆ ಮಾಡಲು ಇನ್ನಾವುದೇ ಇತರ ವಿಧಾನ ಅನುಸರಿಸಬೇಕಾಗುತ್ತದೆ ಎಂದು ನಾನು ಅತ್ಯಂತ ವಿನಮ್ರತೆಯಿಂದ ಹೇಳಬಯಸುತ್ತೇನೆ. ೧೯೨೭ರಿಂದ ದೆಹಲಿಯ ಪ್ರತಿಯೊಂದು ಮೂಲೆ ಮೂಲೆಯಿಂದಲೂ ದೆಹಲಿಯಲ್ಲಿ ತನ್ನದೇ ಆದ ಪ್ರತ್ಯೇಕ ಆಡಳಿತ ಇರಬೇಕೆಂಬ ಕೂಗು ಹೆಚ್ಚುತ್ತಿದೆ. ಇಂದಿಗೂ ದೆಹಲಿಯ ಪ್ರಾಂತೀಯ ಕಾಂಗ್ರೆಸ್ ಸಮಿತಿಯು ಅದಕ್ಕಾಗಿ ಒಂದು ನಿರ್ಣಯವನ್ನು ಅಂಗೀಕರಿಸಿದೆ. ಒಂದು ಪ್ರಾಂತೀಯ ರಾಜಕೀಯ ಸಮ್ಮೇಳನದಿಂದ ಕೂಡಾ ಅಂಥದೇ ಒಂದು ನಿರ್ಣಯವನ್ನು ಅಂಗೀಕರಿಸಲಾಗಿದೆ. ಮುಖ್ಯ ಆಯುಕ್ತರ ಸಲಹಾಪರಿಷತ್ತು ಮತ್ತು

ದೆಹಲಿ ಮುನಿಸಿಪಲ್ ಸಮಿತಿ ಅಂಥವೇ ನಿರ್ಣಯಗಳನ್ನು ಅಳವಡಿಸಿವೆ ಅಂಥದೇ ನಿರ್ಣಯಗಳನ್ನು ನೂರಾರು ಸಭೆಗಳಲ್ಲಿ ಅಂಗೀಕರಿಸಲಾಗಿದೆ. ಆದರೆ, ನಮ್ಮ ಕರಡು ರಚನಾಸಮಿತಿ ಸದಸ್ಯರು ಸಂಪೂರ್ಣವಾಗಿ ಉಪೇಕ್ಷಿಸಿದ್ದಾರೆ. ಅವರು ಅವುಗಳನ್ನು ಗಮನಕ್ಕೆ ತೆಗೆದುಕೊಂಡಿಲ್ಲ. ಇದು ಒಂದು ಗುರುತರವಾದ ಅನ್ಯಾಯ ಎಂದು ನಾನು ಭಾವಿಸಿದ್ದೇನೆ. ಭಾರತದ ಹೃದಯಭಾಗವಾದ ದೆಹಲಿಯ ನಿವಾಸಿಗಳಿಗೆ, ಅವರದೇ ಆಡಳಿತದಲ್ಲಿ ಅವರ ಪಾಲು ಇರಬೇಕು ಎಂಬುದನ್ನು ನಿರಾಕರಿಸುವುದಕ್ಕಿಂತ ದೊಡ್ಡ ಅನ್ಯಾಯ ಮತ್ತೊಂದು ಇರಲಾರದು. ಯಾರೋ ದೆಹಲಿಯವರು ರಾಜ್ಯಪಾಲರ ಸ್ಥಾನಕ್ಕೆ ಮತ್ತು ಸಚಿವಸ್ಥಾನಕ್ಕೆ ಹಾತೊರೆಯುತ್ತಿರುವುದರಿಂದ, ಈ ಬೇಡಿಕೆಯನ್ನು ಮುಂದಿಡಲಾಗಿದೆ ಎಂದು ಹೇಳಲಾಗಿದೆ. ನನ್ನ ಅಲ್ಪಸಂಖ್ಯಾತರ ಹಕ್ಕುಗಳ ಪ್ರಮುಖ ಪ್ರತಿಪಾದಕರಾಗಿರುವ ಡಾ. ಅಂಬೇಡ್ಕರ್ ಸೂಕ್ಷ್ಮ ದೃಷ್ಟಿಯಿಂದ ಅಲ್ಪಸಂಖ್ಯಾತರಿಗೆ ಸಂಬಂಧಿಸಿದ ಯಾವುದೇ ಅತ್ಯಂತ ಸೂಕ್ಷ್ಮ ಅಂಶವನ್ನೂ ಗುರುತಿಸುತ್ತಿದ್ದ ಅವರ ಸೂಕ್ಷ್ಮ ದೃಷ್ಟಿಯಿಂದ ಸಣ್ಣ ಪ್ರಾಂತ್ಯದ ಬೇಡಿಕೆ ಹೇಗೆ ಗಮನದಿಂದ ತಪ್ಪಿಸಿಕೊಂಡಿತು? ಎಂದು ನಾನು ನನ್ನ ಈ ಗಣ್ಯ ಸ್ನೇಹಿತರನ್ನು ಕೇಳಬೇಕಾಗಿದೆ. ಅವರು ದೆಹಲಿಯನ್ನು ಕಡೇ ಪಕ್ಷ ಒಂದು ಅಲ್ಪಸಂಖ್ಯಾತ ಪ್ರಾಂತ್ಯವೆಂದು ತಿಳಿದಾದರೂ ತುಸು ಗಮನ ಹರಿಸಬೇಕಿತ್ತು. ಇಂದಿಗೂ ಧಾರ್ಮಿಕ ಅಲ್ಪಸಂಖ್ಯಾತರಿಗೆ ಸಂಬಂಧಿಸಿದಂತೆ ಅವರ ಸಂಖ್ಯೆ ಅಲ್ಲಿ ಕೇವಲ ೩೦ರಿಂದ ೩೫ ಲಕ್ಷಗಳಷ್ಟು ಮಾತ್ರವಿರುವುದರಿಂದ ಪ್ರಶ್ನೆಯನ್ನು ಸಂವಿಧಾನ ರಚನಾಸಭೆಯ ಮುಂದೆ ತರಲಾಗುತ್ತದೆ. ಆಗ ಅದು ನಮ್ಮೆಲ್ಲ ನಾಯಕರ ಗಮನ ಸೆಳೆಯುತ್ತದೆ ಮತ್ತು ಅವರು ಪರಿಹಾರ ಕಂಡುಕೊಳ್ಳಲು ಏನಾದರೂ ಮಾರ್ಗ ಹುಡುಕುವರು. ಆದರೆ, ಇಂದು ಯಾರೂ ದೆಹಲಿ ಪ್ರಾಂತ್ಯಕ್ಕೆ ಯಾವುದೇ ರೀತಿ ಲಕ್ಷ್ಯ ಕೊಡುತ್ತಿಲ್ಲ. ಇಪ್ಪತ್ತು ಲಕ್ಷ ಜನರ ಕೋರಿಕೆಯನ್ನು ಉಪೇಕ್ಷಿಸುವುದು ಮತ್ತು ಇಪ್ಪತ್ತು ಲಕ್ಷ ಜನರ ಬೇಡಿಕೆಯನ್ನು ನಿಕೃಷ್ಟವಾಗಿ ಕಾಣುವುದು ಅನ್ಯಾಯವಲ್ಲವೇ? ಇಂದು ಸುಮಾರು ಆರು ಲಕ್ಷ ನಮ್ಮ ಸೋದರರು ದೆಹಲಿಗೆ ತಮ್ಮೆಲ್ಲವನ್ನು ಕಳೆದುಕೊಂಡು ಪಶ್ಚಿಮಪಂಜಾಬಿನಿಂದ ಬಂದಿದ್ದಾರೆ. ದೆಹಲಿ ಅವರಿಗೆ ಆಶ್ರಯ ನೀಡಿ, ಅದೇ ಅವರಿಗೆ ಅವರ ಸ್ವಂತ ಸ್ಥಳ ಎಂಬಂತೆ ಮಾಡಿದೆ. ಸಂವಿಧಾನ ರಚನಾಸಭೆಯು ಈ ಆರು ಲಕ್ಷ ಜನರಿಗೆ ಮತದಾನದ ಹಕ್ಕನ್ನು ನಿರಾಕರಿಸಿ ದಂಡನೆಯನ್ನು ಇಮ್ಮಡಿಗೊಳಿಸಬೇಕೆಂದು ಬಯಸುವುದೇ? ಅದು ಒಂದು ದೊಡ್ಡ ಅನ್ಯಾಯ. ನಾವು ದೆಹಲಿಯು ರಾಜಧಾನಿಯಾಗಿದ್ದು ಹೆಚ್ಚು ರಕ್ಷಣೆಯ ಅಗತ್ಯವಿದೆ ಎಂದು ಭಾವಿಸಿದರೆ, ಆಗ ನೀವು ನಿಶ್ಚಿತವಾಗಿ ಅದನ್ನು ಕೊಡುತ್ತೀರಿ. ದೆಹಲಿವಾಲಾಗಳು ಆ ಸೇವೆಪಡೆಯಲು ತಯಾರಿದ್ದಾರೆ. ನಾವು ನಿಮ್ಮ ಮುಂದೆ ಇಟ್ಟಿರುವ ಶಿಫಾರಸಿನಲ್ಲಿ ನಾವು ನಾವಾಗಿಯೇ ವ್ಯಾಪಕ ಅಧಿಕಾರಗಳನ್ನು ಅಂಗೀಕರಿಸಿದ್ದೇವೆ. ದೆಹಲಿಗೆ ಒಂದು ಸಣ್ಣ ವಿಧಾನಪರಿಷತ್ತು ಮತ್ತು ಕೆಲವು ಸಚಿವರುಗಳನ್ನು ಕೊಡುವುದರಿಂದ ನೀವು ಏನು ಕಳೆದುಕೊಳ್ಳುವಿರಿ? ಯಾವಾಗ ನೀವು ಇಚ್ಛಿಸಿದರೂ ಆಗ ಇಡೀ ವಿಷಯವನ್ನು ಕೈಬಿಡಲು ನಿಮಗೆ ಪೂರ್ಣ ಸ್ವಾತಂತ್ರ್ಯವಿದೆ. ವಿಶೇಷ ಸಮಿತಿಯೇ ಎಲ್ಲ ಈ ಅಧಿಕಾರಗಳನ್ನು ರಾಷ್ಟ್ರಪತಿಗಳಿಗೆ ಕೊಟ್ಟಿದೆ. ಇಲ್ಲಿಯೂ ಕೂಡಾ ಸರಿಯಾದ ದಿಕ್ಕಿನಲ್ಲಿ ಕೈಗೊಂಡ ಕ್ರಮವಾಗುವ ಈ ಒಂದು ಪ್ರಯೋಗಾತ್ಮಕ ಕ್ರಮದ ಬದಲು ನಮಗೆ ಇಂಥ ಪ್ರಯೋಗಾತ್ಮಕ ಕ್ರಮದ ಆವಶ್ಯಕತೆ ಇಲ್ಲವೆಂದು ಮತ್ತು ರಾಷ್ಟ್ರಪತಿಗಳು ಸೂಕ್ತ ಎಂದು ಎನಿಸಿದರೆ ಹಾಗೂ ಆಗ ಅವರು ಯಾವುದೇ ಕ್ರಮ ತೆಗೆದುಕೊಳ್ಳಲು ಅಧಿಕಾರ ನೀಡಲಾಗಿದೆ ಎಂದು ಹೇಳಲಾಗಿದೆ. ಎಲ್ಲಕ್ಕೂ ಮಿಗಿಲಾಗಿ, ಈ ಸಮಸ್ಯೆಗೆ ಇದೊಂದೇ ವ್ಯಾಪಕ ಪರಿಹಾರವೆಂದು ಮಾಡಲಾಗಿದೆ. ಮಾನ್ಯ ಉಪಸಭಾಧ್ಯಕ್ಷರೆ, ನಿಮ್ಮ ಮೂಲಕ ಈ ಪ್ರಶ್ನೆಯನ್ನು ಕುರಿತಂತೆ ಶಾಂತವಾಗಿ ವಿಚಾರಮಾಡುವಂತೆ ಈ ಸದನದ ಗೌರವಾನ್ವಿತ ಸದಸ್ಯರನ್ನು ನಾನು ಕೇಳಿಕೊಳ್ಳುತ್ತೇನೆ ಹಾಗೂ ದೆಹಲಿಯ ಜನರ ಭಾವನೆಗಳು ತುಂಬ ಬಲವಾಗಿವೆ ಮತ್ತು ಅವರ ಬೇಡಿಕೆಗಳು ಹಾಗೂ ಅವರ ಕುಂದುಕೊರತೆಗಳು ನ್ಯಾಯೋಚಿತವಾಗಿವೆ ಎಂಬುದನ್ನು ಗ್ರಹಿಸಬೇಕೆಂದು ಪ್ರಾರ್ಥಿಸುತ್ತೇನೆ.

ಇದನ್ನೇ ಅಜ್ಮೀರ್–ಮೇರ್ವಾರ ಹಾಗೂ ಕೊಡಗಿನ ಸಂದರ್ಭದಲ್ಲಿಯೂ ಹೇಳಬಹುದು. ಆದರೆ,

ಅವರು ತಮ್ಮ ನೆರೆಯ ರಾಜ್ಯಗಳೊಂದಿಗೆ ಸ್ವಯಂ ವಿಲೀನಗೊಳ್ಳುವ ಹೆಚ್ಚಿನ ಸಾಧ್ಯತೆ ಇರುವುದರಿಂದ ಒಂದು ಸ್ವಾಯತ್ತ ಪ್ರಾಂತ್ಯವು ಏನೆಲ್ಲ ಹಕ್ಕುಗಳನ್ನು ಅನುಭವಿಸಬಹುದೋ ಅವುಗಳನ್ನು ಪಡೆದುಕೊಳ್ಳಬಹುದು, ಆದರೆ ದೆಹಲಿಗೆ ಸಂಬಂಧಿಸಿದಂತೆ ಹೇಳುವುದಾದರೆ ಅದು ಅದರ ಸ್ಥಾನಮಾನದಲ್ಲಿ ಏನೊಂದು ಬದಲಾವಣೆ ಬೇಕಾಗಿಲ್ಲ ಎನ್ನಲಾಗಿದೆ. ಹಿಂದೆ ದೆಹಲಿಯ ಜನಸಂಖ್ಯೆ ಸುಮಾರು ಆರು ಲಕ್ಷವಿತ್ತು. ಅದರ ಪ್ರಸಕ್ತ ಜನಸಂಖ್ಯೆ ಸರಿಸುಮಾರು ಇಪ್ಪತ್ತು ಲಕ್ಷ ಮತ್ತು ಮುಂದಿನ ಒಂದು ದಶಕದಲ್ಲಿ ಅದರ ಜನಸಂಖ್ಯೆ ಇನ್ನೂ ಹತ್ತು ಅಥವಾ ಹದಿನೈದು ಲಕ್ಷಗಳಷ್ಟು ಹೆಚ್ಚುತ್ತದೆ ಎಂಬ ಅಂದಾಜಿದೆ. ಭಾರತದಲ್ಲಿ ಅದು ನಾಲ್ಕನೆಯ ಅತ್ಯಂತ ದೊಡ್ಡ ಪಟ್ಟಣ ಮತ್ತು ಅದರ ಜನರಿಗೆ ಆಡಳಿತದಲ್ಲಿ ಯಾವ ಧ್ವನಿಯೂ ಇಲ್ಲವಾಗಿದೆ. ಅದರ ಇಂದಿನ ಪರಿಸ್ಥಿತಿ ಏನು? ದೆಹಲಿಯ ಆಡಳಿತ ವರದಿ ನಮ್ಮ ಮುಂದೆ ಬಂದಿಲ್ಲ. ಮುಖ್ಯ ಆಯುಕ್ತರ ಸಲಹಾ ಪರಿಷತ್ತಿಗೆ ಒದಗಿಸಲಾಗಿದೆ ಎಂದು ನಮಗೆ ಹೇಳಲಾಗಿದೆ ಮತ್ತು ಈ ಬಗ್ಗೆ ನಾವು ಅದನ್ನು ಸಂಪರ್ಕಿಸಬೇಕೆನ್ನಲಾಗಿದೆ. ಆದುದರಿಂದ, ಆ ಬಗ್ಗೆ ಕೂಡ ಸ್ವಲ್ಪ ಕೇಳಿ. ಅದನ್ನು ರಚಿಸಿ ಒಂದು ವರ್ಷಕ್ಕೂ ಮೇಲಾಗಿದೆ. ಆದರೆ, ಒಟ್ಟಾರೆ ಈ ಅವಧಿಯಲ್ಲಿ ಒಮ್ಮೆಯಾದರೂ, ದೈನಂದಿನ ಆಡಳಿತ ಯಾವುದೇ ವಿಷಯ ಕುರಿತು, ತಮ್ಮ ಸಲಹಾಪರಿಷತ್ತಿನ ಸದಸ್ಯರೊಡನೆ ಸಮಾಲೋಚಿಸುವ ಆವಶ್ಯಕತೆ ಬಂದಿಲ್ಲ ಎಂದು ಮುಖ್ಯ ಆಯುಕ್ತರು ಆಲೋಚಿಸಿರುವರೆ? ದೆಹಲಿಯಲ್ಲಿ, ದಂಗೆಗಳೆದ್ದಾಗ ಶ್ರೀ ಭಾಭಾ ಅವರ ಅಧ್ಯಕ್ಷತೆಯಲ್ಲಿ ಕೇಂದ್ರ ಸಚಿವಸಂಪುಟವು ಒಂದು ತುರ್ತುಸಮಿತಿಯನ್ನು ರಚಿಸಿತ್ತು. ಆದರೆ ಅದರಲ್ಲಿ ದೆಹಲಿಯ ಸಲಹಾಪರಿಷತ್ತಿನ ಪಾತ್ರವಿರಲಿಲ್ಲ. ಒಂದು ವೇಳೆ ಇಂದು ದೆಹಲಿಯಲ್ಲಿ ಯಾವುದೇ ರೀತಿಯ ದುರದೃಷ್ಟಕರ ಅಥವಾ ವಿಧ್ವಂಸಕ ಕೃತ್ಯ ನಡೆದರೆ ಅಥವಾ ದೆಹಲಿಯ ಜನರಿಂದ ತೊಂದರೆ ಉಂಟಾದಲ್ಲಿ ಆಗ ಅದು ನಮ್ಮ ಮೇಲೆ ಪರಿಣಾಮ ಬೀರುವುದಿಲ್ಲವೇ? ಆದುದರಿಂದ, ದೆಹಲಿ ಜನರಿಗೆ ಆಡಳಿತದಲ್ಲಿ ಯಾವುದೇ ಧ್ವನಿ ಕೊಡಬಾರದೇಕೆ? ದೆಹಲಿ ಸುತ್ತ ಹೊಸ ಟೌನ್‌ಷಿಪ್‌ಗಳನ್ನು ನಿರ್ಮಿಸಲಾಗುತ್ತಿದೆ; ಹೊಸ ಯೋಜನೆಗಳನ್ನು ಆಯೋಜಿಸಲಾಗುತ್ತಿದೆ; ಆದರೆ, ಯಾರೂ ದೆಹಲಿ ಜನರೊಡನೆ ಸಮಾಲೋಚಿಸುತ್ತಿಲ್ಲ. ಅವರಿಗೆ ಯಾವ ಸ್ಥಾನವೂ ಇಲ್ಲ. ಸಾಮಾನ್ಯ ವಿಷಯಗಳಿಗಾಗಿ, ಅವರು ಪ್ರಧಾನಮಂತ್ರಿಗಳ ಅಥವಾ ಇತರ ಸಚಿವರುಗಳ ಬಳಿಗೆ ಹೋಗಬೇಕಾಗಿದೆ. ಬಾಂಬೆ ಜನ ಸ್ವಯಂ ಆಡಳಿತ ಸರ್ಕಾರ ನಡೆಸಲು ಸಮರ್ಥರಾಗಿದ್ದಾರೆ, ಕೋಲ್ಕತ್ತ ಜನರೂ ಅಂಥ ಸರ್ಕಾರ ನಡೆಸಲು ಸಮರ್ಥರಿರುವಾಗ, ಉತ್ತರಪ್ರದೇಶ ಐದು ಕೋಟಿಗಳ ಜನಸಂಖ್ಯೆ ಇರುವ ರಾಜ್ಯವು, ತನ್ನ ಸರ್ಕಾರ ನಡೆಸುತ್ತಿರುವಾಗ, ಅದೇ ಹಕ್ಕನ್ನು ದೆಹಲಿ ಜನರಿಗೂ ಕೊಡುವುದರಿಂದ ಅವರೂ ದೆಹಲಿ ಪ್ರಾಂತ್ಯದ ಆಡಳಿತ ನಡೆಸಬಹುದು. ದೆಹಲಿಯ ಜನರು ಇಂಥ ಪ್ರಯೋಗದಲ್ಲಿ ಹಿಂದೆ ಬಿದ್ದಿಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ಅವರ ಪಾಲು ಇತರರಿಗಿಂತ ಏನು ಕಡಿಮೆ ಇರಲಿಲ್ಲ. ಹೀಗಿದ್ದರೂ, ದೆಹಲಿ ಹಾಗೂ ಅಜ್ಮೀರ–ಮೇರ್ವಾರಗಳ ಮುಖ್ಯ ಆಯುಕ್ತರ ಪ್ರಾಂತ್ಯಗಳಿಗೆ ಯಾವ ಹಕ್ಕುಗಳನ್ನೂ ಕೊಡಲಾಗುವುದಿಲ್ಲ ಎಂದು ಹೇಳಲಾಗಿದೆ. ಈ ಪ್ರಶ್ನೆಯನ್ನು ಸುಲಭವಾಗಿ ಇತ್ಯರ್ಥಗೊಳಿಸಲಾಗುವುದಿಲ್ಲ ಎಂದು ನಾನು ಒತ್ತಿ ಹೇಳಲು ಇಚ್ಛಿಸುತ್ತೇನೆ.

ಮಾನ್ಯರೆ, ನಾನು ದೆಹಲಿಯ ಪರವಾಗಿ ಒಬ್ಬನೇ ಸದಸ್ಯನಾಗಿರುವುದರಿಂದ, ನನ್ನ ಧ್ವನಿ ದುರ್ಬಲವಾಗಿದೆ. ದೆಹಲಿಯ ಜನರ ಆಕಾಂಕ್ಷೆಗಳನ್ನು ಈ ಸದನಕ್ಕೆ ತಿಳಿಯಪಡಿಸುವಲ್ಲಿ ನನಗೆ ಅವಕಾಶ ಕಡಿಮೆ. ಇಂದು, ಭಾರಿ ಕಷ್ಟದಿಂದ ಈ ಸದನದ ಮುಂದೆ ಅವರ ವಾದವನ್ನು ಇಡುವ ಈ ಅವಕಾಶ ದೊರಕಿದೆ. ಅರಣ್ಯರೋದನವನ್ನು ಕೇಳುವರಾರು? ತಮ್ಮ ಮುಂದೆ ನಾನು ಇರಿಸಬಹುದಾದ ಅತ್ಯಂತ ಮುಖ್ಯವಾದ ವಾದವೆಂದರೆ, ಏನೆಲ್ಲ ರಕ್ಷಣಾ ಕ್ರಮಗಳಿವೆಯೋ ಅವುಗಳನ್ನು ಸೂಕ್ತವಾಗಿ ಆಲೋಚಿಸಿ ಕೈಗೊಳ್ಳಬಹುದು. ಅದಕ್ಕೆ ನಮ್ಮ ಆಕ್ಷೇಪಣೆ ಏನೂ ಇಲ್ಲ. ಆದರೆ, ಸ್ಥಳೀಯ ಆಡಳಿತವನ್ನು ದೆಹಲಿಯ ಜನರಿಗೆ ವಹಿಸಬೇಕು. ದೆಹಲಿಯ ಸ್ಥಾನಮಾನ ಇತರ ಪ್ರಾಂತ್ಯಗಳಂತೆಯೇ ಇರಬೇಕು. ಅವರಿಗೆ ಈ ಹಕ್ಕು ನೀಡಲು ನೀವು

ಒಪ್ಪಿಕೊಳ್ಳದಿದ್ದರೆ ಅದು ಗುರುತರವಾದ ಅನ್ಯಾಯವಾಗುತ್ತದೆ. ಪರಿಣಾಮಗಳು ಉತ್ತಮವಾಗಿರುವುದಿಲ್ಲ.]*

**ಶ್ರೀ ಗೋಕುಲ್‌ಭಾಯ್ ದೌಲತ್‌ರಾಮ್ ಭಟ್** (ಬಾಂಬೆ ರಾಜ್ಯಗಳು) : *[ಮಾನ್ಯ ಉಪಸಭಾಧ್ಯಕ್ಷರೆ, ಪ್ರಸ್ತಾವದ ಬಗ್ಗೆ ಮಾತನಾಡಲು ಅಲ್ಪಸಂಖ್ಯಾತರಿಗೆ ಇಂದು ಅವಕಾಶ ಕೊಡಲಾಗಿದೆ. ಆದಾಗ್ಯೂ ನಾನು ದೇಶೀಯ ಸಂಸ್ಥಾನಗಳಿಂದ ಬಂದವನು. ಈ ಸಂಸ್ಥಾನಗಳು ಕ್ರಮೇಣ ರಾಜಕೀಯವಾಗಿ ಪ್ರೌಢತೆಯನ್ನು ಪಡೆಯುವ ದಿಸೆಯಲ್ಲಿ ಮುನ್ನಡೆಯುತ್ತಿವೆಯಾದರೂ, ಅವು ಇನ್ನೂ ರಾಜಕೀಯವಾಗಿ ಅಪ್ರಬುದ್ಧವಾಗಿವೆ. ನಾವು, ಅಂದರೆ ರಾಜಕೀಯವಾಗಿ ಪೂರ್ಣತೆಯನ್ನು ತಲುಪಿರುವವರು, ಅದನ್ನು ಪಡೆಯಲಾಗಿದೆ ಎಂದು ಈ ಹಕ್ಕನ್ನು ನಮಗೆ ನಿರಾಕರಿಸುವವರನ್ನು ಲೆಕ್ಕಿಸದೆ ಗುರುತಿಸಬೇಕೆಂದು ವಿಶೇಷವಾಗಿ ಕೇಳಲು ನಾನು ಇಲ್ಲಿ ಇದ್ದೇನೆ. ಸತ್ಯಾಂಶ ಎಂದರೆ, ನಮ್ಮ ಸಂಸ್ಥಾನಗಳು ಮತ್ತು ರಾಜ್ಯಗಳ ಒಕ್ಕೂಟವು ಸ್ವರೂಪದಲ್ಲಿ ಇತರ ಪ್ರಾಂತ್ಯಗಳಂತೆಯೇ ಇವೆ. ಇದೇ ಆಧಾರದ ಮೇಲೆ ನನಗೆ ಈ ಅವಕಾಶ ಕೊಡಲಾಗಿದೆ ಎಂದು ನಂಬುತ್ತೇನೆ ಮತ್ತು ನಾನು ಈ ಇದೇ ಉದ್ದೇಶಕ್ಕಾಗಿಯೇ ಒಪ್ಪಿದ್ದು ಎಂದು ಮಾತ್ರ ಹೇಳುತ್ತೇನೆ. ಮಾನ್ಯರೆ, ನನಗೆ ಈ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸುತ್ತೇನೆ. ಸಂವಿಧಾನದ ಕರಡು ಪ್ರತಿ ನನಗೆ ತಲಪಿದಾಗಿನಿಂದ ನಾನು ಜಾಗರೂಕತೆಯಿಂದ ಅದನ್ನು ಪರಿಶೀಲಿಸುತ್ತಿದ್ದೇನೆ. ಆದುದರಿಂದ ನಾನು ಕೆಲವು ದಿವಸಗಳ ಹಿಂದೆಯಷ್ಟೇ ಅದರ ಪರಿಶೀಲನೆ ಆರಂಭಿಸಿದ್ದೇನೆ ಎಂದು ಹೇಳುತ್ತಿಲ್ಲ ಆದರೆ, ಅದನ್ನು ನಾನು ಪರೀಕ್ಷಿಸಲು ಆರಂಭಿಸಿದ ದಿನದಿಂದ ಅದರಲ್ಲಿ ಸೂಕ್ತವಾದುದು ಮತ್ತು ಸರಿಯಾದುದು ಎಂದು ಹೇಳಬಹುದಾದುದು ಯಾವುದೂ ಇಲ್ಲ ಎಂದು ನಾನು ಭಾವಿಸಿದ್ದೇನೆ. ಒಂದು ಲಿಖಿತ ಸಂವಿಧಾನದಲ್ಲಿ, ಇತರ ದೇಶಗಳ ಸಂವಿಧಾನಗಳಲ್ಲಿರುವ ತುಂಬ ಉತ್ತಮವಾದ ಮತ್ತು ಉಪಯುಕ್ತವಾದ ಅಂಶಗಳೆಂದು ಸ್ಪಷ್ಟವಾದ ಉಪಬಂಧಗಳನ್ನು ಎರವಲು ಪಡೆಯುವುದು ಸೂಕ್ತ ಎಂಬುದನ್ನು ನಾನು ಒಪ್ಪುತ್ತೇನೆ. ಆದರೆ, ಕರಡು ರಚನಾಸಮಿತಿಯ ಅಧ್ಯಕ್ಷರು, ನಾವು ಸಮ್ಮತಿಸುತ್ತಿರುವ ಸಂವಿಧಾನವು, ವಿಶ್ವದಲ್ಲೇ ಅತ್ಯುತ್ತಮವಾದುದು ಎಂದು ಅಧಿಕೃತವಾಗಿ ಮತ್ತು ಧೈರ್ಯದಿಂದ ನೀಡಿದ ಹೇಳಿಕೆಯನ್ನು ತುಸು ಸಂಕೋಚದಿಂದ ತೆಗೆದುಕೊಳ್ಳಬೇಕು. ಅವರು ಈ ಕರಡನ್ನು ಸಿದ್ಧಪಡಿಸಿದವರಲ್ಲಿ ಒಬ್ಬರಾಗಿರುವುದರಿಂದ ಹಾಗೆ ಹೇಳಿದ್ದಾರೆ ಮತ್ತು ಅವರು ಇದಕ್ಕಾಗಿ ತೆಗೆದುಕೊಂಡಿರುವ ಶ್ರಮ ಹಾಗೂ ಅನೇಕ ದೇಶಗಳ ಸಂವಿಧಾನಗಳಿಂದ ಸೂಕ್ತ ಭಾಗಗಳನ್ನು ಎರವಲು ಪಡೆಯಲು ಅವರು ಪಟ್ಟಿರುವ ಶ್ರಮಕ್ಕಾಗಿ ಅವರು ನಮ್ಮ ಕೃತಜ್ಞತೆಗಳಿಗೆ ಪಾತ್ರರಾಗಿದ್ದಾರೆ ಎಂಬುದನ್ನು ನಾನು ಒಪ್ಪುತ್ತೇನೆ. ಹಾಗೆಂದ ಮಾತ್ರಕ್ಕೆ ಈ ಭಾಗಗಳು ಹೋಲಿಸಲಾಗದವುಗಳು ಎಂದಲ್ಲ ಅಥವಾ ನಾನು ಅಲ್ಲಿ ಇಲ್ಲಿ ಸಂಗ್ರಹಿಸಿದ ಸಾಮರಸ್ಯವಿಲ್ಲದ ಭಾಗಗಳ ಗಮನಾರ್ಹ ಚೌಕಟ್ಟಿನಲ್ಲಿ ಸೇರಿಸಲಾಗಿದೆ ಎಂದು ಹೇಳುವಂಥವು ಅಲ್ಲ. ನಾನು ಅಂತಹ ಅಭಿಪ್ರಾಯ ನೀಡಲು ಇಷ್ಟಪಡುವುದಿಲ್ಲ, ಏಕೆಂದರೆ, ಅದರ ಹಲವು ಭಾಗಗಳಲ್ಲಿ ಇರುವ ತಾರತಮ್ಯವು ಎಷ್ಟರ ಮಟ್ಟಿಗೆ ಅಂತಹ ಒಂದು ಹೇಳಿಕೆಯನ್ನು ಪುಷ್ಟೀಕರಿಸುತ್ತದೆ ಎಂದು ಹೇಳಲಾಗದು. ಆದರೆ, ದೆಹಲಿನಗರದ ಕಟ್ಟಡಗಳಲ್ಲಿ, ನಾವು ಇಂದು ಎಲ್ಲಿ ಭೇಟಿ ಮಾಡುತ್ತಿದ್ದೇವೆಯೋ ಮತ್ತು ಅದರ ಬಗೆಗೆ ಶ್ರೀ ದೇಶಬಂಧುಜಿಯವರು ಈಗ ತಾನೆ ಹೇಳುತ್ತಿದ್ದರೋ ಮತ್ತು ಆ ಯಾವುದನ್ನು ನಾನು ಒಪ್ಪುತ್ತೇನೋ ಅಲ್ಲಿರುವ ದೆಹಲಿಯ ಕಟ್ಟಡಗಳಲ್ಲಿ ಅವುಗಳದೇ ಆದ ಪ್ರತ್ಯೇಕ ಸ್ಥಾನಮಾನ ಕೊಡಬೇಕು ಎಂಬುದನ್ನು ನಾನು ಒಪ್ಪುತ್ತೇನೆ; ಉದಾಹರಣೆಗೆ: ಗವರ್ನರ್ ಜನರಲ್‌ರ ನಿವಾಸದಂತಹ ಒಂದು ಕಟ್ಟಡದಲ್ಲಿ ಆಧುನಿಕ ವಾಸ್ತುಶಿಲ್ಪದ ಅಂಶಗಳಿರುವಂತೆ, ಪ್ರಾಚೀನ ಅಂಶಗಳನ್ನೂ ಅಲ್ಲಿ ಕಾಣಬಹುದು. ಅದೇ ರೀತಿ ಇತರ ದೇಶಗಳ ಸಂವಿಧಾನಗಳ ಉತ್ತಮ ಉಪಬಂಧಗಳನ್ನು ನಮ್ಮ ಸಂವಿಧಾನದಲ್ಲಿ ಸೇರಿಸಲಾಗಿದೆ ಎಂಬುದನ್ನು ನಾನು ಒಪ್ಪುತ್ತೇನೆ. ಆದರೆ ನನಗೆ ಇಂದು ನೋವಾಗಿದೆ. ಹಿಂದೆಯೇ ನಾನು ಹೇಳಿರುವಂತೆ, ಇತರ ದೇಶಗಳಿಂದ ಎರವಲು ಪಡೆಯುವ ಆತುರದಲ್ಲಿ ನಾವು ಒಟ್ಟಾರೆ ನಮ್ಮ ದೇಶದ ಪ್ರಾಚೀನ ತತ್ತ್ವಗಳನ್ನು ಹಾಗೂ ಸಿದ್ಧಾಂತಗಳನ್ನು ಉಪೇಕ್ಷಿಸಿದ್ದೇವೆ. ಅವು ಇಂದಿಗೂ ನಮ್ಮ ರಕ್ತದಲ್ಲಿ ಇವೆ ಮತ್ತು ಅವನ್ನು ನಾವು ರಕ್ತಗತವಾಗಿಸಿಕೊಂಡಿದ್ದೇವೆ. ಇದೊಂದು ಕರಡು ಸಂವಿಧಾನದ; ಆದರೆ ಅದರ ಮಾರ್ಗದರ್ಶಿ ಸಿದ್ಧಾಂತಗಳು ಅಥವಾ ಅದರ ಶರೀರವಾಗಲಿ

ಭಾರತದ ಹೃದಯದಿಂದ ಸ್ಫೂರ್ತಿ ಪಡೆದಿಲ್ಲ. ನಿಜಾಂಶವೆಂದರೆ, ಅದು ಸ್ವಂತದ್ದೆಂಬ ಭಾವನೆಯನ್ನು ಕೊಡುವುದಿಲ್ಲ. ಈ ಕರಡು ಸುಂದರವಾಗಿ ಅಲಂಕರಣಗೊಂಡಿದೆ ಮತ್ತು ಪುಷ್ಪಗಳಿಂದ ಹಾಗೂ ಇತರ ಆಕರ್ಷಣೀಯ ವಸ್ತುಗಳಿಂದ ನಿಸ್ಸಂಶಯವಾಗಿ ಅಲಂಕೃತವಾಗಿದೆ. ಆದರೆ, ಯಾವ ಸುವಾಸನೆಯನ್ನು ಅಂತಹ ಒಂದು ಸಂವಿಧಾನ ಕೊಡಬೇಕೋ ಆ ಸುವಾಸನೆ ಅದರಲ್ಲಿ ಇಲ್ಲ. ಸಮಿತಿಯ ಶ್ರಮ, ಶಕ್ತಿ ಮತ್ತು ಸಮಯವು ವ್ಯರ್ಥ ಎಂದು ನಾನು ಹೇಳುತ್ತಿಲ್ಲ, ಆದರೆ, ಈ ಸ್ವರೂಪದ ಸಂವಿಧಾನವನ್ನು ರೂಪಿಸಲು ಇಷ್ಟೊಂದು ತಿಂಗಳ ಕಾಲವನ್ನು ಏಕೆ ಕಳೆಯಲಾಯಿತು ಎಂದು ನಾನು ಆಶ್ಚರ್ಯಪಟ್ಟರೆ, ಕ್ಷಮಿಸಬೇಕೆಂದು ಕೋರುತ್ತೇನೆ. ಅದರಲ್ಲಿ ಉತ್ತಮ ಅಂಶಗಳು ಕೆಲವು ಇವೆ ಎಂಬುದನ್ನು ನಾನು ನಿರಾಕರಿಸುವುದಿಲ್ಲ ಮತ್ತು ನಾನು ಅದಕ್ಕೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ, ಅದನ್ನು ಇಡಿಯಾಗಿ ಪರಿಗಣಿಸಿದಲ್ಲಿ ಮತ್ತು ಸ್ವರೂಪದಲ್ಲಿ ಅದು ಭಾರತೀಯ ಸಂವಿಧಾನವೇ ಎಂಬ ಅನುಮಾನದಿಂದ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ.

ಈ ಸಂವಿಧಾನದಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆಗೆ ಅಂದರೆ ಭಾರತದಲ್ಲಿ ಗ್ರಾಮಪಂಚಾಯಿತಿ ವ್ಯವಸ್ಥೆ ಸ್ಥಾಪಿಸಲು ಅವಕಾಶಮಾಡಿಲ್ಲ ಎಂಬುದನ್ನು ಡಾ. ಅಂಬೇಡ್ಕರ್ ಅವರು ಧೈರ್ಯದಿಂದ ಒಪ್ಪಿಕೊಂಡಿರುವಂತೆ ಕರಡು ರಚನಾಸಮಿತಿ ಸದಸ್ಯರು ಅಂಗೀಕರಿಸಿರುವರು, ಅಂತಹ ಒಂದು ಉಪಬಂಧ ಇಲ್ಲದ ಮೇಲೆ ಅದು ಎಂದಿಗೂ ಭಾರತದ ಸಂವಿಧಾನವಾಗುವುದಿಲ್ಲ. ಗ್ರಾಮಪಂಚಾಯಿತಿಗಳ ವ್ಯವಸ್ಥೆಯನ್ನು ಅಂದರೆ, ಯಾವುದು ನಮ್ಮನ್ನು ಮೇಲೆತ್ತಿದೆಯೋ ಮತ್ತು ಇಲ್ಲಿಯವರೆಗೂ ನಮ್ಮನ್ನು ಸುಸ್ಥಿರಗೊಳಿಸಿದೆಯೋ ಅದನ್ನು ಮರೆಯಲು ಅಥವಾ ತಿರಸ್ಕರಿಸಲು ಹಾಗೂ ಅದನ್ನು ಬುದ್ಧಿಪೂರ್ವಕವಾಗಿ ತಿರಸ್ಕರಿಸಲಾಗಿದೆ ಎಂದು ಧೈರ್ಯದಿಂದ ಘೋಷಿಸಿರುವುದನ್ನು ವಿರೋಧಿಸುತ್ತ, ಅತ್ಯಂತ ವಿನಮ್ರತೆಯಿಂದ ನನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತೇನೆ. ಅದನ್ನು ತಿರಸ್ಕರಿಸಲಾಗಿದೆ ಎಂದು ಮತ್ತು ನಮ್ಮ ಸಂವಿಧಾನದಲ್ಲಿ ಅದನ್ನು ಸೇರಿಸಿಲ್ಲವೆಂದು ಅವರು ಒಪ್ಪಿಕೊಂಡಿದ್ದಾರೆ. ಅವರು ಹಾಗೆ ಹೇಳಿದ್ದಾರೆ ಅಷ್ಟೇ ಅಲ್ಲ ಅದಕ್ಕೆ ಭಾರಿ ಒತ್ತುಕೊಟ್ಟು ಹೇಳಿದ್ದಾರೆ. ನನಗೆ ನೋವಾಗಿರುವುದಕ್ಕೆ ಕಾರಣ ನಮ್ಮ ಕರಡು ರಚನಾಸಮಿತಿಯ ಅಧ್ಯಕ್ಷರು ಬಳಸಿರುವ ಪದಗಳು; ಅವರು ಹೀಗೆ ಹೇಳಿದ್ದಾರೆ. "ಹಳ್ಳಿ ಎಂದರೇನು? ಸ್ಥಳೀಯ ವ್ಯವಸ್ಥೆಯ ಒಂದು ಗುಂಡಿ ಮತ್ತು ಅಜ್ಞಾನದ ಒಂದು ಗುಹೆ" "....ಹಳ್ಳಿಯನ್ನು ಕರಡು ಸಂವಿಧಾನವು ತಿರಸ್ಕರಿಸುವುದು ನನಗೆ ಹರ್ಷ ತಂದಿದೆ" ನಮ್ಮ ಮಹಾಪಂಡಿತರು ತಮ್ಮೆಲ್ಲ ಸಂಸ್ಕೃತ ಮತ್ತು ರಾಜ್ಯಶಾಸ್ತ್ರದ ತಿಳಿವಳಿಕೆಯಿಂದ ಈ ರೀತಿಯಲ್ಲಿ ಗ್ರಾಮಪಂಚಾಯಿತಿ ವ್ಯವಸ್ಥೆಯನ್ನು ವಿರೋಧಿಸಿರುವುದು ನನಗೆ ಆತಂಕ ಉಂಟುಮಾಡಿದೆ. ಹಳ್ಳಿಯನ್ನು ತಿರಸ್ಕರಿಸಬೇಕೆಂದರೆ, ಯಾರಾದರೂ ಈ ಸಂವಿಧಾನವನ್ನು ಕೂಡಾ ಧೈರ್ಯದಿಂದ ತಿರಸ್ಕರಿಸುವ ಬೇಡಿಕೆ ಇಡುವರು. ಆದರೆ, ನಾನು ಒಬ್ಬ ಸಾಮಾನ್ಯ ವ್ಯಕ್ತಿ ಮತ್ತು ಯಾವ ಹೆಚ್ಚು ಅನುಭವವೂ ಇಲ್ಲ. ಸಾಂದರ್ಭಿಕವಾಗಿ ಭಾವಾವೇಶದಿಂದಾಗಿ ನನ್ನ ಅಭಿಪ್ರಾಯ ವ್ಯಕ್ತಪಡಿಸಿದ್ದೇನೆ. ಆದರೆ, ಎಲ್ಲ ಸಂದರ್ಭಗಳಲ್ಲೂ ಪ್ರಜಾಪ್ರಭುತ್ವವು ನಮ್ಮ ರಾಜ್ಯ ವ್ಯವಸ್ಥೆಯ ತಳಹದಿಯಾಗಿರಬೇಕು ಎಂಬುದನ್ನು ಅಳವಡಿಸಲು, ಯಾವುದೇ ತಿದ್ದುಪಡಿಗಳನ್ನು ಪ್ರಯತ್ನಮಾಡಬೇಕು. ಆಗ ಮಾತ್ರ ನಮ್ಮ ಸಂವಿಧಾನವು ಪರಿಪೂರ್ಣವಾಗುತ್ತದೆ, ಅದು ಜೀವ ತುಂಬಿಕೊಂಡಾಗ ಮಾತ್ರವೇ ನಾವು ಈ ಸಂವಿಧಾನವು ನಮ್ಮದೇ ಸ್ವಂತದ್ದು ಎಂಬ ಭಾವನೆ ನಮ್ಮಲ್ಲಿ ಬರುತ್ತದೆ. ಇಲ್ಲದಿದ್ದರೆ ನಾವು ಈ ದೊಡ್ಡ ಕಟ್ಟಡವನ್ನು ಮರಳಿನ ತಳಹದಿಯ ಮೇಲೆ ಕಟ್ಟಿದರೆ ಅದು ಖಂಡಿತವಾಗಿ ಬಿದ್ದು ಹೋಗುತ್ತದೆ. ಇದನ್ನೇ ನಾನು ವಿಶೇಷವಾಗಿ ಸಲಹೆ ಮಾಡಬಯಸಿದ್ದು ಮತ್ತು ಅದಕ್ಕಾಗಿ ನಾನು ಮಾತನಾಡಬಯಸಿದ್ದು.

ನಾನು ಇನ್ನೊಂದು ವಿಷಯದತ್ತ ನಿಮ್ಮ ಗಮನ ಸೆಳೆಯಬಯಸುತ್ತೇನೆ. ಎಂದರೆ, ನಮ್ಮ ಕೆಲವು ರಾಜ್ಯಗಳು ಒಕ್ಕೂಟಗಳ ಒಂದು ಬಣ ರೂಪಿಸಲು ಒಟ್ಟಿಗೆ ಸೇರಿವೆ. ನಮ್ಮ ಸಮರ್ಥ ನಾಯಕರಾದ ಸರ್ದಾರ್ ಪಟೇಲರು, ರಾಜ್ಯಗಳ ಸ್ವರೂಪವನ್ನೇ ಭಾರಿ ವೇಗದಿಂದ ಬದಲಾಯಿಸಿರುವುದು ಅತ್ಯಂತ ತೃಪ್ತಿಕರ ವಿಷಯವಾಗಿದೆ ಮತ್ತು ಅದಕ್ಕಾಗಿ ನಾನು ಹೆಮ್ಮೆಪಡುತ್ತೇನೆ. ಈಗ, ಈ ಸಂವಿಧಾನವು ಸಂಪೂರ್ಣವಾಗಲಿದೆ.

ಬಹುಶಃ ಡಿಸೆಂಬರ್ ಅಂತ್ಯಕ್ಕೆ ಅಥವಾ ಮುಂದಿನ ಜನವರಿಗೆ ಪೂರ್ಣಗೊಳ್ಳಲಿದೆ ಆದರೆ ಹಲವು ರಾಜ್ಯಗಳು ತಮ್ಮದೇ ಒಂದು ಪ್ರತ್ಯೇಕ ಅಸ್ತಿತ್ವವನ್ನು ಉಳಿಸಿಕೊಂಡು ಮುಂದುವರಿಯುವ ಅಪೇಕ್ಷೆಯನ್ನು ವ್ಯಕ್ತಪಡಿಸಿವೆ. ಒರಿಸ್ಸಾದ ಪ್ರಾಂತ್ಯವು ಪ್ರತ್ಯೇಕ ಅಸ್ತಿತ್ವ ಹೊಂದುವುದಾದರೆ, ತಿರುವಾಂಕೂರು, ಕೊಚಿನ್, ಜೈಪುರ, ಜೋಧಪುರ, ಮೊದಲಾದ ಹಲವು ರಾಜ್ಯಗಳು ಕೂಡ ತಮ್ಮ ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ಕಾಯ್ದುಕೊಳ್ಳಬಹುದು. ಆದರೆ, ನಾನು ವಿನಮ್ರತೆಯಿಂದ ನಿವೇದಿಸಿಕೊಳ್ಳುತ್ತಿದ್ದೇನೆ. ನಾವು ಇಂತಹ ಸಣ್ಣ ಪ್ರಾಂತ್ಯಗಳನ್ನು ರಚಿಸಿದರೆ, ನಾವು ಇಂದು ಇರುವುದಕ್ಕಿಂತ ತುಂಬ ಹದಗೆಟ್ಟ ಪ್ರಾಂತೀಯತೆಯ ಹಿಡಿತಕ್ಕೆ ಸಿಕ್ಕಿಕೊಳ್ಳಬೇಕಾಗುತ್ತದೆ ಮತ್ತು ನಮ್ಮೆಲ್ಲ ಏಕತೆ ಛಿದ್ರಗೊಳ್ಳುತ್ತದೆ, ಇದರ ಫಲವಾಗಿ ನಾವು ಇಂದು ಇರುವಷ್ಟು ಬಲಿಷ್ಠರಾಗಿ ಇನ್ನು ಮುಂದೆ ಇರುವುದಿಲ್ಲ. ಸಂಸ್ಥಾನ ಮತ್ತು ಪ್ರಾಂತ್ಯಗಳು ಎಷ್ಟು ದೊಡ್ಡವಾಗಿರಬೇಕೆಂದರೆ ಮತ್ತು ಚೆನ್ನಾಗಿ ಆಡಳಿತ ಹೊಂದಿರಬೇಕೆಂದರೆ, ಅವು ತಮ್ಮ ಕಾಲುಗಳ ಮೇಲೆ ನಿಲ್ಲುವ ಸಾಮರ್ಥ್ಯ ಪಡೆಯವಂತಿರಬೇಕು. ಅದಕ್ಕಾಗಿ ಆರು ಕೋಟಿಗಳ ಅಥವಾ ಏಳು ಕೋಟಿಗಳ ಅಥವಾ ಎಂಟು ಕೋಟಿಗಳಷ್ಟು ಆದಾಯ ಏನೇನೂ ಸಾಲದು. ಯಾವ ದೊಡ್ಡ ಪ್ರಾಂತ್ಯವೂ ಈ ಆದಾಯದಿಂದ ನಿರ್ವಹಣೆ ಮಾಡಲಾಗದು. ಯಾವ ಪ್ರಾಂತ್ಯವೂ ಇಪ್ಪತ್ತೈದು ಕೋಟಿ ರೂ.ಗಳಿಗಿಂತ ಕಡಮೆ ಆದಾಯ ಬರುವ ಪ್ರಾಂತ್ಯವಾಗಿ ರೂಪಿಸಬಾರದೆಂಬುದು ನನ್ನ ಅಭಿಪ್ರಾಯ. ಇಲ್ಲವೇ ಅಷ್ಟು ಆದಾಯವಿರದ ರಾಜ್ಯಗಳ ಯಾವುದೇ ಒಕ್ಕೂಟವನ್ನು ರೂಪಿಸಬಾರದೆಂಬುದು ನನ್ನ ಅಭಿಪ್ರಾಯ. ಆದರೆ, ಇದು ಪರಿಗಣಿಸಬೇಕಾದ ವಿಷಯ ಅಷ್ಟೇ ಅಲ್ಲ ನಮ್ಮ ನಾಯಕರೂ ವಿಶೇಷ ಪರಿಗಣನೆ ಮಾಡಬೇಕಾದ ವಿಷಯ. ನಾನು ರಜಪುತಾನದಂಥ ಸಣ್ಣ ಸಂಸ್ಥಾನದಿಂದ ಬಂದಿದೇನೆ. ಈ ಸಂಸ್ಥಾನದ ರಾಜರು ಭಾರಿ ತ್ಯಾಗಮಾಡಿದ್ದಾರೆ ಮತ್ತು ರಾಜ್ಯವನ್ನು ಒಪ್ಪಿಸಿಕೊಡಲು ಸ್ವತಃ ಒಪ್ಪಿದ್ದಾರೆ. ಅವರ ಈ ಸ್ವಯಂ ಶರಣಾಗತಿಯನ್ನು ನಾನು ಮೆಚ್ಚುತ್ತೇನೆ. ಆದರೂ ಭೋಪಾಲ್ ಸಂಸ್ಥಾನವು ಇಂದು ಮಧ್ಯಭಾರತದಿಂದ ಪ್ರತ್ಯೇಕ ಅಸ್ತಿತ್ವವನ್ನು ಉಳಿಸಿಕೊಳ್ಳಲು ಅನುಮತಿ ನೀಡಿರುವಂತೆಯೇ ವಾರಣಾಸಿ ಮತ್ತು ರಾಮಪುರಗಳಿಗೆ ಅವು ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ಉಳಿಸಿಕೊಳ್ಳಲು ಅನುಮತಿಸಿರುವುದು ಎಷ್ಟು ದಿನಗಳ ವರೆಗೆ ನಡೆಯುತ್ತದೆ ಮತ್ತು ನಮ್ಮ ಭಾಗಗಳಲ್ಲಿರುವ ಜೋಧಪುರ ಬಿಕಾನೇರ್‌ಗಳೂ ಪ್ರತ್ಯೇಕ ಸ್ವಾಯತ್ತತೆ ಪಡೆದು ಪ್ರತ್ಯೇಕ ಅಸ್ತಿತ್ವ ಉಳಿಸಿಕೊಂಡಿರಲು ಅವುಗಳಿಗೆ ಅನುಮತಿಸಬಹುದು. ಭಾರತ ಹಲವು ಪ್ರಾಂತ್ಯಗಳಾಗಿ ವಿಭಜಿತವಾಗುತ್ತಿರುವಾಗ ಮತ್ತು ಅವು ದೊಡ್ಡ ಪ್ರಾಂತ್ಯಗಳಾಗಿದ್ದರೆ ಆ ದೊಡ್ಡ ಪ್ರಾಂತ್ಯಗಳ ಆಡಳಿತಗಾರರು ಮುಂದೆ ಬಂದು ಪರಸ್ಪರ ನಂಬಿಕೆಯಿಂದ ತಮ್ಮ ರಾಜ್ಯಗಳನ್ನು ಸಾಕಷ್ಟು ದೊಡ್ಡ ಘಟಕಗಳಲ್ಲಿ ವಿಲೀನಗೊಳಿಸಬಹುದೆಂದು ನಾನು ಭಾವಿಸುತ್ತೇನೆ. ಉದಾಹರಣೆಗೆ: ರಜಪುತಾನವು ಸ್ವಯಂ ಒಂದು ಘಟಕವಾಗಿ ರೂಪಗೊಳ್ಳುವುದಾದರೆ, ಅಜ್ಮೀರ್ ಮತ್ತು ಮೇರ್ವಾರಗಳ ಪ್ರಶ್ನೆಯೂ ಸ್ವಾಭಾವಿಕವಾಗಿಯೇ ಪರಿಹಾರವಾಗಿ, ಅದು ಈಗ ಇರುವಂತೆ ಸಣ್ಣ ಪ್ರಾಂತ್ಯವಾಗಿ ಪ್ರತ್ಯೇಕ ಅಸ್ತಿತ್ವವನ್ನು ಉಳಿಸಿಕೊಳ್ಳಲು ಅದಕ್ಕೆ ಕಾರಣ ಇರುವುದಿಲ್ಲ. ರಜಪುತಾನದ ಭಾಗವಾಗಿರುವ ಅದು ಸ್ವಾಭಾವಿಕವಾಗಿಯೇ ಅದರಲ್ಲಿಯೇ ವಿಲೀನಗೊಳ್ಳ ತಕ್ಕದ್ದು. ಆಡಳಿತಗಾರರು, ತಮ್ಮ ಅಂತಸ್ತನ್ನು ಕಾಯ್ದುಕೊಳ್ಳಲು ಅವರಿಗೆ ಉನ್ನತ ಅಧಿಕಾರಿಗಳನ್ನು ಕೊಡಬಹುದು. ರಾಜಪ್ರಮುಖ ಮತ್ತು ಉಪರಾಜಪ್ರಮುಖರ ಹುದ್ದೆಗಳು ಈಗಾಗಲೇ ಅಲ್ಲಿವೆ, ಇವಲ್ಲದೆ, ಭಾರತದಲ್ಲಿ ಹಲವು ಇತರ ಹುದ್ದೆಗಳಿವೆ, ಅವುಗಳಿಗೆ ಆಡಳಿತಗಾರರನ್ನು ಕೊಡುವುದರಿಂದ, ನಾವು ಅವರನ್ನು ಗೌರವಿಸಿದಂತಾಗುತ್ತದೆ. ರಾಜ್ಯಗಳು ಸಂಬಂಧಿಸಿದಂತೆ, ನಾವು ಯಾವುದೇ ಸಂದರ್ಭಗಳಲ್ಲಿ ಪ್ರಾಂತ್ಯಗಳ ಹಿಂದೆ ಬೀಳಲು ಇಷ್ಟಪಡುವುದಿಲ್ಲ. ಇಲ್ಲವೆ ಪ್ರಾಂತ್ಯಗಳಿಗೆ ಬೆಂಬಲವಾಗಿ ಅವರು ಇರುವುದೂ ಸೂಕ್ತವಲ್ಲ. ಯಾವುದೇ ಕಾರಣಕ್ಕಾಗಿ ಹಾಗೆ ಹೇಳಲಾಗಿದ್ದರೆ ಕೆಲವೇ ವಿಷಯಗಳಿಗೆ ಸಂಬಂಧಿಸಿದಂತೆ ಅಂಗೀಕಾರ ನೀಡಲಾಗಿದೆ. ಇದು ಹಾಗೇನಿರಬೇಕಿಲ್ಲ ಎಂದು ನಾನು ಹೇಳುತ್ತೇನೆ. ನಮ್ಮ ಸ್ಥಾನಮಾನಗಳು ಸುಧಾರಣೆಯಾಗಬೇಕು ಎಂದು ನಾವು ಹೇಳುತ್ತೇವೆ. ಏಕೆಂದರೆ, ತಾವು ನಮ್ಮ ಮೇಲೆ ಕೃಪೆ ಇರಿಸಿ

ಮುನ್ನಡೆಸಲು ಬಯಸಿದ್ದೀರಿ. ಇತರ ಪ್ರಾಂತ್ಯಗಳಲ್ಲಿ ಇದ್ದುದಕ್ಕಿಂತ ಬೇರೆಯದಾದ ಯಾವುದೇ ಇತರ ಸುರಕ್ಷಿತ ಸ್ಥಾನದಲ್ಲಿ ನಮ್ಮನ್ನು ಇರಿಸಲು ಇಷ್ಟಪಡುವುದಿಲ್ಲ. ನಮ್ಮ ಸ್ಥಾನಮಾನವು ಎಲ್ಲ ವಿಷಯಗಳಲ್ಲಿ ಉಚ್ಚನ್ಯಾಯಾಲಯಗಳಿಗೆ ಸಂಬಂಧಿಸಿರಲಿ ಅಥವಾ ಸರ್ವೋಚ್ಚನ್ಯಾಯಾಲಯಕ್ಕೆ ಸಂಬಂಧಿಸಿರಲಿ, ಪ್ರಾಂತ್ಯಗಳಲ್ಲಿ ಇರುವಂತೆಯೇ ಇರಬೇಕು. ತಾವು ಈ ವಿಷಯದಲ್ಲಿ ನಮಗೆ ನೆರವಾಗುವಿರೆಂಬ ಭರವಸೆ ನನಗೆ ಇದೆ. ನಾವು ನಮ್ಮ ನಾಯಕರನ್ನು ನಮಗೆ ನೆರವಾಗಲು, ಮುನ್ನಡೆಸಲು ಮತ್ತು ಪ್ರಾಂತ್ಯಗಳು ಹೊಂದಿರುವ ಸ್ಥಾನವನ್ನೇ ಕೊಡಲು ಕೇಳುತ್ತೇವೆ.

ಈಗಾಗಲೇ ನನ್ನ ಅನೇಕ ಗೆಳೆಯರು ಈ ಅಂಶಗಳನ್ನು ತಮ್ಮ ಮುಂದೆ ಇಟ್ಟಿರುವುದರಿಂದ, ಆ ಬಗ್ಗೆ ನಾನು ಹೆಚ್ಚು ಮಾತನಾಡುವುದಿಲ್ಲ. ಆದರೆ, ಭಾಷಾವಾರು ಆಧಾರದ ಮೇಲೆ ಸಣ್ಣ ಪ್ರಾಂತ್ಯಗಳ ರಚನೆಯ ವಿಚಾರದಲ್ಲಿ ನನ್ನದು ವಿಭಿನ್ನ ಅಭಿಪ್ರಾಯವಿದೆ ಎಂದು ನಿವೇದಿಸಲು ಇಷ್ಟಪಡುತ್ತೇನೆ. ಭಾರತದಲ್ಲಿ ಈಗ ಇರುವ ಪರಿಸ್ಥಿತಿಯಲ್ಲಿ ಆ ವಿಷಯದ ಬಗ್ಗೆ ನಾವು ಕಡೇ ಪಕ್ಷ ಮುಂದಿನ ಹತ್ತು ವರ್ಷಗಳವರೆಗೂ ಅವಲೋಕಿಸಬಾರದು ಎಂಬುದು ನನ್ನ ಅಭಿಪ್ರಾಯವಾಗಿದೆ. ಸದ್ಯಕ್ಕೆ ನಾವು ಸ್ಥಾಪಿಸಲು ಬಯಸುತ್ತಿರುವ ಏಕತೆಗಾಗಿ ಮತ್ತು ನಾವು ಈಗ ನಿರ್ಮಿಸಲು ಪ್ರಯತ್ನಿಸುತ್ತಿರುವ ಶಕ್ತಿಯುತ ರಾಷ್ಟ್ರಕ್ಕಾಗಿ ಭಾಷಾವಾರು ಪ್ರಾಂತ್ಯಗಳ ವಿಷಯವನ್ನು ಮುಂದೂಡಲು ನನ್ನ ಮಿತ್ರರನ್ನು ನಾನು ಕೇಳಿಕೊಳ್ಳುತ್ತಿದ್ದೇನೆ. ನಾವು ವಿಷಯಗಳು ಇತ್ಯರ್ಥವಾದಾಗ ಎಂದರೆ, ಬಹುಶಃ ಹತ್ತು ವರ್ಷಗಳ ಅನಂತರ ಈ ಪ್ರಶ್ನೆ ಬಗ್ಗೆ ಆಲೋಚಿಸೋಣ.

ನಾನು ಹೇಳಬಯಸಿದ ವಿಷಯ ಇದಾಗಿದೆ. ಎಂದರೆ ದೆಹಲಿ ಮತ್ತಿತರ ಸ್ಥಳಗಳಿಗೆ ಸಂಬಂಧಿಸಿದಂತೆ, ದೆಹಲಿಯ ರಾಜಧಾನಿ ನಗರ, ಆದ್ದರಿಂದ ಅದಕ್ಕೆ ವಿಶಿಷ್ಟ ಸ್ಥಾನಮಾನ ಕೊಡಬೇಕು ಎಂಬ ಅಂಶವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ನಾನು ಆಗ್ರಹಪಡಿಸುತ್ತೇನೆ. ನಾನು ಈ ಪ್ರಶ್ನೆ ಕುರಿತಂತೆ ಲಾಲಾ ದೇಶ ಬಂಧು ಗುಪ್ತ ಅವರ ಅಭಿಪ್ರಾಯವನ್ನು ಒಪ್ಪಿಕೊಳ್ಳುವವರಲ್ಲಿ ಒಬ್ಬನಾಗಿದ್ದೇನೆ. ಆದರೆ, ಸಣ್ಣ ಪ್ರಾಂತ್ಯಗಳಾದ ಅಜ್ಮೀರ್–ಮೇರ್ವಾರ, ಕೊಡಗು, ಪಂತಪಿಪ್ಲೋಡಾ ಮೊದಲಾದವು ಪ್ರಾಂತ್ಯಗಳಲ್ಲಿ ವಿಲೀನಗೊಳ್ಳಬೇಕು. ಅವುಗಳನ್ನು ಕೇಂದ್ರಾಡಳಿತ ಪ್ರದೇಶಗಳಾಗಿ ಮಾಡುವುದರಿಂದ ಏನೂ ಪ್ರಯೋಜನವಿಲ್ಲ. ಈ ವಿಷಯದಲ್ಲಿ ನಾನು ಡಾಕ್ಟರ್ ಸಾಹೇಬರು ಮಾತನಾಡಬೇಕೆಂದು ನಿವೇದಿಸಿಕೊಳ್ಳಲು ಇಷ್ಟಪಡುತ್ತೇನೆ. ಅವರೊಬ್ಬ ಮಹಾನ್ ವಿದ್ವಾಂಸರು. ಆದುದರಿಂದ ಅವರು ಈ ದೇಶವನ್ನು ವಿದ್ವತ್‌ದೃಷ್ಟಿಯಿಂದ ನಾಡಾಗಿ ನೋಡತಕ್ಕದ್ದು. ಅವರು ಈ ಸಂವಿಧಾನದಲ್ಲಿ ಭಾರತದ ಚೇತನಕ್ಕೆ ಒಂದು ಸ್ಥಾನವನ್ನು ಕೊಡಲೇಬೇಕು ಎಂದು ಅವರಿಗೆ ಮನವಿ ಮಾಡಿಕೊಳ್ಳುತ್ತೇನೆ.

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) (ಎಲ್ಲರೂ ಹರ್ಷೋದ್ಗಾರ ಮಾಡುತ್ತ ಎದ್ದು ನಿಲ್ಲುತ್ತಾರೆ) ಮಾನ್ಯ ಉಪಸಭಾಧ್ಯಕ್ಷರೆ, ನಾವು ನಮ್ಮ ಸುದೀರ್ಘ ಪ್ರಯಾಣದ ಕಡೆಯ ಸುತ್ತಿನಲ್ಲಿ ಇದ್ದೇವೆ; ಸರಿಸುಮಾರು ಎರಡು ವರ್ಷಗಳ ಹಿಂದೆ ನಾವು ಈ ಸಭಾಂಗಣದಲ್ಲಿ ಸಂಧಿಸಿದ್ದೆವು ಮತ್ತು ಆ ಮಹತ್ತ್ವಪೂರ್ಣ ಸಂದರ್ಭದಲ್ಲಿ ಉದ್ದೇಶಗಳ ನಿರ್ಣಯ ಎನ್ನಲಾದ ಒಂದು ನಿರ್ಣಯವನ್ನು ಮಂಡಿಸಲು ನನಗೆ ದೊರೆತ ಸದವಕಾಶ ಅದಾಗಿತ್ತು. ಅದು ಆ ನಿರ್ಣಯದ ಒಂದು ನೀರಸ ವಿವರಣೆಯಾಗಿತ್ತು. ಏಕೆಂದರೆ, ರಾಷ್ಟ್ರದ ಜೀವನದಲ್ಲಿ ಉದ್ದೇಶಗಳು ದೊಡ್ಡ ವಿಷಯವಾದರೂ ಅದು ಕೇವಲ ಉದ್ದೇಶಗಳಿಗಿಂತ ಹೆಚ್ಚಿನದನ್ನೇನೂ ಒಳಗೊಂಡಿರಲಿಲ್ಲ ಆ ಕಾಲದಲ್ಲಿ ಭಾರತೀಯ ಜನರಿಗೆ ಇದ್ದ ಉತ್ಸಾಹವನ್ನು ಒಳಗೊಳ್ಳುವುದಕ್ಕೆ ಸಾಧ್ಯವಾದಷ್ಟರ ಮಟ್ಟಿಗೆ ಪ್ರಾರಂಭದಲ್ಲಿ ಒಳಗೊಳ್ಳಲು ಯತ್ನಿಸಲಾಗಿತ್ತು. ಒಂದು ರಾಷ್ಟ್ರದ ಅಥವಾ ಜನರ ಉತ್ಸಾಹವನ್ನು ಎಲ್ಲ ಕಾಲದಲ್ಲೂ ಒಂದು ಉನ್ನತ ಮಟ್ಟದಲ್ಲಿ ಕಾಯ್ದುಕೊಳ್ಳುವುದು ಕಷ್ಟ ಮತ್ತು ಹಾಗೆ ಮಾಡುವಲ್ಲಿ ನಾವು ಯಶಸ್ವಿಯಾಗಿದ್ದೇವೆಯೇ ಎಂಬುದು ನನಗೆ ಗೊತ್ತಾಗುತ್ತಿಲ್ಲ. ಏನೇ ಇರಲಿ, ಆ ಉತ್ಸಾಹದಿಂದ ನಾವು ಅದನ್ನು ವಿವರವಾಗಿ ಹಾಗೂ ಈ ಸಂವಿಧಾನದಲ್ಲಿಯ

ಅರ್ಥಮಾಡಿಕೊಳ್ಳುವುದಕ್ಕಾಗಿ ಸೂಕ್ಷ್ಮವಾಗಿ ಸಮಸ್ಯೆಗಳನ್ನು ವಿವರಿಸಬೇಕಾಗುತ್ತದೆ ಹಾಗೂ ಅವುಗಳನ್ನು ದೂರದೃಷ್ಟಿಯಿಂದ ನೋಡಿದಾಗ ನಮ್ಮ ಕಣ್ಣುಗಳ ಮುಂದೆ ಕಾಣುವಂತಾಗಬೇಕು.

ಈಗ, ಇದು ನಾವೀಗ ನಡೆದು ಬಂದಿರುವಂಥ ತೀವ್ರ ಬದಲಾವಣೆಯ ಪಥದಲ್ಲಿ ಇನ್ನೂ ಹೆಚ್ಚು ಮುಖ್ಯವಾಗುತ್ತದೆ. ಈ ಬದಲಾವಣೆಯ ಕಾಲದಲ್ಲಿ ಜೀವಿಸಿದ್ದ ನಮಗೆ ಅದರ ಎಲ್ಲ ಯಶಸ್ಸುಗಳ ಮತ್ತು ವೈಭವಗಳ ಹಾಗೂ ದುಃಖಗಳ ಮತ್ತು ಕಹಿಯ ಅನುಭವ ಆಗಿದ್ದು ಅವು ಈ ಎಲ್ಲ ಬದಲಾವಣೆಗಳಿಂದಾಗಿ ಆಗಿರುವಂಥದ್ದು. ನಾವು ನಾವಾಗಿಯೇ ಬದಲಾಗುತ್ತಿದ್ದೇವೆ, ನಾವು ನಾವಾಗಿಯೇ ಬದಲಾಗುತ್ತಿರುವುದನ್ನು ಗಮನಿಸುತ್ತಿಲ್ಲ ಅಥವಾ ದೇಶ ಬಹಳಷ್ಟು ಬದಲಾಗುತ್ತಿರುವುದನ್ನು ಗಮನಿಸುತ್ತಿಲ್ಲ ಮತ್ತು ಈ ತುಮುಲಗಳನ್ನು ಬದಿಗಿಟ್ಟು ಒಂದು ಕ್ಷಣ ಯೋಚಿಸಿದರೆ, ಅದು ಉಪಯುಕ್ತವಾಗುತ್ತಿದೆ. ಅದನ್ನು ದೂರದಿಂದ ನೋಡಿದಾಗ ಹಾಗೂ ಕೆಲವು ಕಾಲ ಇತರರ ಕಣ್ಣುಗಳ ಮೂಲಕ ಅದರತ್ತ ನೋಡಿದಾಗ ಏನೆಂಬುದು ತಿಳಿಯುತ್ತದೆ. ಆ ಅವಕಾಶವನ್ನು ಕೊಡಲಾಗಿತ್ತು. ನಾನಗೆ ಆ ಅವಕಾಶಕ್ಕಾಗಿ ಸಂತೋಷವಾಗಿತ್ತು; ಏಕೆಂದರೆ ಕ್ಷಣಕಾಲ ನಾವೆಲ್ಲ ಹೊತ್ತಿರುವ ಈ ಜವಾಬ್ದಾರಿಯ ಭಾರಿ ಹೊರೆಯಿಂದ ಮತ್ತು ಯಾರು ಸರ್ಕಾರದ ಹೊಣೆಗಾರಿಕೆಯ ಹೊತ್ತಿರುವರೋ ಅವರು ಇನ್ನೂ ಹೆಚ್ಚು ಹೊರಬೇಕಾಗಿದ್ದುದರಿಂದ ಅದರಿಂದ ಒಂದು ಕ್ಷಣ ಬಿಡುಗಡೆಗೊಂಡಾಗ ಸಂತೋಷಪಟ್ಟೆ. ಒಂದು ಕ್ಷಣ ಆ ತುರ್ತು ಜವಾಬ್ದಾರಿಗಳಿಂದ ಪಾರಾದಾಗ ಮನಸ್ಸು ತುಸು ಮುಕ್ತವಾಗಿರುತ್ತದೆ. ನಾನು ಆಗ ಸುತ್ತಲೂ ಇರುವ ಚಿತ್ರದತ್ತ ನೋಡಬಲ್ಲವನಾದೆ ದೂರದಿಂದಲೇ ನಾನು ಉದಯಿಸುವ ಭಾರತದ ನಕ್ಷತ್ರವನ್ನು ದಿಗಂತದಲ್ಲಿ ಬಹುದೂರ ನೋಡಿದಾಗ (ಕೇಳಿ, ಕೇಳಿ) ಅದರ ಶಾಂತ ಬೆಳಕು ಭರವಸೆಯನ್ನು ಮೂಡಿಸುತ್ತದೆ ಅನಿಸುತ್ತದೆ ಮತ್ತು ಈ ನವಭಾರತದಿಂದ ಏಷಿಯಾಗೆ ನೆರವು ನೀಡುವ ಅನೇಕ ಶಕ್ತಿಗಳು ಹೊರಹೊಮ್ಮಿ, ವಿಶ್ವವನ್ನು ಸರಿಯಾದ ಪಥದಲ್ಲಿ ಮುನ್ನಡೆಸುವ ಹಾಗೂ ಏಷ್ಯಾದಂಥ ಈ ದೊಡ್ಡ ಖಂಡವು ಅಥವಾ ಯೂರೋಪ ಖಂಡವು ಮತ್ತು ವಿಶ್ವದ ಉಳಿದ ಭಾಗವು ದುರ್ಮಾರ್ಗದಲ್ಲಿರುವುದರಿಂದ, ಮತ್ತು ಬಹುತೇಕ ದುಸ್ತರವೆಂದು ತೋರುವ ಸಮಸ್ಯೆಗಳನ್ನು ಎದುರಿಸುತ್ತಿರುವುದರಿಂದ, ಅವುಗಳನ್ನು ದೂರಮಾಡಿ ದುರ್ಮಾಗದಿಂದ ವಿಶ್ವವನ್ನು ಸನ್ಮಾರ್ಗದಲ್ಲಿ ನಡೆಸಲು ಸಹಕರಿಸುವ ಶಕ್ತಿಯಾಗಿ ಹಾಗೂ ಇತರ ಅಂಥ ಶಕ್ತಿಗಳೊಂದಿಗೆ ಸಹಕರಿಸುವ ನವಭಾರತವು ವಿಶ್ವದ ಯಾವುದೇ ದೇಶಗಳಲ್ಲಿ ಏನೇ ನಡೆದರೂ ಅದನ್ನು ಎದುರಿಸಲು ಸಮರ್ಥವಾದ ದೇಶವನ್ನು ನಾನು ಆಗ ನೋಡಲು ಸಾಧ್ಯವಾಗುತ್ತದೆ. ಮತ್ತು ಕೆಲವೊಮ್ಮೆ ನಾವೆಲ್ಲರೂ ಗ್ರೀಕ್ ದುರಂತ ನಾಟಕಗಳಲ್ಲಿ ಬರುವ ಪಾತ್ರಧಾರಿಗಳಂತೆ ಆಪತ್ತುಗಳ ಕ್ಲೈಮ್ಯಾಕ್ಸ್ ಕಡೆಗೆ ಅನಿವಾರ್ಯವಾಗಿ ಮುನ್ನಡೆಯಬೇಕಾಗುತ್ತದೆ ಎಂಬ ಭಾವನೆ ಬರಬಹುದು. ಆದರೂ ನಾನು ಪುನಃ ಈ ದೃಶ್ಯವನ್ನು ದೂರದಿಂದ ಮತ್ತು ಹತ್ತಿರದಿಂದ ನೋಡಿದಾಗ, ಭರವಸೆ ಮತ್ತು ಆಶಾವಾದ ಭಾವನೆ ನನ್ನಲ್ಲಿ ಮೂಡುತ್ತಿದೆ; ಬರಿಯ ಭಾರತಕ್ಕಾಗಿಯಲ್ಲ, ಆದರೆ ನಾನು ನೋಡಿದ ಇತರ ದೃಶ್ಯಗಳಿಂದಾಗಿ ಯಾವುದು ಅನಿವಾರ್ಯ ದುರಂತ ಎಂದು ತೋರಿತ್ತದೆಯೋ ಅದು ಅನಿವಾರ್ಯವಾಗಿರಲೇಬೇಕಾಗಿಲ್ಲ, ಈ ದಿಸೆಯಲ್ಲಿ ಅನೇಕ ಇತರ ಶಕ್ತಿಗಳು ಕಾರ್ಯನಿರತವಾಗಿರಬಹುದು ಹಾಗೂ ಈ ವಿಪತ್ತು ಮತ್ತು ದುರಂತಗಳನ್ನು ತಪ್ಪಿಸಲು ಬಯಸಿದ ಸದ್ಭಾವನೆ ಇರುವ ಅಸಂಖ್ಯಾತ ಪುರುಷರು ಮತ್ತು ಸ್ತ್ರೀಯರು ಇದ್ದಿರಬಹುದು ಹಾಗೂ ಅದನ್ನು ತಪ್ಪಿಸುವಲ್ಲಿ ಅವರು ಯಶಸ್ವಿಯಾಗುತ್ತಾರೆ ಎಂಬ ಖಚಿತ ಭರವಸೆಯೂ ಇದೆ.

ಆದರೆ, ಈ ಸದನದ ಮುಂದೆ ಈ ಉದ್ದೇಶಗಳ ನಿರ್ಣಯವನ್ನು ಒಂದು ವರ್ಷ ಮತ್ತು ಹನ್ನೊಂದು ತಿಂಗಳುಗಳ ಹಿಂದೆ ಮಂಡಿಸಿದಂದಿನಿಂದ, ಭಾರತದ ವಿಷಯಕ್ಕೆ ಬಂದರೆ, ನಾವು ವಿಚಿತ್ರ ಪರಿವರ್ತನೆಗಳನ್ನು ಮತ್ತು ಬದಲಾವಣೆಗಳನ್ನು ಕಂಡಿದ್ದೇವೆ. ಆ ಕಾಲದಲ್ಲಿ ನಾವು ಮಾಡಿದುದಕ್ಕಿಂತ, ನಾವು ಇಲ್ಲಿ ಹೆಚ್ಚು ಸ್ವತಂತ್ರವಾಗಿ ಕೆಲಸಮಾಡುತ್ತಿದ್ದೇವೆ. ನಾವು, ಒಂದು ಸಾರ್ವಭೌಮ ಸ್ವತಂತ್ರರಾಷ್ಟ್ರವಾಗಿ ಕೆಲಸಮಾಡುತ್ತಿದ್ದೇವೆ.

ಆದರೆ, ನಾವು ಈ ಅವಧಿಯಲ್ಲಿ ಹೆಚ್ಚಿನ ದುಃಖ ಮತ್ತು ಕಹಿ, ಅನುಭವಗಳನ್ನು ಅನುಭವಿಸಿದ್ದೇವೆ. ಹಾಗೂ ಅದರಿಂದಾಗಿ ನಾವು ಅತ್ಯಂತ ಹೆಚ್ಚು ಬಾಧೆಗೊಳಗಾಗಿದ್ದೇವೆ. ಯಾವ ದೇಶಕ್ಕಾಗಿ ನಾವು ಈ ಸಂವಿಧಾನವನ್ನು ರೂಪಿಸಲು ಸಿದ್ಧರಾಗಿದ್ದೇವೋ ಆ ದೇಶ ವಿಭಜನೆಯಾಗಿ, ಇಬ್ಭಾಗವಾಯಿತು. ಅನಂತರ ಏನೊ ಆಗಿದ ಎಂಬ ನೆನಪು ನಮ್ಮ ಮನಸ್ಸಿನಲ್ಲಿ ಇನ್ನೂ ಹೊಸದಾಗಿಯೂ ಮತ್ತು ಇನ್ನೂ ಸುದೀರ್ಘ ಕಾಲದವರೆಗೂ ಅದರ ಎಲ್ಲ ಭೀಕರತೆಗಳ ನೆನಪು ತಾಜಾ ಆಗಿ ಉಳಿದಿರುತ್ತದೆ. ಏನೆಲ್ಲ ಆಗಿದೆಯೊ ಮತ್ತು ಇಷ್ಟೆಲ್ಲ ಆಗಿದ್ದರೂ ಭಾರತವು ಶಕ್ತಿ ಸಾಮರ್ಥ್ಯಗಳಿಂದ ಮತ್ತು ಸ್ವಾತಂತ್ರ್ಯದಿಂದ ಬೆಳೆದಿದೆ ಮತ್ತು ಒಂದು ಸ್ವತಂತ್ರ ದೇಶವಾಗಿ ಉದಯಿಸಿರುವುದು ಭಾರತದ ಈ ತಲೆಮಾರಿನ ಅತ್ಯಂತ ಗಮನಾರ್ಹ ಸಾಧನೆಗಳಲ್ಲಿ ಒಂದು ಎಂಬುದರಲ್ಲಿ ಸಂಶಯವೇ ಇಲ್ಲ; ನಿಮಗೆ ಇದು ಗಮನಾರ್ಹವಾದುದಷ್ಟೇ ಅಲ್ಲ, ಈ ದೇಶದಲ್ಲಿ ವಾಸಿಸುವ ನಮ್ಮ ಸಹೋದರ ಸೋದರಿಯರ ಬೃಹತ್ ಸಮುದಾಯಕ್ಕೆ ಗಮನಾರ್ಹ ಸಂಗತಿಯಾಗಿದೆ. ಏಷ್ಯಾಕ್ಕೆ ಹಾಗೂ ವಿಶ್ವಕ್ಕೆ ಇದೊಂದು ಗಮನಾರ್ಹ ಸಂಗತಿ; ಏಷ್ಯಾದಲ್ಲಿ ಮತ್ತು ವಿಶ್ವದಲ್ಲಿ ಭಾರತದ ಪಾತ್ರ ಪ್ರಯೋಜನಕಾರಿಯಾಗಿದೆ ಎಂದು ವಿಶ್ವವು ಮನಗಾಣಲು ಆರಂಭಿಸಿದೆ; ಎಂಬುದು ನನ್ನ ಮುಖ್ಯ ಆಲೋಚನೆ ಹಾಗೂ ಇದರಿಂದಾಗಿ ನನಗೂ ಸಂತೋಷವಾಗಿದೆ. ಭಾರತವು ಯಾವುದೇ ಪಾತ್ರ ವಹಿಸಿದರೂ, ಅದನ್ನು ಕೆಲವು ಜನ, ಕೆಲವು ದೇಶಗಳು, ಇತರ ಹಿತಾಸಕ್ತಿಗಳು ಪ್ರಶಂಸಿಸಬಹುದು, ಇನ್ನು ಕೆಲವರು ಇಷ್ಟಪಡದಿರಬಹುದು. ಹಾಗೆ ಎಲ್ಲ ಕಡೆಗೂ ಆಗುವಂಥದ್ದೇ. ಆದರೆ ಮುಖ್ಯ ವಿಷಯವೆಂದರೆ ಬಹುಕಾಲದ ದಬ್ಬಾಳಿಕೆಯ ಅನಂತರ ಒಂದು ಮುಕ್ತ ಸಾರ್ವಭೌಮ ಪ್ರಜಾಪ್ರಭುತ್ವ ಸ್ವತಂತ್ರದೇಶವಾಗಿ ಹೊರ ಹೊಮ್ಮಿರುವ ಭಾರತವು ಇತಿಹಾಸವನ್ನೇ ಬದಲಾಯಿಸುವುದು ಮತ್ತು ಬದಲಾಯಿಸುತ್ತಿದೆ ಎಂಬುದು ಈ ಸಂದರ್ಭದಲ್ಲಿ ಗಮನಾರ್ಹ ಅಂಶ. ಅದು ಎಷ್ಟರ ಮಟ್ಟಿಗೆ ಇತಿಹಾಸವನ್ನೇ ಬದಲಾಯಿಸುವುದು ಎಂಬುದು, ನಮ್ಮನ್ನು ಅವಲಂಬಿಸಿದೆ ಹಾಗೂ ಸದ್ಯ ಈ ಸದನವನ್ನು ಮತ್ತು ಭಾರತೀಯ ಜನರ ಒಟ್ಟಾರೆ ಆಶಯವನ್ನು ಪ್ರತಿನಿಧಿಸುವ ಮುಂಬರುವ ಇತರ ಸದನಗಳನ್ನವಲಂಬಿಸಿರುತ್ತದೆ.

ಇದೊಂದು ಭಾರಿ ಜವಾಬ್ದಾರಿಯುಳ್ಳ ಸ್ವಾತಂತ್ರ್ಯ, ಸ್ವಾತಂತ್ರ್ಯವು ಜವಾಬ್ದಾರಿಯನ್ನು ತರುತ್ತದೆ. ಹಾಗೆ ನೋಡಿದರೆ ಜವಾಬ್ದಾರಿ ಇಲ್ಲದ ಸ್ವಾತಂತ್ರ್ಯ ಎಂಬುದೇ ಇಲ್ಲ. ಬೇಜವಾಬ್ದಾರಿ ಎಂದರೆ ಸ್ವಾತಂತ್ರ್ಯ ಇಲ್ಲದಿರುವುದು. ಆದುದರಿಂದ ನಾವು ಸ್ವಾತಂತ್ರ್ಯವು ತಂದುಕೊಟ್ಟಿರುವ ಜವಾಬ್ದಾರಿಯ ಈ ಮಹತ್ತರ ಹೊಣೆಯ ಬಗ್ಗೆ ಜಾಗರೂಕರಾಗಿರಬೇಕು; ಅವೆಂದರೆ ಸ್ವಾತಂತ್ರ್ಯದ ಶಿಸ್ತು ಮತ್ತು ಸ್ವಾತಂತ್ರ್ಯವನ್ನು ಕಾರ್ಯಗತಗೊಳಿಸುವ ವ್ಯವಸ್ಥಿತ ಮಾರ್ಗ. ಆದರೆ, ಅದಕ್ಕಿಂತಲೂ ಹೆಚ್ಚಿನದು ಏನೋ ಒಂದಿದೆ. ಹಲವು ವಿಷಯಗಳ ಫಲವಾಗಿ ಭಾರತಕ್ಕೆ ಬಂದಿರುವ ಸ್ವಾತಂತ್ರ್ಯವು ಇತಿಹಾಸ, ಪರಂಪರೆ, ಸಂಪನ್ಮೂಲಗಳು, ನಮ್ಮ ಭೌಗೋಳಿಕ ಸ್ಥಿತಿ, ನಮ್ಮ ಮಹಾನ್ ಸಾಮರ್ಥ್ಯ, ಇವೆಲ್ಲವೂ ನಿಶ್ಚಿತವಾಗಿಯೂ ಭಾರತವನ್ನು ವಿಶ್ವವ್ಯವಹಾರಗಳಲ್ಲಿ ಒಂದು ಮುಖ್ಯ ಪಾತ್ರ ವಹಿಸಿಲು ಮುನ್ನಡೆಸುತ್ತವೆ. ಇದನ್ನು ಅಥವಾ ಅದನ್ನು ಆಯ್ಕೆಮಾಡುವ ಪ್ರಶ್ನೆಯಲ್ಲ; ಅದು, ಭಾರತ ಎಂದರೇನು ಮತ್ತು ಸ್ವತಂತ್ರ ಭಾರತ ಹೇಗಿರಬೇಕು, ಎಂಬುದರ ಖಚಿತ ಪರಿಣಾಮ. ಮತ್ತು ವಿಶ್ವವ್ಯವಹಾರಗಳಲ್ಲಿ ನಾವು ಅನಿವಾರ್ಯವಾಗಿ ಪಾತ್ರ ವಹಿಸಬೇಕಿರುವಾಗ, ಅದು ಇನ್ನೊಂದು ಅತಿ ದೊಡ್ಡ ಜವಾಬ್ದಾರಿಯನ್ನು ತರುತ್ತದೆ. ಕೆಲವೊಮ್ಮೆ, ನನ್ನ ಎಲ್ಲ ಭರವಸೆಗಳು ಮತ್ತು ಆಶಾವಾದ ಹಾಗೂ ನನ್ನ ರಾಷ್ಟ್ರದ ಬಗ್ಗೆ ಇರುವ ವಿಶ್ವಾಸ, ಇವೆಲ್ಲವುಗಳ ಜೊತೆಗೆ ನಮ್ಮ ಮೇಲೆ ಹೇರಲಾಗುತ್ತಿರುವ ಮಹಾನ್ ಜವಾಬ್ದಾರಿಗಳನ್ನು ಗಮನಿಸಿದರೆ ನನಗೆ ನಡುಕ ಉಂಟಾಗುತ್ತದೆ ಹಾಗೂ ನಾವು ಅದರಿಂದ ಪಾರಾಗಲಾರೆವು. ಸಂಕುಚಿತ ವಿರೋಧಗಳಿಂದ ಬಂಧಿತರಾಗಿರುವ, ನಾವು ಅವುಗಳನ್ನು ಮರೆಯಬಹುದು. ನಾವು ಮರೆಯಲಿ ಅಥವಾ ಬಿಡಲಿ, ಆ ಜವಾಬ್ದಾರಿ ಇದ್ದೇ ಇರುತ್ತದೆ. ನಾವು ಅದನ್ನು ಮರೆತರೆ, ಆ ಕಾರ್ಯನಿರ್ವಹಣೆಯಲ್ಲಿ ನಾವು ವಿಫಲರಾಗುತ್ತೇವೆ. ಆದುದರಿಂದ ಭಾರತದ ಮೇಲಿರುವ ಈ ಮಹಾನ್ ಜವಾಬ್ದಾರಿಗಳನ್ನು ಈ

ಸದನವು ಪರಿಗಣಿಸಬೇಕೆಂದು ನಾನು ಪ್ರಾರ್ಥಿಸುತ್ತೇನೆ, ಏಕೆಂದರೆ, ನಾವು ಈ ಸದನದಲ್ಲಿ ನಮ್ಮ ಮೇಲಿರುವ ಹಲವು ಇತರ ಕ್ಷೇತ್ರಗಳ ಜವಾಬ್ದಾರಿಗಳನ್ನು ನಿಭಾಯಿಸಬೇಕಾಗಿದೆ ಹಾಗೂ ಸಂವಿಧಾನ ರೂಪಿಸುವಲ್ಲಿ ಇನ್ನಿತರ ಕಾರ್ಯಗಳಲ್ಲಿ ಜೊತೆಜೊತೆಯಾಗಿ ಕೆಲಸಮಾಡಬೇಕಾಗಿದೆ. ಏಕೆಂದರೆ, ವಿಶ್ವದ ಕಣ್ಣುಗಳು ನಮ್ಮ ಮೇಲಿವೆ ಹಾಗೂ ವಿಶ್ವದ ಬಹುದೊಡ್ಡ ಭಾಗದ ಭರವಸೆಗಳು ಮತ್ತು ಆಕಾಂಕ್ಷೆಗಳು ಕೂಡ ನಮ್ಮ ಮೇಲಿರುವ ಕಾರಣ, ಯಾವಾಗಲೂ ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಭಾರತವನ್ನು ಪ್ರತಿನಿಧಿಸಬೇಕಾಗಿದೆ. ನಾವು ಧೃತಿಗೆಡಬಾರದು, ಹಾಗೆ ಮಾಡಿದರೆ, ನಾವು ನಮ್ಮ ಈ ದೇಶದ ಜನರ ಹಾಗೂ ನಮ್ಮ ಸುತ್ತಲೂ ಇರುವ ಇತರ ದೇಶಗಳ ಜನರ ಭರವಸೆಗಳನ್ನು ಮತ್ತು ಆಕಾಂಕ್ಷೆಗಳನ್ನು ಈಡೇರಿಸಲಾಗುವುದಿಲ್ಲ. ಈ ಸದನವು ಈ ಸಂವಿಧಾನವನ್ನು ಈ ರೀತಿಯಲ್ಲಿ ಪರಿಗಣಿಸಬೇಕೆಂದು ನಾನು ಇಷ್ಟಪಡುತ್ತೇನೆ. ಮೊದಲನೆಯದಾಗಿ ಉದ್ದೇಶಗಳ ನಿರ್ಣಯ ನಮ್ಮ ಮುಂದೆ ಇಟ್ಟ ಮೇಲೆ, ಎಷ್ಟರಮಟ್ಟಿಗೆ ನಾವು ಆ ಬಗ್ಗೆ ಚರ್ಚಿಸಿ, ನಿರ್ಣಯದಲ್ಲಿ ಹೇಳಿದಂತೆ ಅಂದರೆ, "ಸರ್ವತಂತ್ರ ಸ್ವತಂತ್ರ ಸಾರ್ವಭೌಮ ಗಣರಾಜ್ಯವಾಗಿರುವ ಸ್ವತಂತ್ರ ಸಾರ್ವಭೌಮ ಭಾರತದ, ಅದರ ವಿಭಾಗಗಳ ಮತ್ತು ಸರ್ಕಾರದ ಅಂಗಗಳ, ಎಲ್ಲ ಅಧಿಕಾರ ಮತ್ತು ಪ್ರಾಧಿಕಾರವು ಜನರಿಂದಲೇ ಪಡೆದಂಥವು ಮತ್ತು ಭಾರತದ ಸಮಸ್ತ ಜನರಿಗೂ ನ್ಯಾಯ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಭರವಸೆ ಮತ್ತು ಭದ್ರತೆ ನಿಡತಕ್ಕದ್ದಾಗಿದೆ. ಸ್ಥಾನಮಾನ ಸಮಾನತೆ, ಅವಕಾಶ ಸಮಾನತೆ ಮತ್ತು ಕಾನೂನಿನ ಮುಂದೆ ಸಮಾನತೆ ನೀಡತಕ್ಕದ್ದಾಗಿದೆ. ಆಲೋಚನೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ, ನಂಬಿಕೆ, ವಿಶ್ವಾಸ, ಆರಾಧನೆ, ವೃತ್ತಿ, ಸಂಘ ಸಂಸ್ಥೆಗಳನ್ನು ರಚಿಸಿಸುವ ಮತ್ತು ಕ್ರಿಯಾ ಸ್ವಾತಂತ್ರ್ಯವನ್ನು ಕಾನೂನಿಗೊಳಪಟ್ಟು ಮತ್ತು ಸಾರ್ವಜನಿಕ ನೈತಿಕತೆಗೆ ಬದ್ಧವಾಗಿ ನೀಡತಕ್ಕದ್ದು ಮತ್ತು ಈ ಪ್ರಾಚೀನ ಭೂಮಿಯು ವಿಶ್ವದಲ್ಲಿ ಅದರ ನ್ಯಾಯಯುತ ಮತ್ತು ಗೌರವದ ಸ್ಥಾನ ಪಡೆಯುವಂತಾಗಬೇಕು ಹಾಗೂ ವಿಶ್ವಶಾಂತಿಯ ಪ್ರವರ್ಧನೆಗೆ ಮತ್ತು ಮಾನವಜನಾಂಗದ ಕಲ್ಯಾಣಕ್ಕೆ ಪೂರ್ಣವಾಗಿ ಮತ್ತು ಇಚ್ಛಾಪೂರ್ವಕ ನೀಡಬೇಕು. ಇದನ್ನು ಎಷ್ಟರ ಮಟ್ಟಿಗೆ ನಾವು ಸಾಧಿಸುತ್ತೇವೆ" ಎಂಬುದನ್ನು ನೋಡಬೇಕಾಗಿದೆ.

ನಾನು ನಿರ್ದಿಷ್ಟವಾಗಿ ಕೊನೆಯ ಆ ಖಂಡವನ್ನು ಓದುತ್ತಿದ್ದೇನೆ. ಏಕೆಂದರೆ ಅದು ವಿಶ್ವಕ್ಕೆ ಭಾರತದ ಕರ್ತವ್ಯವೇನೆಂಬುದನ್ನು ನಮ್ಮ ಮನಸ್ಸಿಗೆ ತರುತ್ತದೆ. ನಮ್ಮದು ಜೀವಂತ ಮತ್ತು ಶಕ್ತಿಶಾಲಿ ರಾಷ್ಟ್ರವಾಗಿರುವುದರಿಂದ ವಿವಾದಗಳಿರುವುದು ಸಹಜ ಮತ್ತು ವಿವಾದಗಳಿರಲೂಬೇಕು ಮತ್ತು ಜನ ವಿಭಿನ್ನವಾಗಿ ಆಲೋಚಿಸುವುದು ಸರಿ ಹಾಗೂ ಚರ್ಚೆಗಳಿಗೆ ಬಂದಾಗ ವಿಭಿನ್ನವಾಗಿ ಆಲೋಚಿಸುವುದು ಕೂಡ ಸರಿ, ಈ ಸದನವು ಇಂಥ ಹಲವು ವಿವಾದಗಳನ್ನು ಪರಿಗಣಿಸುವಾಗ ಆ ಚರ್ಚೆಗಳನ್ನು ನಡೆಸಿ ಒಟ್ಟಾಗಿ ನಿರ್ಣಯ ಕೈಗೊಳ್ಳಬೇಕೆಂದು ನಾನು ಬಯಸುತ್ತೇನೆ. ಹಲವು ಸಮಸ್ಯೆಗಳಿವೆ. ಕೆಲವು ತುಂಬ ಮುಖ್ಯ ಸಮಸ್ಯೆಗಳಿವೆ. ಅವುಗಳ ಬಗ್ಗೆ ವಿವಾದ ತುಂಬ ಕಡಿಮೆ ಇದ್ದರೆ, ನಾವು ಅವನ್ನು ಅಂಗೀಕರಿಸುತ್ತೇವೆ. ಅವು ಭಾರಿ ಮಹತ್ತ್ವದವು ಆಗಿದ್ದರೆ ಅವುಗಳ ಬಗ್ಗೆ ನಿಶ್ಚಿತ ಒಮ್ಮತದೊಂದಿಗೆ ಅಂಗೀಕರಿಸಲಾಗುತ್ತದೆ. ಇನ್ನು ಇತರ ಸಮಸ್ಯೆಗಳು, ಮುಖ್ಯ ಎಂಬುದರಲ್ಲಿ ಅನುಮಾನವಿಲ್ಲ; ಆದರೆ ಬಹುಶಃ ಕಡಿಮೆ ಮುಖ್ಯವಾದವು ಆಗಿರಬಹುದು. ಅವುಗಳಿಗಾಗಿ ನಾವು ಹೆಚ್ಚು ಸಮಯ ಮತ್ತು ಶಕ್ತಿ ಖರ್ಚುಮಾಡುತ್ತೇವೆ ಮತ್ತು ಆ ಬಗ್ಗೆ ಸ್ವಲ್ಪ ಉದ್ವೇಗಕ್ಕೂ ಒಳಗಾಗುತ್ತೇವೆ ಮತ್ತು ಯಾವ ಮನೋಭಾವದಿಂದ ಒಪ್ಪಂದಕ್ಕೆ ಬರುತ್ತೇವೆಯೋ ಅದೇ ರೀತಿ ಒಪ್ಪಂದಕ್ಕೆ ಬರುವುದಿಲ್ಲ. ಇಂದು ನಮ್ಮ ದೇಶದಲ್ಲಿ ಚರ್ಚೆಗೆ ಬಂದಿರುವ ಒಂದೆರಡು ವಿಷಯಗಳನ್ನು ಇಲ್ಲಿ ನಾನು ನಮೂದಿಸುತ್ತೇನೆ. ಅದು ಭಾಷಾವಾರು ಪ್ರಾಂತ್ಯಗಳಿಗೆ ಹಾಗೂ ವಿಧಾನಸಭೆಯಲ್ಲಿ ಮತ್ತು ದೇಶದಲ್ಲಿ ಬಳಸಬೇಕಾದ ಭಾಷೆಯ ಪ್ರಶ್ನೆಗೆ ಸಂಬಂಧಿಸಿದೆ. ಈ ಪ್ರಶ್ನೆಗಳ ಬಗ್ಗೆ ಹೆಚ್ಚು ಹೇಳಲು ನಾನು ಇಚ್ಛಿಸುವುದಿಲ್ಲ. ಭಾರತದಲ್ಲಿ ಪ್ರಾಂತ್ಯಗಳು ಮೊದಲಾದವುಗಳ ವಿಷಯದಲ್ಲಿ ಯಾವುದಾದರೂ ರೀತಿಯ ಪುನರ್ವ್ಯವಸ್ಥೆ ಆಗಬೇಕಾದುದು ಅನಿವಾರ್ಯ ಎಂದಷ್ಟೆ ನನಗೆ ತೋರುತ್ತದೆ. ಅದು ಜನರ ಸಾಂಸ್ಕೃತಿಕ, ಭೌಗೋಳಿಕ ಮತ್ತು ಆರ್ಥಿಕ ಸ್ಥಿತಿಯನ್ನು ಹಾಗೂ

ಅವರ ಆಶೋತ್ತರಗಳನ್ನು ಪ್ರತಿಬಿಂಬಿಸಬೇಕು. ನಾವು ಇದಕ್ಕೆ ಬಹು ಹಿಂದೆ ಬದ್ಧರಾಗಿದ್ದೆವು. ಕೇವಲ ಭಾಷಾವಾರು ಪ್ರಾಂತ್ಯಗಳೆಂದಷ್ಟೇ ಎಂದು ಹೇಳುವುದು ಒಳ್ಳೆಯದು ಎಂದು ನನಗನಿಸುವುದಿಲ್ಲ. ಅದು ಪರಿಗಣಿಸಬೇಕಾದ ಒಂದು ಪ್ರಮುಖ ವಿಷಯ ಎಂಬುದರಲ್ಲಿ ಸಂಶಯವಿಲ್ಲ; ಆದರೆ ಪರಿಗಣಿಸಬೇಕಾದ ಇನ್ನೂ ಅನೇಕ ಮುಖ್ಯ ವಿಷಯಗಳಿವೆ. ಆದುದರಿಂದ ನಿಮ್ಮ ಮುಂದಿನ ಇಡೀ ಚಿತ್ರವನ್ನು ಗಮನಿಸಿ ನಾವು ನಮ್ಮಲ್ಲಿರುವ ವಿಷಯವನ್ನು ಪ್ರತ್ಯೇಕವಾಗಿ ಗಮನಿಸಬೇಕಾಗಿದೆ; ಅದನ್ನು ಪುನಃ ನವೀನಗೊಳಿಸಿ ಗಮನಿಸಬೇಕಾಗಿದೆ. ಈ ಸದನದ ಮುಂದೆ ನಾನು ಏನು ಮಂಡಿಸಬೇಕೆಂದಿರುವೆನೊ ಎಂದರೆ, ಈ ಪ್ರಶ್ನೆಯು ನಮ್ಮ ಭವಿಷ್ಯ ಜೀವನದ ಮತ್ತು ಆಡಳಿತ ದೃಷ್ಟಿಯಿಂದ ಮುಖ್ಯವಾಗಿದ್ದು, ನಾನು ಇದನ್ನು ಪ್ರಮುಖ ಮಹತ್ತ್ವದ ಪ್ರಶ್ನೆ ಎಂದು ಭಾವಿಸಿರಲಿಲ್ಲ. ಅದನ್ನು ಇಲ್ಲಿ ಮತ್ತು ಇಂದು, ಈಗಲೇ ಇತ್ಯರ್ಥಮಾಡಬೇಕಾಗಿದೆ. ವಿಷಯದ ಹಲವಾರು ಅಂಶಗಳ ಬಗ್ಗೆ ಪಾಂಡಿತ್ಯದ ಚರ್ಚೆಗಳಿಗಿಂತ ಇದನ್ನು ಸದ್ಭಾವನೆಯಿಂದ ಮತ್ತು ಪ್ರಶಾಂತ ವಾತಾವರಣದಲ್ಲಿ ಇತ್ಯರ್ಥಗೊಳಿಸಬೇಕಾಗಿದೆ. ಅದನ್ನು ಆವೇಶದಿಂದ ಮತ್ತು ಉದ್ವೇಗದಿಂದ ಚರ್ಚಿಸುವಾಗ ಕಾವೇರಿದ ವಾತಾವರಣ ಉಂಟಾಗಿದ್ದುದು ದುರದೃಷ್ಟಕರ ಹಾಗೂ ಮತ್ತು ಆವೇಶ ಉದ್ವೇಗಗಳಿದ್ದಾಗ ಮನಸ್ಸು ಮುಚ್ಚಿಕೊಂಡಿರುತ್ತದೆ ಎಂದು ನನಗೆ ಅನಿಸುತ್ತದೆ. ಆದುದರಿಂದ ಈ ವಿಷಯಗಳನ್ನು ಈ ಸದನವು ಅದು ಸೂಕ್ತವೆನಿಸಿದಾಗ ಪರಿಗಣಿಸಬೇಕೆಂದು ಮತ್ತು ಉದ್ವೇಗದ ವಾತಾವರಣವಿದ್ದಾಗ ಆತುರಾತುರವಾಗಿ ಇತ್ಯರ್ಥಗೊಳಿಸಬಾರದು; ವಿಷಯವನ್ನು ಸೂಕ್ತ ಕಾಲದಲ್ಲಿ, ಅದಕ್ಕಾಗಿ ಸಮಯ ಪಕ್ವವಾದಾಗ ಪರಿಗಣಿಸಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ನಾನು ಹಾಗೆ ಹೇಳುವುದಾದರೆ ಅದು ಭಾಷೆಯ ಪ್ರಶ್ನೆಗೂ ಅನ್ವಯಿಸುತ್ತದೆ. ಈಗ, ಯಾವುದೇ ಮುಕ್ತವಾದ ಹಾಗೂ ಸ್ವತಂತ್ರ ದೇಶವು ತನ್ನ ಭಾಷೆಯಲ್ಲಿಯೇ ತನ್ನ ವ್ಯವಹಾರಗಳನ್ನು ಮಾಡಬೇಕು ಎಂಬುದು ಮುಖ್ಯ ಮತ್ತು ಅತ್ಯಗತ್ಯ. ದುರದೃಷ್ಟವಶಾತ್, ನಾನು ಈ ಸದನದಲ್ಲಿ ವಿದೇಶಿ ಭಾಷೆಯಲ್ಲಿ ಮಾತನಾಡುತ್ತಿರುವುದು ಮತ್ತು ನಮ್ಮ ಅನೇಕ ಸಹೋದ್ಯೋಗಿಗಳು ಈ ಸದನವನ್ನು ಉದ್ದೇಶಿಸಿ ವಿದೇಶಿ ಭಾಷೆಯಲ್ಲಿ ಮಾತನಾಡುವುದು ಇದರಲ್ಲಿ ಏನೋ ಕೊರತೆ ಕಾಣುತ್ತಿದೆ ಎಂದು ತೋರುತ್ತದೆ. ನಾವು ಅದನ್ನು ಗುರುತಿಸೋಣ, ನಾವು ಆ ಲೋಪವನ್ನು ಅನುಮಾನವಿಲ್ಲದೆ ತೊಡೆದು ಹಾಕೋಣ. ಆದರೆ, ಒಂದು ಬದಲಾವಣೆಗೆ ಒತ್ತಾಯಿಸಲು ಯತ್ನಿಸಿದರೆ; ಅಥವಾ ತತ್‌ಕ್ಷಣ ಬದಲಾವಣೆಗೆ ಯತ್ನಿಸಿದರೆ, ನಾವು ಅಸಂಖ್ಯಾತ ವಿವಾದಗಳಲ್ಲಿ ಸಿಲುಕಿಕೊಳ್ಳುತ್ತೇವೆ ಮತ್ತು ಬಹುಶಃ ಇಡೀ ಸಂವಿಧಾನ ರಚನೆಯು ವಿಳಂಬವಾಗುತ್ತದೆ. ಹಾಗೆ ಕ್ರಮ ತೆಗೆದುಕೊಳ್ಳುವುದು ವಿವೇಕದ ಕ್ರಮವಾಗುವುದಿಲ್ಲ ಎಂದು ಈ ಸದನಕ್ಕೆ ನಿವೇದಿಸುತ್ತೇನೆ. ವೈಯಕ್ತಿಕ ಜೀವನದಲ್ಲಿ ಮತ್ತು ರಾಷ್ಟ್ರಜೀವನದಲ್ಲಿ ಭಾಷೆಯು ಒಂದು ಅತ್ಯಗತ್ಯವಾದ ಅಂಶವಾಗಿದೆ. ಅದು ಅತ್ಯಗತ್ಯವಾಗಿರುವುದರಿಂದ, ನಾವು ಆ ಬಗ್ಗೆ ಪ್ರತಿಯೊಂದು ರೀತಿಯ ಚಿಂತನ ಮತ್ತು ಪರಿಗಣನೆ ಮಾಡಬೇಕು. ಅದು ಪ್ರಮುಖ ವಿಷಯವಾಗಿರುವುದರಿಂದ ಅದು ಒಂದು ತುರ್ತು ವಿಷಯವೂ ಆಗಿದೆ. ಆದ್ದರಿಂದ ಅತ್ಯಗತ್ಯವಾಗಿದೆ ಎಂದು ಅದರ ಬಗ್ಗೆ ತುರ್ತಿನಕ್ರಮ ತೆಗೆದುಕೊಳ್ಳುವುದು ನಮ್ಮ ಉದ್ದೇಶವನ್ನು ಹಾಳುಗೆಡವುತ್ತದೆ. ಇದರಲ್ಲಿ ಸ್ವಲ್ಪಮಟ್ಟಿಗೆ ವಿರೋಧದ ಅಂಶಗಳಿವೆ. ಏಕೆಂದರೆ, ನಾವು ಯಾವುದನ್ನು ತುರ್ತು ಎಂದು ಭಾವಿಸಿ ಬಹುಸಂಖ್ಯಾಬಲದಿಂದ ಕ್ರಮ ಕೈಗೊಂಡರೆ, ದೇಶದ ಇತರ ಭಾಗಗಳಲ್ಲಿ ಇದನ್ನು ಇಷ್ಟಪಡದ ಅಥವಾ ಈ ಸದನದಲ್ಲಿ ಇರಬಹುದಾದ ಅಲ್ಪಸಂಖ್ಯಾತರು ಹಾಗೆ, ಹೇರಿದ ಕ್ರಮವನ್ನು ವಿರೋಧಿಸಿದರೆ, ನಾವು ನಿಜವಾಗಿ ಏನು ಸಾಧಿಸಲು ಅದನ್ನು ಆರಂಭಿಸಿದ್ದೆವೋ, ಅದು ಯಶಸ್ವಿಯಾಗುವುದಿಲ್ಲ. ದೇಶದಲ್ಲಿ ಬಲಶಾಲಿ ಶಕ್ತಿಗಳು ಕಾರ್ಯಪ್ರವೃತ್ತವಾಗಿವೆ, ಅವು ಅನಿವಾರ್ಯವಾಗಿ ಇಂಗ್ಲಿಷಿಗೆ ಬದಲಾಗಿ ಭಾರತಿಯ ಭಾಷೆಯನ್ನು ಬಳಸಬೇಕೆಂದು ಅಥವಾ ದೇಶದ ವಿವಿಧ ಭಾಗಗಳಿಗೆ ಸಂಬಂಧಿಸಿದಂತೆ ಇಂಗ್ಲಿಷಿಗೆ ಬದಲಾಗಿ ಭಾರತೀಯ ಭಾಷೆಗಳನ್ನು ಬಳಸುವಂತೆ ಒತ್ತಾಯಿಸಬಹುದು. ಆದರೆ ಯಾವಾಗಲೂ ಒಂದೇ ಅಖಿಲ ಭಾರತ ಭಾಷೆ

ಇರುತ್ತದೆ. ಬಲಶಾಲಿ ಶಕ್ತಿಗಳು ಅಖಿಲ ಭಾರತ ಭಾಷೆ ರೂಪಿಸಲು ಕೂಡ ಕಾರ್ಯಪ್ರವೃತ್ತವಾಗುತ್ತವೆ. ಭಾಷೆಯು ಅಂತಿಮವಾಗಿ ಜನರಿಂದಲೇ ಬೆಳೆಯುತ್ತದೆ, ಅದನ್ನು ಹೇರುವುದು ಎಂದೂ ಸಾಧ್ಯವಿಲ್ಲ. ಒಂದು ನಿರ್ದಿಷ್ಟ ಭಾಷೆಯನ್ನು ಇಚ್ಛಿಸದ ಜನತೆಯ ಮೇಲೆ ಆ ಭಾಷೆಯನ್ನು ಹೇರುವ ಯಾವುದೇ ಪ್ರಯತ್ನಮಾಡಿದರೆ, ಅತ್ಯಂತ ವಿರೋಧವನ್ನೆದುರಿಸಬೇಕಾಗುವುದಲ್ಲದೇ ಪ್ರವರ್ತಕರು ಏನನ್ನು ಸಾಧಿಸಬಯಸಿದ್ದರೊ ಅದಕ್ಕೆ ವ್ಯತಿರಿಕ್ತವಾದ ಫಲಿತಾಂಶವನ್ನು ನೀಡುತ್ತದೆ. ಸದನವು ನನ್ನ ಅಭಿಪ್ರಾಯವನ್ನು ಒಪ್ಪುವುದಾದರೆ, ಈ ಅಂಶವನ್ನು ಪರಿಗಣಿಸಲು ಹಾಗೂ ಅಖಿಲ ಭಾರತ ಭಾಷೆಯೊಂದನ್ನು ಅಭಿವೃದ್ಧಿಪಡಿಸಲು ಅತ್ಯಂತ ಭರವಸೆಯ ಮಾರ್ಗವೆಂದರೆ, ನಿರ್ಣಯಗಳನ್ನು ಅಂಗೀಕರಿಸುವುದಲ್ಲ ಮತ್ತು ಆ ವಿಷಯದಲ್ಲಿ ಕಾನೂನು ಜಾರಿಗೊಳಿಸುವುದಿಲ್ಲ. ಆದರೆ ಇತರ ರೀತಿಯಿಂದ ಗುರಿ ಸಾಧಿಸಬಹುದು ಎಂಬುದನ್ನು ಮನಗಾಣಬೇಕೆಂದು ನಾನು ಈ ಸದನವನ್ನು ಕೋರುತ್ತೇನೆ. ಅಖಿಲ ಭಾರತ ಭಾಷೆ ಯಾವುದಿರಬೇಕು ಎಂಬುದರ ಒಂದು ನಿಶ್ಚಿತ ಪರಿಕಲ್ಪನೆ ನನಗಿದೆ. ಇತರ ಜನರ ಪರಿಕಲ್ಪನೆಯು ನನ್ನದರಂತೆಯೇ ಇರದಿರಬಹುದು. ನಾನು ನನ್ನ ಪರಿಕಲ್ಪನೆಯನ್ನು ಈ ಸದನದ ಮೇಲೆ ಹೇರುವುದಿಲ್ಲ; ಇಲ್ಲವೇ ದೇಶದ ಮೇಲೆ ಹೇರುವುದಿಲ್ಲ. ಹೇಗೆಂದರೆ ಯಾವುದೇ ಇತರ ವ್ಯಕ್ತಿಯು, ಆತನ ಪರಿಕಲ್ಪನೆಯನ್ನು ದೇಶವು ಒಪ್ಪುವವರೆಗೂ ತನ್ನ ಪರಿಕಲ್ಪನೆಯನ್ನು ಹೇರಲು ಸಾಧ್ಯವಿರುವುದಿಲ್ಲವೋ ಹಾಗೆ ಸಾಧ್ಯವಿಲ್ಲ; ಆದರೆ ನಾನು ನನ್ನ ಅಥವಾ ಇನ್ನಾರದೋ ಪರಿಕಲ್ಪನೆಯನ್ನು ಹೇರಲು ಯತ್ನಿಸುವುದನ್ನೂ ತಪ್ಪಿಸುತ್ತೇನೆ, ಆದರೆ ಅದನ್ನು ಸಹಕಾರ ಮತ್ತು ವಿಶ್ವಾಸದಿಂದ ಸಾಧಿಸಬಹುದು ಮತ್ತು ಸಂವಿಧಾನ ಮೊದಲಾದವುಗಳ ಪ್ರಮುಖ ವಿಷಯಗಳನ್ನು ಇತ್ಯರ್ಥಗೊಳಿಸಿದನಂತರ, ಹೆಚ್ಚಿನ ಸ್ಥಿರತೆಯನ್ನು ಪಡೆದುಕೊಂಡ ಅನಂತರ, ನಾವು ಈ ಒಂದೊಂದು ಪ್ರಶ್ನೆಗಳನ್ನು ಕೈಗೆತ್ತಿಕೊಂಡು ಹೆಚ್ಚು ಉತ್ತಮ ವಾತಾವರಣದಲ್ಲಿ ಇತ್ಯರ್ಥಮಾಡುವುದು ಸೂಕ್ತವಾಗುವುದು.

ನಾನು ಈ ಸದನದ ಮುಂದೆ ಉದ್ದೇಶಗಳ ನಿರ್ಣಯದ ಪ್ರಸ್ತಾವ ತಂದಾಗ, ನಮ್ಮ ಸಂವಿಧಾನವನ್ನು, ಸ್ವತಂತ್ರ ಸಾರ್ವಭೌಮ ಗಣರಾಜ್ಯಕ್ಕಾಗಿ ರೂಪಿಸಬೇಕೆಂಬುದನ್ನು ಹೇಳುತ್ತಿದ್ದೇವೆ. ಅಥವಾ ನಾವು ರಚಿಸತಕ್ಕದ್ದೆಂಬ ಅಂಶವನ್ನು ಉಲ್ಲೇಖಿಸಿದ್ದೆ. ಆ ಸಮಯದಲ್ಲಿ ಮತ್ತು ಅನಂತರದಲ್ಲಿ ನಮ್ಮ ರಾಷ್ಟ್ರವು ಒಂದು ಗಣರಾಜ್ಯವಾಗಿ ಹಾಗೂ ಅದಕ್ಕಾಗಿ ಸಂವಿಧಾನ ರಚಿಸುವುದು ಒಟ್ಟಾರೆ ಒಂದೇ ವಿಷಯ ಎಂದು ಹೇಳಿದ್ದೆ. ನಾವು ಇತರ ದೇಶಗಳೊಂದಿಗೆ ಏನೆಲ್ಲ ಸಂಬಂಧಗಳನ್ನು ಹೊಂದಿರಬೇಕು ಎಂದು ಹೇಳುವುದರಲ್ಲಿ ಅದೂ ಗಮನಾರ್ಹವಾಗಿ ಯುನೈಟೆಡ್ ಕಿಂಗ್‌ಡಮ್ ಅಥವಾ ಬ್ರಿಟಿಷ್ ಕಾಮನ್‌ವೆಲ್ತ್ ನೇಷನ್ಸ್ ಎಂದು ಕರೆಯಲಾಗುವ ಕಾಮನ್‌ವೆಲ್ತ್‌ಗೆ ಸಂಬಂಧಿಸಿದಂತೆ ಮಾಡುವುದೇನೂ ಇಲ್ಲ ಅಥವಾ ಇದ್ದರೂ ಅಲ್ಪ ಸ್ವಲ್ಪ. ಅದು ಸದನದಿಂದಲೇ ನಿರ್ಧಾರವಾಗಬೇಕಾದ ಪ್ರಶ್ನೆ, ಇನ್ನಾರಿಂದಲೂ ಅಲ್ಲ, ಅದು ನಮ್ಮ ಸಂವಿಧಾನ ಏನಾಗಿತ್ತು ಎಂಬುದನ್ನು ಪ್ರತ್ಯೇಕವಾಗಿ ಆಲೋಚಿಸಬೇಕಾಗಿದೆ. ಇತ್ತೀಚಿನ ವಾರಗಳಲ್ಲಿ ನಾನು ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಇದ್ದಾಗ, ಈ ವಿಷಯ ಕುರಿತು ಅಥವಾ ಅಂಥದೇ ವಿಷಯ ಕುರಿತು ಖಾಸಗಿಯಾಗಿ ಚರ್ಚೆಗೆ ಬಂದಾಗ, ಯಾವ ಸಾರ್ವಜನಿಕ ಚರ್ಚೆಯೂ ನಡೆಯಲಿಲ್ಲ ಅಥವಾ ತೀರ್ಮಾನವನ್ನೂ ಕೈಗೊಳ್ಳಲಿಲ್ಲ. ಏಕೆಂದರೆ ನಾನು ಭಾಗಿಯಾಗಿದ್ದ ಕಾಮನ್‌ವೆಲ್ತ್ ಸಮ್ಮೇಳನದ ಅಧಿವೇಶಗಳಲ್ಲಿ ಅದನ್ನು ಗಮನಿಸಲೇ ಇಲ್ಲ, ಆದರೆ ಖಾಸಗಿ ಚರ್ಚೆಗಳು ತಪ್ಪದೇ ನಡೆದವು, ಏಕೆಂದರೆ ನಮಗಷ್ಟೆ ಅಲ್ಲ, ಇತರ ದೇಶಗಳಿಗೂ ಅದು ಸಕಾಲಿಕ ವಿಷಯವಾಗಿತ್ತು. ಅದೆಂದರೆ ನಾವು ಯಾವುದಾದರೂ ದೇಶಗಳೊಡನೆ ಏನಾದರೂ ಸಂಬಂಧ ಹೊಂದಿದ್ದರೆ ಅಂಥ ಇತರ ದೇಶಗಳೊಂದಿಗೆ ಯಾವುದೇ ಸಂಪರ್ಕವಿದ್ದರೆ, ಯಾವ ರೀತಿ ಅಂಥ ಸಂಬಂಧ ಹೊಂದಿರಬೇಕು ಎಂಬುದೇ ಆ ಚರ್ಚೆ ಆಗಿತ್ತು, ಇದನ್ನು ಸದನಕ್ಕೆ ತಿಳಿಸಬಯಸುತ್ತೇನೆ. ಆದುದರಿಂದ ವಿಷಯವು ಖಾಸಗಿ ಚರ್ಚೆಯಲ್ಲಿ ಬಂದಿತ್ತು. ಮೊದಲನೆಯದಾಗಿ, ನಾನು ಈ ಎಲ್ಲ ಚರ್ಚೆಗಳಲ್ಲಿ ಅನಿವಾರ್ಯವಾಗಿ ಹೇಳಬೇಕಾದುದು ಯಾವುದೆಂದರೆ, ಪ್ರಧಾನಮಂತ್ರಿಗಳ ಕಛೇರಿಯು ನನ್ನನ್ನು ಗೌರವಿಸುತ್ತಿದ್ದರೂ, ಒಬ್ಬ ವ್ಯಕ್ತಿಯಾಗಿ ನಾನು,

ಯಾವುದೇ ರೀತಿಯಲ್ಲಿ ಅಥವಾ ಯಾವುದೇ ಅರ್ಥದಲ್ಲಿ, ದೇಶವನ್ನು ಹಾಗೂ ಸರ್ಕಾರವನ್ನು ಪ್ರತಿನಿಧಿಸುವ ಗೌರವ ಹೊಂದಿದ್ದೆನಾದರೂ, ಈ ವಿಷಯವನ್ನು ಅಂತಿಮವಾಗಿ ನಾನು ನಿರ್ಧರಿಸಲಿಲ್ಲ. ಭಾರತದ ಸಂವಿಧಾನ ರಚನಾಸಭೆಯೊಂದೇ ಅಂತಿಮವಾಗಿ ಅವಶ್ಯವಾಗಿ ನಿರ್ಧರಿಸಬೇಕಾದ ವಿಷಯವಾಗಿತ್ತು, ಇದನ್ನು ನಾನು ಚನ್ನಾಗಿ ಸ್ಪಷ್ಟಪಡಿಸಿದ್ದೇನೆ. ಹಾಗೇ ಸ್ಪಷ್ಟಪಡಿಸಿದ ಅನಂತವೂ ಈ ಸಂವಿಧಾನ ರಚನಾಸಭೆಯು ಈ ವಿಷಯದಲ್ಲಾಗಲಿ ಮತ್ತು ಇತರ ವಿಷಯದಲ್ಲಾಗಲಿ ಸಾರ್ವಭೌಮ ಅಧಿಕಾರ ಹೊಂದಿರುವುದರಿಂದ ಈ ಉದ್ದೇಶಗಳ ನಿರ್ಣಯವನ್ನು ಬದಲಾಯಿಸಲು ಅದು ಸ್ವತಂತ್ರವಾಗಿದೆ ಎಂದು ಮತ್ತೆ ಸ್ಪಷ್ಟವಾಗಿ ಹೇಳಿದ್ದೇನೆ. ಆದರೂ, ಸಂವಿಧಾನ ರಚನಾಸಭೆಯೇ ಕರಡು ರಚನಾಸಮಿತಿಗೆ ನೀಡಿದ ನಿರ್ದೇಶನ ಅದಾಗಿತ್ತು ಮತ್ತು ಅದು ಎಲ್ಲಿಯವರೆಗೆ ಜಾರಿಯಲ್ಲಿ ಉಳಿದಿರುತ್ತದೋ (ಮತ್ತು ನಾನು ಹೇಳಿದಂತೆ)–ಅದು ಹಾಗೇ ಉಳಿದುಬಿಡುತ್ತದೆ, (ಹರ್ಷೋದ್ಗಾರ) ಅಲ್ಲಿಯವರೆಗೆ ಸಂವಿಧಾನದ ಉದ್ದೇಶಗಳ ಅಂಥ ನಿರ್ಣಯವೂ ಜಾರಿಯಲ್ಲಿ ಇರುತ್ತದೆ ಎಂದು ಹೇಳಿದೆ. ಮಾನ್ಯರೆ, ಇದನ್ನು ಸ್ಪಷ್ಟಗೊಳಿಸುತ್ತ, ನಾವು ಇತರ ದೇಶಗಳೊಂದಿಗೆ, ಯುನೈಟೆಡ್ ಕಿಂಗ್‌ಡಮ್‌ನೊಂದಿಗೆ ಮತ್ತು ಕಾಮನ್‌ವೆಲ್ತ್‌ನೊಂದಿಗೆ ಸ್ನೇಹಸಂಬಂಧ ಮಾಡಿಕೊಳ್ಳಲು ಅಪೇಕ್ಷಿಸುತ್ತೇವೆ ಎಂದು ಮೇಲಿಂದ ಮೇಲೆ ಹೇಳಲಾಗುತ್ತಿದೆ ಎಂದು ಹೇಳಿದೆ. ಈ ಸಂದರ್ಭದಲ್ಲಿ ಹೇಗೆ ಇದನ್ನು ಮಾಡಬಹುದು ಅಥವಾ ಮಾಡಬೇಕು ಎಂಬುದರ ಬಗ್ಗೆ ಜಾಗರೂಕವಾಗಿ ಪರಿಗಣನೆ ಮಾಡಿ ಸಂವಿಧಾನ ರಚನಾಸಭೆಯು ಸ್ವಾಭಾವಿಕವಾಗಿ ನಮ್ಮ ಪರವಾಗಿಯೂ ಮತ್ತು ಆಯಾ ಸರ್ಕಾರಗಳ ಅಥವಾ ಜನರ ಪರವಾಗಿಯೂ ಅಂತಿಮ ನಿರ್ಣಯವನ್ನು ಮಾಡತಕ್ಕದ್ದು. ಏಕೆಂದರೆ ಈ ಅಧಿವೇಶನದ ಅವಧಿಯಲ್ಲಿ ಸಾಧ್ಯವಾದ ಮಟ್ಟಿಗೆ ಈ ವಿಷಯವನ್ನು ಇನ್ನೂ ಹೆಚ್ಚು ಗಟ್ಟಿಯಾಗಿ ಸದನದ ಮುಂದೆ ತರಲಾಗುವುದರಿಂದ ಈ ಹಂತದಲ್ಲಿ ಈ ವಿಷಯದ ಬಗ್ಗೆ ನಾನು ಹೇಳುವುದು ಇಷ್ಟೇ, ಆದರೆ, ಅದು ಯಾವುದೇ ರೂಪದಲ್ಲಿ ಈಗ ಅಥವಾ ಅನಂತರ, ಬರಲಿ, ನಾವು ಪರಿಗಣಿಸುತ್ತಿರುವ ಸಂವಿಧಾನದಿಂದ ಬೇರೆಯದಾದ ಯಾವುದೇ ವಿಷಯವಾಗಿರಲಿ ಮತ್ತು ಬೇರೆಯ ಅರ್ಥದಲ್ಲಿಯೇ ಇರಲಿ, ಅದನ್ನು ನಾನು ಒತ್ತಾಸೆ ಮಾಡಿ ಬಯಸುತ್ತೇನೆ. ಸ್ವತಂತ್ರ ಸಾರ್ವಭೌಮ ಪ್ರಜಾಪ್ರಭುತ್ವಕ್ಕಾಗಿ ಅಥವಾ ನಾವು ಆಯ್ದುಕೊಂಡಂತೆ. ಗಣರಾಜ್ಯಕ್ಕಾಗಿ ಆ ಸಂವಿಧಾನವನ್ನು ಅಂಗೀಕರಿಸೋಣ, ಮತ್ತು ಎರಡನೆಯ ಪ್ರಶ್ನೆಯನ್ನು ಈ ಸದನವು ಸೂಕ್ತವೆನಿಸಿದ ಯಾವುದೇ ಕಾಲದಲ್ಲಿ ಪ್ರತ್ಯೇಕವಾಗಿ ಪರಿಗಣಿಸಬೇಕಾಗುತ್ತದೆ. ಭಾರತದ ಭವಿಷ್ಯದ ಆಡಳಿತಕ್ಕೆ ಸಂಬಂಧಿಸಿದಂತೆ ಭಾರತದ ಜನರು ಮುಕ್ತಮನಸ್ಸಿನಿಂದ ತಿಳಿಸುವ ಅಭಿಪ್ರಾಯವನ್ನು ತಮ್ಮ ಪ್ರತಿನಿಧಿಗಳ ಮೂಲಕ ಈ ಸಂವಿಧಾನ ರಚನೆಗೆ ಸಮ್ಮತಿಸಿರುವುದರಿಂದ ನಮ್ಮ ಈ ಸಂವಿಧಾನಕ್ಕೆ ಯಾವುದೇ ಅಡ್ಡಿ ಇರುವುದಿಲ್ಲ ಅಥವಾ ಅದನ್ನು ಸೀಮಿತಗೊಳಿಸಲಾಗುವುದಿಲ್ಲ.

ಈಗ, ನಾನು ಹೇಳಿದ್ದನ್ನೇ ಪುನಃ ಹೇಳಲು ಪ್ರಾರ್ಥಿಸಿಕೊಳ್ಳಬಹುದಾದರೆ ಅದು ಹೀಗಿದೆ: ದೈವವು ಈ ದೇಶವು ನಿರ್ದಿಷ್ಟ ಪಾತ್ರ ವಹಿಸುವಂತೆ ಮಾಡಿದೆ. ಇಲ್ಲಿ ಉಪಸ್ಥಿತರಿರುವ ಯಾರೊಬ್ಬ ಪುರುಷನನ್ನಾಗಲಿ ಅಥವಾ ಸ್ತ್ರೀಯನ್ನಾಗಲಿ ಅಂಥ ಅದೃಷ್ಟವಂತ ಎಂದು ಕರೆಯಬಹುದು ಅಥವಾ ಇಲ್ಲದಿರಬಹುದು ಅದು ನನಗೂ ತಿಳಿಯದು. ಸಾಮಾನ್ಯ ಮಾನವರಿಗೆ ಅನ್ವಯವಾಗದ ದೊಡ್ಡ ಶಬ್ದ ಅದು. ಆದರೆ ಅಂಥ ಅದೃಷ್ಟ ಪುರುಷರಲ್ಲಾಗಲಿ ಅಥವಾ ಸ್ತ್ರೀಯರಲ್ಲಾಗಲಿ ನಾವೂ ಸೇರಿರಬಹುದೋ ಅಥವಾ ಇಲ್ಲವೋ, ಆದರೆ ಭಾರತವು ಅಂಥ ಅದೃಷ್ಟವಂತ ದೇಶ. (ಹರ್ಷೋದ್ಗಾರ) ಮತ್ತು ತನ್ನ ಮುಂದೆಯೇ ಇರುವ ಈ ಮಹಾನ್ ಅದೃಷ್ಟವಂತ ಹಾಗೂ ಈ ಮಹಾನ್ ದೇಶವನ್ನು ನಾವು ಪ್ರತಿನಿಧಿಸುವವರೆಗೂ ಅದೃಷ್ಟವಂತರಾಗಿರುವ ಪುರುಷರು ಮತ್ತು ಸ್ತ್ರೀಯರು, ಈ ನಮ್ಮ ದೇಶದ ಅದೃಷ್ಟವು ನಮಗೆ ನೀಡಿರುವ ಸ್ವಾತಂತ್ರ್ಯದ ದೊಡ್ಡ ಜವಾಬ್ದಾರಿಯನ್ನು ನಾವು ಎಂದೂ ಮರೆಯದೇ, ಸಣ್ಣಪುಟ್ಟ ವಿವಾದಗಳಲ್ಲಿ, ಚರ್ಚೆಗಳಲ್ಲಿ ತೊಡಗದೇ ಸಂದರ್ಭದಲ್ಲಿ ಉಪಯುಕ್ತವಾಗಬಹುದಾದರೂ ಉಚಿತವಲ್ಲದ ಹಾಗೂ ಹೊಂದಾಣಿಕೆ ಇಲ್ಲದ ಚರ್ಚೆಗಳಲ್ಲಿ ತೊಡಗಿಸಿಕೊಳ್ಳದೇ

ಭವ್ಯ ಭವಿಷ್ಯತ್ತಿನ ನಿರೀಕ್ಷೆ ಮಾಡುತ್ತ ವಿಶ್ವದ ಮತ್ತು ಏಷ್ಯಾದ ಸಮಸ್ಯೆಗಳನ್ನು ಪರಿಹರಿಸುವ ಕಾರ್ಯವನ್ನು ನಿರ್ವಹಿಸಬೇಕಾಗಿದೆ. ಅಸಂಖ್ಯಾತ ಮನಸ್ಸುಗಳು ಮತ್ತು ಕಣ್ಣುಗಳು ಈ ಕಡೆಗೇ ನೋಡುತ್ತಿವೆ. ನಾವು ಅವುಗಳನ್ನು ನೆನಪಿಡಬೇಕು. ಲಕ್ಷ ಲಕ್ಷ ನಮ್ಮ ಜನ ನಮ್ಮನ್ನೇ ನೋಡುತ್ತಿದ್ದಾರೆ ಮತ್ತು ಲಕ್ಷಲಕ್ಷ ಇತರ ಜನರೂ ನಮ್ಮನ್ನೇ ನೋಡುತ್ತಿದ್ದಾರೆ. ಮತ್ತು ಇದನ್ನು ನೆನೆಪಿಡಿ, ನಾವು ಈ ಸಂವಿಧಾನವನ್ನು ಸಾಧ್ಯವಾದಷ್ಟು ದೃಢವಾಗಿ ಮತ್ತು ಶಾಶ್ವತವಾಗಿ ಉಳಿಯುವಂಥ ರಚನೆಯಾಗಿ ಮಾಡುವ ಇಚ್ಛೆ ಇದೆ. ಇತರ ಸಂವಿಧಾನಗಳಲ್ಲಿ ಏನೇ ಇರಲಿ, ಅಲ್ಲಿ ಮುಖ್ಯವಲ್ಲ ಅದಕ್ಕೆ ನಮ್ಯತೆ ಇರಬೇಕು, ಸಂವಿಧಾನವನ್ನು ಜಡವಾಗಿರುವಂತೆ ಮತ್ತು ಖಾಯಂ ಮಾಡಿದರೆ, ರಾಷ್ಟ್ರದ ಬೆಳವಣಿಗೆಯು ಸ್ಥಗಿತವಾಗುತ್ತದೆ; ಜೀವಂತ ಜನರ ಬೆಳವಣಿಗೆಯೂ ನಿಂತು ಹೋಗುತ್ತದೆ. ಆದುದರಿಂದ ಅದು ನಮ್ಯವಾಗಿರಬೇಕು, ಅದೇ ರೀತಿ, ನೀವು ಈ ಸಂವಿಧಾನವನ್ನು ಅಂಗೀಕರಿಸಿದ ಮೇಲೆ ಕೆಲವು ವರ್ಷಗಳ ಅವಧಿಯಲ್ಲಿ, ಅಂಥ ಅವಧಿಯನ್ನು ಪ್ರಸ್ತಾವಿಸಲಾಗಿದೆ ಎಂದು ಭಾವಿಸಿದ್ದೇನೆ ಹಾಗೂ ಆ ಅವಧಿ ಎಷ್ಟೇ ಆಗಿರಬಹುದು, ಆ ಅವಧಿಯಲ್ಲಿ ಸಂವಿಧಾನದಲ್ಲಿ ಸುಲಭವಾಗಿ ಹಾಗೂ ಯಾವುದೇ ಕಠಿಣ ಪ್ರಕ್ರಿಯೆಗಳಿಲ್ಲದೆ ಬದಲಾವಣೆಗಳನ್ನು ಮಾಡಬಹುದು, ಹಲವು ಕಾರಣಗಳಿಗಾಗಿ ಈ ಒಂದು ಉಪಬಂಧ ಕಲ್ಪಿಸುವುದು ಆವಶ್ಯಕವಾಗಿತ್ತು ಅವುಗಳಲ್ಲಿ ಈ ಉಪಬಂಧವೂ ಒಂದು, ಈ ಸದನದಲ್ಲಿ ಸಭೆ ಸೇರಿರುವ ನಾವು ನಿಸ್ಸಂಶಯವಾಗಿ ಭಾರತದ ಜನರನ್ನು ಪ್ರತಿನಿಧಿಸುತ್ತೇವೆ, ಆದರೆ, ಒಂದು ಹೊಸ ಸದನವನ್ನು ಅದನ್ನು ಏನೇ ಹೆಸರಿನಿಂದ ಕರೆದಿರಲಿ ಅದು ರಚಿತವಾದಾಗ, ಈ ಸಂವಿಧಾನ ಉಪಬಂಧಗಳ ಪ್ರಕಾರ ಚುನಾಯಿತ ಸದನವೆಂದೇ ತಿಳಿಯಲಾಗುತ್ತಿದೆ. ಮತ್ತು ಮತ ನೀಡಲು ಹಕ್ಕು ಇರುವ ಭಾರತದ ಪ್ರತಿಯೊಬ್ಬ ವಯಸ್ಕಪುರುಷನು ಮತ್ತು ಮಹಿಳೆಯು ಮತ ನೀಡಿ, ಚುನಾಯಿಸಿದ ಪ್ರತಿನಿಧಿಗಳಿರುವ ಈ ಸದನವನ್ನು ಭಾರತದ ಜನರ ಪ್ರತಿಯೊಂದು ಪಂಗಡವನ್ನು ಪ್ರತಿನಿಧಿಸುತ್ತದೆ ಎಂದು ನಾನು ಹೇಳಬಹುದಾಗಿದೆ ಮತ್ತು ನಿಜವಾಗಿಯೂ ಹೇಳಬಹುದು. ಈ ಸಂವಿಧಾನದಡಿ ಹಾಗೇ ಚುನಾಯಿತವಾದ ಸದನವು ಏನನ್ನಾದರೂ ಮಾಡಲು ಹಕ್ಕುಳ್ಳದ್ದಾಗಿರುತ್ತದೆ, ಅದು ಇಚ್ಛಿಸುವ ಬದಲಾವಣೆಗಳನ್ನು ಮಾಡಲು ಸುಲಭ ಅವಕಾಶ ಹೊಂದಿರತಕ್ಕದ್ದು. ಆದರೆ ಯಾವುದೇ ಪ್ರಸಂಗದಲ್ಲಿ ನಾವು ಕೆಲವು ಇತರ ದೊಡ್ಡ ದೇಶಗಳಲ್ಲಿ ಇರುವಂತೆ, ಅಲ್ಲಿರುವ ಸಂವಿಧಾನಗಳು ಎಷ್ಟು ಜಡವಾಗಿರುತ್ತವೆ ಎಂದರೆ, ಬದಲಾಗುತ್ತಿರುವ ಪರಿಸ್ಥಿತಿಗಳನ್ನು ಸುಲಭವಾಗಿ ಒಪ್ಪಿಕೊಳ್ಳುವುದಿಲ್ಲ ಮತ್ತು ಒಪ್ಪಿಕೊಳ್ಳಲೂ ಸಾಧ್ಯವಿಲ್ಲದಂಥವು ಆಗಿರುತ್ತದೆ. ವಿಶೇಷವಾಗಿ ಇಂದು, ಜಗತ್ತು ಪ್ರಕ್ಷುಬ್ಧತೆಯಲ್ಲಿರುವಾಗ ಮತ್ತು ನಾವು ವೇಗವಾಗಿ ಪರಿವರ್ತನೆಯಾಗುತ್ತಿರುವ ಕಾಲದಲ್ಲಿ ಸಾಗುತ್ತಿರುವಾಗ, ನಾವು ಇಂದು ಏನು ಮಾಡಬಹುದೋ, ಅದು ನಾಳೆಗೆ ಇಡಿಯಾಗಿ ಅನ್ವಯವಾಗದಿರಬಹುದು. ಆದುದರಿಂದ, ನಾವು ಸಂವಿಧಾನ ರಚಿಸುವಾಗ, ಅದು ಸಮರ್ಥವಾಗಿರಬೇಕು ಸಾಧ್ಯವಾದಷ್ಟೂ ಆಧಾರವಾಗಿರಬೇಕು ಹಾಗೂ ನಮ್ಯವಾಗಿರಬೇಕು ಮತ್ತು ಅಧಿಕಾರ ಅವಧಿಯಲ್ಲಿ ನಾವು ಅದನ್ನು ಸಾಪೇಕ್ಷ ಸೌಲಭ್ಯಗಳಿಗೆ ಸೂಕ್ತವಾದಂತೆ ಬದಲಾಯಿಸುವ ಸ್ಥಿತಿಯಲ್ಲಿರಬೇಕು.

ಪ್ರತ್ಯೇಕ ಅಸ್ತಿತ್ವದ ಬಗ್ಗೆ ಅಥವಾ ಪ್ರತ್ಯೇಕ ಸವಲತ್ತುಗಳ ಬೇಡಿಕೆ ಬಗ್ಗೆ ಮತ್ತು ಅಂಥವೇ ವಿಚಾರ ಮಾಡುತ್ತಿರುವ ಕೆಲವು ಪ್ರವೃತ್ತಿಗಳು ದೇಶದಲ್ಲಿವೆ ಎಂದು ಒಂದು ಮಾತು ಹೇಳಬಹುದೇ? ಈ ಉದ್ದೇಶಗಳ ನಿರ್ಣಯದಲ್ಲಿ ಅಲ್ಪಸಂಖ್ಯಾತರಿಗೆ, ಬುಡಕಟ್ಟು ಪ್ರದೇಶಗಳಿಗೆ, ಶೋಷಿತ ವರ್ಗಗಳಿಗೆ ಹಾಗೂ ಮತ್ತಿತರ ಹಿಂದುಳಿದ ವರ್ಗಗಳಿಗೆ ಸಾಕಷ್ಟು ರಕ್ಷಣೆಗಳನ್ನು ಒದಗಿಸಬೇಕೆಂದು ತಿಳಿಸಲಾಗಿದೆ. ಅದೂ ಅಲ್ಲದೇ ಅದನ್ನು ಮಾಡಲೇಬೇಕು ಮತ್ತು ಅದು ಮಾಡಲಾಗಿದೆಯೇ ಎಂದು ನೋಡುವುದು ಬಹುಸಂಖ್ಯಾತರ ಕರ್ತವ್ಯ ಮತ್ತು ಜವಾಬ್ದಾರಿ ಆಗಿದೆ. ಭಯಪೀಡಿತರಾಗಿರುವವರನ್ನು ಸಂಶಯದಿಂದ ನೋಡದೇ ಅಲ್ಪಸಂಖ್ಯಾತರನ್ನು ಅವರ ಮನಸ್ಸನ್ನು ಗೆಲ್ಲಬೇಕಾಗಿದೆ. ನಾವು ಭಾರತದಲ್ಲಿರುವ ಹಿಂದುಳಿದ ವರ್ಗದವರ ಜೀವನ ಮಟ್ಟವನ್ನು ಏರಿಸಬೇಕಾಗಿದೆ ಹಾಗೂ ಅವರನ್ನು ಉಳಿದವರ ಮಟ್ಟಕ್ಕೆ ತರಬೇಕಾಗಿದೆ, ಆದರೆ ಇದನ್ನು ಮಾಡುವ

ಪ್ರಯತ್ನದಲ್ಲಿ ಇವು ಮತ್ತೆ ಪ್ರತಿಬಂಧಗಳನ್ನು ಸೃಷ್ಟಿ ಮಾಡುವುದು ಸರಿಯಲ್ಲ, ಅಥವಾ ಈಗ ಇರುವ ಪ್ರತಿಬಂಧಗಳನ್ನು ಹಾಗೆ ಉಳಿಸಿಕೊಳ್ಳುವುದು ಕೂಡಾ ಸರಿಯಲ್ಲ; ಏಕೆಂದರೆ ಅಂತಿಮ ಉದ್ದೇಶ ಅವರನ್ನು ಪ್ರತ್ಯೇಕವಾಗಿ ಇಡುವುದಲ್ಲ ಆದರೆ ಒಂದು ಜೀವಂತ ಸ್ವರೂಪದ ರಾಷ್ಟ್ರವನ್ನು ಕಟ್ಟಬೇಕಾಗಿದೆ ಅದು ಏಕರೂಪದ ರಾಷ್ಟ್ರವನ್ನು ಕಟ್ಟಬೇಕಾಗಿಲ್ಲ. ಏಕೆಂದರೆ ನಮ್ಮದು ವೈವಿಧ್ಯ ಸಂಸ್ಕೃತಿ ಇರುವ ರಾಷ್ಟ್ರ, ಮತ್ತು ಈ ದೇಶದ ಬೇರೆ ಬೇರೆ ಭಾಗಗಳಲ್ಲಿ ಜೀವನ ಕ್ರಮವೂ ವೈವಿಧ್ಯಪೂರ್ಣವಾಗಿದೆ; ಅಭ್ಯಾಸಗಳು ವ್ಯತ್ಯಾಸವಾಗುತ್ತವೆ ಮತ್ತು ಸಾಂಸ್ಕೃತಿಕ ಪರಂಪರೆಗಳು ಬೇರೆ ಬೇರೆಯಾಗಿವೆ. ಈ ವಿಷಯದಲ್ಲಿ ನನಗೆ ಯಾವುದೇ ಅಸಮಾಧಾನವಿಲ್ಲ. ಅಂತಿಮವಾಗಿ ಆಧುನಿಕ ಪ್ರಪಂಚದಲ್ಲಿ ಇತರರ ಮೇಲೆ ಪ್ರಭಾವ ಬೀರುವಂಥ ಬಲವಾದ ಪ್ರವೃತ್ತಿ ಇರುವ ಸಂಸ್ಕೃತಿ ಇದೆ. ಅದು ಒಂದು ಸ್ವಾಭಾವಿಕ ಪ್ರವೃತ್ತಿ ಆಗಿರಬಹುದು. ಅದರೆ ಭಾರತದ ವೈಭವವನ್ನು ಯಾವ ರೀತಿ ವ್ಯವಸ್ಥೆಗೊಳಿಸಲಾಗಿದೆ ಎಂದರೆ, ಏಕಕಾಲದಲ್ಲಿ ಎರಡೂ ವಿಷಯಗಳನ್ನು ನಿರ್ವಹಿಸಿಕೊಂಡು ಬರಲಾಗಿದೆ ಎಂದು ನಾನು ತಿಳಿದಿದ್ದೇನೆ, ಎಂದರೆ, ಅನಂತ ವೈವಿಧ್ಯಗಳು ಇದ್ದರೂ ಅಂಥ ವೈವಿಧ್ಯದಲ್ಲಿಯೇ ಏಕತೆಯೂ ಇದೆ. ಎರಡನ್ನೂ ಇಟ್ಟುಕೊಳ್ಳಬೇಕಾಗಿದೆ. ಏಕೆಂದರೆ ನಾವು ವೈವಿಧ್ಯವನ್ನು ಮಾತ್ರ ಇಟ್ಟುಕೊಂಡರೆ, ಅದು ಪ್ರತ್ಯೇಕತೆಯನ್ನು ಮಾತ್ರವೇ ಇಟ್ಟುಕೊಂಡಂತೆ ಹಾಗೂ ಅದು ತುಂಡುತುಂಡಾಗುತ್ತದೆ. ನಾವು ಯಾವುದಾದರೂ ನಿಯಂತ್ರಿತ ಏಕತೆಯನ್ನೂ ಹೇರಿದರೆ ಅದು ಜೀವಂತಿಕೆಯನ್ನು ಜೀವರಹಿತ ಮಾಡುತ್ತದೆ. ಪ್ರತಿಯೊಂದು ಕಾರ್ಯವನ್ನು ಮಾಡುವುದು ನಮ್ಮ ಮೇಲಿರುವ ಕರ್ತವ್ಯವಾಗಿರುವುದರಿಂದ, ನಾವು ಪ್ರತಿಯೊಬ್ಬ ಅಲ್ಪಸಂಖ್ಯಾತರಿಗೂ ಅಥವಾ ಸಮೂಹಕ್ಕೂ ಪೂರ್ಣ ಅವಕಾಶ ಕೊಡಬಹುದು ಮತ್ತು ಪ್ರತಿಯೊಂದು ಹಿಂದುಳಿದ ಸಮೂಹಕ್ಕೆ ಅಥವಾ ವರ್ಗಕ್ಕೆ ಮೇಲೆ ಬರಲು ಸಂಪೂರ್ಣ ಅವಕಾಶ ಕೊಡಬಹುದು, ಈ ಹಿಂದೆ ಈ ದೇಶದಲ್ಲಿ ಅಡೆ–ತಡೆಗಳನ್ನು ಸೃಷ್ಟಿಸಿ. ರಕ್ಷಣೆಗೆ ಮೊರೆಯಿಡುವುದು ಸರಿಯಾದುದೆಂದು ನಾನು ಭಾವಿಸುವುದಿಲ್ಲ. ಬಹುಸಂಖ್ಯಾತರಿಂದ ಅಂಥ ಅಲ್ಪಸಂಖ್ಯಾತರನ್ನು ಅಥವಾ ಒಂದು ಸಮೂಹವನ್ನು ರಕ್ಷಿಸುವುದಿಲ್ಲ, ಯಾವುದೂ ರಕ್ಷಿಸುವುದಿಲ್ಲ. ಪ್ರತ್ಯೇಕಿಸುವ ಇಂಥ ಅಡೆತಡೆಗಳೂ ರಕ್ಷಿಸುವುದೇ ಇಲ್ಲ ಎಂಬುದು ವಾಸ್ತವ. ಇದು ಅದನ್ನು ಒಂದು ಶಾಶ್ವತವಾಗಿಯೂ ಪ್ರತ್ಯೇಕ ಸಮೂಹವಾಗಿ ಮಾಡುತ್ತದೆ. ಮತ್ತು ಅದು ದೇಶದಲ್ಲಿನ ಇತರ ವರ್ಗಗಳ ಹತ್ತಿರಕ್ಕೆ ತರಲು ಯಾವುದೇ ಪ್ರವೃತ್ತಿಯನ್ನು ತಡೆಯುತ್ತದೆ.

ಮಾನ್ಯರೆ, ಈ ವಿವಿಧ ಖಂಡಗಳನ್ನು ಪರಿಗಣಿಸಿದಾಗ ಸದನವು ನಾನು ಹೇಳಿದ ಅಂಶಗಳನ್ನು ಮನಸ್ಸಿನಲ್ಲಿಟ್ಟುಕೊಂಡಿರುತ್ತದೆ ಎಂದು ನಾನು ನಂಬಿದ್ದೇನೆ ಎಂದಷ್ಟೇ ಹೇಳಲು ನನಗೆ ಸಾಧ್ಯವಾಗುತ್ತದೆ ಹಾಗೂ ಅಂತಿಮವಾಗಿ ನಾವು ಈ ಮಹಾನ್ ಕಾರ್ಯವನ್ನು ಆರಂಭಿಸಿದಾಗ ಇದ್ದ ಪವಿತ್ರ ಮನೋಭಾವದಿಂದ ಈ ಸಂವಿಧಾನವನ್ನು ಅಂಗೀಕರಿಸೋಣ.

ಸಭೆಯನ್ನು ಮೂರು ಗಂಟೆಯವರೆಗೆ ಭೋಜನಕ್ಕಾಗಿ ಮುಂದೂಡಲಾಯಿತು.

ಸಂವಿಧಾನ ರಚನಾಸಭೆ ಭೋಜನಾನಂತರ ಮೂರು ಗಂಟೆಗೆ ಸಭೆ ಸೇರಿತು.

ಮಾನ್ಯ ಉಪಾಧ್ಯಕ್ಷರು (ಡಾ. ಎಚ್.ಸಿ. ಮುಖರ್ಜಿ) ಅಧ್ಯಕ್ಷತೆ ವಹಿಸಿದ್ದರು:

**ಗ್ಯಾನಿ ಗುರುಮುಖ್ ಸಿಂಗ್ ಮುಸಾಫಿರ್** (ಪೂರ್ವ ಪಂಜಾಬ್ : ಸಿಖ್) : ಮಾನ್ಯ ಉಪಸಭಾಧ್ಯಕ್ಷರೆ, ನನ್ನ ಗೌರವಾನ್ವಿತ ಸ್ನೇಹಿತ, ಶ್ರೀ ದೇಶಬಂಧು ಗುಪ್ತ ಅವರಂತೆ ನಾನು ಕರಡು ರಚನಾಸಮಿತಿಯ, ಅಧ್ಯಕ್ಷರಾದ ಡಾ. ಅಂಬೇಡ್ಕರ್ ಅವರು ಯಾವುದೇ ಅಭಿನಂದನೆಗೆ ಅರ್ಹರಲ್ಲ ಎಂದು ಹೇಳುವುದಿಲ್ಲ. ಅನೇಕ ವಿಷಯಗಳಿಗೆ ಸಂಬಂಧಿಸಿದಂತೆ ಹಾಗೂ ಅನೇಕ ಕಾರಣಗಳಿಗಾಗಿ ಅವರು ಅಭಿನಂದನೆಗೆ ಅರ್ಹರಾಗಿದ್ದಾರೆ ಮತ್ತು ಮೊದಲನೇ ಸಂವಿಧಾನವನ್ನು ರೂಪಿಸುವಲ್ಲಿ, ಸಮಿತಿಯ ಪರಿಶ್ರಮಕ್ಕಾಗಿ ಖಂಡಿತವಾಗಿಯೂ ಪ್ರಶಂಸನೆ ಮಾಡಲೇಬೇಕು. ಅದೇನೇ ಇರಲಿ, ಯಾರಾದರೂ ಯಾವುದೇ ದೋಷವನ್ನು ಕಂಡುಹಿಡಿದರೆ, ಅವರು ತಮ್ಮ ತಿಳಿವಳಿಕೆಯಂತೆ ದೋಷವನ್ನು ಪ್ರಸ್ತಾವಿಸಿರುತ್ತಾರೆ.

ಈಗ, ನಾನು ನಾಗರಿಕತ್ವದ ಹಕ್ಕುಗಳಿಗೆ ಸಂಬಂಧಿಸಿದ ಅನುಚ್ಛೇದ ೫ರ ಬಗ್ಗೆ ಹೇಳಲು ಇಷ್ಟಪಡುತ್ತೇನೆ, ಅನಕ್ಷರಸ್ಥರು ತಮ್ಮ ಘೋಷಣೆಗಳನ್ನು ಸಲ್ಲಿಸಲು ನ್ಯಾಯಾಧೀಶರ ಮುಂದೆ ಬರುವುದಕ್ಕೆ ತುಂಬ ತೊಂದರೆಗಳಿವೆ ಎಂಬ ನಿಜಾಂಶದ ಕಡೆಗೆ ನನ್ನ ಕೆಲವು ಸ್ನೇಹಿತರು ನಮ್ಮ ಗಮನವನ್ನು ಈಗಾಗಲೇ ಸೆಳೆದಿರುವರು. ಆದರೆ, ನಾನು ಅದನ್ನು ಇನ್ನೊಂದು ದೃಷ್ಟಿಯಿಂದ ನೋಡಿದಾಗ ಈ ಎರಡು ದೃಷ್ಟಿಕೋನಗಳಿಂದಲೂ ಅದಕ್ಕೆ ಯಾವುದಾದರೂ ರೀತಿಯಲ್ಲಿ ತಿದ್ದುಪಡಿ ಮಾಡುವುದು ಅಗತ್ಯವಿದೆ ಎಂದು ಅನಿಸುತ್ತದೆ. ಏಕೆಂದರೆ ಪಾಕಿಸ್ತಾನದಿಂದ ಬರುವ ಒಬ್ಬ ವಿದೇಶಿ ಮತ್ತು ಹಿಂದೂಗಳು, ಹಾಗೂ ಸಿಖ್ಖರ ನಡುವೆ ಯಾವುದೇ ಭೇದ ಮಾಡಿಲ್ಲ ಎಂದು ಈ ಅನುಚ್ಛೇದದಲ್ಲಿ ಹೇಳಲಾಗಿದೆ. ಯಾರು ಇನ್ನೂ ಪಾಕಿಸ್ತಾನದಲ್ಲಿ ಇದ್ದಾರೋ, ಈ ಸಂವಿಧಾನವನ್ನು ಜಾರಿಗೊಳಿಸಿದ ಅನಂತರ ಅವರು ಪೌರತ್ವ ಪಡೆದುಕೊಳ್ಳಲು ಯಾವ ಹಕ್ಕನ್ನೂ ಹೊಂದಿರುವುದಿಲ್ಲ, ಅವರು ಇಲ್ಲಿಗೆ ಬಂದಾಗ, ಅವರನ್ನು ಈ ನೆಲದ ನಾಗರಿಕರೆಂದು ತಿಳಿಯಬೇಕು ಎಂಬುದನ್ನು ತಿಳಿಸುವಂತೆ ಈ ಅನುಚ್ಛೇದಕ್ಕೆ ತಿದ್ದುಪಡಿ ತರಬೇಕೆಂಬುದು ನನ್ನ ವಿಚಾರ. ಇದರಲ್ಲಿ ಇನ್ನೂ ಒಂದು ಅಂಶ ಇದೆ, ಮುಸ್ಲಿಮೇತರರು ಈಗಲೂ ಪೂರ್ವಬಂಗಾಳದಿಂದ ಬರುತ್ತಿದ್ದಾರೆ, ಆದುದರಿಂದ ಇದರ ಬಗ್ಗೆ ಈ ಸಂವಿಧಾನದಲ್ಲಿ ಯಾವುದಾದರೂ ಉಪಬಂಧ ಕಲ್ಪಿಸಿ, ಅವರು ಇಲ್ಲಿಗೆ ಬರಲು ಸಾಧ್ಯವಾಗುವುದಿಲ್ಲ, ಈ ಸಂವಿಧಾನವನ್ನು ಅಂಗೀಕರಿಸಿದನಂತರ ಅವರ ವಲಸೆಯ ಪ್ರಕ್ರಿಯೆಗೆ ಚಾಲನೆ ಸಿಗುತ್ತದೆ. ಇಲ್ಲಿಗೆ ಈಗಾಗಲೇ ಬಂದಿರುವ ನಿರಾಶ್ರಿತರನ್ನು ನಾವು ಸಂಪೂರ್ಣವಾಗಿ ನೋಡಿಕೊಳ್ಳಲಾಗುವುದಿಲ್ಲ. ಈ ದೃಷ್ಟಿಯಿಂದ ಕೂಡಾ, ಈ ಅಂಶದ ಬಗ್ಗೆ ಸೂಕ್ತ ತಿದ್ದುಪಡಿ ಮಾಡಬೇಕಾದ್ದು ಸಮಯೋಚಿತ ಎಂದು ನಾನು ಪರಿಗಣಿಸುತ್ತೇನೆ.

ನಾನು ಹೇಳಲು ಇಚ್ಛಿಸುವ ಇನ್ನೊಂದು ವಿಷಯ, ಮೂಲಭೂತ ಹಕ್ಕುಗಳನ್ನು ಕುರಿತದ್ದಾಗಿದೆ, ಅಂದರೆ, ನಮ್ಮ ಮೂಲಾಧಾರ ಹಕ್ಕುಗಳ ಬಗ್ಗೆ ಇರುವಂಥದ್ದು. ಅವನ್ನು ಆಡಂಬರದ ಶೈಲಿಯಲ್ಲಿ ಹೇಳಲಾಗಿದೆ, ಆದರೆ ಅದರಲ್ಲಿ ಮಾಡಲಾಗಿರುವ ಹಲವು ಇತಿಮಿತಿಗಳು, ಅಂಥ ಶಬ್ದಾಡಂಬರವನ್ನು ಕಡಮೆ ಮಾಡಿವೆ. ತಮ್ಮ ಪಕ್ಷದ ಪರವಾಗಿ, ಸೇಠ್ ದಾಮೋದರ್ ಸ್ವರೂಪ್ ಅವರು ಒಂದು ತಿದ್ದುಪಡಿ ಮಂಡಿಸಿದ್ದರು, ಅದು ಕಳೆದು ಹೋಗಿದೆ, ಅವರ ತಿದ್ದುಪಡಿ ಉದ್ದೇಶವು, ಈ ವಿಧಾಯಕಸಭೆಯು ಜಂಟಿಮತಕ್ಷೇತ್ರಗಳ ಮತ್ತು ವಯಸ್ಕಮತದಾನದ ಆಧಾರದ ಮೇಲೆ ಚುನಾಯಿತವಾಗಿಲ್ಲವೆಂದು, ಜನಸಮುದಾಯದ ಪ್ರತಿನಿಧಿಯಲ್ಲ ಎಂಬ ಅಂಶವನ್ನು ತೋರಿಸುವುದಾಗಿದೆ; ಆದರೆ ನಾವು ಅವರ ಅಭಿಪ್ರಾಯವನ್ನು ಒಪ್ಪಿಕೊಳ್ಳಲಿಲ್ಲ ಹಾಗೂ ಸದನವು ಅವರ ಅಭಿಪ್ರಾಯವನ್ನು ತಿರಸ್ಕರಿಸಿತು. ಆದರೆ ನಮ್ಮ ವಿಧಾಯಕಸಭೆಯು ಜಂಟಿಮತಕ್ಷೇತ್ರಗಳ ಮತ್ತು ವಯಸ್ಕಮತದಾನದ ಆಧಾರದ ಮೇಲೆ ಚುನಾಯಿಸಲ್ಪಟ್ಟಿರದಿದ್ದರೂ ಈ ಸಂವಿಧಾನ ರಚನಾಸಭೆಯು, ಸಂವಿಧಾನ ರೂಪಿಸುವ ಕಾಲದಲ್ಲಿ ಜನಸಮುದಾಯದ ಹಿತಾಸಕ್ತಿಯನ್ನು ಗಮನಿಸಬೇಕು ಎಂಬುದು ಅತ್ಯಂತ ಸ್ಪಷ್ಟ. ೯ರಿಂದ ೧೩ನೇ ಅನುಚ್ಛೇದಗಳು ಜನರ ಹಕ್ಕುಗಳನ್ನು ಒಳಗೊಂಡಿರುವಾಗ ಸೇಠ್ ಸಾಹೇಬ್ ಅವರು ಎತ್ತಿರುವ ಆಕ್ಷೇಪಣೆಗೆ ಉತ್ತರ ನೀಡಲಾಗಿದೆ. ಉದಾಹರಣೆಗೆ: ಧರ್ಮ. ಜನಾಂಗ ಅಥವಾ ಜಾತಿ ಆಧಾರದ ಮೇಲೆ ಹಕ್ಕಿನ ಸಮಾನತೆ ಇದೆ, ಅಂದರೆ, ಜಾತಿಯ ಹಿನ್ನೆಲೆಯ ಮೇಲೆ ಯಾವ ಭೇದಭಾವ – ತಾರತಮ್ಯ ಇರಬಾರದು, ಅಸ್ಪೃಶ್ಯತೆಯನ್ನು ರದ್ದುಪಡಿಸಲಾಗಿದೆ. ವಾಕ್‌ಸ್ವಾತಂತ್ರ್ಯಕ್ಕೆ ಖಾತರಿ ನೀಡಲಾಗಿದೆ. ಮತ್ತು ಶಿಕ್ಷೆ ವಿಧಿಸುವಾಗ ಮತ ಅಥವಾ ಜಾತಿ ಆಧಾರದ ಮೇಲೆ ಯಾವುದೇ ತಾರತಮ್ಯವನ್ನು ಮಾಡಬಾರದು, ಈ ಎಲ್ಲ ವಿಷಯಗಳನ್ನು ಸೇರಿಸಲಾಗಿದೆ, ಮತ್ತು ಅವೆಲ್ಲ ತುಂಬ ಉಚಿತವಾಗಿವೆ, ಆದರೆ ಕೆಲವು ಇತಿಮಿತಿಗಳ ಬಗ್ಗೆ ನನ್ನ ಆಕ್ಷೇಪಣೆ ಇದೆ; ಉದಾಹರಣೆಗೆ; ಅನುಚ್ಛೇದ ೧೩ರಲ್ಲಿ ವಾಕ್‌ಸ್ವಾತಂತ್ರ್ಯದ ಭರವಸೆ ಇದೆ. ಯಾವುದೇ ಭೇದವಿಲ್ಲದೆ ಇಡೀ ದೇಶದಲ್ಲಿ ಓಡಾಡುವ ಸ್ವಾತಂತ್ರ್ಯ ನೀಡಲಾಗಿದೆ ಮತ್ತು ಸ್ವತ್ತನ್ನು ಆರ್ಜಿಸಲು ಹಾಗೂ ವಿಲೇವಾರಿ ಮಾಡಲು ಸ್ವಾತಂತ್ರ್ಯವಿದೆ, ಈ ಎಲ್ಲ ವಿಷಯಗಳನ್ನು ಒಳಗೊಂಡಿದೆ, ಆದರೆ ಅನುಚ್ಛೇದ

೧೩ರ ಬಾಬು (೫)ರಲ್ಲಿ ಹೇರಿದ ಇತಿಮಿತಿ ಇರಬಾರದಿತ್ತು. ಈ ಎಲ್ಲ ಮಹಾನ್ ಈ ಇತಿಮಿತಿಗಳಿರುವುದರಿಂದ ಅವುಗಳ ಹಿರಿಮೆ ಕೆಲಮಟ್ಟಿಗೆ ಕಳೆದು ಹೋಗುತ್ತದೆ. ಈಗಲೂ ಯಾರೇ ಒಪ್ಪಲಿ ಅಥವಾ ಬಿಡಲಿ ನನ್ನ ದೂರು ಇದ್ದೇ ಇದೆ; ಆದರೆ ಪಾಕಿಸ್ತಾನದಿಂದ ಬಂದ ನಮ್ಮ ಸೋದರರನ್ನು, ಕೆಲವು ಕಡೆಗಳಲ್ಲಿ ಅವರನ್ನು ಚೆನ್ನಾಗಿ ನೋಡಿಕೊಂಡರೂ. ಭೇದಭಾವ ತೋರಿಸಲಾಗಿದೆ ಹಾಗೂ ಅವರ ಪುನರ್ವಸತಿಯನ್ನು ಇಷ್ಟಪಟ್ಟಿಲ್ಲ ಎಂಬುದು ನನ್ನ ಬಲವಾದ ನಂಬುಗೆ. ಅವರು ಎಲ್ಲೇ ಹೋಗಲಿ, ಮುಕ್ತ ಮತ್ತು ಅನುಕೂಲಕರ ಪುನರ್ವಸತಿಗೆ ತೊಡಕುಗಳುಂಟಾಗಿವೆ. ಆದುದರಿಂದ ನಿರಾಶ್ರಿತರ ಸಮಸ್ಯೆಯ ಈ ದೃಷ್ಟಿಯಿಂದ ಕೂಡಾ, ಇಡೀ ದೇಶದಲ್ಲಿ ಓಡಾಡಲು ಹಾಗೂ ಆಸ್ತಿ ಗಳಿಸಿ ವಿಲೇವಾರಿ ಮಾಡಲು ಯಾವುದೇ ಇತಿಮಿತಿ ಇರಬಾರದು, ಯಾರಿಗೆ ನಿವೇಶನವನ್ನು ಗಳಿಸಲು ಆಗಿಲ್ಲವೋ, ಅವರು ಕೃಷಿಭೂಮಿಗಳನ್ನು ಆರ್ಜಿಸಲು ಸ್ವಾತಂತ್ರ್ಯ ಹೊಂದಿರಬೇಕು, ಅನ್ಯೈಕ್ಯದ ಹಳೆ ಪಿಡುಗು ಮರೆಯಾಗುವಂತೆ ಈ ಇತಿಮಿತಿಗಳನ್ನು ದೂರ ಮಾಡಬೇಕೆಂದು ಕೋರಿ ನನಗೆ ಪ್ರತಿಯೊಂದು ಕಡೆಯಿಂದಲೂ ತಂತಿಗಳು (ಟೆಲಿಗ್ರಾಂ) ಬಂದಿವೆ.

ಮೂರನೆಯ ವಿಷಯ, ನಾನು ಹೇಳುವುದು ಭಾಷೆ ಕುರಿತು ಇದೆ. ಇದು ಒಂದು ಮುಖ್ಯ ಪ್ರಶ್ನೆ, ಆದರೆ ನಮ್ಮ ಪ್ರಜ್ಞಾವಂತ ಮತ್ತು ಸಂಶೋಧನಾ ವಿದ್ವಾಂಸರು ಹೇಳಿರುವಂತೆ ಈ ಪ್ರಶ್ನೆ ಅಷ್ಟೊಂದು ಜಟಿಲವಾಗಿದೆ ಎಂದು ನಾನು ಆಲೋಚಿಸಿಲ್ಲ. ಈ ಪ್ರಶ್ನೆ ಇಂಥ ಪ್ರಸಕ್ತ ರೂಪದಲ್ಲಿ ನನ್ನೆದುರಿಗೆ ಬಂದಿಲ್ಲದಿದ್ದುದರಿಂದ, ನಾನು ಹಿಂದಿ ಮತ್ತು ಹಿಂದೂಸ್ಥಾನಿ ನಡುವೆ ಯಾವುದೇ ವ್ಯತ್ಯಾಸವಿದೆ ಎಂದು ಆಲೋಚಿಸಿಯೇ ಇರಲಿಲ್ಲ, ಹಿಂದಿಯು ಹಿಂದೂಸ್ಥಾನಿಯಿಂದ ಒಂದು ಪ್ರತ್ಯೇಕ ಭಾಷೆ ಎಂದು ನನಗೆ ತಿಳಿದೇ ಇರಲಿಲ್ಲ, ಈ ಸಂಬಂಧವಾಗಿ ನನ್ನದೇ ಸ್ವಂತ ರಚನೆಯಾದ ಒಂದು ಪಂಜಾಬಿ ದ್ವಿಪದಿ ನನ್ನ ನೆನೆಪಿಗೆ ಬರುತ್ತದೆ. ಇದರ ಅರ್ಥ "ಅಜ್ಞಾನ ನನಗೆ ವರ, ಜ್ಞಾನವು ನನ್ನಲ್ಲಿ ಒಂದು ತೊಡಕಿನ ಸ್ಥಿತಿಯಾಗಿ ನೆಲೆಯಾಗಿ ನಿಂತಿದೆ." ಅಥವಾ ಬೇರೆ ರೀತಿ ಹೇಳುವುದಾದರೆ, ನಾನು ಅದರ ಬಗ್ಗೆ ತಿಳಿದಿಲ್ಲದಿದ್ದರೆ ಚೆನ್ನಾಗಿತ್ತು ಎಂದು ಹೇಳುತ್ತೇನೆ. ಈಗ ನಾನು ಅದನ್ನು ತಿಳಿದಾಗ ನಾನು ಏನು ಮಾಡಬೇಕೆಂದು ಚಕಿತನಾಗಿದ್ದೇನೆ; ಆದರೆ ಒಂದಂತೂ ಸ್ಪಷ್ಟ, ಒಂದು ಸಿದ್ಧಾಂತವಾಗಿ, ನಾವು ನಮ್ಮ ಸಂವಿಧಾನದಲ್ಲಿ ಒಂದೇ ಒಂದು ಲಿಪಿಯನ್ನು ಇಟ್ಟುಕೊಳ್ಳಬೇಕು ಹಾಗೂ ನಮ್ಮ ಮಿತ್ರ ಸೇಠ್ ಗೋವಿಂದ ದಾಸ್ ಅವರು ಹಾಗೂ ಇತರ ಭಾಷಣಕಾರರು ಹೇಳಿರುವಂತೆ, ಇಡೀ ಭಾರತಕ್ಕೆ ಒಂದು ಲಿಪಿ ಮತ್ತು ಒಂದು ಭಾಷೆ ಇರಬೇಕು.

ನಮ್ಮ ಮೊದಲ ಸಂವಿಧಾನವನ್ನು ರಾಷ್ಟ್ರಭಾಷೆಯಲ್ಲಿ ಅಂಗೀಕರಿಸಬೇಕು ಎಂಬುದನ್ನು ನಾನು ಕೂಡಾ ಒಪ್ಪುತ್ತೇನೆ, ಇದು ನನ್ನ ದೃಢ ನಂಬಿಕೆ ಮತ್ತು ದೃಢ ಅಭಿಪ್ರಾಯ. ಭಾಷೆಗೆ ಸಂಬಂಧಿಸಿದಂತೆ, ಅದು ಸ್ಥಳದಿಂದ ಸ್ಥಳಕ್ಕೆ ಬದಲಾಗುತ್ತದೆ. ಅದರಲ್ಲಿ ಯಾವ ಅನುಮಾನವೇ ಇಲ್ಲ. ಭಾಷಾ ಪ್ರಶ್ನೆ ಕುರಿತಂತೆ ಕೆಲವು ತೊಡಕುಗಳು ಇರುವಂತೆ ತೋರುತ್ತದೆ, ಕೆಲವು ಗೌರವಾನ್ವಿತ ಸದಸ್ಯರು, ಈ ವಿಷಯದಲ್ಲಿ ಒಂದು ನಿರ್ದಿಷ್ಟ ನಿರ್ಧಾರ ತೆಗೆದುಕೊಂಡರೆ, ತಾವು ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದನ್ನು ನಿಲ್ಲಿಸುತ್ತೇವೆಂದು ಅಥವಾ ಪ್ರತಿಭಟನಾ ರೂಪದಲ್ಲಿ ಕೆಲವು ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ ಎಂಬ ಬೆದರಿಕೆ ಹಾಕ ಹೊರಟಿದ್ದಾರೆ. ನಮ್ಮ ಸಶಸ್ತ್ರದಳಗಳಲ್ಲಿ ರೋಮನ್ ಲಿಪಿ, ಉರ್ದು ಲಿಪಿ ಹಾಗೂ ದೇವನಾಗರಿ ಲಿಪಿ ಬಳಕೆಯಲ್ಲಿವೆ, ಇವುಗಳಲ್ಲಿ ಒಂದು ಲಿಪಿಯನ್ನು ಇಟ್ಟುಕೊಳ್ಳುವುದಾದಲ್ಲಿ ಆಗ ನಾವು ಅಲ್ಲಿ ನಮ್ಮ ಭಾಷೆಗಳನ್ನು ಈ ಮೂರು ಲಿಪಿಗಳ ಪೈಕಿ ಯಾವುದರಲ್ಲಿ ಬರೆದು ಮತ್ತು ಸರಿಯಾಗಿ ಪುನರುಚ್ಚರಿಸಬೇಕೆಂಬುದನ್ನು ನೋಡಬೇಕಾಗುತ್ತದೆ. ಪ್ರಾಂತೀಯ ಭಾಷೆಗಳ ಪರವಾಗಿ ಮಾತನಾಡುವ ಎಲ್ಲರೂ ಹಾಗೆ ಒಪ್ಪಿದರೆ, ಆಗ ಬಂಗಾಳಿಗಳು ತಮ್ಮ ಬಂಗಾಳಿ ಲಿಪಿ ಬಿಟ್ಟುಬಿಡಬೇಕು ಮತ್ತು ಪಂಜಾಬಿಗಳು ತಮ್ಮ ಲಿಪಿಗಳನ್ನು ಹಾಗೂ ತೆಲುಗರು ತಮ್ಮ ಲಿಪಿಗಳನ್ನು ಬಿಟ್ಟುಬಿಡಬೇಕು ಮತ್ತು ತಮಿಳರು ತಮ್ಮ ಲಿಪಿಯನ್ನು ಬಿಟ್ಟುಬಿಡಬೇಕು ಹಾಗೂ ಎಲ್ಲ ಈ ಭಾಷೆಗಳನ್ನು ದೇವನಾಗರಿ ಲಿಪಿಯಲ್ಲಿ ಬರೆಯಬೇಕು. ಇದಕ್ಕೆ ನಾನು ಸಿದ್ಧನಿರುತ್ತೇವೆ

ಮತ್ತು ನನ್ನದೇನೂ ಆಕ್ಷೇಪಣೆ ಇಲ್ಲ. ಪ್ರಸಕ್ತ ಸ್ಥಿತಿಗಳು ಹೇಗೇ ಇರಲಿ, ಅದು ಒಂದಾಗಿರಬೇಕೆಂಬ ಪರಿಜ್ಞಾನವನ್ನು ಸೃಷ್ಟಿಸುತ್ತದೆ ಎಂಬುದನ್ನು ಒಪ್ಪಿಕೊಳ್ಳುವುದು ಸ್ವಲ್ಪ ಕಠಿಣ ಎಂದು ತೋರುತ್ತದೆ. ನಾವು ಎಲ್ಲರೂ ಇತರ ವಿಷಯದಲ್ಲಿ ವಿಭಿನ್ನ ಅಭಿಪ್ರಾಯ ಹೊಂದಿದ್ದರೂ, ಕಡೇಪಕ್ಷ ಈ ಒಂದು ವಿಷಯದಲ್ಲಿ ಒಂದಾಗಿರಬೇಕು. ಅದೆಂದರೆ, ನಾವು ಒಂದು ಸಮಾನವಾದ ಲಿಪಿಯನ್ನು ಒಪ್ಪಬೇಕು; ಅದರಲ್ಲಿ ಎಲ್ಲ ಬೇರೆ ಬೇರೆ ಭಾಷೆಗಳನ್ನು ಬರೆಯಬಹುದು, ಹಾಗೆ ಮಾಡಿದರೆ ಅನೇಕ ದಿಗ್ಭ್ರಾಂತಿಗಳಿಂದ ನಾವು ಪಾರಾಗುತ್ತೇವೆ. ಇದು ಸಾಧ್ಯವಿಲ್ಲದಿದ್ದರೆ, ಆಗ ಪ್ರತಿಯೊಂದು ಪ್ರಾಂತೀಯಭಾಷೆಗೂ ಆಯಾ ಪ್ರಾಂತ್ಯದಲ್ಲಿ ಸಮಾನ ಪ್ರಾಮುಖ್ಯವನ್ನು ಕೊಡಬೇಕು.

ಭಾಷೆಯ ಪ್ರಶ್ನೆ ಆಗ ಹಾಗೇ ಉಳಿಯುತ್ತದೆ, ಇದರ ಬಗೆಗೆ ನಾನು ಹೇಳಲು ಬಯಸುವುದೆಂದರೆ, ನಾನು ಈ ಕರಡು ಸಂವಿಧಾನದ ಎಲ್ಲ ಭಾಷಾಂತರಗಳನ್ನು ನೋಡಿದ್ದೇನೆ, ನಾನು ಅದರ ಹಿಂದಿ ಭಾಷಾಂತರವನ್ನೂ ನೋಡಿದ್ದೇನೆ ಮತ್ತು ಅದರ ಉರ್ದು ಮತ್ತು ಹಿಂದೂಸ್ತಾನಿ ಭಾಷಾಂತರಗಳನ್ನು ಓದಿದ್ದೇನೆ. ಹಿಂದಿ ಭಾಷಾಂತರ ಬಗ್ಗೆ ನಾನು "ನೋಡಿದ್ದೇನೆ" ಎಂಬ ಶಬ್ದ ಉಪಯೋಗಿಸಿದ್ದೇನೆ, ಇದಕ್ಕೆ ಕಾರಣ ನಾನು ಹಿಂದಿ ಬೆಂಬಲಿಗರಾಗಿರುವ ನನ್ನ ಗೆಳೆಯರೊಂದಿಗೆ ಮಾತನಾಡಿದ್ದೇನೆ. ಯಾರೊಬ್ಬರು ನನಗೆ ಹಿಂದಿ ಭಾಷಾಂತರದ ತಾತ್ಪರ್ಯವನ್ನು ತಿಳಿಸಲಿಲ್ಲ, ನಮ್ಮ ಪಂಜಾಬಿ ಮಹಾಕವಿ ಡಾ. ಇಕ್ಬಾಲ್ ಅವರು ತಮ್ಮ ಕವಿತೆಗಳನ್ನು ಪರ್ಷಿಯನ್‌ಭಾಷೆಯಲ್ಲಿ ಬರೆಯುತ್ತಿದ್ದರು. ನಾನು ಪರ್ಷಿಯನ್‌ಭಾಷೆಯಲ್ಲಿನ ಅವರ ಅನೇಕ ಪುಸ್ತಕಗಳನ್ನು ಓದಿದ್ದೇನೆ, ಆದರೆ ಪರ್ಷಿಯನ್ ಕಾವ್ಯ ಜನರಿಗೆ ಗ್ರಹಿಸದಷ್ಟು ಕಠಿಣವಾಗಿದೆ ಎಂದು ಮನವರಿಕೆಯಾದಾಗ ಉರ್ದುವಿನಲ್ಲಿ ಬರೆಯಲು ಆರಂಭಿಸಿದರು, ನೀವು ಅವರ ಉರ್ದುಕವಿತೆಗಳ ಭಾಷೆ ನೋಡಿದರೆ, ನೀವು ಅವರ ಸರಳ ಪದಜೋಡಣೆಯನ್ನು ಕಾಣುವಿರಿ. ಹಾಗಾಗಿ ಅವರ ಆಲೋಚನೆಗಳು ಜನರನ್ನು ತಲುಪಬಹುದು. ಕೇಳಿ, ನಾನು ನಿಮಗೆ ಅವರ ದ್ವಿಪದಿಗಳಲ್ಲೊಂದನ್ನು ಇಲ್ಲಿ ಪುನರುಚ್ಚರಿಸುತ್ತಿದ್ದೇನೆ.

ಇಕ್ಬಾಲ್ ಬರಾ ಉಪದೇಶಕ್ ಹೈ,
ಮನ ಬಾತೋಂ ಮನ್ ಮೋಹ್ ಲೇತಾ ಹೈ,
ಗುಫ್ತಾರ್ ಕಾ ವೋಹ್ ಗಾಜಿ ತೋ ಬನಾ
ಕಿರ್ದಾರ್ ಕಾ ಗಾಜಿ ಬನ್ ನೋ ಸಕಾ

ಈಗ ನನಗೆ ಹೇಳಿ, ನೀವು ಈ ಭಾಷೆಯನ್ನು ಏನೆಂದು ಕರೆಯುವಿರಿ, ಇದು ಹಿಂದಿ, ಉರ್ದು ಅಥವಾ ಹಿಂದೂಸ್ಥಾನಿಯೇ? ಯಾವ ಭಾಷೆಗೆ 'ಉಪದೇಶಕ್', 'ಮನ್' ಮತ್ತು 'ಮೋಹ್' ಸೇರುತ್ತವೆ? ನನ್ನ ಗೆಳೆಯ ಚೌಧರಿ ರಣಭಿರ್ ಸಿಂಗ್ ಮತ್ತೊಂದು ದಿನ ತಮ್ಮ ಭಾಷಣವನ್ನು ಯಾವ ಭಾಷೆಯಲ್ಲಿ ಮಾಡಿದರೋ ಅದು ಹಿಂದಿ, ಆದರೆ ಆಗ ನಾನು ಹಿಂದಿಯ ಒಬ್ಬ ಬೆಂಬಲಿಗ. ಈಗ ನಾವು ಯಾವುದು ಸೂಕ್ತ ಮತ್ತು ಯಾವುದು ಬಳಸಲು ಸೂಕ್ತ ಎಂಬುದನ್ನು ನೋಡಬೇಕು. ನೀವು ನನ್ನನ್ನು ಪಂಜಾಬ್ ಬಗ್ಗೆ ಕೇಳಿದರೆ, ಯಾವ ಆ ಪತ್ರಿಕೆಗಳು ಹಿಂದಿಯ ಬೆಂಬಲಿಗವಾಗಿವೆಯೋ ಅದನ್ನು ಉರ್ದು ಲಿಪಿಯಲ್ಲಿ ಮುದ್ರಿಸಲಾಗುತ್ತಿದೆ, ಎಂದು ನಾನು ಹೇಳುತ್ತೇನೆ, ವೈಯಕ್ತಿಕ ಅಥವಾ ಒಬ್ಬರ ಅನುಕೂಲದ ಪ್ರಶ್ನೆಯಲ್ಲ. ಆದರೆ ಒಂದು ಅತ್ಯಂತ ಸೂಕ್ತ ಮತ್ತು ಕಾರ್ಯಸಾಧ್ಯ ಪರಿಹಾರ ಕಂಡುಕೊಳ್ಳುವುದಾಗಿದೆ.

ಆದುದರಿಂದ ನಾನು ಹೇಳುವುದೆಂದರೆ, ನಮ್ಮ ಭಾಷೆ ಸುಲಭವಾಗಿರಬೇಕು ಮತ್ತು ಎಲ್ಲರಿಗೂ ಅರ್ಥವಾಗುವಂತೆ ಇರಬೇಕು. ಬಳಕೆಯ ಶಬ್ದಗಳ ರಚನೆಗಾಗಿ ಒಂದು ಸಮಿತಿಯನ್ನು ನೇಮಕಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ, ಶಬ್ದಗಳನ್ನು ರಚಿಸಿದ ಅನಂತರ ಹಾಗೂ ಭಾಷೆಯ ಸರಳೀಕರಣ ನಿರ್ಧಾರಮಾಡಿದ ಮೇಲೆ, ಭಾಷೆಯ ಪ್ರಶ್ನೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಯಾವ ತೊಡಕೂ ಇರುವುದಿಲ್ಲ. ನಮ್ಮೆಲ್ಲರಲ್ಲಿ ಮತ್ತು ಅದರಲ್ಲೂ ವಿಶಿಷ್ಟವಾಗಿ ಪಂಜಾಬಿಗಳಲ್ಲಿ ಕುಂದು ಕೊರತೆ ಇದೆ; ಎಂದರೆ ನಾವು ಪ್ರತಿಯೊಂದು ಸಮಸ್ಯೆಗೂ ಧಾರ್ಮಿಕ ಬಣ್ಣ ಕೊಡಲು ಮುಂದಾಗುತ್ತೇವೆ, ಧರ್ಮದ ಆಧಾರದ ಮೇಲೆ ಪರಸ್ಪರ ನಾವೇ

ವಿರೋಧಿಗಳಾಗುತ್ತೇವೆ. ಈ ವಿಷಯ ಸರಳವಿರಬಹುದು, ಆದರೆ ಅದಕ್ಕೊಂದು ಧಾರ್ಮಿಕ ಬಣ್ಣ ಕೊಟ್ಟು ನಾವು ಅವ್ಯವಸ್ಥೆ ಉಂಟುಮಾಡುತ್ತೇವೆ.

ಭಾಷಾವಾರು ಆಧಾರದ ಮೇಲೆ ಪ್ರಾಂತ್ಯಗಳ ವಿಭಜನೆ ಕುರಿತು ಮಾತುಕತೆ ನಡೆದಿವೆ. ಆ ವಿಷಯ ಕುರಿತಂತೆ ನಮ್ಮ ಸಂವಿಧಾನ ಬಹುತೇಕ ಮೌನವಾಗಿದೆ. ಒಂದು ಅಸ್ಪಷ್ಟ ಸೂಚನೆಯನ್ನು ಪಂಜಾಬಿನಲ್ಲಿ ಕೊಡಲಾಗಿದೆ. ಈ ಪ್ರಶ್ನೆ ಸರಳವಾಗಿದ್ದರೂ ಧಾರ್ಮಿಕ ತಿರುವನ್ನು ಪಡೆದುಕೊಂಡಿದೆ. ಆದುದರಿಂದ ಬೆಳಗ್ಗೆ ಒಬ್ಬ ಭಾಷಣಕಾರರು ಹೇಳಿದಂತೆ, ಇದು ಒಂದು ವಿವಾದಾತ್ಮಕ ವಿಷಯವಾಗಿದೆ; ಇದನ್ನು ಮುಂದಕ್ಕೆ ಹಾಕಬೇಕು ಮತ್ತು ಪ್ರಾಂತ್ಯಗಳನ್ನು ಭಾಷಾವಾರು ಆಧಾರದ ಮೇಲೆ ರಚಿಸಿದರೆ ಆಗ ಅಭಿವೃದ್ಧಿಗೊಂಡ ಎಲ್ಲ ಭಾಷೆಗಳಿಗೆ ಕೊಡಬೇಕಾದ ಗಮನ ಕೊಡಲಾಗುತ್ತದೆ. ಎಂಬ ಈ ಸಿದ್ಧಾಂತವನ್ನು ಸಮ್ಮತಿಸಬೇಕು.

ನನ್ನ ಸಮಯ ಬಹುತೇಕ ಮುಗಿದಿದೆ. ಆದರೆ ನಾನು ಅಲ್ಪಸಂಖ್ಯಾತರನ್ನು ಕುರಿತು ಸ್ವಲ್ಪ ಹೇಳಲು ಇಷ್ಟಪಡುತ್ತೇನೆ, ಈ ಪ್ರಶ್ನೆಯ ಬಗ್ಗೆ ನಾನು ಬಹಳಷ್ಟು ಆಲೋಚಿಸಿದ್ದೇನೆ. ಏಕೆಂದರೆ ನಾನು ಒಬ್ಬ ಕಾಂಗ್ರೆಸ್ ಕಾರ್ಯಕರ್ತನಾಗಿದ್ದೇನೆ. ಈಗಲೂ ನಾನು ಪ್ರಾಂತೀಯ ಕಾಂಗ್ರೆಸ್‌ನ ಅಧ್ಯಕ್ಷನಾಗಿದ್ದೇನೆ. ಅಲ್ಪಸಂಖ್ಯಾತರ ಹಕ್ಕುಗಳು ಕಾಂಗ್ರೆಸ್ ಸರ್ಕಾರಗಳ ಕೈಯಲ್ಲಿ ಸಾಕಷ್ಟು ಸುರಕ್ಷಿತವಾಗಿರುತ್ತವೆ ಎಂದು ನನಗೆ ಅನಿಸುತ್ತಿದೆ. ಆದರೆ ಈಗ ನಮ್ಮ ಮುಂದೆ ಮೀಸಲಾತಿ ಪ್ರಶ್ನೆ ಇದೆ. ಧರ್ಮಧ ಆಧಾರದ ಮೇಲೆ ಹೇಳುವುದಾದರೆ ನಾನು ಒಂದು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವನೆಂಬುದು ನಿಜ ಮತ್ತು ಈ ಪ್ರಶ್ನೆಯನ್ನು ನಾನು ಎಂದೂ ಕೋಮುವಾದದ ದೃಷ್ಟಿಯಿಂದ ನೋಡಿಲ್ಲ ಎಂಬ ನಿಜಾಂಶದ ಬಗ್ಗೆ ನನಗೆ ಹೆಮ್ಮೆ ಇದೆ, ಇದಕ್ಕೆ ಸಂಬಂಧಿಸಿದಂತೆ, ನಾನು ಸಿಖ್ ಸಮುದಾಯವು ದೇಶವನ್ನು ಒಂದು ಬಲಿಷ್ಠ ರಾಷ್ಟ್ರವಾಗಿ ಮಾಡುವಲ್ಲಿ ಧೈರ್ಯದಿಂದ ತ್ಯಾಗಮಾಡಿದೆ ಎಂದು ಹೆಮ್ಮೆಪಡುತ್ತೇವೆ, ಎಂದು ಹೇಳಲು ಇಷ್ಟಪಡುತ್ತೇನೆ. ಈ ಕಾರಣಕ್ಕಾಗಿಯೇ ಗೌರವಾನ್ವಿತ ಪಂಡಿತ ಮಾಳವೀಯ ಅವರು ಪ್ರತಿ ಹಿಂದೂ ಕುಟುಂಬವೂ ಒಬ್ಬ ಸಿಖ್ ಮಗನನ್ನು ಹೊಂದಿರಬೇಕು ಎಂದು ಹೇಳುವಂತೆ ಮಾಡಿತು. ಶ್ರೀ ಸಾವರ್ಕರ್ ಅವರು ಒಮ್ಮೆ ಡಾ. ಅಂಬೇಡ್ಕರ್ ಅವರ ಸಹಧರ್ಮೀಯರಿಗೆ ಸಲಹೆ ಮಾಡಿದ್ದು, ಅವರು ತಮ್ಮ ಧರ್ಮವನ್ನು ಬದಲಾಯಿಸುವುದಾದರೆ ಅವರು ಸಿಖ್ಖರಾಗಬಹುದು ಎಂದು ಹೇಳಿದ್ದರು. ಆಗ ನಾನು ಶ್ರೀ ಸಾವರ್ಕರ್ ಅವರನ್ನು, ಒಬ್ಬ ಹಿಂದೂ ಮತ್ತು ಆರ್ಯ ಸಮಾಜದವರಾಗಿರುವ ನೀವು ಅಂತಹ ಸಲಹೆಯನ್ನು ಹೇಗೆ ಕೊಡುವಿರಿ ಎಂದು ಕೇಳಿದ್ದೆ. (ಸಾವರ್ಕರ್ ಅವರು ಆರ್ಯಸಮಾಜದವರಲ್ಲ ಎಂಬ ಧ್ವನಿಗಳು) ಹಾಗಾದರೆ, ನಾನು ನನ್ನ ಮಾತುಗಳನ್ನು ಹಿಂತೆಗೆದುಕೊಳ್ಳುತ್ತೇನೆ. ಏನೇ ಇರಲಿ, ಅವರು ತಾವು ಸಿಖ್ ಧರ್ಮವನ್ನು ಕುರಿತು ಅಧ್ಯಯನಮಾಡಿಲ್ಲವೆಂದೂ ತಾವು ಅಂಡಮಾನ್‌ನ ಜೈಲಿನಲ್ಲಿದ್ದಾಗ ಅಲ್ಲಿ ತಮ್ಮೊಂದಿಗೆ ಅನೇಕ ಹಳೆಯ ಮತ್ತು ವಿಭಿನ್ನ ಸಿಖ್ ಬಂಧಿತರಿದ್ದರೆಂದು ಹೇಳಿದರು. ಅವರಲ್ಲಿ ತಾವು ಅತೀವ ದೇಶಭಕ್ತಿಯನ್ನು ರಾಷ್ಟ್ರಸೇವೆಯ ಬಯಕೆಯನ್ನು ಹಾಗೂ ಅಪೂರ್ವ ತ್ಯಾಗವನ್ನು ಕಂಡಿದ್ದೇನೆಂದು ಉತ್ತರಿಸಿದ್ದರು. ಅದರಿಂದ ತಾವು ಅವರು ಉತ್ತಮ ಜನರೆಂಬ ಅಭಿಪ್ರಾಯದಿಂದ ಹಾಗೆ ಹೇಳಿದೆನೆಂದು ಮತ್ತು ಆ ಕಾರಣಕ್ಕಾಗಿ ಡಾ. ಅಂಬೇಡ್ಕರರ ಸಹ ಧರ್ಮೀಯರಿಗೆ ಸಿಖ್ ಧರ್ಮ ಒಪ್ಪಿಕೊಳ್ಳಲು ಹೇಳಿದ್ದೆ ಎಂದು ತಿಳಿಸಿದರು. ಸ್ವತಃ ಅಲ್ಪಸಂಖ್ಯಾತರ ದೃಷ್ಟಿಯಿಂದ ಹೇಳುವುದಾದರೆ, ಹೆಚ್ಚಿನ ಸೌಲಭ್ಯದ ಮೀಸಲಾತಿ ನೀಡದಿದ್ದರೆ, ಏನೂ ಉಪಯೋಗವಿಲ್ಲ ಎಂದು ಹೇಳಲು ನಾನು ಇಷ್ಟಪಡುತ್ತೇನೆ. ನಮ್ಮ ಹೃದಯಗಳು ಪರಸ್ಪರ ಸಂಶಯಗಳಿಂದ ಮುಕ್ತವಾದರೆ, ಮತ್ತು ನಾವು ಪರಸ್ಪರ ವಿಶ್ವಾಸ ಪಡೆದುಕೊಂಡರೆ, ಆಗ ಇನ್ನೂ ಕೆಲವು ಸವಲತ್ತುಗಳನ್ನು ಸೇರಿಸುವಂತೆ ಮಾಡಬಹುದು, ಅವು ರಾಷ್ಟ್ರವನ್ನು ಮುನ್ನಡೆಸಲು ನಮಗೆ ನೆರವಾಗುತ್ತವೆ. ಅಲ್ಪಸಂಖ್ಯಾತರು, ಚುನಾವಣೆಯಲ್ಲಿ ಸಾಕಷ್ಟು ಸ್ಥಾನಗಳನ್ನು ಪಡೆದುಕೊಳ್ಳಲು ವಿಫಲರಾದ ಸಂದರ್ಭಗಳಲ್ಲಿ ನಾಮನಿರ್ದೇಶನಮಾಡುವ ಅಧಿಕಾರವನ್ನು ರಾಜ್ಯಪಾಲರಿಗೆ ಮತ್ತು ರಾಷ್ಟ್ರಪತಿಗಳಿಗೆ ಕೊಡಬಹುದಾಗಿದೆ. ಮೀಸಲಾತಿ ಕುರಿತಂತೆ ಅಂಥ ಒಂದು ಸಾಧನವನ್ನು

ಅಳವಡಿಸಿಕೊಂಡರೆ ಮೀಸಲಾತಿಯನ್ನು ತೆಗೆದುಹಾಕಿದರೆ, ಆಗ ಅದು ಬಹುಸಂಖ್ಯಾತರಿಗೆ ಕೂಡಾ ಒಂದು ಪರೀಕ್ಷೆಯಾಗುತ್ತದೆ ಹಾಗೂ ರಾಷ್ಟ್ರವು ಮುನ್ನಡೆಯುವಲ್ಲಿ ಒಂದು ಹೆಜ್ಜೆ ಮುಂದೆ ಹೋಗುತ್ತದೆ. ಬ್ರಿಟಿಷ್ ಆಡಳಿತದ ಅವಧಿಯಲ್ಲಿ ಮೀಸಲಾತಿ ಮತ್ತು ಪ್ರತ್ಯೇಕ ಮತಕ್ಷೇತ್ರಗಳು ಹೇಗೆ ಜಾರಿಗೊಂಡಿದ್ದವು ಎಂಬುದನ್ನು ನೋಡಿದ್ದೇವೆ; ಒಂದು ರಾಷ್ಟ್ರವಾಗಿ ರೂಪುಗೊಳ್ಳುವ ಬದಲು ದೇಶ ಛಿದ್ರವಾಯಿತು. ಈ ಚಿಕಿತ್ಸೆಯು ಪೀಡೆಯನ್ನು ಹೆಚ್ಚಿಸಿತು. ನಾವು ಅದರಿಂದ ಒಂದು ಪಾಠ ಕಲಿಯಬೇಕು; ನಾವು ದೇಶವನ್ನು ಒಂದು ರಾಷ್ಟ್ರವಾಗಿ ಬೆಸೆಯುವಲ್ಲಿ ಯಾವೆಲ್ಲ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ತಿಳಿಯಬೇಕು, ಬಹುಸಂಖ್ಯಾತ ಸಮುದಾಯಗಳು, ಅಲ್ಪಸಂಖ್ಯಾತರ ಪ್ರಾತಿನಿಧ್ಯದ ವಿಷಯದಲ್ಲಿ ಕೊರತೆ ಏನಾದರೂ ಇದ್ದರೆ ಅದನ್ನು ತುಂಬಲು ವಿಧಾನಗಳನ್ನು ಕಂಡುಕೊಳ್ಳಬೇಕು.

ಈ ಅಭಿಪ್ರಾಯದೊಂದಿಗೆ ನಾವು ಒಂದು ಒಗ್ಗೂಡಿದ ರಾಷ್ಟ್ರವಾಗಿ ಹೊರ ಹೊಮ್ಮುವ ಮಾರ್ಗದಲ್ಲಿ ಮುಂದುವರಿಯೋಣ. ಸಮಯ ಉಳಿದಿಲ್ಲ, ಇಲ್ಲದಿದ್ದರೆ ಈ ವಿಷಯ್ನ ಕುರಿತಂತೆ ಹೇಳುವುದು ಬಹಳಷ್ಟಿದೆ.

**ಮಾನ್ಯ ಉಪಸಭಾಧ್ಯಕ್ಷರು** (ಡಾ. ಎಚ್.ಸಿ. ಮುಖರ್ಜಿ) : ನಾನು ಶ್ರೀ ನಜಿರುದ್ದೀನ್ ಅಹ್ಮದ್ ಅವರಿಂದ ಒಂದು ತಿದ್ದುಪಡಿಯ ಸೂಚನೆ ಸ್ವೀಕರಿಸಿದ್ದೇನೆ: ಅದು ಮುಂದಿನಂತೆ ಇದೆ.

> "ಕರಡು ಸಂವಿಧಾನವನ್ನು ಗೌರವಾನ್ವಿತ ರಾಷ್ಟ್ರಪತಿಗಳು, ಸೂಕ್ತವೆಂದು ಆಲೋಚಿಸಿದಂತೆ, ಆ ರೀತಿಯಲ್ಲಿ ಚುನಾಯಿತರಾದ ಅಥವಾ ನೇಮಕಗೊಂಡ ಅಂತಹ ಸದಸ್ಯರನ್ನೊಳಗೊಂಡ ಒಂದು ಆಯ್ಕೆಸಮಿತಿಗೆ ಒಪ್ಪಿಸಿ ಗೌರವಾನ್ವಿತ ರಾಷ್ಟ್ರಪತಿಗಳು ಸೂಕ್ತವೆಂದು ಭಾವಿಸಿದ ಅಂತಹ ದಿನಾಂಕದಂದು ಆ ಬಗ್ಗೆ ವರದಿ ಸಲ್ಲಿಸುವಂತೆ ಕೇಳಬಹುದು."

ನಾನು, ಕರಡು ಸಂವಿಧಾನವನ್ನು ಪರಿಗಣಿಸಿ ಅಂಗೀಕರಿಸುವುದಕ್ಕಾಗಿರುವ ನಿಯಮಗಳಲ್ಲಿ ಪರಿಶೀಲನಾ ಸಮಿತಿಗೆ ಒಪ್ಪಿಸುವ ಬಗ್ಗೆ ಯಾವ ಉಪಬಂಧವೂ ಇಲ್ಲವೆಂಬ ಕಾರಣದ ಮೇಲೆ ತಿರಸ್ಕರಿಸುತ್ತಿದ್ದೆ. ಈ ತಿದ್ದುಪಡಿಗೆ ಒಪ್ಪಿಗೆ ನೀಡುವುದೆಂದರೆ ಈಗಾಗಲೇ ರಚಿಸಿದ ನಿಯಮಗಳಿಗೆ ತಿದ್ದುಪಡಿಗೆ ಮಾಡಿದಂತೆ ಆಗುತ್ತದೆ. ಇದನ್ನು ಚಾಲನಸಮಿತಿಗೆ ಉಲ್ಲೇಖಿಸದೇ ಮಾಡುವಂತಿಲ್ಲ, ಮಾತ್ರವಲ್ಲ, ನಿಯಮ ೩೧(೪) ಹೀಗೆ ಹೇಳುತ್ತದೆ:

> "ಅಧ್ಯಕ್ಷರು, ಯಾವುದೇ ತಿದ್ದುಪಡಿಯು ನಿರುಪಯುಕ್ತ ಅಥವಾ ವಿಳಂಬಕಾರಿ ಎಂದು ಪರಿಗಣಿಸಿದರೆ ಅದನ್ನು ಕೈ ಬಿಡಬಹುದು."

ನಾನು ಇದನ್ನು ಒಂದು ವಿಳಂಬಕಾರಿ ತಿದ್ದುಪಡಿ ಎಂದು ಪರಿಗಣಿಸುತ್ತೇನೆ, ಆದುದರಿಂದ ಇದು ಕ್ರಮರಹಿತವೆಂದು ತಳ್ಳಬಹುದು.

**ಗೌರವಾನ್ವಿತ ರೆವರೆಂಡ್ ಜೆ.ಜೆ.ಎಂ. ನಿಕೋಲಸ್ ರಾಯ್** (ಅಸ್ಸಾಮ್ : ಸಾಮಾನ್ಯ) : ಮಾನ್ಯ ಉಪಸಭಾಧ್ಯಕ್ಷರೆ, ಈ ಕರಡು ಸಂವಿಧಾನವನ್ನು ಹೊರ ತರುವಲ್ಲಿ ಅಗಾಧ ಕಾರ್ಯನಿರ್ವಹಿಸಿ. ಡಾ. ಅಂಬೇಡ್ಕರ್ ಅವರಿಗೆ ಮತ್ತು ಕರಡು ರಚನಾಸಮಿತಿಯ ಇತರ ಸದಸ್ಯರಿಗೆ ಮೆಚ್ಚುಗೆ ಸೂಚಿಸುವುದಕ್ಕೆ ನನಗೆ ಇದೊಂದು ಸದವಕಾಶ ಸಿಕ್ಕಿದೆ. ಅವರೆಲ್ಲರೂ ನಮ್ಮ ಅಭಿವಂದನೆಗಳಿಗೆ ಪಾತ್ರರಾಗಿದ್ದಾರೆ.

ನನಗೆ, ಸಂವಿಧಾನದ ಈ ಕರಡು ರಚನಾ ಸ್ವರೂಪದ ನಿರೂಪಣೆಯ ಕೆಲವು ವಿವರಗಳಲ್ಲಿ ಮತ್ತು ಮುಖ್ಯ ವಿಷಯಗಳಲ್ಲಿ, ಕೆಲವು ಮಾರ್ಪಾಡುಗಳ ಅಗತ್ಯವಿದೆ ಎಂದು ತೋರಿದರೂ ಅದು ಚೆನ್ನಾಗಿ ಕಾಣುತ್ತದೆ, ಈ ಸಂವಿಧಾನದಿಂದ ಭಾರತವು ವೈವಿಧ್ಯಗಳಲ್ಲಿ ಏಕತೆಯನ್ನು ಸಾಧಿಸಿದೆ. ಭಾರತವು ವಿವಿಧ ಜನಾಂಗಗಳು ಮತ್ತು ವರ್ಣಗಳು, ಮತಗಳು ಭಾಷೆಗಳು ಮತ್ತು ಸಂಸ್ಕೃತಿಗಳು ಮತ್ತು ವಿವಿಧ ಶ್ರೇಣಿಗಳ ನಾಗರಿಕತೆ ಇವೆಲ್ಲವುಗಳಿಂದ ಸಮ್ಮಿಳಿತಗೊಂಡು ಒಂದು ರಾಷ್ಟ್ರವಾಗಿ ರೂಪಿತವಾಗಿದೆ. ಸಮಸ್ತ ಜನರ ಒಳಿತಿಗಾಗಿ ಶ್ರಮಿಸುವಂತಾಗಿದೆ. ಇದೇನೂ ಸಣ್ಣ ಕೆಲಸವಲ್ಲ. ಯೂರೋಪ್ ಖಂಡದಲ್ಲಿ ವಿವಿಧ ರಾಜ್ಯಗಳು ಇರುವಂತೆ ಭಾರತದಲ್ಲಿಯೂ ಇದ್ದರೂ ಯೂರೋಪ್ ಒಂದು ಒಕ್ಕೂಟ ಸಾರ್ವಭೌಮ ದೇಶವಾಗಿ

ರೂಪುಗೊಳ್ಳಲು ಸಮರ್ಥವಾಗಿಲ್ಲ, ಆದರೆ ದೈವಕೃಪೆಯಿಂದ ಮತ್ತು ನಮ್ಮ ನೇತಾರರ ವಿವೇಕದಿಂದ ಭಾರತವು ವೈವಿಧ್ಯಗಳ ನಡುವೆಯೂ ಏಕತೆ ಸಾಧಿಸಿದೆ. ಈ ಏಕತೆಯನ್ನು, ಎಲ್ಲ ವೈವಿಧ್ಯಗಳನ್ನು ಕೈ ಬಿಡುವುದರಿಂದಾಗಲಿ ಮತ್ತು ಎಲ್ಲ ಬಿಡಿಭಾಗಗಳನ್ನು ಸೇರಿಸಿ ಲೇಖನಿಯ ಗೆರೆ ಎಳೆಯುವುದರಿಂದಾಗಲಿ ಸಾಧಿಸಲಾಗದು; ಅಂತಹ ಪ್ರಯತ್ನದಿಂದಾಗಿ ಎಲ್ಲ ಕಡೆಗೂ ಭೀಕರ ಕ್ರಾಂತಿ ಮತ್ತು ಮಹಾ ಗಂಡಾಂತರಕ್ಕೆ ಎಡೆಮಾಡಿಕೊಟ್ಟಂತಾಗುತ್ತಿದೆ. ಭಾರತದ ಏಕತೆ ಸಾಧಿಸಲು ಬೇಕಾದ ಪ್ರಕ್ರಿಯೆ ಎಂದರೆ ಕರಡು ಸಂವಿಧಾನದಲ್ಲಿ ಹೇಳಿರುವಂತೆ ವಿಕಾಸಗೊಳಿಸುವುದೆ ಆಗಿದೆ.

ಆರಾಧನಾ ಸ್ವಾತಂತ್ರ್ಯ ಇತ್ಯಾದಿಗಳಿಗಾಗಿ ಅಲ್ಪಸಂಖ್ಯಾತರಿಗಾಗಿ ಮತ್ತು ಕೆಲವು ವಿಶೇಷ ಕ್ಷೇತ್ರಗಳಿಗಾಗಿ ಮತ್ತು ಗಿರಿಜನ ಬುಡಕಟ್ಟುಗಳಿಗಾಗಿ ಉಪಬಂಧಗಳು, ವೈವಿಧ್ಯಗಳ ಮಧ್ಯೆ ಏಕತೆ ವಿಕಾಸಗೊಳ್ಳಲು ಆವಶ್ಯಕ ಹಂತಗಳಾಗಿವೆ. ನಮ್ಮ ನಾಯಕರ ವಿವೇಚನೆ ಮತ್ತು ಬಹುಸಂಖ್ಯಾತ ಸಮುದಾಯವು ಈ ಏಕತೆ ತರುವಲ್ಲಿ ವೈವಿಧ್ಯಗಳಿಗೆ ಅವಕಾಶ ನೀಡಿ ಒಪ್ಪಿಕೊಳ್ಳುವಲ್ಲಿ ತೋರಿಸಿದ ವಿವೇಕ ಇವು ಹೆಚ್ಚು ಮೆಚ್ಚುಗೆಗೆ ಪಾತ್ರವಾಗಿವೆ. ಇದು ದೇವರದೇ ವಿಧಾನ, ದೇವರದೇ ಸೃಷ್ಟಿ; ಎಲ್ಲೆಲ್ಲೂ ವೈವಿಧ್ಯದಲ್ಲಿ ಏಕತೆ ಇದೆ. ಅಲ್ಪಸಂಖ್ಯಾತರ ಸಲಹಾಸಮಿತಿಯ ಅಧ್ಯಕ್ಷರಾದ ಸರ್ದಾರ್ ಪಟೇಲ್ ಅವರಿಗೆ ನಾನು ಅಭಿವಂದಿಸುತ್ತೇನೆ, ಅವರು ಅಲ್ಪಸಂಖ್ಯಾತರ ಹಾಗೂ ವಿಶೇಷ ಬುಡಕಟ್ಟುಪ್ರದೇಶಗಳ ಅಗತ್ಯಗಳನ್ನು ಚನ್ನಾಗಿ ತಿಳಿದುಕೊಂಡಿದ್ದಾರೆ.

ಕರಡು ರಚನಾಸಮಿತಿಯು ೬ನೆಯ ಅನುಸೂಚಿಯಲ್ಲಿ ಹೇಳಿರುವಂತೆ ಸ್ವಾಯತ್ತ ಜಿಲ್ಲೆಗಳೆನ್ನಲಾದ, ಅಸ್ಸಾಮಿನ ಗುಡ್ಡಗಾಡು ಜಿಲ್ಲೆಗಳಲ್ಲಿ ಸ್ವಾಯತ್ತ ಅಧಿಕಾರ ನೀಡಿ ಜಿಲ್ಲಾ ಪರಿಷತ್ತುಗಳ ಸೃಜನೆಗೆ ಒಪ್ಪಿರುವುದಕ್ಕೆ ವಿಶೇಷವಾಗಿ ನಾನು ವಂದಿಸಲೇಬೇಕು. ಈ ಗುಡ್ಡಗಾಡು ಜಿಲ್ಲೆಗಳು ಬುಡಕಟ್ಟು ಜನರ ವಾಸಸ್ಥಳವಾಗಿವೆ, ಇವು ಈ ಸಂವಿಧಾನದಡಿ, ಅವರವರ ಪ್ರತಿಭೆಗೆ ಮತ್ತು ಸಂಸ್ಕೃತಿಗೆ ಅನುಗುಣವಾಗಿ ಸ್ವಯಂ ಅಭಿವೃದ್ಧಿ ಹೊಂದಲು ಸಮರ್ಥವಾಗುತ್ತವೆ, ಈ ಸ್ವಾಯತ್ತ ಜಿಲ್ಲೆಗಳು ಕರಡು ಸಂವಿಧಾನದಲ್ಲಿ ಹೇಳಿರುವಂತೆ, ಏಕತೆಯ ಮುಖ್ಯ ಉದ್ದೇಶಕ್ಕೆ ಅಡ್ಡಿಪಡಿಸದೇ ತಮ್ಮದೇ ಮಾರ್ಗದಲ್ಲಿ ಅಭಿವೃದ್ಧಿ ಹೊಂದಲು ಪೋಷಿಸಿದರೆ ಫಲಿತಾಂಶ ಆಕರ್ಷಕವಾಗುತ್ತದೆ ಎಂದು ನಾನು ನಂಬಿದ್ದೇನೆ. ಈ ಬುಡಕಟ್ಟುಗಳು, ಸಣ್ಣ ಸಣ್ಣ ಬುಡಕಟ್ಟುಗಳಾಗಿದ್ದರೂ ಅನಾದಿಕಾಲದಿಂದಲೂ ಸ್ವಯಮಾಡಳಿತ ಸಂಸ್ಥೆಗಳಾಗಿದ್ದವು. ಈ ಕರಡಿನಲ್ಲಿ ಪ್ರಸ್ತಾವಿಸಿದಂತೆ ಭಾರತ ಸರ್ಕಾರವು ಈ ಪ್ರದೇಶಗಳ ಅಭಿವೃದ್ಧಿ ಯೋಜನೆಗಳಿಗೆ ಹಣಕಾಸು ಒದಗಿಸಿದರೆ ಭಾವಿ ಭಾರತವು ಯಶಸ್ಸನ್ನು ಗಳಿಸುತ್ತದೆ. ಕರಡಿನ ೬ನೆಯ ಅನುಸೂಚಿಯಲ್ಲಿ ಕೆಲವು ಸುಧಾರಣೆಗಳನ್ನು ಮಾಡಬೇಕಿದೆ, ಸೂಕ್ತಕಾಲದಲ್ಲಿ ಮಂಡಿಸಲಾಗುವ ತಿದ್ದುಪಡಿಗಳನ್ನು ಸದನವು ಅಂಗೀಕರಿಸುತ್ತದೆ ಎಂದು ನಾನು ಆಶಿಸುತ್ತೇನೆ.

ಕೇಂದ್ರವನ್ನು ಬಲಪಡಿಸುವ ವಿಷಯದಲ್ಲಿ ಡಾ. ಅಂಬೇಡ್ಕರ್ ಮತ್ತು ಇತರರು ವ್ಯಕ್ತಪಡಿಸಿದ ಭಾವನೆಯನ್ನು ನಾನು ಸಂಪೂರ್ಣ ಒಪ್ಪುತ್ತೇನೆ. ಕೇಂದ್ರದ ಘಟಕ ಭಾಗಗಳಿಗೆ ಹಾನಿಯುಂಟುಮಾಡಿ ಕೇಂದ್ರವನ್ನು ಅಸಮತೋಲವಾಗಿ ಬಲಗೊಳಿಸುವುದನ್ನು ಕುರಿತು ಪ್ರಬಲವಾಗಿ ನಾನು ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕಿದೆ, ಇದು ಹೇಗೆಂದರೆ, ಅಸಮತೋಲ ಅಂಗಾಂಗಗಳಿರುವ ಮಾನವನ ಚಿತ್ರದಂತೆ. ಒಂದು ಬಹು ದೊಡ್ಡ ತಲೆ, ಆದರೆ ಸಣಕಲಾದ ಮತ್ತು ತೆಳ್ಳನೆಯ ಕೈಕಾಲುಗಳು ಇರುವ ಮಾನವನು ಸರಿಯಾಗಿ ಆ ಸ್ಥಿತಿಯಲ್ಲಿ ನಿಲ್ಲಲು ಸಮರ್ಥನಿರುವುದಿಲ್ಲ.

೧೩೧ನೇ ಅನುಚ್ಛೇದಕ್ಕೆ ಮಾಡಿದ ಮುದ್ರಿತ ತಿದ್ದುಪಡಿಗಳನ್ನು ಅವಲೋಕಿಸಿದರೆ, ರಾಜ್ಯಪಾಲರನ್ನು ರಾಷ್ಟ್ರಪತಿಗಳು ನೇಮಕಮಾಡಬೇಕು ಎಂದು ಕರಡು ರಚನಾಸಮಿತಿಯು ಇಚ್ಛಿಸುತ್ತದೆ. ಆದುದರಿಂದ ಅಧಿಕಾರಗಳನ್ನು ಕೇಂದ್ರೀಕರಣಗೊಳಿಸಲು ಪ್ರಸ್ತಾವಿಸಲಾಗಿದೆ, ಕರಡು ರಚನಾಸಮಿತಿಯು ತಮ್ಮ ಅಭಿಪ್ರಾಯವನ್ನು ಮಂಡಿಸುವುದು ಅನಪೇಕ್ಷಣೀಯ ಎಂದು ತಿಳಿದು ಅದನ್ನು ಪರಿಷ್ಕರಿಸುತ್ತದೆ ಎಂದು ನಾನು ಆಶಿಸುತ್ತೇನೆ. ಈ ದೇಶವು ವಿವೇಚನಾಧಿಕಾರದಿಂದ ರಾಜ್ಯಪಾಲರ ಹುದ್ದೆಗೆ ನಾಮಕರಣಮಾಡುವ ಕಲ್ಪನೆಯನ್ನು ಕೈಬಿಟ್ಟಿದೆ

ಎಂದು ನಾನು ಭಾವಿಸಿದ್ದೆ. ಕರಡು ಸಮಿತಿಯು, ರಾಜ್ಯದ ವಿಧಾನಸಭಾ ಸದಸ್ಯರಿಂದ ಚುನಾಯಿತರಾಗಬೇಕಾದ ನಾಲ್ಕು ಅಭ್ಯರ್ಥಿಗಳ ಒಂದು ಪಟ್ಟಿಯಿಂದ ರಾಜ್ಯಪಾಲರ ನೇಮಕಕ್ಕಾಗಿ ಒಂದು ಪರ್ಯಾಯ ಪ್ರಸ್ತಾವವನ್ನು ಕೂಡಾ ಕೊಟ್ಟಿದೆ. ಸಮಿತಿಯ ಕೆಲವು ಸದಸ್ಯರ ವಾದವು ಹೀಗಿದೆ ಎಂದರೆ, ಒಬ್ಬ ಚುನಾಯಿತ ರಾಜ್ಯಪಾಲ ಮತ್ತು ಶಾಸನಸಭೆಗೆ ಜವಾಬ್ದಾರಿಯಾಗಿರುವ ಪ್ರಧಾನಮಂತ್ರಿಗಳ ಸಹ-ಅಸ್ತಿತ್ವವು, ಘರ್ಷಣೆಗೆ ಎಡೆಮಾಡಿ ಕೊಟ್ಟು, ಅದರ ಪರಿಣಾಮವಾಗಿ ಆಡಳಿತದಲ್ಲಿ ದೌರ್ಬಲ್ಯ ಕಂಡುಬರಬಹುದು, ಎಂಬುದಾಗಿದೆ. ಆದರೆ, ಅದೇ ರೀತಿ ವಿವೇಚನಾಧಿಕಾರ ಬಳಸಿ ನಾಮಕರಣಗೊಂಡ ರಾಜ್ಯಪಾಲರು ಇರುವುದರಿಂದ, ಅಡೆತಡೆ ಬಿಕ್ಕಟ್ಟಿಗೆ ಅವಕಾಶಮಾಡಿಕೊಡಬಹುದು. ಒಬ್ಬ ಸಚಿವನಾಗಿ, ಎಂಟುಜನ ನಾಮಕರಣಗೊಂಡ ರಾಜ್ಯಪಾಲರೊಂದಿಗೆ ಕಾರ್ಯನಿರ್ವಹಿಸಿದ ಅನುಭವ ನನಗಿದೆ. ಒಬ್ಬ ಚುನಾಯಿತ ರಾಜ್ಯಪಾಲರು ಇರುವುದು ಸೂಕ್ತವಾದ ಬದಲಿ ವ್ಯವಸ್ಥೆ ಎಂಬುದು ನನ್ನ ಬಲವಾದ ಅಭಿಪ್ರಾಯವಾಗಿದೆ. ಈ ಸದನದಲ್ಲಿ ಅನುಚ್ಛೇದ ೧೫೧ಕ್ಕೆ ತಿದ್ದುಪಡಿಗಳನ್ನು ಮಂಡಿಸಿದಾಗ ಇದನ್ನು ವಿಸ್ತಾರವಾಗಿ ಚರ್ಚಿಸಲಾಗುತ್ತದೆ, ನಾನು ಆಗ ಇದನ್ನು ಕುರಿತು ಹೆಚ್ಚು ವಿವರವಾಗಿ ತಿಳಿಸುತ್ತೇನೆ.

ಹಣಕಾಸು ವಿಷಯವು ವಿಶೇಷವಾಗಿ ಸಣ್ಣ ಪ್ರಾಂತ್ಯಗಳಿಗೆ ಸಂಬಂಧಿಸಿದಂತೆ ಈ ಕರಡಿನಲ್ಲಿ ಬಹು ಅತೃಪ್ತಿಕರವಾಗಿದೆ. ಈ ಪ್ರಾಂತ್ಯಗಳ ಬಗ್ಗೆ ನ್ಯಾಯೋಚಿತವಾಗಿ ವ್ಯವಹರಿಸಿಲ್ಲ. ಅಸ್ಸಾಮ್, ಒರಿಸ್ಸಾಗಳಂತಹ ದುರ್ಬಲ ಪ್ರಾಂತ್ಯಗಳು ವಿಶೇಷವಾಗಿ ನಿರಾಸೆಗೊಂಡಿರುವುದಕ್ಕೆ ಕಾರಣಗಳಿವೆ. ಆ ಪ್ರಾಂತ್ಯಗಳನ್ನು ಆರ್ಥಿಕವಾಗಿ ದುರ್ಬಲಗೊಳಿಸಬಾರದು, ದೇಹದ ಒಂದು ದುರ್ಬಲ ಅಂಗವೂ ಇಡೀ ದೇಹವನ್ನು ದುರ್ಬಲಗೊಳಿಸುತ್ತದೆ, ಭಾರತವು ಜೀವಂತಿಕೆಯಿಂದ ಸಮೃದ್ಧವಾಗಿ ಬೆಳೆಯಲು ರಾಜ್ಯಗಳು ಅಂದರೆ ಅದರ ಘಟಕ ಭಾಗಗಳು ಭಾರತದ ರಾಜ್ಯಾಂಗದ ಆರೋಗ್ಯಕರ ಅಂಗಗಳಾಗಿ ಕೆಲಸಮಾಡಬೇಕು. ವಿಷಯಕ್ಕೆ ಬಂದರೆ, ೨೫೫ ಮತ್ತು ೨೫೪ನೇ ಅನುಚ್ಛೇದಗಳ ಉಪಬಂಧಗಳನ್ನು ಒಪ್ಪಿಕೊಳ್ಳಲು ನಮಗೆ ಸಾಧ್ಯವಾಗುತ್ತಿಲ್ಲ ಎಂದು ನಾನು ಹೇಳಬಯಸುತ್ತೇನೆ. ಅವುಗಳ ಬಗ್ಗೆ ಭಾರತ ಸರ್ಕಾರದ ಅಧಿನಿಯಮದ ೧೪೦ನೇ ಪ್ರಕರಣದಲ್ಲಿ ಹೇಳಿದ ವಿಷಯವನ್ನೇ ಬಹುತೇಕ ಇಲ್ಲಿಯೂ ಹೇಳಲಾಗಿದೆ. ಭಾರತ ಸರ್ಕಾರದ ಶುಭಾಶಯಗಳು ವಿಳಾಸವಿಲ್ಲದ ಕಾಗದವಾಗಿ ಉಳಿದಿವೆ, ಅದೇ ಒರಿಸ್ಸಾ ಮತ್ತು ಅಸ್ಸಾಮ್‌ಗಳಂತಹ ಹಿಂದುಳಿದ ಪ್ರಾಂತ್ಯಗಳು ಅವು ಹಿಂದೆ ಎಲ್ಲಿದ್ದವೋ ಅಲ್ಲೇ ಉಳಿದಿವೆ. ಮಾನ್ಯರೆ, ಈ ವರ್ಷ ಕೂಡಾ, ನಮ್ಮ ಅಸ್ಸಾಮ್ ಪ್ರಾಂತ್ಯವು ಕೇಂದ್ರ ಸರ್ಕಾರದ ಹಣಕಾಸು ನೀತಿಯಿಂದ ಭಾರಿ ಹೊಡೆತಕ್ಕೊಳಗಾಗಿದೆ, ರಾಷ್ಟ್ರನಿರ್ಮಾಣದ ಹಲವಾರು ಚಟುವಟಿಕೆಗಳಿಗಾಗಿ ಅಗತ್ಯವಾದ ಶಿಕ್ಷಣ ನೀಡುವ ಮತ್ತು ಸಿಬ್ಬಂದಿಗೆ ತರಬೇತಿ ನೀಡುವ ಸಂಸ್ಥೆಗಳ ನಿರ್ಮಾಣಕ್ಕಾಗಿ ನಮ್ಮ ಅಗತ್ಯಗಳನ್ನು ಪೂರೈಸಲಾಗುತ್ತದೆ ಎಂದು ನಾವು ಭಾರಿ ಭರವಸೆಯಲ್ಲಿದ್ದೆವು, ಆದರೆ ಇವುಗಳನ್ನು ಮುಂದೂಡಬೇಕೆಂದು ಅಥವಾ ವಿಳಂಬಿಸಬೇಕೆಂದು ನಮಗೆ ಹೇಳಲಾಗಿದೆ, ಪಾಕಿಸ್ತಾನದ ಗಡಿಯಲ್ಲಿ ವಾಸಿಸುತ್ತಿರುವ ಯಾತನೆಗೊಳಗಾದ ನಮ್ಮ ಜನರಿಗೆ ಪರಿಹಾರ ನೀಡುವುದಕ್ಕಾಗಿ ಹಾಗೂ ದೇಶರಕ್ಷಣೆಗಾಗಿ ಸೈನ್ಯದ ಅನುಕೂಲಕ್ಕಾಗಿ ಅತ್ಯಂತ ಅಗತ್ಯವಿರುವ ಹೆದ್ದಾರಿಗಳ ಮತ್ತು ರಸ್ತೆಗಳ ನಿರ್ಮಾಣಕ್ಕಾಗಿ ಪ್ರಸ್ತಾವಿಸಲಾಗಿದ್ದ ಹಾಗೂ ಆವಶ್ಯಕವಾಗಿ ಮಾಡಬೇಕಾಗಿದ್ದ ಅದನ್ನು ಅದೇ ತೀವ್ರತೆಯೊಂದಿಗೆ ಕಾರ್ಯೋನ್ಮುಖವಾಗದಿರುವುದಕ್ಕೆ ಏಕೆಂದರೆ ಈ ಯೋಜನೆಗಳಿಗೆ ಪ್ರಸಕ್ತವರ್ಷ ಬೇಕಾದ ಹಣದ ಕಾಲುಭಾಗ ಕೂಡಾ ನಮಗೆ ಲಭ್ಯವಾಗುತ್ತಿಲ್ಲ, ಮಹಾನ್ ಕಾಂಗ್ರೆಸ್ ಸಂಸ್ಥೆಯು ನಮ್ಮ ಗುರಿ "ಸಹಕಾರ ಕಾಮನ್‌ವೆಲ್ತ್" ಎಂದು ಘೋಷಿಸಿದೆ, ಆದರೆ "ಸಹಕಾರಿ ತತ್ತ್ವಗಳ ಮೇಲೆ" ಗ್ರಾಮೀಣ ಕೇಂದ್ರಗಳನ್ನು ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಗಾಗಿ ತೆರೆಯಲು ಪ್ರಸ್ತಾವಿಸಿದಾಗ ಈ ಸಂಬಂಧವಾಗಿ ಯೋಜನೆಗಳನ್ನು ಪೂರೈಸಲು ಬೇಕಾದ ಹಣ ಸಿಗುತ್ತಿಲ್ಲ, ನಮ್ಮ ಅಸ್ಸಾಮ್ ಸರ್ಕಾರವು ಪ್ರಾಂತೀಯ ಪಟ್ಟಿಯೊಳಗೆ ಬರುವ ಗರಿಷ್ಠ ಹಣಕಾಸು ಪಡೆದುಕೊಳ್ಳಲು ಸಮರ್ಥವಿದ್ದರೂ ತೆರಿಗೆಯ ಎಲ್ಲ ಸಂಪನ್ಮೂಲಗಳನ್ನು ಬಳಸಿಕೊಂಡುಬಿಟ್ಟಿದೆ, ಆದರೆ ಅದರ ಮೂಲ

ಆದಾಯ ಕೇವಲ ನಾಲ್ಕು ಕೋಟಿಗಳಷ್ಟು ಇದ್ದರೂ ನಮ್ಮ ಪ್ರಾಂತ್ಯವು ಇನ್ನೂ ಒಂದು ಕೋಟಿ ರೂಪಾಯಿಗಳ ಕೊರತೆಯನ್ನು ಎದುರಿಸುತ್ತಿದೆ, ಆದರೆ ಅಸ್ಸಾಮ್ ರಾಜ್ಯವು ಕೇಂದ್ರದಿಂದ ನೆರವು ಬೇಡದೆಯೇ ಸ್ವಂತ ಜವಾಬ್ದಾರಿಗಳನ್ನು ಭರಿಸಲು ಸಾಧ್ಯವಾಗಬೇಕಾದರೆ ಕೇಂದ್ರ ಸರ್ಕಾರವು ಚಹಾದ ಮೇಲಿನ ರಫ್ತು ಸುಂಕವನ್ನು ತೆಗೆದುಕೊಳ್ಳಬಾರದಿತ್ತು. ಚಹಾ ಮತ್ತು ಪೆಟ್ರೋಲಿಯಂ ಇವುಗಳನ್ನು ಅಸ್ಸಾಮ್‌ನಲ್ಲಿ ಉತ್ಪಾದಿಸಲಾಗುತ್ತಿದೆ, ಚಹಾ ಮತ್ತು ಪಟ್ರೋಲಿಯಂಗಳ ಮೇಲಿನ ಸುಂಕ ಮತ್ತು ರಫ್ತು ಸುಂಕಗಳನ್ನು ನಮಗೆ ಹಂಚಿದ್ದಿದ್ದರೆ, ಅದೇ ಭಾರತ ಸರ್ಕಾರದ ಬೊಕ್ಕಸಕ್ಕೆ ವರ್ಷವೊಂದಕ್ಕೆ ಕೇವಲ ಅಸ್ಸಾಮಿನಿಂದಲೇ ಸುಮಾರು ಎಂಟು ಕೋಟಿಗಳಷ್ಟು ರೂಪಾಯಿಗಳನ್ನು ಕೊಡುತ್ತಿದ್ದೆವು, ನಮ್ಮ ಎಲ್ಲ ಅಭಿವೃದ್ಧಿ ಯೋಜನೆಗಳಿಗೆ ಸಾಕಾಗುವಷ್ಟು ಹಣಕಾಸು ನಮ್ಮಲ್ಲೆ ಇರುತ್ತಿತ್ತು. ಈ ರಫ್ತು ಸುಂಕವನ್ನು, ಕಡೇಪಕ್ಷ ಪ್ರತಿ ವರ್ಷ ಅದರ ದೊಡ್ಡ ಪಾಲನ್ನು ಅಸ್ಸಾಮ್‌ಗೆ ಏಕೆ ಕೊಡಬಾರದು?

ಈ ಪ್ರಶ್ನೆಗಳ ಬಗ್ಗೆ ವಿಚಾರ ವಿಮರ್ಶೆ ಮಾಡಲು ಒಂದು ತಜ್ಞರಸಮಿತಿಯನ್ನು ನೇಮಕಮಾಡಲಾಗಿತ್ತು ಮತ್ತು ಅಸ್ಸಾಮ್‌ನ ಪ್ರಧಾನಿ ಶ್ರೀ ಬಿ.ಎನ್. ಬರ್ಡೋಲೋಯಿ ಅವರು ಸಮಿತಿಯ ಮುಂದೆ ಸ್ವತಃ ನಿಯೋಗದ ನೇತೃತ್ವ ವಹಿಸಿದ್ದರು. ಸಮಿತಿಯು, ಸೆಣಬಿನ ಮೇಲಿನ ರಫ್ತು ಸುಂಕದ ಒಂದು ಭಾಗವನ್ನು ಬಂಗಾಳಕ್ಕೆ (ಅದರ ಒಂದು ಸಣ್ಣ ಪಾಲು ಅಸ್ಸಾಮ್‌ಗೆ ಕೂಡಾ ಬರುತ್ತದೆ) ಮತ್ತು ಹೊಗೆಸೊಪ್ಪಿನ ಮೇಲಿನ ರಫ್ತು ಸುಂಕದ ಒಂದು ಭಾಗವನ್ನು ಮದ್ರಾಸ್ ಪ್ರಾಂತ್ಯಕ್ಕೆ ಕೊಡಬಹುದೆಂದು ಒಪ್ಪಿಕೊಂಡಿತ್ತು. ಸಮಿತಿಯು, ಅಸ್ಸಾಮ್‌ನಲ್ಲಿ ಉತ್ಪಾದಿಸುವ ಚಹಾ ಮತ್ತು ಪೆಟ್ರೋಲಿಯಂಗಳ ನಿಮಿತ್ತ ಅಸ್ಸಾಮ್‌ಗೆ ಏನೊಂದನ್ನು ಕೊಡುವುದು ಅಪೇಕ್ಷಣೀಯವಾಗಿದೆ ಎಂದು ಪರಿಗಣಿಸಲಿಲ್ಲ, ಇದು ನ್ಯಾಯೋಚಿತ ಮತ್ತು ನ್ಯಾಯಸಮ್ಮತವಾಗಿದೆಯೇ? ಅಸ್ಸಾಮನ್ನು ಕೇಂದ್ರವು ಈ ರೀತಿ ಖಾಯಂ ಆಗಿ ತನ್ನ ಕೃಪಾಶ್ರಯದಲ್ಲೇ ಇರುವಂತೆ ಮಾಡಿತ್ತು. ಈ ರೀತಿ ಭೇದಭಾವವನ್ನೇಕೆ ಮಾಡಲಾಗಿತ್ತೆಂಬುದು ನಮ್ಮ ಊಹೆಗೂ ಮೀರಿದ್ದಾಗಿದೆ. ಕೇಂದ್ರದಲ್ಲಿ ಅಸ್ಸಾಮಿಗೆ ಬಲವಾಗಿ ಧ್ವನಿಯೇ ಇರಲಿಲ್ಲ ಎಂಬ ಕಾರಣಕ್ಕಾಗಿಯೇ? ಬ್ರಿಟಿಷರ ಆಡಳಿತದ ಅನೇಕ ವರ್ಷಗಳ ಕಾಲ ಹಿಂದಿನ ಕೇಂದ್ರ ಹಣಕಾಸು ಅಧಿಕಾರಿಗಳು ಮಾಡಿದ ಅನ್ಯಾಯದ ವಿರುದ್ಧ ಅಸ್ಸಾಮ್ ರೋದಿಸುತ್ತಲೇ ಇತ್ತು, ಆದರೆ ನಮ್ಮೆಲ್ಲ ಆಕ್ರಂದನಗಳನ್ನು ಮತ್ತು ಅನ್ಯಾಯದ ಖಂಡನೆಗಳನ್ನು ಕೇಂದ್ರವು ಅಲಕ್ಷ್ಯಮಾಡಿತ್ತು, ತನ್ನ ಕಾಲ ಮೇಲೆ ತಾನು ನಿಲ್ಲಲಿ ಸಮರ್ಥವಾದ ಮತ್ತು ಸಾಕಷ್ಟು ಉತ್ಪತ್ತಿ ಇರುವ ಪ್ರಾಂತ್ಯವನ್ನು ಶಾಶ್ವತವಾಗಿ ಒಬ್ಬ ಭಿಕ್ಷುಕನ ಸ್ಥಾನಕ್ಕೆ ಏಕೆ ಇಳಿಸಬೇಕಾಗಿತ್ತು? ಮಾನ್ಯರೆ, ಈ ರೀತಿಯಲ್ಲಿ ಕೇಂದ್ರವನ್ನು ಆರ್ಥಿಕವಾಗಿ ಬಲಪಡಿಸುವಲ್ಲಿ ಒಂದು ಪ್ರಾಂತ್ಯದ ಅದರ ನ್ಯಾಯಯುತ ಹಕ್ಕನ್ನು ಕಸಿದುಕೊಳ್ಳುವುದನ್ನು ಯಾರೊಬ್ಬರು ಬೆಂಬಲಿಸುವುದಿಲ್ಲ ಎಂದು ನಾನು ಭಾವಿಸುತ್ತೇನೆ. ಈ ನ್ಯಾಯಸದನವು, ವಿವೇಚನೆಯಿಂದ ಮತ್ತು ಸಹಾನುಭೂತಿ ಹೃದಯದಿಂದ ಈ ಪ್ರಾಂತ್ಯಕ್ಕೆ ನ್ಯಾಯೋಚಿತ ಪಾಲನ್ನು ದೊರಕಿಸಿಕೊಡುತ್ತದೆ ಎಂಬುದು ನನ್ನ ನಂಬಿಕೆ. ಸತ್ಯ ಸಂಗತಿಗಳನ್ನು ಎದುರಿಸಬೇಕು.

ಅಧಿಕಾರಿಗಳು, ಇತರ ವಿಷಯಗಳಲ್ಲಿ ನಿರತರಾಗಿರುವಾಗ, ಅವರ ಗಮನವನ್ನು ಅಸ್ಸಾಮಿನ ಜೀವನ್ಮರಣದ ಈ ವಿಷಯದತ್ತ ಸೆಳೆಯಲು ಆಗಲಿಲ್ಲ ಎಂದು ನಾನು ಭಾವಿಸುತ್ತೇನೆ, ಈ ಸಮಯದಲ್ಲಿ ಎಲ್ಲ ಗೌರವಾನ್ವಿತ ಸದಸ್ಯರು ನಮ್ಮ ರಕ್ಷಣೆಗೆ ಬರಬೇಕೆಂದು ನಾವು ಇಂದು ಮನವಿಮಾಡುತ್ತಿದ್ದೇವೆ. ಅಸ್ಸಾಮ್ ಒಂದು ಗಡಿ ಪ್ರಾಂತ್ಯವಾಗಿದ್ದು ಎಲ್ಲ ಕಡೆಗಳಿಂದಲೂ ದಾಳಿಗೀಡಾಗುತ್ತದೆ ಎಂಬುದನ್ನು ಮರೆಯಬಾರದು. ಕೆಟ್ಟ ದಿನಗಳು ಬರುವ ಮೊದಲೇ ಮೊದಲಿನಿಂದಲೇ ಇಡೀ ಒಕ್ಕೂಟವು ಇದರ ಕಡೆಗೆ ಗಮನ ಹರಿಸಬೇಕಾದದ್ದು ಕರ್ತವ್ಯವಾಗಿದೆ, ಗಡಿಪ್ರದೇಶಗಳ ಜನರು ಸಂತೃಪ್ತಿಯಿಂದ ಇರುವುದಕ್ಕಾಗಿ ಜೀವನಾವಶ್ಯಕ ವಸ್ತುಗಳನ್ನು ಸರಬರಾಜು ಮಾಡುವುದು ಭಾರತಕ್ಕೆ ತುಂಬ ಆವಶ್ಯಕವಿದೆ; ಇಲ್ಲದಿದ್ದರೆ ಶಾಂತಿಕಾಲದಲ್ಲಿ ವೆಚ್ಚಮಾಡುವ ಹಣಕ್ಕಿಂತ ಹತ್ತು ಪಟ್ಟು ಹೆಚ್ಚು ಹಣವನ್ನು ಭಾರತವು ವೆಚ್ಚಮಾಡಬೇಕಾಗಿ ಬಂದು, ವಿರೋಧಿಶಕ್ತಿಗಳಿಂದ

ಹೆಚ್ಚಿನ ತೊಂದರೆಗಳಿಗೆಡೆಮಾಡಿಕೊಟ್ಟಂತಾಗುತ್ತದೆ. ನಮ್ಮ ಅಸ್ಸಾಮ್ ಪ್ರಾಂತ್ಯದ ಟೀ ಮೇಲಿನ ರಫ್ತು ಸುಂಕವನ್ನು ಕಸಿದುಕೊಳ್ಳುವುದು ಮತ್ತು ಟೀ ಹಾಗೂ ಪೆಟ್ರೋಲಿಯಂ ಇತ್ಯಾದಿ ಮೇಲಿನ ಸುಂಕಗಳಲ್ಲಿ ಅದರ ನ್ಯಾಯೋಚಿತ ಪಾಲನ್ನು ತಗ್ಗಿಸುವುದು ಸಂಕುಚಿತ ನೀತಿಯಾಗುತ್ತದೆ. ಹಿಂದಿನ ಅಧಿಕಾರಶಾಹಿ ಸರ್ಕಾರವು, ಅಸ್ಸಾಮ್ ಅಥವಾ ಒರಿಸ್ಸಾಗಳಂತಹ ಹಿಂದುಳಿದ ಪ್ರಾಂತ್ಯಗಳ ಕೋರಿಕೆಗಳನ್ನು ಕಡೆಗಣಿಸಿತ್ತು; ಆದರೆ ವಿದೇಶಿ ಸರ್ಕಾರವು ಮಾಡಿದ ಅದೇ ತಪ್ಪನ್ನು ಖಾಯಂ ಆಗಿ ಮುಂದುವರಿಸುವುದಕ್ಕೆ ಈ ಸಂವಿಧಾನ ರಚನಾಸಭೆಯು ಅವಕಾಶ ಕೊಡುವುದಿಲ್ಲ ಎಂಬುದನ್ನು ನಾವು ಹೇಗೆ ಊಹಿಸಬಹುದು? ಮಾನ್ಯರೆ, ಈ ತಪ್ಪನ್ನು ಸರಿಪಡಿಸಲು ಈ ಸದನದ ಮುಂದೆ ತಿದ್ದುಪಡಿಗಳನ್ನು ತಂದಾಗ ಅವುಗಳನ್ನು ಈ ಮಹಾನ್ ಸಭೆಯ ಎಲ್ಲ ಸದಸ್ಯರು ಸಂಪೂರ್ಣ ಬೆಂಬಲದಿಂದ ಸ್ವೀಕರಿಸುತ್ತಾರೆ ಎಂದು ನಾನು ಆಶಿಸುತ್ತೇನೆ.

ಮಾನ್ಯರೆ, ನಾನು ನನ್ನ ಮಾತನ್ನು ಮುಗಿಸುವ ಮೊದಲು, ಚುನಾವಣೆಗೆ ಆಧಾರವಾಗಿ ವಯಸ್ಕ ಮತದಾನಪದ್ಧತಿ ಆವಶ್ಯಕ ಎಂದು ಹೇಳಲೇಬೇಕಾಗಿದೆ. ಜನ, ಎಲ್ಲೆಲ್ಲಿಯೂ ತಮಗೆ ಸ್ವಾತಂತ್ರ್ಯ ಬಂದಿದೆ ಎಂಬುದನ್ನು ಮತ್ತು ದೇಶದ ಆಡಳಿತವನ್ನು ರೂಪಿಸುವಲ್ಲಿ ತಮಗೂ ಒಂದು ಪಾಲು ಇದೆ ಎಂದು ತಿಳಿಯಬೇಕು. ಈ ಹಿಂದೆ, ಕಾಂಗ್ರೆಸ್ ಕೊಟ್ಟ ಭರವಸೆ ಇದಾಗಿದೆ ಮತ್ತು ಈ ತತ್ತ್ವದಿಂದ ಯಾವುದೇ ರೀತಿ ವಿಮುಖರಾದರೆ, ನಿರಾಸೆಗೆ ಕಾರಣವಾಗುತ್ತದೆ ಮತ್ತು ದೇಶದಲ್ಲಿ ಚಳವಳಿಗಳು ನಡೆಯುವಂತೆ ಆಗುತ್ತದೆ ಹಳ್ಳಿಗಳಲ್ಲಿನ ಜನಸಾಮಾನ್ಯರು ಇಷ್ಟೊಂದು ಅರ್ಥಮಾಡಿಕೊಳ್ಳುವುದಿಲ್ಲ ನಿಜ, ಆದರೆ ರಾಜಕಾರಣಿಗಳು ಸರಿಯಾದ ದಿಕ್ಕಿನಲ್ಲಿ ಶ್ರೀಸಾಮಾನ್ಯರಿಗೆ ಶಿಕ್ಷಣ ನೀಡುವುದು ಅವರ ಕರ್ತವ್ಯವಾಗಿದೆ, ನಾವು ಪ್ರಜಾಪ್ರಭುತ್ವ ಸಿದ್ಧಾಂತಗಳನ್ನು ಅಳವಡಿಸಿಕೊಂಡಿದ್ದೇವೆ ಮತ್ತು ನಮ್ಮ ದೇಶದ ವಿಮೋಚನೆ ಎಂದರೆ, ಶ್ರೀಸಾಮಾನ್ಯರನ್ನು ಸುಶಿಕ್ಷಿತರನ್ನಾಗಿಸಿ, ಅವರು ಸರಿಯಾದ ದಿಕ್ಕಿನಲ್ಲಿ ತಮ್ಮ ಮತದಾನದ ಹಕ್ಕನ್ನು ಚಲಾಯಿಸಲು ಮಾರ್ಗದರ್ಶನ ನೀಡುವುದೇ ಆಗಿದೆ.

ನಾನು ಹೇಳಬೇಕೆಂದಿರುವ ಯಾವುವೇ ಅಭಿಪ್ರಾಯಗಳನ್ನು ಮತ್ತು ಟೀಕೆಗಳನ್ನು ಮಾಡುತ್ತ ಈ ಸದನದ ಸಮಯವನ್ನು ತೆಗೆದುಕೊಳ್ಳಲು ನಾನು ಬಯಸುವುದಿಲ್ಲ, ಆದರೆ ನಾನು ನನ್ನ ಮಾತುಗಳನ್ನು ಮುಗಿಸುವ ಮುನ್ನ ಪ್ರಜಾಪ್ರಭುತ್ವ ಸಂಪನ್ನ ದೇಶವನ್ನು ನಿರ್ಮಿಸಲು ನಾವು ಮುಂದಾಗುತ್ತಿರುವಾಗ, ನಾವು ಈ ದೇಶದಲ್ಲಿನ ಪ್ರತಿಯೊಬ್ಬರನ್ನು ಅವರು ಎಷ್ಟೇ ಬಡವರಿರಲಿ ಹಾಗೂ ಶ್ರೀಮಂತರಿರಲಿ, ಅವರಿಗೂ ಈ ರಾಷ್ಟ್ರನಿರ್ಮಾಣಕಾರ್ಯದಲ್ಲಿ ಒಂದು ಪಾಲಿದೆ ಎಂದು ತಿಳಿಯುವಂತೆ ಮಾಡಬೇಕು. ನಾವು ಭ್ರಾತೃತ್ವದ ಮನೋಭಾವವನ್ನು ಬೆಳಸಬೇಕಾಗಿದೆ ಮತ್ತು ಇದು ನಮ್ಮ ದೇಶದಲ್ಲಿ ಸಂಪೂರ್ಣ ಪ್ರಭಾವವನ್ನು ಹೊಂದಬೇಕು. ಹಾಗೆ ಮಾಡಿದರೆ, ನಾವು ಪ್ರತಿಯೊಬ್ಬರೂ ಎಷ್ಟೇ ಸಾಮಾನ್ಯರಿರಲಿ ಮತ್ತು ಕೆಳಮಟ್ಟದವರಿರಲಿ ನಾವು ಯಾವ ದೇಶಕ್ಕೆ ಸೇರಿದ್ದೇವೆಯೋ ಆ ದೇಶದ ಬಗ್ಗೆ ಹೆಮ್ಮೆಪಡುವಂತಾಗಬೇಕು. ನಾವು ಪ್ರಾಮಾಣಿಕತೆ ಮತ್ತು ಭ್ರಾತೃತ್ವದ ಮನೋಭಾವದಿಂದ ತೃಪ್ತರಾದಾಗ ನಮಗೆ ನಿಸ್ಸಂಶಯವಾಗಿ ದೇವರು ಕೂಡಾ ನೆರವಾಗುತ್ತಾನೆ.

**ಶ್ರೀ ಮಹಮ್ಮದ್ ಇಸ್ಮಾಯಿಲ್ ಸಾಹಿಬ್** (ಮದ್ರಾಸ್ : ಮುಸ್ಲಿಮ್) : ಮಾನ್ಯ ಉಪಸಭಾಧ್ಯಕ್ಷರೆ, ಮೊಟ್ಟ ಮೊದಲಿಗೆ ಸಾಮಾನ್ಯ ಚರ್ಚೆಯ ಕೊನೆಯ ಹಂತದಲ್ಲಿದ್ದಾಗ, ನನಗೆ ಸ್ವಲ್ಪ ಸಮಯ ಕೊಟ್ಟುದಕ್ಕಾಗಿ ನಿಮಗೆ ಧನ್ಯವಾದಗಳು. ನಾನು ಸದನದ ಮುಂದೆ ಇಡಬಯಸಿದ ಅಂಶಗಳಲ್ಲಿ ಕೆಲವನ್ನು ಮಾತ್ರ ತೆಗೆದುಕೊಳ್ಳುತ್ತೇನೆ, ಮತ್ತು ನನಗೆ ಅವಕಾಶ ನೀಡಿರುವ ಸಮಯದಲ್ಲೀ ನನ್ನ ವಿಚಾರಗಳನ್ನು ಸಂಕ್ಷೇಪವಾಗಿ ತಿಳಿಸಲು ಯತ್ನಿಸುತ್ತೇನೆ.

ಮಾನ್ಯರೆ, ಸದನವು ಕರಡು ಸಂವಿಧಾನವನ್ನು ಪರಿಗಣಿಸುವಂತೆ ಗೌರವಾನ್ವಿತ ಡಾ. ಅಂಬೇಡ್ಕರ್ ಅವರು ಮಾಡಿದ ಭಾಷಣ ಅತ್ಯಂತ ಮಹತ್ತ್ವದ್ದಾಗಿದೆ. ಅವರ ಸರಳತೆ ಮನಗಾಣಿಸುವಂತೆ ಮಾಡುವ, ಹೃದಯಂಗಮ ಮತ್ತು ತರ್ಕಬದ್ಧ ಶೈಲಿ ಇವುಗಳಿಗೆ ಸಾಟಿಯೇ ಇಲ್ಲ ಎಂದು ನಾನು ಭಾವಿಸಿದ್ದೇನೆ, ಅವರಿಗೆ ಎಲ್ಲರ ಅಭಿನಂದನೆಗಳು. ಆದರೆ, ಹಾಗೆಂದ ಮಾತ್ರಕ್ಕೆ, ಅವರು ತಮ್ಮ ಭಾಷಣದಲ್ಲಿ ಹೇಳಿದುದೆಲ್ಲವನ್ನೂ

ಎಲ್ಲರೂ ಒಪ್ಪಲೇಬೇಕೆಂದು ಅರ್ಥವಲ್ಲ, ಉದಾಹರಣೆಗೆ: ಪ್ರಾಂತೀಯ ಸ್ವಾಯತ್ತತೆ ಪ್ರಶ್ನೆ ತೆಗೆದುಕೊಳ್ಳಿ, ಅಂದರೆ ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಂಬಂಧ ಅವರು ಏಕೀಕೃತ ಸ್ವರೂಪದ ರಾಜ್ಯ ಇರಬೇಕೆಂದು ಹೆಚ್ಚು ವಾಸ್ತವಿಕವಾಗಿ ವಾದಿಸುತ್ತಾರೆ. ಫೆಡರಲ್ ವ್ಯವಸ್ಥೆ ಮತ್ತು ಏಕೀಕೃತ ವ್ಯವಸ್ಥೆ ಇರುವ ಸರ್ಕಾರ, ಇವೆರಡರ ನಡುವೆ ಒಂದು ಮಧ್ಯಮಮಾರ್ಗ ಏರ್ಪಟ್ಟಿದೆ ಎಂದು ಅವರು ಹೇಳುತ್ತಾರೆ. ಆದರೆ, ನಾನು ಕರಡು ಸಂವಿಧಾನವನ್ನು ಪರಿಶೀಲಿಸಿದಾಗ ಏಕೀಕೃತ ಸ್ವರೂಪದ ರಾಜ್ಯಕ್ಕೆ ಹೆಚ್ಚು ಒತ್ತು ಕೊಡಲಾಗಿದೆ ಎಂದು ಕಂಡುಬರುತ್ತಿದೆ. ಇದು ದೇಶದ ಸೌಖ್ಯ ಮತ್ತು ಸಮೃದ್ಧಿಗೆ ಅನುಕೂಲಕರವಲ್ಲ ಎಂಬುದು ನನ್ನ ಅಭಿಪ್ರಾಯ. ನಮ್ಮದು ಭಾರಿ ಅವಕಾಶಗಳಿರುವ ಮತ್ತು ಭಾರಿ ಜನಸಂಖ್ಯೆಯ ದೊಡ್ಡ ದೇಶ, ಆದಾಗ್ಯೂ ದೇಶವು ತನ್ನ ಹಲವಾರು ಭಾಗಗಳೊಡನೆ ಒಂದೇ ರೀತಿಯಲ್ಲಿ ವ್ಯವಹರಿಸಲು ಕಾತರವಾಗಿದ್ದರೂ ಸಂಬಂಧಿತ ವಿಷಯಗಳಲ್ಲಿಯೇ ಅನೇಕ ನ್ಯೂನತೆಗಳು ಮತ್ತು ಕುಂದು ಕೊರತೆಗಳು ಇರುತ್ತವೆ. ಸ್ವಾಭಾವಿಕವಾಗಿ ಇದು ಅತೃಪ್ತಿ ಮತ್ತು ಸಂಘರ್ಷಣೆ ಎಡೆಮಾಡಿಕೊಡುತ್ತದೆ, ಈ ಕಾರಣಕ್ಕಾಗಿಯೇ ಹಲವು ರಾಜಕೀಯ ಚಿಂತಕರು ನಮ್ಮ ದೇಶಗಳಂತಹ ದೇಶಕ್ಕೆ ಬೇರಾವುದಕ್ಕಿಂತಲೂ ಫೆಡರಲ್ ವ್ಯವಸ್ಥೆಯ ಸರ್ಕಾರವೇ ಸೂಕ್ತ ಎಂಬ ಅಭಿಪ್ರಾಯ ತಾಳಿರುವರು. ನಾವು ನಮ್ಮ ದೇಶದಲ್ಲಿ ದೇಶದ ಹಲವು ಭಾಗಗಳ ನಡುವೆ ಇರುವ ಅಸಮನ್ವಯತೆ ಅಥವಾ ಅನಗತ್ಯ ಸಂಘರ್ಷಗಳಿಗೆ ಮತ್ತು ಘರ್ಷಣೆ, ಇಂಥವಕ್ಕೆ ಹೆದರಬೇಕಿಲ್ಲ, ಅಮೆರಿಕ ಸಂಸ್ಥಾನಗಳ ಉದಾಹರಣೆಯನ್ನು ಕೊಡಲಾಗಿದೆ, ಅಲ್ಲಿ ವಾಸ್ತವವಾಗಿ ಏನಾಯಿತು? ಈ ದೇಶದಲ್ಲಿ ನಲವತ್ತಕ್ಕಿಂತ ಹೆಚ್ಚು ರಾಜ್ಯಗಳಿವೆ, ಎಲ್ಲವೂ ಸ್ವಾಯತ್ತವಾಗಿವೆ; ಅವು ಒಂದು ಘಟಕವಾಗಿದ್ದರೂ, ಅಲ್ಲಿ ಮಾನವಜನಾಂಗದ ಇತಿಹಾಸದಲ್ಲಿ ಕಂಡರಿಯದ ಎರಡು ಅತ್ಯಂತ ಭಯಂಕರ ಯುದ್ಧಗಳು ನಡೆದವು ಮತ್ತು ಈ ರಾಜ್ಯಗಳು ಒಟ್ಟಿಗೆ ಇದ್ದು ಕಳೆದ ಎರಡು ಯುದ್ಧಗಳ ಅನಂತರ ಎದುರಿಸಬೇಕಾಗಿ ಬಂದ ಸಮರೋತ್ತರ ಸಮಸ್ಯೆಗಳ ಒತ್ತಡ ಮತ್ತು ಪೀಡನೆಗಳು ಯಶಸ್ವಿಯಾಗಿ ನಿರ್ವಹಿಸಿ ಎದುರಿಸಿವೆ. ರಷ್ಯಾದ ವಿಷಯವನ್ನು ಪುನಃ ತೆಗೆದುಕೊಳ್ಳಿ ರಷ್ಯಾದ ದೇಶಗಳನ್ನು ಸ್ವಾಯತ್ತ ಗಣರಾಜ್ಯಗಳೆಂದು ಕರೆಯುವರು. ಅವು ವಿದೇಶಾಂಗ ವ್ಯವಹಾರಗಳ ಮೇಲೂ ನಿಯಂತ್ರಣ ಹೊಂದಿದೆ, ಏನಾಗಿದೆ? ಎಲ್ಲ ಈ ಸ್ವಾಯತ್ತ ಗಣರಾಜ್ಯಗಳೊಂದಿಗಿನ ಆ ದೇಶವು ಕಳೆದ ಯದ್ಧದಲ್ಲಿ ಮಾರಣಾಂತಿಕ ಭೀಕರ ತೀವ್ರದಾಳಿ ಎದುರಿಸಿ ಎದ್ದು ನಿಂತಿದೆ ಮತ್ತು ಇಂದು ಅದು ಒಂದು ದೊಡ್ಡ ದೇಶವಾಗಿ ಅನೇಕ ತೊಂದರೆಗಳನ್ನು ಮತ್ತು ತೊಡಕುಗಳನ್ನು ನಿವಾರಿಸಲು ಸಮರ್ಥವಾಗಿದೆ. ಆದುದರಿಂದ, ಸರ್ಕಾರವು ಯಾವುದೇ ಸ್ವರೂಪದ್ದಾಗಿರಲಿ ಅಥವಾ ಕೇಂದ್ರಕ್ಕೆ ನಾವು ನೀಡುವ ಅಧಿಕಾರಗಳು ಎಷ್ಟೇ ಆಗಿರಲಿ, ವಾಸ್ತವವಾಗಿ ಅಷ್ಟೇನೂ ಮುಖ್ಯವಾಗುವುದಿಲ್ಲ, ಈ ವಿಷಯಗಳಲ್ಲಿ ಹೆಚ್ಚು ಪ್ರಸ್ತುತವಾಗುವುದು, ಅಧಿಕಾರಿವರ್ಗದ ಅಂದರೆ ಸರ್ಕಾರ ನಡೆಸುವವರ ನಡತೆ ಮತ್ತು ಜನರ ನಡತೆ. ಮಾನ್ಯರೆ, ರಷ್ಯನ್ ದೇಶಗಳು ಸ್ವಾಯುತ್ತ ಗಣರಾಜ್ಯಗಳಾಗಿ ಏನಾಗಿವೆ? ರಷ್ಯನ್ ಸರ್ಕಾರವು ಸರ್ವಾಧಿಕಾರದ್ದಾಗಿದೆ. ಕೇಂದ್ರವು ಅಧಿಕಾರಗಳ ಅಧಿಕ ಭಾರದಿಂದ ಕೂಡಿರುತ್ತದೆ ಎಂಬುದು ವಾಸ್ತವಿಕ. ಇದು ಮಾನವಸ್ವಭಾವ. ಇಲ್ಲಿ ಈ ಸಂದರ್ಭದ ನಮ್ಮ ಸಂವಿಧಾನವು ಏಕೀಕೃತ ಪ್ರಭುತ್ವದ್ದಾಗುತ್ತದೆ ಎಂದು ಹೇಳಲಾಗಿದೆ, ಆದರೆ ವಿಷಯಗಳ ಸ್ವರೂಪದಿಂದಾಗಿ ಅದು ಒಮ್ಮೆ ಏಕೀಕೃತ ಪ್ರಭುತ್ವಪಡೆದುಕೊಂಡರೆ, ಅಂಥ ಪ್ರವೃತ್ತಿಯು ಏಕೀಕೃತ ಪ್ರಭುತ್ವವಾಗಿಯೇ ಉಳಿಯುತ್ತದೆ, ಏಕೀಕೃತ ಪ್ರಭುತ್ವಕ್ಕಿಂತ ನಮ್ಮ ದೇಶದ ಸ್ಥಿತಿಗಳಿಗೆ ಹೆಚ್ಚು ಸೂಕ್ತವಾಗುವುದು ಒಕ್ಕೂಟ ವ್ಯವಸ್ಥೆ ಎಂದು ನಾನು ಹೇಳುತ್ತೇನೆ.

ದೇಶದ ವಿವಿಧ ಭಾಗಗಳಲ್ಲಿ ಪರಿಸ್ಥಿತಿಗಳು ವಿಭಿನ್ನವಾಗಿರುವುದರಿಂದ, ದೈನಂದಿನ ಪರಿಸ್ಥಿತಿಗಳನ್ನು ಹೆಚ್ಚು ಅನ್ಯೋನ್ಯವಾಗಿ ತಿಳಿದಿರುವ ಜನರು ಅವುಗಳ ಬಗ್ಗೆ ವ್ಯವಹರಿಸಬೇಕಾಗುತ್ತದೆ. ಈ ಸಂಬಂಧದಲ್ಲಿ, ನಾನು ಒಂದು ವಿಷಯವನ್ನು ಮಾತ್ರ ಹೇಳುತ್ತೇನೆ. ಅದೇನೆಂದರೆ ಒಂದು ಪ್ರಾಂತ್ಯದ ಸ್ವಾಯತ್ತ ಅಧಿಕಾರಗಳನ್ನು ಕಸಿದುಕೊಂಡಾಗ ಈ ಚೌಕಟ್ಟಿನೊಳಗೆ ಇರುವ ಯಾವ ಪ್ರಸ್ತಾವವನ್ನೂ ಒಪ್ಪಿಕೊಳ್ಳಲಾಗುವುದಿಲ್ಲ. ಅದೆಂದರೆ

ವಯಸ್ಕಮತದಾನದ ಮೂಲಕ ರಾಜ್ಯಪಾಲರ ಚುನಾವಣೆ ನಡೆಸುವುದು. ರಾಜ್ಯಪಾಲರು ಸ್ವತಃ ಸಾಂವಿಧಾನಿಕ ಮುಖ್ಯಸ್ಥರು ಮಾತ್ರ ಆಗಿದ್ದಾರೆ. ಅವರು ನಾಮಮಾತ್ರ ಮುಖ್ಯಸ್ಥರಲ್ಲದಿದ್ದರೆ ಹಾಗೂ ಅಷ್ಟೆಲ್ಲ ಪ್ರಕ್ರಿಯೆಗಳ ಮೂಲಕವಾಗಿ ಉಂಟಾದ ಹಾಗೂ ಒಂದು ಪ್ರಾಂತ್ಯದಲ್ಲಿ ಅವರನ್ನು ಲಕ್ಷಾಂತರ ಜನ ಚುನಾಯಿಸುವುದಕ್ಕಾಗಿ ತೊಂದರೆ ತೆಗೆದುಕೊಳ್ಳುವ ಆವಶ್ಯಕತೆ ಇರುತ್ತಿರಲಿಲ್ಲ ಮತ್ತು ಅದು ನಿಜವಾಗಿ ಭಾರಿ ಖರ್ಚಿನದ್ದಾಗಿದೆ. ಅಷ್ಟೇ ಕಷ್ಟಗಳನ್ನು ಅನುಭವಿಸಬೇಕಾಗುತ್ತದಷ್ಟೇ. ಹಾಗೇ ನೋಡಿದರೆ, ಪ್ರಾಂತ್ಯಗಳು ಮತ್ತು ರಾಜ್ಯಗಳಲ್ಲಿನ ಕೆಲವು ಏಜೆನ್ಸಿಗಳು ತಾವೇ ರಾಜ್ಯಪಾಲರನ್ನು ಚುನಾಯಿಸಬೇಕು ಮತ್ತು ಅದು ನಾನು ಹೇಳಿದಂತೆ ಪ್ರಾಂತೀಯ ಸ್ವಾಯತ್ತತೆಯನ್ನು ಉಳಿಸಿಕೊಳ್ಳುವುದೇ ಆಗಿದೆ. ಅಂತಹ ಒಂದು ಏಜೆನ್ಸಿಯು, ಒಂದು ಮತದಾರರ ಸಮುದಾಯದ ಸ್ವರೂಪದ್ದಾಗಿರಬಹುದು, ಅದರಲ್ಲಿ ಪ್ರಾಂತ್ಯದ ವಿಧಾನಮಂಡಲದ ಸದಸ್ಯರು ಮುನಿಸಿಪಾಲಿಟಿಗಳ ಮತ್ತು ಜಿಲ್ಲಾ ಮಂಡಲಿಗಳ ಸದಸ್ಯರು ಒಳಗೊಂಡಿರತಕ್ಕದ್ದು. ಮತ್ತು ನಾನು ಇನ್ನೂ ಹೇಳುವುದಾದರೆ ಹಾಗೂ ಗೆಳೆಯರು ಇಷ್ಟಪಟ್ಟರೆ, ಬಯಸಿದಲ್ಲಿ ಅದರಲ್ಲಿ ಪಂಚಾಯಿತಿ ಮಂಡಲಿಯ ಸದಸ್ಯರೂ ಒಳಗೊಳ್ಳಬಹುದು. ಅದೇನೇ ಇರಲಿ, ಕೇವಲ ಐವತ್ತು ಅಥವಾ ಅರುವತ್ತುಸಾವಿರ ಮತದಾರರಷ್ಟೇ ಇದರ ವ್ಯಾಪ್ತಿಗೆ ಬರುತ್ತಾರೆ; ಅದು ಒಂದು ದೊಡ್ಡ ಪ್ರಾಂತ್ಯವಾದರೆ ವಯಸ್ಕಮತದಾನಕ್ಕನುಸಾರವಾಗಿ ಅದು ಕೋಟಿಗಳಷ್ಟು ಆಗುತ್ತದೆ ಮತ್ತು ರಾಜ್ಯಪಾಲರು ಜನರಿಂದ ವಯಸ್ಕಮತದಾನದ ಮೂಲಕ ಚುನಾಯಿತರಾಗಿರುವಾಗ ಜನತೆಯ ವಕ್ತಾರರಾಗಿರುವರೆಂದು ಹೇಳಿಕೊಳ್ಳುವ ಸಚಿವಸಂಪುಟದೊಡನೆ ಘರ್ಷಣೆ ಉಂಟಾಗುವ ಸಂದರ್ಭಗಳು ಸಹಜವಾಗಿರುತ್ತವೆ.

ಮೂಲಭೂತ ಹಕ್ಕುಗಳನ್ನು ಕುರಿತಂತೆ ನಿರ್ಣಯದ ಮಂಡನೆಕಾರರು ವಿನಾಯಿತಿಗಳು ಹಕ್ಕುಗಳನ್ನು ಕಬಳಿಸಿಲ್ಲ ಎಂದು ಹೇಳಿದ್ದಾರೆ. ಆದರೆ ವಿಷಯವೆಂದರೆ ಅವು ವಾಸ್ತವವಾಗಿ ಹಕ್ಕುಗಳನ್ನು ನುಂಗಿವೆ. ಅವರು, ಈ ವಿನಾಯಿತಿಗಳಲ್ಲಿ ಪ್ರತಿಯೊಂದು ವಿನಾಯಿತಿಗೆ ಸಂಬಂಧಿಸಿದಂತೆ, ಅಮೆರಿಕದ ಸರ್ವೋಚ್ಚ ನ್ಯಾಯಾಲಯವು ನೀಡಿದ ಕಡೇ ಪಕ್ಷ ಒಂದು ತೀರ್ಪಿನ ಸಮರ್ಥನೆ ಇದೆ ಎಂದು ಹೇಳುತ್ತಾರೆ. ಹಾಗೇ ಹೇಳಲು ಕಾರಣ, ಗ್ರೇಟ್ ಬ್ರಿಟನ್ನಿನ ಸಂಪತ್ತಿನಲ್ಲಿ ಭಾರತ ಸರ್ಕಾರದ ಅಧಿನಿಯಮ ೧೯೩೫ರ ಪರಿಶೀಲನೆಯಲ್ಲಿ ಇದ್ದಾಗ ಬ್ರಿಟಿಷ್ ರಾಜಕಾರಣಿಗಳು, ಮಂಡಿಸಿದ್ದ ವಾದದ ರೀತಿಯಲ್ಲಿಯೇ ವಾದಿಸಲಾಗಿತ್ತು. ಅವರು ಗ್ರೇಟ್ ಬ್ರಿಟನ್ನಿನಲ್ಲಿ, ಅನುಸರಿಸಿದ ವಿಷಯಗಳನ್ನು ಈ ಅಧಿನಿಯಮವು ಒಳಗೊಂಡಿದೆ ಎಂದು ಹೇಳಿದರು, ಅದರಲ್ಲಿ ಒಡಂಬಡಿಕೆಯ ವಿಷಯಗಳು ಇದ್ದವು ಮತ್ತು ಅವು ಜಾರಿಗೆ ಬಂದಿದ್ದರಿಂದ ಅವನ್ನು ಅಧಿನಿಯಮದ ರೂಪದಲ್ಲಿ ತರಲಾಗುತ್ತದೆ ಎಂದೂ ಅವರು ಹೇಳಿದ್ದರು. ಹಾಗೆಂದು ಹೇಳುವುದಾದರೆ, ಅದನ್ನು ಸರ್ವೋಚ್ಚನ್ಯಾಯಾಲಯವು ಒಂದು ನಿರ್ದಿಷ್ಟ ರೀತಿಯಲ್ಲಿ ತೀರ್ಮಾನಿಸಿತ್ತು. ಎಂದರೆ, ಕೆಲವು ವಿನಾಯಿತಿಗಳು ಕಾನೂನುಬದ್ಧವಾಗಿವೆ. ಆದ್ದರಿಂದ ಎಲ್ಲ ಹಕ್ಕುಗಳು ಹಾಗೂ ಅಂತಹ ವಿನಾಯಿತಿಗಳು, ನಮ್ಮ ಸಂವಿಧಾನದಲ್ಲಿ ಸೇರಲೇಬೇಕಾಗಿತ್ತು ಎಂದು ಹೇಳುವುದಕ್ಕೂ ಮೂಲಭೂತ ಹಕ್ಕಿನ ಬಗ್ಗೆ ಅನುಮಾನ ಉಂಟಾದಾಗಲೆಲ್ಲ ಜನ ಸರ್ವೋಚ್ಚನ್ಯಾಯಾಲಯಕ್ಕೆ ಅಥವಾ ಫೆಡರಲ್ ನ್ಯಾಯಾಲಯಕ್ಕೆ ಹೋಗಲು ಸ್ವಾತಂತ್ರ್ಯವಿದೆ ಎಂದು ಹೇಳುವುದಕ್ಕೂ ವ್ಯತ್ಯಾಸವಿದೆ. ಸರ್ಕಾರದ ವಿರುದ್ಧ ಜನರು ಫೆಡರಲ್ ನ್ಯಾಯಾಲಯಕ್ಕೆ ಹೋಗುವ ಸ್ವಾತಂತ್ರ್ಯ ನಿಜವಾಗಿಯೂ ಜನರಿಗೆ ಸ್ವಾತಂತ್ರ್ಯವು ಇರುವುದು, ನಿಜವಾದ ಅರ್ಥದಲ್ಲಿ ಪ್ರಜ್ಞೆಯನ್ನು ಮೂಡಿಸಿದೆ ಎಂದು ಹೇಳಬಹುದು, ಮತ್ತು ಅದು ಸರ್ಕಾರದ ಮೇಲೆ ಉತ್ತಮ ಪ್ರಭಾವ ಬೀರುತ್ತದೆ. ಇದು ಪ್ರಜಾಪ್ರಭುತ್ವದಲ್ಲಿ ತುಂಬಾ ಆವಶ್ಯಕ.

ಕೆಲವರು ನನ್ನ ಗೆಳೆಯರು ಈ ಸಂವಿಧಾನವು ರಾಜಕೀಯ ಸಂವಿಧಾನವಾಗಿದೆ ಎಂದು ಹೇಳಿಕೊಂಡಿದ್ದಾರೆ, ಆದರೆ ನಿಜವಾಗಿ ಅದು ಹಾಗೆ ಇದೆಯೇ ಎಂಬುದು ನನಗೇ ತಿಳಿದಿಲ್ಲ. ಅದು, ಅಸ್ಪೃಶ್ಯತೆ, ದೇವಸ್ಥಾನ ಪ್ರವೇಶ ಮತ್ತು ಧಾರ್ಮಿಕ ಬೋಧನೆ ಇವುಗಳ ಬಗ್ಗೆ ತಿಳಿಸುತ್ತದೆ. ಇದಕ್ಕಾಗಿ ನಾನು ಸಂವಿಧಾನವನ್ನು ಮತ್ತು ಅದು ರಚಿಸಿದವರನ್ನು ನಿಂದಿಸುವುದಿಲ್ಲ, ಈ ವಿಷಯಗಳನ್ನು ಗಮನಿಸುವಲ್ಲಿ ಅದು ಸರಿಯಾಗಿಯೇ

ಇದೆ ಎಂದು ನಾನು ಹೇಳುತ್ತೇನೆ; ಆದರೆ ಒಂದು ಮುಖ್ಯ ವಿಷಯವನ್ನು ಎಂದರೆ ಧಾರ್ಮಿಕ ಬೋಧನೆ ಕುರಿತ ವಿಷಯವನ್ನು ನಾನು ಉಲ್ಲೇಖಿಸಬಯಸುತ್ತೇನೆ. ದೇಶದ ಯಾವುದೇ ಶಾಲೆಗಳಲ್ಲಿ ಧಾರ್ಮಿಕ ಬೋಧನೆ ನೀಡಬಾರದು ಎಂದು ಸಂವಿಧಾನವು ಹೇಳುತ್ತದೆ. ಕಡ್ಡಾಯ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಬಹುತೇಕ ಎಲ್ಲ ಪ್ರಾಂತ್ಯಗಳಲ್ಲೂ ಈ ಉಪಬಂಧವನ್ನು ಜಾರಿಗೆ ತರಲಾಗಿದೆ. ಅಂದರೆ, ಸರ್ಕಾರವು ಧಾರ್ಮಿಕ ಬೋಧನೆಯನ್ನು ವಿರೋಧಿಸುತ್ತದೆ ಎಂದಂತಾಯಿತು; ಜನರು ತಮ್ಮ ಸ್ವಂತ ಧರ್ಮದ ಬೋಧನೆಯನ್ನು ಪಡೆಯಲು ಇಚ್ಛಿಸಿದರೂ ಅದನ್ನು ವಿರೋಧಿಸುತ್ತದೆ, ಆದುದರಿಂದ ೧೪ ವರ್ಷ ವಯಸ್ಸು ಆಗುವವರೆಗೂ ಅಂದರೆ ಎಲ್ಲಿಯವರೆಗೂ ಮಕ್ಕಳನ್ನು ಈ ಪ್ರಾಥಮಿಕ ಶಾಲೆಗಳಿಗೆ ಕಳುಹಿಸಲಾಗುತ್ತಿತ್ತೋ ಅಲ್ಲಿಯವರೆಗೂ ಅವರು ಈ ಶಾಲೆಗಳಲ್ಲಿ ಯಾವುದೇ ಧಾರ್ಮಿಕ ಬೋಧನೆಯನ್ನು ಕಲಿಯುವ ಅವಕಾಶ ಪಡೆದಿರುವುದಿಲ್ಲ ಎಂದಂತೆ ಆಗುತ್ತದೆ. ಆದರೆ ಜನ ತಮ್ಮದೇ ಧರ್ಮಗಳಲ್ಲಿ ಬೋಧನೆಗಳನ್ನು ಪಡೆದುಕೊಳ್ಳುವುದು ಅವರ ಹಕ್ಕು. ಆ ಹಕ್ಕು ದೇಶದ ತಟಸ್ಥ ನೀತಿ ಅಥವಾ ಜಾತ್ಯತೀತ ಸ್ವರೂಪಕ್ಕೆ ಪ್ರತಿಕೂಲವಾಗಿಲ್ಲ. ಯಾರು ಧಾರ್ಮಿಕ ಬೋಧನೆ ಪಡೆಯಲು ಇಚ್ಛಿಸುವುದಿಲ್ಲವೋ ಆ ಜನರ ಮೇಲೆ ಯಾವುದೇ ಧಾರ್ಮಿಕ ಬೋಧನೆ ಹೇರುವುದು ಬೇಡ. ಜನರು ತಮ್ಮ ಮಕ್ಕಳಿಗೆ ತಮ್ಮ ಧರ್ಮದಲ್ಲಿ ಬೋಧನೆ ನೀಡಬಯಸಿದರೆ ಸೌಕರ್ಯಗಳನ್ನು ಕೊಡಲಿ.

ಮಾನ್ಯರೆ, ನಾನು ಅಲ್ಪಸಂಖ್ಯಾತರ ಪ್ರಶ್ನೆಗೆ ಸಂಬಂಧಿಸಿದಂತೆ ಮಾತನಾಡಬೇಕಾಗಿದೆ. ಕೆಲವರು ಸ್ನೇಹಿತರು, ಮೀಸಲಾತಿ ಹೋಗಬೇಕು ಎಂದು ಹೇಳಿದರು; ಕೆಲವರು ಅದು ಹೋಗಲೇಬೇಕು, ಏಕೆಂದರೆ ಅದು ಹೆಚ್ಚು ಉಪಯೋಗವಿಲ್ಲದ್ದು ಎಂದು ಹೇಳಿದ್ದಾರೆ, ಕೆಲವರು ಅಂಥ ಮೀಸಾಲಾತಿ ಹೋಗಲೇಬೇಕು ಎಂದು ಹೇಳಿದ್ದಾರೆ. ಅವರು ಬೇಕಾಗಿರುವುದು ಸದ್ಭಾವನೆ; ಆದರೆ ಮೀಸಲಾತಿಯಲ್ಲ ಎಂದು ಹೇಳಿದ್ದಾರೆ. ಸದ್ಭಾವನೆ ಬೇಕಾಗಿರುವುದು ನಿಜ. ಅದು ವಿಸ್ತಾರವಾದ, ಸ್ಥೂಲವಾದ ಸಂವಿಧಾನದ ಅನುಷ್ಠಾನದಲ್ಲಿ ಅಗತ್ಯ ಕೂಡ ಆಗಿದೆ ಮತ್ತು ಸದ್ಭಾವನೆ ಇಲ್ಲದ ಯಾವುದೇ ವಿಸ್ತಾರವಾದ ಯೋಜನೆಯಿಂದ ಯಾವುದೇ ಉಪಯೋಗವಿಲ್ಲ. ಆದರೆ, ಸದ್ಭಾವನೆಯ ವಾದವನ್ನು ಕರಡು ಸಂವಿಧಾನದ ಇತರ ಅನೇಕ ಉಪಬಂಧಗಳ ಬದಲಿಯಾಗಿ ತೆಗೆದುಕೊಳ್ಳಬಹುದಾಗಿದೆ; ಆದರೂ ಆ ಉಪಬಂಧಗಳು ಅದರಲ್ಲಿ ಇವೆ. ಸದ್ಭಾವನೆಯನ್ನು ಯಾವುದಾದರು ನೆಲೆಗಟ್ಟಿನ ಮೇಲೆ ನೆಲೆಗೊಳಿಸಬೇಕು. ಅದನ್ನು ಗಾಳಿಗೆ ತೂರಿಬಿಡಲಾಗದು. ಆಧಾರವಾಗಿ ಸದ್ಭಾವನೆಗೆ ಏನಾದರೊಂದು ಆಧಾರ ಇರಬೇಕು ಮತ್ತು, ಅದರ ಬೆಳವಣಿಗೆಗೆ ಆಧಾರವಾಗಿರಬೇಕು ಮತ್ತು ಅದೇ ಪ್ರಾಥಮಿಕ ಹಕ್ಕುಗಳು – ಮೂಲಭೂತ ಹಕ್ಕುಗಳು ಮತ್ತು ಅಲ್ಪಸಂಖ್ಯಾತರಿಗೆ ಕೊಟ್ಟಿರುವ ರಕ್ಷಣೆಗಳು. ಆದುದರಿಂದ ನನ್ನ ಸಮುದಾಯವು ಈ ಮೀಸಲಾತಿಯನ್ನು ಬಯಸುತ್ತದೆ, ಆದರೆ ಅದೊಂದೇ ಅವರ ಅಗತ್ಯಗಳನ್ನು ಪೂರೈಸುವುದಿಲ್ಲವೆಂಬುದೂ ತಿಳಿದಿದೆ. ನಾನು ಹೇಳುವುದರ ಅರ್ಥ ಶಾಸನಸಭೆಗಳಲ್ಲಿ ಪ್ರಾತಿನಿಧ್ಯ ಬಯಸುವ ಜನರನ್ನು ಅದು ತೃಪ್ತಿಪಡಿಸುತ್ತದೆ ಎಂಬುದಲ್ಲ. ಅವರು, ಶಾಸನಸಭೆಯ ಮುಂದೆ ತಮ್ಮ ಅಭಿಪ್ರಾಯಗಳನ್ನು ಮತ್ತು ಭಾವನೆಗಳನ್ನು ಹಾಗೂ ಆಕಾಂಕ್ಷೆಗಳನ್ನು ನಿಜವಾಗಿ ಪ್ರತಿನಿಧಿಸಲು ಅವರಿಗೆ ಹಕ್ಕು ಕೊಡಬೇಕೆಂದು ಬಯಸುತ್ತಾರೆ. ಜಂಟಿಮತಕ್ಷೇತ್ರಗಳಲ್ಲಿ ಈ ಮೀಸಲು ಸ್ಥಾನಗಳ ಅನುಭೋಗಿಗಳಾದ ಈ ಜನರು, ಹಾಗೆ ಸಮುದಾಯದ ಅಭಿಪ್ರಾಯವನ್ನು ವ್ಯಕ್ತಪಡಿಸಲು ಸಮರ್ಥರೇ? ನಾನು ಇದನ್ನು ಹೇಳಿದರೆ, ಈ ಹಿಂದೆ ನಡೆದುದನ್ನು ನಾವು ಕಲಕಿ ನೋಡಬಾರದು ಮತ್ತು ಹಿಂದಿನ ವಿಷಯವನ್ನೇ ಉಲ್ಲೇಖಿಸಿ, ವಿರೋಧಗಳಿಗೆ ಹಾಗೂ ವಿವಾದಗಳಿಗೆ ಬೆಂಕಿ ಹೊತ್ತಿಸಲು ನೋಡುವುದಿಲ್ಲ. ನಾವು ಈ ಪ್ರಶ್ನೆಯನ್ನು ಅದರದೇ ಗುಣದೋಷಗಳ ಮೇಲೆ ತೆಗೆದುಕೊಳ್ಳಬೇಕು. ಅಂದರೆ ಅದು ಸಕಾರಣವೇ ಅಥವಾ ಅಲ್ಲವೆ ಎಂಬುದನ್ನು ನಾವು ಪರಿಗಣಿಸಬೇಕು. ಕೇವಲ ಸ್ಥಾನಗಳ ಮೀಸಲಾತಿ ಇರಬಾರದು, ಆದರೆ ಈ ಸ್ಥಾನಗಳನ್ನು ಪ್ರತ್ಯೇಕ ಮತಕ್ಷೇತ್ರಗಳ ಮೂಲಕ ತುಂಬಬೇಕು ಎಂಬುದು ನನ್ನ ಅಭಿಪ್ರಾಯ. ಈ ಅಲ್ಪಸಂಖ್ಯಾತರು,

ಬಹುಸಂಖ್ಯಾತ ಸಮುದಾಯದ ಮುಂದೆ, ದೇಶದ ಮುಂದೆ ಮತ್ತು ಶಾಸನಸಭೆ ಮುಂದೆ ತಮ್ಮನ್ನು ಅಭಿವ್ಯಕ್ತಪಡಿಸಲು ಹಕ್ಕು ಕೊಡುವುದಾದರೆ ನನಗೆ ಇತರ ಪರ್ಯಾಯದ ಅಗತ್ಯವಿಲ್ಲ. ಮತಕ್ಷೇತ್ರಕ್ಕೆ ಸಂಬಂಧಿಸಿದಂತೆ ಇದಷ್ಟೆ ನಾನು ಹೇಳಬೇಕಾಗಿದ್ದುದು. ಒಂದೊಂದು ಸಮುದಾಯದ ನಡುವೆ ಅಡ್ಡಗೋಡೆ ಇರತಕ್ಕದ್ದಲ್ಲ ಮತ್ತು ಈ ಹಿಂದೆ ಯಾವುದೇ ತೊಂದರೆ ಉಂಟಾಗಿದ್ದರೆ, ಅದಕ್ಕೆ ಚುನಾವಣಾಪದ್ಧತಿಯ ಕಾರಣವಾಗಿರಲಿಲ್ಲ. ಆದರೆ ಅದಕ್ಕೆ ಇತರ ವಿಷಯಗಳು ಕಾರಣವಾಗಿದ್ದವು. ನಾನು ಹೇಳಿದಂತೆ, ನಾನು ಹಿಂದಿನ ಸಂಗತಿಗಳನ್ನು ಕೆದಕುವುದಿಲ್ಲ. ನಾವು ಈ ಪ್ರತ್ಯೇಕ ಮತಕ್ಷೇತ್ರಗಳ ಬಗ್ಗೆ ಪುನಃ ಮಾತನಾಡಿದರೆ, ಕೋಮುವಾದವನ್ನು ನಮ್ಮ ಮುಂದೆ ತರಲಾಗುತ್ತದೆ. ಈ ಸಂಬಂಧವಾಗಿ ನಾನು, ಸುಮಾರು ಹತ್ತು ದಿನಗಳ ಹಿಂದೆ, ಮದ್ರಾಸ್ ಶಾಸನಸಭೆಯಲ್ಲಿ ಕಾಂಗ್ರೆಸ್ ಸಚಿವರೊಬ್ಬರು ಹೇಳಿದ ಹಿತನುಡಿಯನ್ನು ಸದನದಲ್ಲಿ ಹೇಳಬಯಸುತ್ತೇನೆ. ಒಂದು ಕಾಲೇಜಿನ ವಿದ್ಯಾರ್ಥಿಗಳ ಪ್ರವೇಶಕ್ಕೆ ಕೋಮು ಪ್ರಾತಿನಿಧ್ಯ ಕುರಿತಂತೆ ಒಂದು ಪ್ರಶ್ನೆಯನ್ನು ಸದಸ್ಯರೊಬ್ಬರು ಸಚಿವರಿಗೆ ಕೇಳಿದ್ದರು.

"ಹಿಂದೂಗಳಲ್ಲೆ ಇರುವ ಜಾತಿವರ್ಗಗಳಲ್ಲಿಯೂ ಇರುವ ಕೋಮುವಾದವನ್ನು ರಕ್ಷಿಸಿ ಪೋಷಿಸುವಲ್ಲಿ ಸಚಿವರು ತಮ್ಮನ್ನು ಹೇಗೆ ಸಮರ್ಥಿಸಿಕೊಳ್ಳುತ್ತಾರೆ?"

ಆಗ ಶಿಕ್ಷಣ ಸಚಿವರು ಉತ್ತರಿಸಿದರು:

"ಅದು ಸರ್ಕಾರ ಮಾಡುವಂಥದಲ್ಲ ಅದು ಇದ್ದೇ ಇದೆ. ಸಮುದಾಯಗಳೂ ಇವೆ. ಇರುವುದನ್ನು ಗಮನಕ್ಕೆ ತೆಗೆದುಕೊಳ್ಳದಿರುವುದು ವಿವೇಕರಹಿತವಾದುದು. ಈ ಹಲವು ಸಮುದಾಯಗಳಲ್ಲಿಯ ಜನ ಹುಟ್ಟುತ್ತಾರೆ ಮತ್ತು ಸಾಯುತ್ತಾರೆ."

ಸಚಿವರು ಮಾತನ್ನು ಮುಂದುವರಿಸಿ ಹೀಗೆ ಹೇಳಿದ್ದಾರೆ:

"ಸರ್ಕಾರವು ಈ ಕೋಮುವಾದಕ್ಕೆ ಒಂದು ಕೊನೆ ತರಲು ಬಯಸಿತು. ಆದರೆ ಹಾಗೆ ಮಾಡಬಾರದೆಂಬ ಬಗ್ಗೆ ಹೇಳಿಕೊಳ್ಳಲು ವಿವಿಧ ಸಮುದಾಯಗಳಿಗೆ, ಸಮಾನ ಅವಕಾಶಗಳನ್ನು ಕೊಡದೇ ಹಾಗೆ ಮಾಡಲಾಗುವುದಿಲ್ಲ."

ಬಹುಸಂಖ್ಯಾತ ಸಮುದಾಯಕ್ಕೆ ಸೇರಿದ ಒಬ್ಬ ಕಾಂಗ್ರೆಸ್ ನಾಯಕರು ಹೇಳಿದ ಅಭಿಪ್ರಾಯವಿದು. ಅವರು ಈಗ ದೇಶದ ಮುಖ್ಯ ಪ್ರಾಂತ್ಯಗಳಲ್ಲೊಂದರಲ್ಲಿ ಮುಖ್ಯ ಸಚಿವಖಾತೆಯನ್ನು ವಹಿಸಿಕೊಂಡಿದ್ದಾರೆ.

ಮಾನ್ಯರೆ, ಅದು ವಾಸ್ತವ ಸ್ಥಿತಿ, ಆ ಸಮುದಾಯಗಳನ್ನು ಗುರುತಿಸುವುದರಲ್ಲಿ ಯಾವ ಹಾನಿಯು ಇಲ್ಲ, ನಮ್ಮ ದೇಶಕ್ಕೆ ಇದು ವಿಶಿಷ್ಟವಾದ ಸ್ಥಾನವೂ ಅಲ್ಲ. ನಾನು ಕಿರಿಯವನಾಗಿದ್ದಾಗ, ಈಜಿಪ್ಟಿನ ರಾಷ್ಟ್ರೀಯ ಚಳವಳಿಯನ್ನು ಅನುಸರಿಸುತ್ತಿದ್ದೆ. ಅವರು ಮೊದಲು ಸ್ವಾತಂತ್ರ್ಯ ಬಯಸಿದಾಗ, ಕಾಪ್ಟ್ಸ್ ಎನ್ನಲಾದ ಒಂದು ಸಮುದಾಯವು ಮುಂದೆ ಬಂದಿತ್ತು. ಈ ಸಮುದಾಯ ಪ್ರತಿಚಳವಳಿ ಆರಂಭಿಸಿತ್ತು. ಅವರು, ಸ್ವಾತಂತ್ರ್ಯದ ಅಡಿಯಲ್ಲಿ ತಮ್ಮ ಹಕ್ಕುಗಳಿಗೆ ಖಾತರಿ ಇರಬೇಕೆಂದು ಬಯಸಿದರು ಮತ್ತು ಈಜಿಪ್ಟಿನ ನಾಯಕ ಜಗ್ಲುಲ್‌ಪಾಶಾ ಆ ಜನರು ತಮ್ಮ ಬೇಡಿಕೆಗಳನ್ನು ನಿರೂಪಿಸುವಂತೆ ಅವರನ್ನು ಕೇಳಿಕೊಂಡರು. ಕಾಲಕ್ರಮದಲ್ಲಿ ಅವರ ಬೇಡಿಕೆಗಳನ್ನು ಮುಂದೆ ಇಡಲಾಯಿತು ಮತ್ತು ಅವರು ಅವುಗಳನ್ನು ಪರಿಗಣಿಸಿದರು. ಆ ತರುವಾಯ ಆ ಬೇಡಿಕೆಗಳಷ್ಟೇ ಅವರಿಗೆ ಅಲ್ಪಸಂಖ್ಯಾತರ ಹಕ್ಕುಗಳನ್ನು ಮತ್ತು ಸ್ಥಾನಮಾನಗಳನ್ನು ಕೊಡುವುದಿಲ್ಲ ಎಂದು ಹೇಳಿದರು; ಹಾಗೂ ಅವು ಅವರಿಗೆ ಹಕ್ಕು ಅಥವಾ ಸೂಕ್ತ ಅಭಿವ್ಯಕ್ತಿಯನ್ನು ಕೊಡುವುದಿಲ್ಲ ಎಂದು ಹೇಳಿದರು. ಅವರು, ಅವರಿಗೆ ಅವುಗಳನ್ನು ಇನ್ನೂ ಹೆಚ್ಚಿಗೆ ಕೊಡುವುದಾಗಿ ತಿಳಿಸಿದ್ದರು. ಆ ದೇಶದಲ್ಲಿ ಅಲ್ಪ ಸಂಖ್ಯಾತರನ್ನು ನೋಡಿಕೊಂಡ ರೀತಿ ಇದು. ಅಲ್ಲಿವರೆಗೆ, ಈಜಿಪ್ಟ್ ಬಗೆಗೆ ಏನಾದರೂ ಯಾವಾಗಲಾದರೂ ಇದ್ದಿದ್ದರೆ ಆಗ ಕಾಪ್ಟ್ಸ್ ಬಗೆಗೆ ಏನಾದರೂ ಇರುತ್ತಿತ್ತು. ಆದರೆ ಈ ಎಲ್ಲವೂ ಬದಲಾದವು. ಆ ಒಪ್ಪಂದದ ಆ ದಿನದಿಂದ ಇಲ್ಲಿವರೆಗೆ ನಾವು ಕಾಪ್ಟ್ಸ್‌ರ ಹೆಸರನ್ನೇ ಕೇಳಿಲ್ಲ. ಈಗ ಅವರು ಸಂತೃಪ್ತ ಜನರು. ಅವರೆಲ್ಲರು ಒಂದೇ ಜನಸಮುದಾಯವಾಗಿದ್ದಾರೆ. ಈ ಸದನವು, ಈ ಪ್ರಶ್ನೆಯನ್ನು ನಿಷ್ಪಕ್ಷಪಾತದಿಂದ ಹಾಗೂ ಯಾವುದೇ

ಭಾವೋದ್ವೇಗ ಅಥವಾ ಭಾವನಾತ್ಮಕತೆಯಿಂದ ದೂರವಿದ್ದು ಪರಿಗಣಿಸುತ್ತದೆ ಎಂದು ನಾನು ಆಶಿಸುತ್ತೇನೆ.

**ಶ್ರೀ ಅಲಘು ರಾಯ್ ಶಾಸ್ತ್ರಿ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : *[ಮಾನ್ಯ ಉಪಸಭಾಧ್ಯಕ್ಷರೆ, ನಮಗೆ ಕೇವಲ ಒಂದು ಗಂಟೆ ಕಾಲಾವಕಾಶ ಉಳಿದಿರುವುದರಿಂದ, ಚರ್ಚೆಯ ಸಮಯವನ್ನು ಒಂದು ದಿನದಷ್ಟು ಕಾಲ ವಿಸ್ತರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೂ ಅನೇಕ ಸದಸ್ಯರು ಮಾತನಾಡುವ ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆ ಮತ್ತು ಇಲ್ಲಿವರೆಗೆ ಯಾವುದೇ ಮುಕ್ತಾಯ ಪ್ರಸ್ತಾವವನ್ನು ಮಂಡಿಸಿಲ್ಲ. ವಿಷಯ ಕುರಿತಂತೆ ಸದನವು ಹೆಚ್ಚು ಚರ್ಚೆ ಮಾಡಬಯಸುತ್ತದೆ ಎಂದು ತೋರುತ್ತದೆ. ವಿಷಯವು ಹೆಚ್ಚು ಪ್ರಾಮುಖ್ಯ ಉಳ್ಳದ್ದಾಗಿದೆ ಮತ್ತು ಶ್ರೀ ದಿವಾಕರ್ ಅವರು ನೆನ್ನೆ ಹೇಳಿದ ಹಾಗೆ, ಇದನ್ನು ಅವಸರದಲ್ಲಿ ವಿಲೇ ಮಾಡಬಾರದು. ಕಡೇ ಪಕ್ಷ ಒಂದು ದಿನದವರೆಗಾದರೂ ವಿಸ್ತರಿಸುವ ಬಗ್ಗೆ ಪರಿಗಣನೆ ಮಾಡಬೇಕು. ಈಗಾಗಲೇ ಯಾರ ಹೆಸರುಗಳು ನಿಮ್ಮಲ್ಲಿ ಇವೆಯೋ ಆ ಕೆಲವು ವ್ಯಕ್ತಿಗಳು ಮಾತ್ರ ಮಾತನಾಡಲು ಇಷ್ಟಪಡುತ್ತಾರೆ. ನಾನು ಇನ್ನೊಂದು ನಿವೇದನೆಯನ್ನು ಮಾಡುವನಿದ್ದೇನೆ, ಮಾನ್ಯರೆ, ಇಡೀ ದಿನದ ಎಂದರೆ ಇಂದಿನ ಸಮಯವನ್ನು, ನೀವು ಯಾರನ್ನು ಅಲ್ಪಸಂಖ್ಯಾತ ಸಮುದಾಯಗಳ ಸದಸ್ಯರೆಂದು ಪರಿಗಣಿಸಿದ್ದಿರೋ ಅವರಿಗೆ ಕೊಟ್ಟಿರುವಿರಿ. ಅವರು, ತಮ್ಮ ಅಭಿಪ್ರಾಯಗಳನ್ನು ಸದನದ ಮುಂದೆ ಇಟ್ಟಿರುವರು. ಈಗ ತಾವು ಯಾರನ್ನು ಬಹುಸಂಖ್ಯಾತ ಸಮುದಾಯದ ಸದಸ್ಯರೆಂದು ಪರಿಗಣಿಸಿರುವಿರೋ. ಅವರು ತಮ್ಮ ಅಭಿಪ್ರಾಯಗಳನ್ನು ಇರಿಸಲು ಒಂದು ಅವಕಾಶವನ್ನು ಕೊಡುವುದಿಲ್ಲವೆ? ಇಲ್ಲಿ ಎತ್ತಲಾದ ಆಕ್ಷೇಪಗಳಿಗೆ ಕಾರಣಸಹಿತ ಕೆಲವು ಉತ್ತರಗಳನ್ನು ಕೊಡಲು ಅನುಮತಿ ಕೊಡಲೇಬೇಕು, ಹಾಗೆ ಮಾಡುವುದರಿಂದ ಈ ಸದನದಲ್ಲಿ ತೆಗೆದುಕೊಂಡ ಏನೇ ನಿರ್ಧಾರಗಳಿರಲಿ ಅವು ಕಾರಣಗಳನ್ನಾಧರಿಸಿದವುಗಳಾಗಿವೆ ಮತ್ತು ಬಹುಸಂಖ್ಯಾತ ಮತಗಳನ್ನಲ್ಲ ಎಂದು ನಂಬುವಂತೆ ಜಗತ್ತಿಗೆ ತಿಳಿಸುವಂತಾಗುತ್ತದೆ. ಇಲ್ಲಿ ಎತ್ತಲಾದ ಆಕ್ಷೇಪಗಳಿಗೆ ಯಾರೊಬ್ಬರು ಉತ್ತರಿಸಬಹುದು. ಅವರಿಗೆ ಹಾಗೆ ಉತ್ತರಿಸಲು ಅವಕಾಶ ಕೊಡಬೇಕು. ಭಾಷೆಯ ಪ್ರಶ್ನೆಯೂ ಇದೆ. ಗ್ರೇಟ್ ಬ್ರಿಟನ್ನಿನೊಂದಿಗಿನ ನಮ್ಮ ಸಂಬಂಧಗಳು ಮತ್ತು ಈ ಬಗೆಯ ಇತರ ಸಮಸ್ಯೆಗಳು ಇವೆ. ಇವು ಬಹಳ ಮಹತ್ತ್ವದ ವಿಷಯಗಳಾಗಿವೆ ಮತ್ತು ಇವುಗಳ ಬಗ್ಗೆ ಸದನದಲ್ಲಿ ಸಂಪೂರ್ಣ ವಿವರಣೆ ಮಾಡಬೇಕಾಗಿದೆ. ಆದುದರಿಂದ ಚರ್ಚೆಗೆ ಒಂದು ದಿನ ಹೆಚ್ಚಿಗೆ ಕಾಲಾವಕಾಶ ಕೊಡಬೇಕೆಂದು ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಾವು ಈ ವಿಷಯಗಳ ಬಗ್ಗೆ ಇತರರೂ ತಮ್ಮ ಅಭಿಪ್ರಾಯಗಳನ್ನು ಮಂಡಿಸಲು ಕಡೇ ಪಕ್ಷ ಇನ್ನೂ ಒಂದು ದಿನ ಹೆಚ್ಚಿಗೆ ಕಾಲಾವಕಾಶ ಬೇಕಾಗುತ್ತದೆ.]*

**ಮಾನ್ಯ ಉಪಸಭಾಧ್ಯಕ್ಷರು** : ನಿಮಗೆ ಇನ್ನೂ ಒಂದು ದಿನ ಹೆಚ್ಚಿನ ಕಾಲಾವಕಾಶ ಬೇಕಾಗಿದೆ!

**ಪಂಡಿತ್ ಗೋವಿಂದ ಮಾಳವೀಯ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ನಾನು ಆ ಮನವಿಯನ್ನು ಬೆಂಬಲಿಸುತ್ತೇನೆ. ನಾವು ಅತ್ಯಂತ ಮಹತ್ತ್ವದ ವಿಷಯ ಚರ್ಚಿಸುತ್ತಿದ್ದೇವೆ. ಅದಕ್ಕೆ ಬೇರೆ ಅವಕಾಶವಿಲ್ಲವೆಂದು ನಾನು ಭಾವಿಸಿದ್ದೇನೆ ಮತ್ತು ಇದಕ್ಕಾಗಿ ಈಗಾಗಲೇ ಮೂರು ದಿನಗಳನ್ನು ವಿನಿಯೋಗಿಸಿದ್ದಾಗಿದೆ. ಆದರೂ, ಈ ವಿಷಯದ ಮೇಲೆ ತಮ್ಮ ಅಭಿಪ್ರಾಯಗಳನ್ನು ಇನ್ನೂ ವ್ಯಕ್ತಪಡಿಸಬೇಕಾಗಿರುವ ಅನೇಕ ಸದಸ್ಯರಿರುವುದರಿಂದ, ನಾವು ಸಮಯ ವಿಸ್ತರಿಸುವುದರಲ್ಲಿ ತಪ್ಪಿಲ್ಲ ಎಂದು ನಾನು ತಿಳಿದಿದ್ದೇನೆ.

**ಗೌರವಾನ್ವಿತ ಶ್ರೀ ಬಿ.ಜಿ. ಖೇರ್** (ಬಾಂಬೆ : ಸಾಮಾನ್ಯ) : ನಾಳೆ ಪುನಃ ಇನ್ನೂ ಒಂದು ದಿನ ಕೊಡಬೇಕೆಂಬ ಬೇಡಿಕೆ ಇಡಲಾಗುತ್ತದೆ. ತಿದ್ದುಪಡಿಗಳನ್ನು ಮಂಡಿಸಿದಾಗ ಬಹಳಷ್ಟು ಅವಕಾಶಗಳು ಇದ್ದವು ಮತ್ತು ಈ ಎಲ್ಲ ಅಂಶಗಳನ್ನು ಹೊರ ತರಬಹುದಾಗಿತ್ತು. ನಾವು ವಿವಿಧ ಭಾಷೆಗಳಲ್ಲಿ ವೈವಿಧ್ಯಪೂರ್ಣ ಅಭಿಪ್ರಾಯಗಳನ್ನು ನಿರೂಪಿಸಿ ಎರಡು ವರ್ಷಗಳಿಂದಲೂ ನಮ್ಮ ಮುಂದೆ ಇದ್ದ ವಿಷಯದ ಮೇಲೆ ಸಾಕಷ್ಟು ಬೆಳಕು ಚೆಲ್ಲಲಾಗಿದೆ ಇಲ್ಲವೆ ಕತ್ತಲು ಕವಿಸಲಾಗಿದೆ. ಯಾರು ಮಾತನಾಡಬಯಸುವರೋ ಮತ್ತು ಕೇಳಬಯಸುವರೋ ಅವರ ಬಗ್ಗೆ ಸಹಾನುಭೂತಿ ಇದೆ. ಅಂತಹ ಸಾಮಾನ್ಯ ಚರ್ಚೆಗೆ ಯಾವುದಾದರೂ

ಕೊನೆ ಇರಬೇಕೆಂದು ನಿವೇದಿಸಿಕೊಳ್ಳುತ್ತೇನೆ ಮತ್ತು ನೀವು ಒಂದು ದಿನದ ಕಾಲಾವಕಾಶವನ್ನು ಈಗಾಗಲೇ ವಿಸ್ತರಿಸಿರುವುದರಿಂದ, ಅದು ಸಾಕು ಎಂದು ಹೇಳುತ್ತ ಇನ್ನೂ ಹೆಚ್ಚಿನ ವಿಸ್ತರಣೆಗಳು ಬೇಡ ಎಂದೂ ಸಲಹೆ ಮಾಡುತ್ತೇನೆ.

**ಶ್ರೀ ಮಹಾವೀರ ತ್ಯಾಗಿ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಈ ವಿಷಯ ಕುರಿತಂತೆ ತಮ್ಮ ಅಭಿಪ್ರಾಯವನ್ನು ದಾಖಲೆ ಮಾಡಲು ಒಬ್ಬರು ಸದಸ್ಯರು ಇಚ್ಛಿಸಿದರೂ, ಅವರಿಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಪೂರ್ಣ ಅವಕಾಶ ಕೊಡಬೇಕು ಮಾತ್ರವಲ್ಲ, ಇನ್ನೊಂದು ದಿನ ಬೇಕೆಂದರೆ ಆ ದಿನವನ್ನು ಮತ್ತೂ ಇನ್ನೊಂದು ದಿನ ಅಗತ್ಯವಿದೆ ಎಂದಾದರೆ ಆ ಒಂದು ದಿನವೂ ಕಾಲವಕಾಶ ಕೊಡಬೇಕು ಎಂದು ನಿವೇದಿಸಿಕೊಳ್ಳುತ್ತೇನೆ.

**ಮಾನ್ಯ ಉಪಸಭಾಧ್ಯಕ್ಷರು** : ಇಲ್ಲಿ ಮಾತನಾಡಲು ಬಯಸಿರುವ ಸುಮಾರು ನಲವತ್ತು ಮಹನೀಯರ ಹೆಸರುಗಳು ಇಲ್ಲಿವೆ. ಅದೇ ಕಾಲಕ್ಕೆ ಹಲವರು ಹಿಂದಿನ ಭಾಷಣಕಾರರು ಹೇಳಿರುವ ಪ್ರಮುಖ ವಿಷಯಗಳ ಬಗ್ಗೆ ಒಂದು ಟಿಪ್ಪಣಿ ಮಾಡಿಕೊಂಡಿದ್ದೇನೆಂದು ಸ್ಪಷ್ಟವಾಗಿ ಹೇಳುತ್ತೇನೆ. ಮತ್ತು ಅವು ಹೆಚ್ಚುಕಡಿಮೆ ಆರು ವಿಭಿನ್ನ ವಿಷಯಗಳನ್ನು ಕುರಿತಾಗಿವೆ ಎಂದು ಕಂಡುಬರುತ್ತದೆ. ಈಗಾಗಲೇ ಸುಮಾರು ಮೂವತ್ತು ಸದಸ್ಯರು ಮಾತನಾಡಿದ್ದಾರೆ ಮತ್ತು ಅವರು ಈ ಆರು ವಿಭಿನ್ನ ವಿಷಯಗಳ ಬಗ್ಗೆಯೇ ಗಮನ ಹರಿಸಿದ್ದಾರೆ. ಇನ್ನು ಮುಂದೆ ಮಾತನಾಡಲು ಬರುವ ಮಹನೀಯರು ಈ ಆರು ಅಂಶಗಳ ಬಗ್ಗೆ ಹೇಳಿದ್ದಕ್ಕಿಂತ ಬೇರೆ ಏನಾದರೂ ಹೇಳಲು ಸಮರ್ಥರಿರಬೇಕೆಂದು ಸದನಕ್ಕೆ ಖಚಿತವಾದರೆ ಆಗ ಇದಕ್ಕೆ ಸಮರ್ಥನೆ ಸಿಗುತ್ತದೆ. ಆದರೆ, ನೀವು ಹೇಳಿದಂತಾಗಲಿ. ನೀವು ನನಗೆ ಏನಾದರೂ ಹೊಸ ವಿಷಯ ತಿಳಿಸುವಿರೆಂದು ಮನವರಿಕೆ ಮಾಡಿದರೆ ನಾನು ಸಮಯವನ್ನು ವಿಸ್ತರಿಸಲು ಸಂಪೂರ್ಣ ಸಿದ್ಧನಿದ್ದೇನೆ.

**ಪಂಡಿತ್ ಗೋವಿಂದ ಮಾಳವೀಯ** : ನಾವು ಹೇಳಲು ಇಚ್ಛಿಸುವ ವಿಷಯಗಳ ಬಗ್ಗೆ ಸಾರಾಂಶವನ್ನು ಸಲ್ಲಿಸುವಂತೆ ತಾವು ಹೇಳುವಿರಾ?

**ಮಾನ್ಯ ಉಪಸಭಾಧ್ಯಕ್ಷರು** : ಬಹುಶಃ ನೀವು ನನ್ನನ್ನು ತಪ್ಪಾಗಿ ತಿಳಿದಿದ್ದೀರಿ ಮತ್ತು ಉದ್ದೇಶ ಪೂರ್ವಕವಾಗಿ ನಾನೇನು ಸಾರಾಂಶ ಕೊಡಿ ಎಂದು ಸಲಹೆ ಮಾಡಿಲ್ಲ, ಆದರೆ ಯಾರು ಇಲ್ಲಿ ಕುಳಿತಿರುವರೋ ಮತ್ತು ಕೇಳುತ್ತಿರುವಿರೋ ಇಂದಷ್ಟೇ ಬಂದಿರುವವರು ಯಾವ ಯಾವ ವಿಷಯಗಳನ್ನು ಕುರಿತು ಮಾತನಾಡಲಾಗಿದೆ ಎಂಬುದು ನಿಮಗೆ ತಿಳಿದಿರಲಿಕ್ಕಿಲ್ಲ.

**ಪಂಡಿತ್ ಗೋವಿಂದ ಮಾಳವೀಯ** : ಆದರೆ ನಾನು ಸಭಾ ನಡವಳಿಗಳನ್ನು ಮನೆಗೆ ತೆಗೆದುಕೊಂಡು ಹೋಗಿ ಅವುಗಳನ್ನು ಓದಿದ್ದೇನೆ!

**ಮಾನ್ಯ ಉಪಸಭಾಧ್ಯಕ್ಷರು** : ಯಾವ ಸದಸ್ಯರ ಹೆಸರುಗಳು ನನ್ನಲ್ಲಿವೆಯೋ, ಆ ಸದಸ್ಯರು, ಯಾವುದೇ ಹೊಸ ವಿಷಯವನ್ನು ಹೇಳುತ್ತೀರೆಂದು ನನಗೆ ಮನವರಿಕೆ ಮಾಡುವಿರೋ ಅಥವಾ ತಾವೇ ಸಮರ್ಥಿಸುವರೋ ಆಗ ನಾನು ಪ್ರಸ್ತಾವಗಳನ್ನು ಪರಿಗಣಿಸಲು ಸಿದ್ಧನಿದ್ದೇನೆ.

**ಶ್ರೀ ಹುಸೇನ್ ಇನಾಮ್** : (ಅಡ್ಡಿಪಡಿಸಲಾಯಿತು.)

**ಶ್ರೀ ಸುರೇಶ್‌ಚಂದ್ರ ಮಜುಂದಾರ್** (ಪಶ್ಚಿಮ ಬಂಗಾಳ : ಸಾಮಾನ್ಯ) : ನಲವತ್ತು ಹೆಸರುಗಳು ಇರುವುದರಿಂದ ಒಂದು ದಿನದ ವಿಸ್ತರಣೆಯೂ ಸಾಕಾಗುವುದಿಲ್ಲ ಆದುದರಿಂದ ಇಡೀ ವಾರವೇ ಬೇಕಾಗುತ್ತದೆ.

**ಶ್ರೀ ವಿಶ್ವಂಭರ ದಯಾಳ್ ತ್ರಿಪಾಠಿ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಈ ಚರ್ಚೆಗೆ ಇನ್ನೆರಡು ದಿನಗಳನ್ನು ಕೊಡಬೇಕು ಎಂದು ನಾನು ಸಲಹೆ ಮಾಡುತ್ತೇನೆ

**ಮಾನ್ಯ ಉಪಸಭಾಧ್ಯಕ್ಷರು** : ಆಗಲಿ; ನಾನು ಒಂದು ದಿನ ಹೆಚ್ಚಿಗೆ ಕೊಡುತ್ತೇನೆ, ಆದರೆ ಸಮಯವನ್ನು ಉಪಯುಕ್ತ ಉದ್ದೇಶಕ್ಕಾಗಿ ಬಳಸಲಾಗುತ್ತದೆ ಎಂದು ನಾನು ಆಶಿಸುತ್ತೇನೆ.

**ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ಕರಡು ಸಂವಿಧಾನ ಕುರಿತು ಕೆಲವು ಟೀಕೆಗಳನ್ನು ಮಾಡುವ ಮೊದಲು, ಕರಡು ಸಂವಿಧಾನದ ತತ್ತ್ವಗಳನ್ನು ಸರಳ ರೀತಿಯಲ್ಲಿ ಮತ್ತು ಸಮರ್ಥವಾಗಿ ವಿವರಿಸಿರುವ ಗೌರವಾನ್ವಿತ ಡಾ. ಅಂಬೇಡ್ಕರ್ ಅವರಿಗೆ ಮೆಚ್ಚುಗೆ ಸೂಚಿಸಲು ಇಷ್ಟಪಡುತ್ತೇನೆ. ಹಾಗೂ ಭಾರತದಲ್ಲಿ ಗ್ರಾಮಸಮುದಾಯಗಳನ್ನು ಕುರಿತು ಸಾಮಾನ್ಯ ಖಂಡನೆ ಮಾಡಿದ ನನ್ನ ಗೌರವಾನ್ವಿತ ಮಿತ್ರರ ಅಭಿಪ್ರಾಯಗಳನ್ನು ಹಂಚಿಕೊಳ್ಳುವುದಿಲ್ಲವೆಂದು ನಾನು ಹೇಳುತ್ತೇನೆ. ಅವರ ಅಭಿಪ್ರಾಯಕ್ಕೆ ನಾನು ತೀವ್ರ ವಿರೋಧ ವ್ಯಕ್ತಪಡಿಸಲೇಬೇಕಾಗಿದೆ. ಭಾರತದಲ್ಲಿ ಪ್ರಜಾಪ್ರಭುತ್ವವು, ಭಾರತೀಯ ಮಣ್ಣಿನ ಮೇಲಿನ ಗಿಡದ ಬುಡಕ್ಕೆ ಗೊಬ್ಬರ ಹಾಕಿದಂತೆ ಇದೆ ಎಂಬ ಪ್ರಜಾಪ್ರಭುತ್ವ ಸಿದ್ಧಾಂತವನ್ನು ದೇಶದ ಇತಿಹಾಸದ ಆರಂಭಯುಗದಷ್ಟು ಹಿಂದೆಯ ದೇಶದ ಹಲವಾರು ಸ್ಥಳೀಯ ಸಂಸ್ಥೆಗಳಲ್ಲಿ ಅಳವಡಿಸಿಕೊಡಲಾಗಿತ್ತೆಂದು ಗುರುತಿಸಲಾಗಿದೆ. ಪ್ರಜಾಪ್ರಭುತ್ವವು ತುಲನಾತ್ಮಕವಾಗಿ ಹೇಳುವುದಾದರೆ ಪ್ರಸ್ತುತ ಆಧುನಿಕ ರೂಪದಲ್ಲಿ ಐರೋಪ್ಯ ಇತಿಹಾಸದಲ್ಲಿ ಕಂಡುಬಂದರೂ ಅದು ಇತ್ತೀಚಿನದು, ಏಕೆಂದರೆ ಅದರ ಮುಖ್ಯ ಬೆಳವಣಿಗೆಯಾಗಿದ್ದು ಫ್ರೆಂಚ್ ಕ್ರಾಂತಿಯ ಮತ್ತು ಅಮೆರಿಕದ ಸ್ವಾತಂತ್ರ್ಯ ಯುದ್ಧದ ಅನಂತರ ಅಷ್ಟೇ. ಈಗಿನ ದಿನಗಳಲ್ಲಿ ಅರ್ಥಮಾಡಿಕೊಂಡು ರೂಢಿಗೆ ತಂದಿರುವ ಪ್ರಜಾಪ್ರಭುತ್ವದ ಆವಶ್ಯಕ ಅಂಶಗಳು, ತೀರ ಇತ್ತೀಚಿನ ಪರಿಕಲ್ಪನೆ ಮತ್ತು ಕಳೆದ ಯುದ್ಧಕಾಲದಲ್ಲಿ ಹಾಗೂ ಅದರ ಮುಕ್ತಾಯದ ಅನಂತರ ಇವು ಅನುಷ್ಠಾನಕ್ಕೆ ಬಂದಿದ ಮತ್ತು ಸಾರ್ವತ್ರಿಕ ಬೆಂಬಲ ಗಳಿಸಿವೆ.

ಕರಡು ಸಂವಿಧಾನದ ಮೇಲೆ ನನ್ನ ಟೀಕೆ ಟಿಪ್ಪಣಿಗಳನ್ನು ಮಾಡುವ ಮೊದಲು, ಕರಡು ರಚನಾ ಸಮಿತಿಯ ಕಾರ್ಯನಿರ್ವಹಣೆ ಮತ್ತು ಅದರ ಸದಸ್ಯರು ವಹಿಸಿದ ಪಾತ್ರ ಕುರಿತಂತೆ ನನ್ನ ಗೌರವಾನ್ವಿತ ಮಿತ್ರರಾದ ಶ್ರೀ ಟಿ.ಟಿ. ಕೃಷ್ಣಮಾಚಾರಿಯವರ ಕೆಲವು ಅಭಿಪ್ರಾಯಗಳನ್ನು ಗಮನಿಸಿ, ನಾನು ನನ್ನ ಅಭಿಪ್ರಾಯ ವಿವರಿಸಲು ಅವಕಾಶ ಸಿಕ್ಕಿರುವುದಕ್ಕಾಗಿ ಸ್ವತಃ ನಾನು ಸದನಕ್ಕೆ ಋಣಿಯಾಗಿದ್ದೇನೆ. ಸಮಿತಿಯ ಒಬ್ಬ ಸದಸ್ಯನಾಗಿ, ನನಗೆ ಅನಾರೋಗ್ಯ ಇದ್ದರೂ, ಕರಡು ಸಂವಿಧಾನದ ಪ್ರಕಟಣೆ ಮೊದಲು ಅವರ ಅನೇಕ ಸಭೆಗಳಲ್ಲಿ ಕ್ರಿಯಾಶೀಲವಾಗಿ ಪಾತ್ರವಹಿಸಿದ್ದೇನೆ ಮತ್ತು ಅದರ ಸಭೆಗಳಲ್ಲಿ ಭಾಗವಹಿಸಲು ಸಾಧ್ಯವಿಲ್ಲದಿದ್ದಾಗ ಟಿಪ್ಪಣಿಗಳನ್ನು ಮತ್ತು ಸಲಹೆಗಳನ್ನು ನಾನು ಸಹೋದ್ಯೋಗಿಗಳ ಪರಿಗಣನೆಗಾಗಿ ಕಳುಹಿಸಿದ್ದೇನೆ. ಕರಡಿನ ಪ್ರಕಟಣೆ ಅನಂತರದಲ್ಲಿ, ಆರೋಗ್ಯದ ಕಾರಣಗಳಿಗಾಗಿ ನಾನು ಅದರ ಯಾವುವೇ ಚರ್ಚೆಗಳಲ್ಲಿ ಪಾಲ್ಗೊಳ್ಳಲಾಗಲಿಲ್ಲ ಮತ್ತು ಕರಡಿನ ಮಾರ್ಪಾಡುಗಳಿಗೆ ಸಂಬಂಧಿಸಿದಂತೆ ಸಲಹೆಗಳಿಗಾಗಿ ನಾನು ಪ್ರಶಂಸನಾರ್ಹ ಕಾರ್ಯಮಾಡಲಾಗಲಿಲ್ಲ.

ಕರಡು ಸಂವಿಧಾನಕ್ಕೆ ಸಂಬಂಧಿಸಿದಂತೆ ಅನೇಕ ವಿವರಗಳ ಬಗ್ಗೆ ಸಂವಿಧಾನದ ಮುಖ್ಯ ಅಂಶಗಳನ್ನು ಹಲವು ಸಮಿತಿಗಳ ವರದಿಗಳನ್ನು ಪರಿಗಣಿಸಿದ ಅನಂತರ ಸಭೆಯು ಇತ್ಯರ್ಥಗೊಳಿಸಿದೆ ಎಂಬುದನ್ನು ನೆನಪಿಸುವುದು ಸೂಕ್ತವಾಗಿದೆ. ಈ ಸಭೆಯು, ಎರಡು ವರ್ಷಗಳ ತರುವಾಯ ಕಾರ್ಯವನ್ನು ಹೊಸದಾಗಿ ಆರಂಭಿಸುತ್ತಿಲ್ಲ. ಈ ಸದನವು ಇತ್ಯರ್ಥಪಡಿಸಿದ್ದ ಈ ಸಂವಿಧಾನದ ಕೆಲವು ಅಂಶಗಳ ಬಗ್ಗೆ ಯಾರು ಆಕ್ಷೇಪಿಸಿದ್ದರೋ ಅವರು, ಈಗಾಗಲೇ ಕೈಗೊಂಡ ನಿರ್ಣಯಗಳಿಗೆ ಜವಾಬ್ದಾರಿಯನ್ನು ಆ ಕೆಲವರು ಕೇಂದ್ರದಲ್ಲಿ ಒಂದು ಅತಿಕ್ರಮಿಸುವ ಅಧಿಕಾರ ಸಂವಿಧಾನದ ಒಕ್ಕೂಟ ಚೌಕಟ್ಟು, ಸಮಕಾಲೀನ ಪಟ್ಟಿಯ ಅಗತ್ಯ ಮತ್ತು ಅದರಲ್ಲಿನ ಬಾಬುಗಳು, ಸದನಗಳ ರಚನೆ, ಸಂಸತ್ತಿನ ಎರಡು ಸದನಗಳ ಮತ್ತು ಪ್ರಾಂತೀಯ ಶಾಸನ ಸಭೆಗಳಲ್ಲಿ ಸಂಬಂಧಿತ ಅಧಿಕಾರಗಳು, ರಾಷ್ಟ್ರಪತಿ ಹಾಗೂ ರಾಜ್ಯಪಾಲರ ಚುನಾವಣಾ ವಿಧಾನ, ಶಾಸನ ಸಭೆ ಮತ್ತು ಕಾರ್ಯಾಂಗ ನಡುವಿನ ಸಂಬಂಧ, ಸಂವಿಧಾನ ಮತ್ತು ಸರ್ವೋಚ್ಚನ್ಯಾಯಾಲಯ ಹಾಗೂ ಉಚ್ಚನ್ಯಾಯಾಲಯಗಳ ಅಧಿಕಾರಿಗಳು, ನಾಗರಿಕರಿಗೆ ಭರವಸೆ ನೀಡಲಾದ ಮೂಲಭೂತ ಹಕ್ಕುಗಳು, ಮತ್ತು ಸಂವಿಧಾನದ ಚೌಕಟ್ಟಿಗೆ ಸಂಬಂಧಿಸಿದ ಇತರ ಹಲವು ವಿಷಯಗಳು, ಇವೆಲ್ಲವುಗಳನ್ನು ಈ ಸದನವು

ಇತ್ಯರ್ಥಪಡಿಸಿದ ಅಥವಾ ಈ ಸದನವು ನೇಮಕಮಾಡಿದ ಸಮಿತಿಗಳು ಪರಿಗಣಿಸಿವೆ. ಹೀಗೆ ರೂಪಿಸಲಾದ ರಚಿಸಿದ ಅನುಚ್ಛೇದಗಳಲ್ಲಿ ಕರಡು ರಚನಾಸಮಿತಿಯು ಈ ಸಭೆಯು ಪರಿಗಣಿಸಿದ ನಿರ್ಣಯಗಳನ್ನು ಅಳವಡಿಸಿರುವಷ್ಟರ ಮಟ್ಟಿಗೆ ಹೇಳುವುದಾದರೆ, ಕರಡು ರಚನಾಸಮಿತಿಯು ಈಗಾಗಲೇ ಕೈಗೊಂಡ ನಿರ್ಣಯಗಳಿಂದ ಯಾವುದೇ ರೀತಿ ಜವಾಬ್ದಾರಿಯಾಗುವುದಿಲ್ಲ; ವಿಶೇಷ ಕಾರಣಗಳ ಮೇಲೆ ಆ ನಿರ್ಣಯಗಳನ್ನು ಪರಿಷ್ಕರಿಸಲು ಸದನಕ್ಕೆ ಸಾಕಷ್ಟು ಅವಕಾಶವಿದೆ. ಕರಡಿನ ಅಂಥ ಉಪಬಂಧಗಳನ್ನು ಕುರಿತಂತೆ ಈ ಸದನವು ಪರಿಗಣಿಸಿಲ್ಲದಿರುವುದರಿಂದ ಈಗಾಗಲೆ ಕೈಗೊಂಡ ನಿರ್ಣಯಗಳಿಗೆ ಮತ್ತು ಸಂವಿಧಾನ ಸಾಮಾನ್ಯ ಚೌಕಟ್ಟಿಗೆ ಸುಸಂಗತವಾಗಿ ಯಾವುದೇ ತೀರ್ಮಾನಕ್ಕೆ ಬರಲು ಈ ಸದನಕ್ಕೆ ಅವಕಾಶವಿದೆ.

ಕರಡು ಸಂವಿಧಾನ ಕುರಿತ ಮುಖ್ಯ ವಿಮರ್ಶೆಗಳನ್ನು ಕೆಳಗಿನ ಶೀರ್ಷಿಕೆಗಳಡಿ ವಿವರಿಸಲಾಗಿದೆ:

**ವಿಮರ್ಶೆ ೧** – ಅದು ವಿದೇಶಿ ಸಂವಿಧಾನಗಳ ಮೇಲೆ ಹೆಚ್ಚು ಅವಲಂಬಿತವಾಗಿದೆ ಮತ್ತು ಅದರಲ್ಲಿ ದೇಶೀಯವಾದುದು ಏನೂ ಇಲ್ಲ. ಅಮೆರಿಕ ಕ್ರಾಂತಿ ಕಾಲದಿಂದ, ಫೆಡರಲ್ ವ್ಯವಸ್ಥೆಯು, ಆಧುನಿಕ ರೂಪದಲ್ಲಿರುವ ಇತ್ತೀಚಿನ ಬೆಳವಣಿಗೆ ಎಂಬುದನ್ನು ಮತ್ತು ಅಮೆರಿಕದ ತರುವಾಯದ ಫೆಡರೇಷನ್‌ಗಳ ಉದಾಹರಣೆಯನ್ನು ಒದಗಿಸಿರುವುದನ್ನು ನೆನಪಿಸಿಕೊಂಡರೆ ವಿಮರ್ಶೆಯಲ್ಲಿ ಅಂಥ ಯಾವುದೇ ಸಮರ್ಥನೆ ಇರುವುದು ಕಂಡುಬರುತ್ತಿಲ್ಲ. ಬೇರೆ ಬೇರೆ ಫೆಡರೇಷನ್‌ಗಳ ನಡುವೆ ಮತ್ತು ಆ ಪ್ರತಿಯೊಂದು ಫೆಡರೇಷನ್ನನ್ನು ಹೊಸದಾಗಿ ರಚಿಸಿದ ತರುವಾಯ ಮತ್ತು ವಿಶ್ವದ ಆರಂಭದ ಫೆಡರೇಷನ್‌ಗಳ ಅನುಭವ ಮತ್ತು ಸಂವಿಧಾನಗಳ ಅನಷ್ಠಾನದಿಂದ ಪಡೆದ ಪ್ರಯೋಜನದಿಂದ ಉಂಟಾಗಿರುವ ಬಲವಾದ ಕೌಟುಂಬಿಕ ಹೋಲಿಕೆಯನ್ನು ನಿರಾಕರಿಸಲಾಗದು. ಈ ಸಂಬಂಧವಾಗಿ ಸೋವಿಯತ್ ಸಂವಿಧಾನ ಕೂಡ ಫೆಡರಲ್ ಸರ್ಕಾರದ ಕೆಲವು ಸಮ್ಮತ ಸಿದ್ಧಾಂತಗಳಿಂದ ದೂರ ಸರಿದಿಲ್ಲ ಎಂಬುದನ್ನು ನೆನಪು ಮಾಡಿಕೊಡುತ್ತದೆ.

**ವಿಮರ್ಶೆ ೨** – ಘಟಕಗಳಿಗೆ ಹಾನಿಯುಂಟುಮಾಡಿ ಕೇಂದ್ರವನ್ನು ಹೆಚ್ಚು ಬಲಪಡಿಸಲಾಗುತ್ತಿದೆ. ಆಧುನಿಕ ಜಗತ್ತಿನಲ್ಲಿ ಕೈಗಾರಿಕಾ, ವ್ಯಾಪಾರ ಮತ್ತು ಆರ್ಥಿಕ ಸ್ಥಿತಿಗಳ ಸಂಕೀರ್ಣತೆಯನ್ನು ಗಮನಿಸಲಾಗಿ ಮತ್ತು ಬೃಹತ್ ಪ್ರಮಾಣದ ಭದ್ರತಾ ಕಾರ್ಯಕ್ರಮಗಳ ಅಗತ್ಯಗಳನ್ನು ಗಮನಿಸಲಾಗಿ ಫೆಡರಲ್ ಸರ್ಕಾರವನ್ನು ಬಲಪಡಿಸುವ ದಿಕ್ಕಿನಲ್ಲಿ ಪ್ರತಿಯೊಂದು ಫೆಡರೇಷನ್ನಿನಲ್ಲಿ ಅನಿವಾರ್ಯ ಪರಿಸ್ಥಿತಿ ಉಂಟಾಗಿದೆ. ನ್ಯಾಯಬದ್ಧ ವ್ಯಾಖ್ಯಾನದ ಪ್ರಕ್ರಿಯೆಯ ಮೂಲಕ ಕೇಂದ್ರವನ್ನು ಬಲಪಡಿಸುವುದಕ್ಕೆ ಸರ್ವೋಚ್ಚನ್ಯಾಯಾಲಯಕ್ಕೆ ಅದನ್ನು ಬಿಟ್ಟುಕೊಡುವ ಬದಲಿಗೆ, ಕರಡು ಸಂವಿಧಾನದ ಅನೇಕ ಉಪಬಂಧಗಳಲ್ಲಿ ಈ ಪ್ರವೃತ್ತಿಗಳ ಬಗ್ಗೆ ಗಮನಹರಿಸಿದೆ. ಅಮೆರಿಕದ ಸರ್ವೋಚ್ಚನ್ಯಾಯಾಲಯ, ಸಂವಿಧಾನದಲ್ಲಿ ಸಾಮಾನ್ಯ-ಕಲ್ಯಾಣ ಖಂಡ ಹಾಗೂ ವ್ಯಾಪಾರ ಮತ್ತು ವಾಣಿಜ್ಯ ಖಂಡಗಳ ಬಗ್ಗೆ ಮಾಡಿದ ವ್ಯಾಪಕ ವ್ಯಾಖ್ಯಾನವು ಪ್ರಾಯೋಗಿಕವಾಗಿ ರಾಜ್ಯದ ಚಟುವಟಿಕೆಗಳ ಪ್ರತಿಯೊಂದು ವಲಯವನ್ನು ಪ್ರವೇಶಿಸಿರುವುದರಿಂದ. ಹಾಗಾಗಿ ಅದು ಈ ಎರಡೂ ಖಂಡಗಳ ಅನುಕೂಲ ಪಡೆದುಕೊಂಡು, ಆರ್ಥಿಕ ಚಟುವಟಿಕೆಗಳು, ಬಂಡವಾಳ ಮತ್ತು ಕಾರ್ಮಿಕ ವ್ಯವಸ್ಥೆ ನಡುವಿನ ಸಂಬಂಧ, ಕೆಲಸದ ಗಂಟೆಗಳು, ಹೀಗೆ ಇನ್ನು ಅನೇಕ ವ್ಯವಸ್ಥೆ ನಿಯಂತ್ರಿಸುವ ಒಂದು ಸ್ಥಿತಿಯಲ್ಲಿ ಇರಬಹುದೆಂಬುದನ್ನು ನಾನು ಇಲ್ಲಿ ಸ್ಪಷ್ಟಪಡಿಸುತ್ತೇನೆ.

**ವಿಮರ್ಶೆ ೩** – ಸಮಕಾಲೀನ ವಿಷಯಗಳ ಒಂದು ದೊಡ್ಡ ಪಟ್ಟಿ ಇರುವುದು, ಕೇಂದ್ರವು ಪ್ರಾಂತೀಯ ವಲಯದ ಮೇಲೆ ಅತಿಕ್ರಮಿಸಿ ಸಂವಿಧಾನಕ್ಕೆ ಒಂದು ಏಕೀಕೃತ ಪಕ್ಷಪಾತಕ್ಕೆ ಅಥವಾ ಸ್ವರೂಪಕ್ಕೆ ಅವಕಾಶ ಕೊಡಬಹುದು. ಸಮವರ್ತಿ ಪಟ್ಟಿಯಲ್ಲಿಯ ಅನೇಕ ಬಾಬುಗಳ ಅಧ್ಯಯನದಿಂದ ಭಾರತದ ಆದ್ಯಂತ ಸಾರ್ವತ್ರಿಕ ಒಳಿತಾಗುವುದಕ್ಕೆ ಮುಖ್ಯವಾಗಿ ಸಂಬಂಧಿಸಿದೆ. ಭಾರತದಲ್ಲಿ ಬ್ರಿಟಿಷ್ ಆಡಳಿತದ ವಿರುದ್ಧ ಏನೆಲ್ಲ ಟೀಕೆಗಳನ್ನು ಮಾಡಿದರೂ ಕಾನೂನಿನ ಏಕರೂಪತೆಗೆ ಮತ್ತು ಕಾನೂನು ಆಡಳಿತಕ್ಕೆ ಆಧಾರವಾದ ಮಹಾಸಂಹಿತೆಗಳನ್ನು ಅಧಿನಿಯಮ ರೀತಿಗೊಳಿಸಿರುವುದು, ಅದರ ಹೆಚ್ಚುಗಾರಿಕೆ. ಭಾರತೀಯ ರಾಜ್ಯಗಳು

ಭಾರತೀಯ ಮಹಾಸಂಹಿತೆಗಳನ್ನು ಅಳವಡಿಸಿಕೊಂಡಿವೆ ಎಂಬುವುದು ಎಲ್ಲರಿಗೂ ತಿಳಿದಿದೆ. ಸಮವರ್ತಿ ಪಟ್ಟಿಯ ಅಥವಾ ಸಮವರ್ತಿ ವಿಷಯಗಳು ಪಟ್ಟಿಯನ್ನು ಮೊಟಕುಗೊಳಿಸುವ ಬದಲು ಭಾಗ ೩ರಲ್ಲಿ ಹೇಳಿರುವ ಸಮವರ್ತಿ ಪಟ್ಟಿಯನ್ನು ರಾಜ್ಯಗಳಿಗೆ ವಿಸ್ತರಿಸಬೇಕು ಮತ್ತು ಅನ್ವಯಿಸಬೇಕು ಎಂಬ ವಾದವನ್ನು ನಾನು ಎತ್ತಿ ಹಿಡಿಯುತ್ತೇನೆ. ಪ್ರತ್ಯೇಕ ಪ್ರಾಂತೀಯ ಪಟ್ಟಿ ಇರುವುದರಿಂದ, ಸಮವರ್ತಿ ಪಟ್ಟಿಯು ಇರುವುದು ಸಂವಿಧಾನದ ಫೆಡರಲ್ ಸ್ವರೂಪವನ್ನು ಯಾವುದೇ ರೀತಿಯಿಂದ ದಾರಿ ತಪ್ಪಿಸುವುದಿಲ್ಲ.

**ವಿಮರ್ಶೆ ೪** – ಸಂವಿಧಾನವು ಭಾರತದ ಸಾಮಾಜಿಕ ಮತ್ತು ರಾಜಕೀಯ ಜೀವನದ ಆವಶ್ಯಕ ಲಕ್ಷಣವಾಗಿರುವ ಗ್ರಾಮಸಮುದಾಯಗಳಿಗೆ, ಸಾಕಷ್ಟು ಮಹತ್ತ್ವ ಕೊಡುವುದಿಲ್ಲ. ಸ್ಥಳೀಯ ಸ್ವಯಮಾಡಳಿತ ಸರ್ಕಾರಕ್ಕೆ ಹಾಗೂ ಮತ್ತಿತರ ವಿಷಯಗಳಿಗೆ ಸಂಬಂಧಿಸಿದಂತೆ ಪ್ರಾಂತೀಯ ಅಥವಾ ರಾಜ್ಯ ಶಾಸನ ಸಭೆಗಳಲ್ಲಿ, ಭಾರಿ ಅಧಿಕಾರಗಳಿರುವುದನ್ನು, ರಾಜ್ಯ ಸರ್ಕಾರಗಳಲ್ಲಿ ನಿಹಿತವಾದ ವಿವಿಧ ಪ್ರಕಾರ್ಯಗಳ ನಿರ್ವಹಣೆಗಾಗಿ ಆಡಳಿತಾತ್ಮಕ ಘಟಕಗಳಾಗಿರುವಂತೆ ಗ್ರಾಮಗಳನ್ನು ರಚಿಸುವುದಕ್ಕೆ ಪ್ರಾಂತೀಯ ಶಾಸನ ಸಭೆಗಳನ್ನು ಯಾವುದೂ ಅಡ್ಡಿಪಡಿಸುವುದಿಲ್ಲ.

**ವಿಮರ್ಶೆ ೫** – ಮೂಲಭೂತ ಹಕ್ಕುಗಳಿಗೆ ಸಂಬಂಧಿಸುವ ಟೀಕೆ ಎಂದರೆ, ಅವುಗಳ ಸುತ್ತಲೂ ಹಲವಾರು ನಿರ್ಬಂಧಗಳಿರುವುದರಿಂದ ಸಂವಿಧಾನದಡಿ ಖಾತರಿ ನೀಡಿರುವ ಹಕ್ಕುಗಳಿಗೆ ಯಾವುದೇ ಮೌಲ್ಯವನ್ನು ಕೊಟ್ಟಂತಾಗಿಲ್ಲ. ಯಾವುದೇ ಸಂವಿಧಾನದಲ್ಲಿ, ಮೂಲಭೂತ ಹಕ್ಕುಗಳನ್ನು ನೀಡುವಲ್ಲಿ ಮತ್ತು ಅವುಗಳಿಗೆ ಖಾತರಿ ನೀಡುವಲ್ಲಿ ಇರುವ ದೊಡ್ಡ ಸಮಸ್ಯೆ ಎಂದರೆ ವೈಯಕ್ತಿಕ ಸ್ವಾತಂತ್ರ್ಯ ಮತ್ತು ಸಾಮಾಜಿಕ ನಿಯಂತ್ರಣ ಇವುಗಳ ನಡುವೆ ಎಲ್ಲಿ ಗೆರೆ ಎಳೆಯಬೇಕೆಂಬುದೇ ಆಗಿದೆ. ನಿಜವಾದ ಸ್ವಾತಂತ್ರ್ಯವು, ಸುವ್ಯವಸ್ಥಿತ ರಾಜ್ಯದಲ್ಲಿ ಮತ್ತು ರಾಜ್ಯದ ಆಧಾರಸ್ತಂಭಗಳು ಅಪಾಯಕ್ಕೀಡಾಗದಿರುವಲ್ಲಿ ಮಾತ್ರ ಪ್ರವರ್ಧಮಾನವಾಗಿರಬಹುದು. ಅದೇ ಅಮೆರಿಕದ ಸಂಯುಕ್ತ ಸಂಸ್ಥಾನಗಳ ಸರ್ವೋಚ್ಚನ್ಯಾಯಾಲಯವು ಅದರ ಸುದೀರ್ಘ ಇತಿಹಾಸದಲ್ಲಿ, ವ್ಯಾಪಕವಾದ ಹಾಗೂ ಸಾಮಾನ್ಯ ಅರ್ಥದಲ್ಲಿ ವ್ಯಕ್ತಪಡಿಸಿದ ಹಕ್ಕುಗಳಿಗೆ ಸಂಬಂಧಿಸಿದ ಸಿದ್ಧಾಂತವನ್ನಾಧರಿಸಿದ ಹಲವು ನಿರ್ಬಂಧಗಳನ್ನು ಮತ್ತು ಇತಿಮಿತಿಗಳನ್ನು ಕರಡು ಸಂವಿಧಾನದಲ್ಲಿ, ಆವಶ್ಯಕ ಪರಿಮಿತಿಗಳನ್ನು ಅರ್ಥೈಸಿತ್ತು. ಅರ್ಥೈಸಲು ನ್ಯಾಯಾಲಯಗಳಿಗೆ ಬಿಟ್ಟುಕೊಡುವ ಬದಲಿಗೆ ಇತಿಮಿತಿಗಳನ್ನು ಮತ್ತು ನಿರೀಕ್ಷೆಗಳನ್ನು ಒಂದು ಅಡಕವಾದ ರೂಪದಲ್ಲಿ ಸುವ್ಯವಸ್ಥಿತ ಸ್ಥಿತಿಯಲ್ಲಿ ಗುರುತಿಸಲಾದುದನ್ನು ಅಭಿವ್ಯಕ್ತಪಡಿಸಲು ನಿರೀಕ್ಷಿಸಲಾಗಿದೆ. ವೈಶಿಷ್ಟ್ಯಕ್ಕೆ ಅನುಸಾರವಾಗಿ ನ್ಯಾಯಾಂಗ ಶಾಸನದ ಮೂಲಕ ತಿಳಿಸುವುದಕ್ಕಾಗಿ, ಆವಶ್ಯಕ ಇತಿಮಿತಿಗಳನ್ನು ಅರ್ಥೈಸುವುದಕ್ಕಾಗಿ ನ್ಯಾಯಾಲಯಗಳಿಗೆ ಒಪ್ಪಿಸುವುದರಲ್ಲಿ ಅಪಾಯವಿದೆ ಎನ್ನುವುದನ್ನು ತಿರಸ್ಕರಿಸುವಂತಿಲ್ಲ ಮತ್ತು ವೈಯಕ್ತಿಕವಾಗಿ ಅದು ನ್ಯಾಯಾಧೀಶರನ್ನು ಪೂರ್ವಗ್ರಹ ಪೀಡಿತರನ್ನಾಗಿ ಮಾಡಬಹುದು.

ಅಲ್ಪಸಂಖ್ಯಾತರ ಸಮಸ್ಯೆಯನ್ನು ಸಂಬಂಧಪಟ್ಟ ಹಲವು ಪಕ್ಷಗಳಿಗೆ ತೃಪ್ತಿಯಾಗುವ ರೀತಿಯಲ್ಲಿ ಸಾಮಾನ್ಯ ಒಪ್ಪಂದದ ಮೂಲಕ ಪರಿಹರಿಸಬಹುದು. ಮತ್ತು ಕರಡು ಸಂವಿಧಾನವು ಮಾಡಿಕೊಂಡ ಒಪ್ಪಂದವನ್ನು ಪರಿಣಾಮಕಾರಿಯಾಗುವಂತೆ ಮಾಡಬಹುದು. ಈ ದಿನ ಬೆಳಗ್ಗೆ ನಮ್ಮ ಪ್ರಧಾನಮಂತ್ರಿಗಳು ಮಾಡಿದ ಭಾವಪೂರ್ಣ ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿದಂತೆ, ಶಿಸ್ತುಬದ್ಧ ಏಕತೆಯಿಂದ ಅಲ್ಪಸಂಖ್ಯಾತರಿಗಾಗಿ ಖಾಯಂ ಆಗಿ ರಾಷ್ಟ್ರದ ವಿಭಜನೆ ಆಗುತ್ತಿರಲಿಲ್ಲ. ಮಾಡಲೂ ಸಾಧ್ಯವಾಗುತ್ತಿರಲಿಲ್ಲ ಮತ್ತು ರಾಷ್ಟ್ರದ ಒಗ್ಗೂಡಿಸುವಿಕೆ ತಡೆಯುವ ಪ್ರವೃತ್ತಿಯಿಂದ ಏನು ಮಾಡುವುದಕ್ಕಾಗುತ್ತಿರಲಿಲ್ಲ.

ಮುಂದಿನ ವಿಮರ್ಶೆ ಎಂದರೆ, ಶ್ರೀಸಾಮಾನ್ಯನನ್ನು ಉಪೇಕ್ಷಿಸಲಾಗಿದೆ ಮತ್ತು ಸಂವಿಧಾನದಲ್ಲಿ ಯಾವುದೇ ಸಮಾಜವಾದದ ವಾಸನೆಯೇ ಇಲ್ಲ. ಮಾನ್ಯರೆ, ಸಂವಿಧಾನವು ದೇಶವನ್ನು ಯಾವುದೇ ಆರ್ಥಿಕ ಸ್ವರೂಪಕ್ಕೆ ಅಥವಾ ಸಾಮಾಜಿಕ ಹೊಂದಾಣಿಕೆಗೆ ಬದ್ಧಗೊಳಿಸದಿದ್ದರೆ, ಯಾವುದೇ ಆರ್ಥಿಕ ವ್ಯವಸ್ಥೆಯಲ್ಲಿ ತೊಡಗಲು ಮತ್ತು ಸಾರ್ವಜನಿಕ ಹಿತಾಸಕ್ತಿಯಿಂದ ಅವು ಆಯ್ಕೆಮಾಡಿಕೊಳ್ಳುವ ಯಾವುದೇ ಶಾಸನವನ್ನು

ಅನುಷ್ಠಾನಗೊಳಿಸಲು, ಭಾವಿ ಶಾಸನಸಭೆಗಳು ಮತ್ತು ಭಾವಿ ಸಂಸತ್ತಿಗೆ ಯಥೇಚ್ಛ ಅವಕಾಶಗಳನ್ನು ಕೊಡುತ್ತದೆ.
ಈ ಸಂಬಂಧವಾಗಿ ಸಾಮಾಜಿಕ ನೀತಿಯ ನಿರ್ದೇಶಕ ತತ್ತ್ವಗಳಾಗಿರುವ ಅನೇಕ ಅನುಚ್ಛೇದಗಳಿಗೆ ಯಾವುದೇ
ಪ್ರಾಧಾನ್ಯ ಮತ್ತು ಮಹತ್ತ್ವ ಇಲ್ಲ. ಅವು ಇರುವ ರೀತಿಯಲ್ಲಿ ಅವುಗಳನ್ನು ಕಾನೂನು ನ್ಯಾಯಾಲಯದಲ್ಲಿ
ಸಮರ್ಥಿಸಲಾಗದು ಅಥವಾ ಜಾರಿಗೊಳಿಸಬಹುದಾದ ಕಾನೂನುಬದ್ಧ ಹಕ್ಕುಗಳಾಗಲಾರವು, ೨೯ನೇ
ಅನುಚ್ಛೇದದಲ್ಲಿ ಹೇಳಿರುವಂತೆ ಅವು ದೇಶದ ಆಡಳಿತದಲ್ಲಿ ಮೂಲಭೂತ ವಿಷಯಗಳಿಗಿಂತ ಕಡಿಮೆ ಏನಲ್ಲ
ಮತ್ತು ಕಾನೂನುಗಳನ್ನು ರಚಿಸುವಾಗ ಈ ತತ್ತ್ವಗಳನ್ನು ಅನ್ವಯಿಸುವುದು ರಾಜ್ಯದ ಕರ್ತವ್ಯವಾಗಿದೆ. ಸಾರ್ವತ್ರಿಕ
ಮತದಾನದ ಆಧಾರದ ಮೇಲೆ ಚುನಾಯಿತವಾದ ಯಾವುದೇ ಜವಾಬ್ದಾರಿ ಸರ್ಕಾರವು ಅಥವಾ ಯಾವುದೇ
ರಾಜ್ಯದ ಶಾಸನಸಭೆಯು ಈ ತತ್ತ್ವಗಳನ್ನು ಉಪೇಕ್ಷಿಸಬಹುದು ಅಥವಾ ಉಪೇಕ್ಷಿಸುತ್ತದೆ ಎಂದು ಸಲಹೆ
ಮಾಡುವುದು ವ್ಯರ್ಥ.

ಕರಡು ಸಂವಿಧಾನದಲ್ಲಿನ ಹಣಕಾಸು ಉಪಬಂಧಗಳು, ನನ್ನ ಗೌರವಾನ್ವಿತ ಮಿತ್ರ ಶ್ರೀ ಟಿ.ಟಿ. ಕೃಷ್ಣಮಾಚಾರಿ
ಯವರಿಂದ ಪ್ರಬಲವಾದ ಟೀಕೆಗೊಳಗಾಗಿವೆ. ಫೆಡರಲ್ ಸರ್ಕಾರದ ಸರಿಯಾದ ಕಾರ್ಯನಿರ್ವಹಣೆಗೆ
ಆದಾಯದ ಸ್ವತಂತ್ರ ಮೂಲ ಅಥವಾ ಮೂಲಗಳು, ಖಂಡಿತವಾಗಿಯೂ ಆವಶ್ಯಕವಾಗಿರುವಾಗ, ಅನೇಕ
ಫೆಡರೇಷನ್‌ಗಳಲ್ಲಿ ತೆರಿಗೆ ಹಾಕುವ ಏಜೆನ್ಸಿಯಾಗಿ ಕಾರ್ಯನಿರ್ವಹಿಸುವ ಕೇಂದ್ರ ಸರ್ಕಾರವು, ವರಮಾನಗಳಲ್ಲಿ
ಪಾಲು ತೆಗೆದುಕೊಳ್ಳುವ ಘಟಕಗಳಿಗೆ ಅದೇ ರೀತಿ ಸಹಾಯಧನವನ್ನು ನೀಡುತ್ತಿರುವ ಕೇಂದ್ರ ಅಥವಾ
ರಾಷ್ಟ್ರೀಯ ಸರ್ಕಾರಕ್ಕೆ ಸಾಕಷ್ಟು ಅವಕಾಶ ಕಲ್ಪಿಸಲು ಗಮನ ಹರಿಸುವ ವಿಶಿಷ್ಟ ಪ್ರವೃತ್ತಿ ಇದೆ. ತೆರಿಗೆ ಹಾಕುವ
ಏಜೆನ್ಸಿ ಯಾವುದೇ ಇರಲಿ, ಹಾಗೆ ಪಾವತಿ ಮಾಡುವವನು, ಒಬ್ಬ ನಾಗರಿಕ ಅಥವಾ ಒಂದು ಕಾರ್ಪೊರೇಷನ್
ಎಂಬುದನ್ನು ಮರೆಯಲಾಗದು ಮತ್ತು ತೆರಿಗೆ ಹಾಕುವ ಏಜೆನ್ಸಿಗಳ ಸಂಖ್ಯೆ ನಾಗರಿಕರಿಗೆ ಅನುಕೂಲವಾದ
ವಿಷಯವೇನಲ್ಲ. ಸದ್ಯದ ದೇಶದ ಅನಿಶ್ಚಿತ ಪರಿಸ್ಥಿತಿಯಲ್ಲಿ ಇಡೀ ಹಣಕಾಸು ಸ್ವರೂಪವನ್ನು ಸರಿಪಡಿಸಲು
ಸಾಧ್ಯವಾಗುವುದೇ ಮತ್ತು ಸಂಪೂರ್ಣ ಹೊಸ ಮಾರ್ಗದಲ್ಲಿ ಹಣದ ಪುನರ್‌ಹಂಚಿಕೆಗೆ ಯತ್ನಿಸಬೇಕೆ
ಎಂಬುದರ ಬಗ್ಗೆ ಸಂಶಯವಿದೆ. ಆದುದರಿಂದಲೇ ಹತ್ತು ವರ್ಷಗಳ ಕೊನೆಯಲ್ಲಿ ಹಣಕಾಸು ಆಯೋಗದ
ರಚನೆಗೆ ಕಲ್ಪಿಸಲಾಗಿದೆ, ಬಹುಶಃ ಕರಡು ದೋಷಪೂರ್ಣವಾಗಿದೆ. ಎಂದರೆ ಅದರಲ್ಲಿ ಸಂವಿಧಾನ ತಿದ್ದುಪಡಿಗಳಿಗೆ
ಸಂಬಂಧಿಸಿದಂತೆ ಪ್ರಕ್ರಿಯೆಯನ್ನು ಅವಲಂಬಿಸದೇ ಹಣಕಾಸು ಆಯೋಗದ ಶಿಫಾರಸುಗಳ ಬೆಳಕಿನಲ್ಲಿ
ಹಣಕಾಸು ವಿಷಯಗಳಿಗೆ ಸಂಬಂಧಿಸಿದ ವಿಷಯವಾಗಿ ಪಟ್ಟಿಗಳ ಪುನರ್‌ವ್ಯವಸ್ಥೆಗೆ ವಿಶೇಷ ಅವಕಾಶ
ಮಾಡಲಾಗಿಲ್ಲ.

ಫೆಡರಲಿಸಂ ಕುರಿತ ಇತ್ತೀಚಿನ ತಮ್ಮ ಪ್ರಕರಣ ಗ್ರಂಥದಲ್ಲಿ, ತೆರಿಗೆ ವಿಧಿಸುವ ವಿಷಯವಾಗಿ, ಪ್ರಾಧ್ಯಾಪಕ
ವ್ಹಿಯರ್ ಅವರು ಕೆಳಗಿನ ಅಭಿಪ್ರಾಯಗಳನ್ನು ನೀಡಿದ್ದಾರೆ :

"ಫೆಡರಲ್ ವ್ಯವಸ್ಥೆಯಲ್ಲಿ ಆರ್ಥಿಕ ಸಂಪನ್ಮೂಲಗಳ ಹಂಚಿಕೆಯಲ್ಲಿ ಯಾವುದೇ ಅಂತಿಮ ಪರಿಹಾರವಿರುವುದಿಲ್ಲ.
ಬದಲಾಗುತ್ತಿರುವ ಸಂದರ್ಭಗಳ ಹಿನ್ನೆಲೆಯಲ್ಲಿ ಕೇವಲ ಒಂದು ಹೊಂದಾಣಿಕೆ ಮತ್ತು ಪುನರ್‌ಹಂಚಿಕೆ ಇರಬಹುದು."

ಸಂವಿಧಾನವು ತುಂಬ ವಿವರಗಳಿಂದ ಕೂಡಿ ವಿಸ್ತೃತವಾಗಿದೆ ಹಾಗೂ ಯಾವುದೇ ಇತರ ತಿಳಿದ
ಸಂವಿಧಾನಕ್ಕಿಂತ ಹೆಚ್ಚು ಅನುಚ್ಛೇದಗಳನ್ನೊಳಗೊಂಡಿದೆ ಎಂಬ ಟೀಕೆಗಳು ಬಂದಿವೆ. ನಾವು, ಕ್ರಾಂತಿಯ
ಅನಂತರ ಸಂವಿಧಾನವನ್ನು ಹೊಸದಾಗಿ ಆರಂಭಿಸುತ್ತಿಲ್ಲ ಎಂಬ ಅಂಶವನ್ನು ಹಾಗೆ ಟೀಕೆ ಮಾಡುವವರು
ಗಣನೆಗೆ ತೆಗೆದುಕೊಂಡಿಲ್ಲ. ಬಹುಕಾಲದಿಂದ ಕಾರ್ಯರೂಪದಲ್ಲಿರುವ ಹಾಲಿ ಆಡಳಿತ ಸ್ವರೂಪವನ್ನು
ಹೊಸ ಚೌಕಟ್ಟಿನಲ್ಲಿ ಒಟ್ಟಾರೆ ಉಪೇಕ್ಷಿಸಲಾಗದು. ಎರಡನೇ ಅಂಶವೆಂದರೆ, ಇತರ ಸಂವಿಧಾನಗಳಲ್ಲಿ ಇಲ್ಲದ
ಅಂಶಗಳನ್ನು, ಕರಡು ಸಂವಿಧಾನವು, ಒಳಗೊಂಡಿದೆ, ಎಂದರೆ ಸರ್ವೋಚ್ಚನ್ಯಾಯಾಲಯದ ಮತ್ತು
ಉಚ್ಚನ್ಯಾಯಾಲಯಗಳ ರಚನೆ ಮತ್ತು ಅಧಿಕಾರ ಕುರಿತು ವಿವರವಾದ ಉಪಬಂಧಗಳನ್ನು ಹಾಗೂ ಘಟಕಗಳ

ರಚನೆಗೆ ಸಂಬಂಧಿಸಿದ ಉಪಬಂಧಗಳನ್ನು ಒಳಗೊಂಡಿದೆ ಎಂಬುದನ್ನು ಟೀಕೆ ಮಾಡುವವರು ಗಮನಿಸಿಲ್ಲ. ನಾವು ಎಲ್ಲ ಈ ಅನುಚ್ಛೇದಗಳನ್ನು ಕೈ ಬಿಡುವುದಾದರೆ, ನಮ್ಮ ಸಂವಿಧಾನವು ಕೂಡ ಸರಳವಾಗಿಯೂ ಚಿಕ್ಕದಾಗಿಯೂ ಇರಬಹುದು.

ನ್ಯಾಯಾಂಗ ಕುರಿತಂತೆ, ಕರಡು ಸಂವಿಧಾನವು ಪ್ರಜಾಪ್ರಭುತ್ವದ ಸೂಕ್ತ ಅನುಷ್ಠಾನ ಮತ್ತು ಅದರಲ್ಲೂ ವಿಶೇಷವಾಗಿ ಫೆಡರಲ್ ಸಂವಿಧಾನದ ಕಾರ್ಯಕ್ಕಾಗಿ, ಸ್ವತಂತ್ರ ನ್ಯಾಯಾಂಗದ ಮಹತ್ತ್ವವನ್ನು ಗುರುತಿಸಿದೆ. ಕರಡು ಸಂವಿಧಾನದಡಿ ಸರ್ವೋಚ್ಚನ್ಯಾಯಾಲಯವು, ವಿಶ್ವದ ಯಾವುದೇ ಒಕ್ಕೂಟ ವ್ಯವಸ್ಥೆಯ ಅಡಿ ಯಾವುದೇ ಇತರ ನ್ಯಾಯಾಲಯಕ್ಕಿಂತ ವ್ಯಾಪಕ ಅಧಿಕಾರಗಳನ್ನು ಹೊಂದಿದೆ.

ಸಂವಿಧಾನದಲ್ಲಿ ಯಾವುದೇ ಇತರ ಉಪಬಂಧಕ್ಕಿಂತ ಹೆಚ್ಚಾಗಿ, ಈ ಸಭೆಯು ಜನಸಾಮಾನ್ಯರಲ್ಲಿ ನಂಬಿಕೆ ಇಟ್ಟು, ದೇಶದ ಭವಿಷ್ಯವನ್ನು ರೂಪಿಸುವುದಕ್ಕಾಗಿ ಸಾರ್ವತ್ರಿಕ ವಯಸ್ಕಮತದಾನ ಪದ್ಧತಿಯ ವಿಷಯದಲ್ಲಿ ಅತ್ಯಂತ ಧೈರ್ಯದ ಕ್ರಮ ಕೈಕೊಂಡಿದೆ ಎಂದು ಭಾವಿಸುತ್ತೇನೆ. ಈ ವ್ಯವಸ್ಥೆಯ ಸುಸೂತ್ರ ಕಾರ್ಯನಿರ್ವಹಣೆಗಾಗಿ, ಸೂಕ್ತ ಮತದಾರ ಪಟ್ಟಿಗಳ ತಯಾರಿಕೆ ಹಾಗೂ ಭಾರತದ ವಿವಿಧ ಭಾಗಗಳಲ್ಲಿ ಅಳವಡಿಸಲಾಗುತ್ತಿರುವ ಏಕರೂಪ ತತ್ತ್ವವನ್ನು ರೂಪಿಸುವ ವಿಷಯದಲ್ಲಿ ತುಂಬ ಜಾಗ್ರತೆ ತೆಗೆದುಕೊಳ್ಳಲಾಗುತ್ತಿಲ್ಲ. ನನ್ನ ಮಿತ್ರ ಗೌರವಾನ್ವಿತ ಶ್ರೀ ಸಂತಾನಮ್ ಅವರು ನಿನ್ನೆ ತಮ್ಮ ಭಾಷಣಕಾಲದಲ್ಲಿ ಮಾಡಿದ ಸಲಹೆಗಳನ್ನು ಬಗ್ಗೆ ಸದನವು ಪರಿಗಣನೆಗಾಗಿ ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

ಸಂವಿಧಾನವನ್ನು ಕಡೆಯದಾಗಿ ಸ್ವೀಕರಿಸುವ ಮೊದಲು, ನಾಗರಿಕತ್ವ, ಹೊಸ ರಾಜ್ಯಗಳ ರಚನೆ ಮತ್ತು ಸರ್ದಾರ್ ಅವರ ಸಮರ್ಥ ನಾಯಕತ್ವದಲ್ಲಿ ತತ್ತ್ವ ಮತ್ತು ಮಾರ್ಗದರ್ಶನಗಳ ಅಡಿಯಲ್ಲಿ ಒಟ್ಟುಗೂಡಿಸಿ ವರ್ಗೀಕರಿಸಿದ ಭಾರತೀಯ ರಾಜ್ಯಗಳ ಸ್ಥಿತಿ ಇಂಥ ವಿಷಯಗಳನ್ನು ಕುರಿತಂತೆ ನಿಕಟ ಮತ್ತು ವಿಮರ್ಶಾತ್ಮಕ ಪರೀಕ್ಷೆಯ ಅಗತ್ಯವಿರುವ ಇತರ ವಿಷಯಗಳಿವೆ. ಸಂವಿಧಾನ ರಚನಾಸಭೆಯಲ್ಲಿ ಪ್ರತಿನಿಧಿಸಿಲ್ಲದಿರುವ ರಾಜ್ಯಗಳ ಸ್ಥಿತಿಯನ್ನು ಕೂಡ ಪರಿಗಣಿಸಬೇಕಾಗಿದೆ ಮತ್ತು ಸಂವಿಧಾನ ಪೂರ್ಣಗೊಳ್ಳುವ ಮೊದಲು ಆ ಬಗ್ಗೆ ಪರಿಗಣಿಸಬೇಕಾಗಿದೆ, ಇಲ್ಲದಿದ್ದರೆ ಈ ರಾಜ್ಯಗಳ ಹಾಗೂ ಭಾರತದ ಒಕ್ಕೂಟಕ್ಕೆ ಸಂಬಂಧಿಸಿದ ವಿಷಯದಲ್ಲಿ ಕಾನೂನು ಜಟಿಲತೆ ಪ್ರಶ್ನೆಗಳು ಉದ್ಭವಿಸಬಹುದು.

ಚರ್ಚೆಯ ಕಾಲದಲ್ಲಿ ಅವಲೋಕಿಸಬೇಕಾದ ಎರಡು ಇತರ ವಿಷಯಗಳಿವೆ. ಇವು ಸರ್ಕಾರದಲ್ಲಿ ನಿಹಿತವಾದ ತುರ್ತುಅಧಿಕಾರಗಳು ಹಾಗೂ ಸುಗ್ರೀವಾಜ್ಞೆ ಮಾಡುವ ಅಧಿಕಾರಕ್ಕೆ ಸಂಬಂಧಿಸಿವೆ. ಈ ಸಂಬಂಧದಲ್ಲಿ ನೆನಪಿಡಬೇಕಾದ ಒಂದು ಅಂಶವೆಂದರೆ ರಾಷ್ಟ್ರಪತಿಗಳು ಚಲಾಯಿಸುವ ಯಾವುದೇ ಅಧಿಕಾರವು, ಅವರ ಸ್ವಂತ ಜವಾಬ್ದಾರಿಯ ಮೇಲೆ ಚಲಾಯಿಸುವಂಥದ್ದಾಗಿರತಕ್ಕದ್ದಲ್ಲ. 'ರಾಷ್ಟ್ರಪತಿ' ಎಂಬ ಪದವನ್ನು ಸಂವಿಧಾನದಲ್ಲಿ ಬಳಸಿರುವುದು, ಶಾಸನಸಭೆಗೆ ಜವಾಬ್ದಾರಿಯಾದ ಬಾಹ್ಯರಚನೆಯಾಗಿ ಮಾತ್ರ ನಿಲ್ಲುತ್ತದೆ ಅಥವಾ ಅದು ಸುಗ್ರೀವಾಜ್ಞೆ ಆಗಿರಲಿ ಅಥವಾ ತುರ್ತುಅಧಿಕಾರ ಬಳಸುವುದಾಗಿರಲಿ ಸಚಿವಸಂಪುಟವು ಜನಪ್ರಿಯವಾಗಿ ಚುನಾಯಿಸಲಾದ ಸದನಕ್ಕೆ ಜವಾಬ್ದಾರಿಯಾಗಿರುತ್ತದೆ. ಕಳೆದ ಚರ್ಚೆಯ ಕಾಲದಲ್ಲಿ ಪ್ರತಿನಿಧಿಗಳು–ಎಂದುದನ್ನು ಸಹ ನೆನೆಪಿಡಬೇಕು.

**ಪ್ರೊ. ಎನ್.ಜಿ. ರಂಗಾ** (ಮದ್ರಾಸ್ : ಸಾಮಾನ್ಯ) : ಸದನದಲ್ಲಿ ತುಂಬ ಗದ್ದಲವಿದೆ. ಸದನದ ಆ ಮೂಲೆಯಲ್ಲಿ ಇನ್ನೊಂದು ಚರ್ಚೆ ನಡೆಯುತ್ತಿರುವಂತಿದೆ.

**ಮಾನ್ಯ ಉಪಸಭಾಧ್ಯಕ್ಷರು** : ದಯವಿಟ್ಟು, ಸದನದಲ್ಲಿ ಶಿಸ್ತು ಇರಲಿ.

**ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್** : ಕಳೆದ ಚರ್ಚೆಯಲ್ಲಿ, ತುರ್ತುಪರಿಸ್ಥಿತಿ ಅಧಿಕಾರಗಳು ಇರಬೇಕು ಎಂಬುದರ ಬಗ್ಗೆ ಇತರ ಯಾರಿಗಿಂತಲೂ ಸಚಿವರೂ ಸೇರಿದಂತೆ ಪ್ರಾಂತ್ಯಗಳ ಪ್ರತಿನಿಧಿಗಳು ಹೆಚ್ಚು ಕಾತರರಾಗಿದ್ದರು ಎಂದು ನಾನು ಹೇಳಬಹುದಾಗಿದೆ. ಯಾರು ಈ ತುರ್ತುಪರಿಸ್ಥಿತಿ ಅಧಿಕಾರಗಳು ತಮಗೆ

ಬೇಕೆಂದು ಬಯಸುತ್ತಾರೋ, ಅವರು ಆಡಳಿತದ ವಾಸ್ತವಿಕ ಅನುಷ್ಠಾನಕ್ಕೆ ಮನ್ನಣೆ ನೀಡಿದವರಾಗಿರುತ್ತಾರೆ. ತುರ್ತುಅಧಿಕಾರವನ್ನು ಹೇಗೆ ನಿಖರವಾಗಿ ನೀಡಬೇಕು, ಯಾವುದೇ ಒದಲಾವಣೆಗಳ ಆವಶ್ಯಕತೆ ಇದೆಯೇ; ಈ ಎಲ್ಲವೂ ಇನ್ನೊಂದು ವಿಷಯ. ಸುಗ್ರೀವಾಜ್ಞೆ ಹೊರಡಿಸುವ ಅಧಿಕಾರ ಕುರಿತಂತೆ, ಶಾಸನಸಭೆಯು ಅಧಿವೇಶನದಲ್ಲಿ ಇಲ್ಲದಿದ್ದಾಗ ಸಾಮಾನ್ಯವಾಗಿ ಅಧ್ಯಾದೇಶ ಹೊರಡಿಸಲಾಗುತ್ತದೆ. ವಿಧಾನಮಂಡಲವು ಅಧಿವೇಶನದಲ್ಲಿದ್ದರೆ, ಸಾರ್ವತ್ರಿಕ ವಯಸ್ಕಮತದಾನದ ಮೇರೆಗೆ ಚುನಾಯಿತರಾದ ಪ್ರತಿನಿಧಿಗಳಿಗೆ ನ್ಯಾಯೋ ಟಿಕೆಟ್ ಮೇಲೆ ಚುನಾಯಿತರಾದ ಈ ಸದನದ ಸದಸ್ಯರನ್ನು ಹೋಲಿಸಲಾಗಿ ಅವರು ತಮ್ಮ ಹಕ್ಕುಗಳ ಬಗ್ಗೆ ಅಷ್ಟೇನೂ ಒತ್ತಾಯಿಸುವುದಿಲ್ಲವೆಂದು ಭಾವಿಸಿದ್ದೇನೆ.

ಕರಡು ಸಂವಿಧಾನದ ಒಂದು ಸಂಕ್ಷಿಪ್ತ ಸಮೀಕ್ಷೆಯಿಂದ, ಸದಸ್ಯರನ್ನು ಅದು ಪ್ರಜಾಪ್ರಭುತ್ವ ಸರ್ಕಾರದ ಸುಭದ್ರ ತತ್ತ್ವಗಳನ್ನಾಧರಿಸಿದೆ ಎಂಬುದನ್ನು ಮತ್ತು ಬೆಳವಣಿಗೆಗೆ ಮತ್ತು ವಿಸ್ತರಣೆಗೆ ಆವಶ್ಯಕವಿರುವ ಅಂಶಗಳನ್ನು ಅದು ಒಳಗೊಂಡಿದೆ ಎಂಬುದನ್ನು ಮತ್ತು ವಿಶ್ವದ ಅತ್ಯಾಧುನಿಕ ಪ್ರಜಾಪ್ರಭುತ್ವದ ಸಂವಿಧಾನಕ್ಕೆ ಸರಿಸಮವಾಗಿದೆ ಎಂಬುದನ್ನು ಸದಸ್ಯರಿಗೆ ಮನಗಾಣಿಸಬೇಕು. ನಾವೇ ಸಿದ್ಧಪಡಿಸಿರುವ ಸಂವಿಧಾನ ಇದಾಗಿದೆ ಎಂಬುದನ್ನು ನೆನಪಿನಲ್ಲಿಡುವುದು ಒಳ್ಳೆಯದು. ಇದರ ಅತ್ಯುತ್ತಮ ಉದಾಹರಣೆ ಅಮೆರಿಕ ಸಂಯುಕ್ತ ಸಂಸ್ಥಾನಗಳ ಸಂವಿಧಾನ ಎಂದು ಬರುತ್ತದೆ; ಅದನ್ನು ವಿವಿಧ ರಾಜ್ಯಗಳು ಅಂತಿಮವಾಗಿ ಅಳವಡಿಸಿಕೊಂಡಾಗ ಅಷ್ಟೇನೂ ಉತ್ಸಾಹದಿಂದ ಸ್ವೀಕರಿಸಿರಲಿಲ್ಲ, ಅದಕ್ಕೆ ಸಮಯ ಪರೀಕ್ಷೆ ಎದುರಿಸಿದಾಗ ಪ್ರಜಾಪ್ರಭುತ್ವ ಜಗತ್ತಿನ ಸಂವಿಧಾನಗಳಲ್ಲಿಯೇ ಇದು ಒಂದು ಮಾದರಿ ಸಂವಿಧಾನ ಎಂಬ ಮನ್ನಣೆ ಪಡೆದಿದೆ.

**ಶ್ರೀ ಕೆ. ಹನುಮಂತಯ್ಯ** (ಮೈಸೂರು) : ಮಾನ್ಯ ಉಪಸಭಾಧ್ಯಕ್ಷರೆ, ಡಾ. ಅಂಬೇಡ್ಕರ್ ಅವರು ಭಾರತೀಯ ರಾಜ್ಯಗಳಿಗೆ ಸಂಬಂಧಿಸಿದಂತೆ ಉಲ್ಲೇಖ ಮಾಡಿದ್ದಾರೆ ಮತ್ತು ಘಟಕಗಳಿಗೆ ಸಂಬಂಧಿಸಿದಂತೆ ಪ್ರಾಂತ್ಯಗಳು ಮತ್ತು ರಾಜ್ಯಗಳ ನಡುವೆ ಸಂವಿಧಾನಾತ್ಮಕ ಸ್ವರೂಪದಲ್ಲಿ ಯಾವುದೇ ವ್ಯತ್ಯಾಸವಿರಬಾರದು ಎಂದು ಮನವಿ ಮಾಡಿದ್ದಾರೆ. ಮೊದಲ ಬಾರಿಯಾದರೂ ಅಂತಹ ಅಭಿಪ್ರಾಯ ಕೊಟ್ಟಿರುವುದಕ್ಕೆ ನನಗೆ ಸಂತೋಷವಾಗಿದೆ. ಇಲ್ಲಿಯವರೆಗೆ, ಪ್ರತಿಯೊಂದು ರಾಜ್ಯವೂ ತನ್ನದೇ ಆದ ಸಂವಿಧಾನ ರಚನಾಸಭೆಯನ್ನು ರಚಿಸಿಕೊಳ್ಳಲು ಅವಕಾಶ ನೀಡಲಾಗಿತ್ತು ಮತ್ತು ರಾಜ್ಯಗಳ ಒಕ್ಕೂಟಗಳೂ ತಮ್ಮದೇ ಆದ ಸಂವಿಧಾನಗಳನ್ನು ರಚಿಸಿಕೊಳ್ಳುವ ಉದ್ದೇಶಕ್ಕಾಗಿ ಸಂವಿಧಾನ ರಚನಾಸಭೆಗಳನ್ನು ಕರೆಯಲು ಸಹ ಅನುಮತಿಸಲಾಗಿತ್ತು ನಾವು ಹಲವಾರು ರಾಜ್ಯಗಳಲ್ಲಿ ಮತ್ತು ರಾಜ್ಯಗಳ ಒಕ್ಕೂಟಗಳಲ್ಲಿ ಸಂವಿಧಾನ ರಚನಾಸಭೆ ಕರೆದು ತಮ್ಮದೇ ಆದ ಸಂವಿಧಾನವನ್ನು ರಚಿಸಿಕೊಳ್ಳಲು ಸ್ವತಂತ್ರವಾಗಿವೆಯೇ ಹಾಗೂ ಅವು ಭಾರತೀಯ ಸಂವಿಧಾನಕ್ಕೆ ಅನುರೂಪವಾಗಿ ಇದೆಯೇ ಅಥವಾ ಇಲ್ಲವೇ ಎಂದು ಅಚ್ಚರಿಪಡುತ್ತಿದ್ದೆವು. ಅಪೇಕ್ಷಿತ ಗುರಿ ಸಾಧಿಸಲು ಕೆಲವು ಮಾರ್ಗಗಳನ್ನು ನಾನು ಸಲಹೆ ಮಾಡಬಯಸುತ್ತೇನೆ.

ಮಾನ್ಯರೆ, ಮೈಸೂರಿನಲ್ಲಿ ಸಂವಿಧಾನ ರಚನಾಸಭೆಯು, ಅದರ ಕೆಲಸದ ಬಹುತೇಕ ಅರ್ಧದಷ್ಟು ಮಾಡಿದೆ ಮತ್ತು ಅದು ಕರಡು ರಚನಾಸಮಿತಿಯನ್ನು ನೇಮಕಮಾಡಲು ಸಿದ್ಧವಾಗಿದ್ದಾಗ, ಅದು ಅಂತಿಮ ತೀರ್ಮಾನಗಳಿಗೆ ಬರುವ ಮೊದಲು, ರಾಜ್ಯಗಳಲ್ಲಿನ ಇತರ ಸಭೆಗಳ ಅಭಿಪ್ರಾಯಗಳು ಮತ್ತು ಗೌರವಾನ್ವಿತ ಈ ಸದನದ ಅಭಿಪ್ರಾಯವು ಕೂಡಾ ತುಂಬಾ ಮೌಲ್ಯವುಳ್ಳದ್ದು ಆಗಿರಬಹುದು ಎಂದು ಯೋಚಿಸಿತು. ಆದುದರಿಂದ ಅದು ಐದು ಸದಸ್ಯರ ಒಂದು ಸಮಿತಿಯನ್ನು ಇತರ ರಾಜ್ಯಗಳ ಪ್ರತಿನಿಧಿಗಳೊಂದಿಗೆ ಮತ್ತು ಸಾಧ್ಯವಾದರೆ ಈ ಸದನದೊಂದಿಗೆ ಕೂಡ ಸಂಪರ್ಕದಲ್ಲಿರಲು ನೇಮಿಸಿದೆ. ಸಮಿತಿಯು ಸಿಬ್ಬಂದಿಯನ್ನು ಘೋಷಿಸಿತು. ಈ ಸದನದಲ್ಲಿ ರಾಜ್ಯಗಳನ್ನು ಪ್ರತಿನಿಧಿಸುವ ಸದಸ್ಯರು ಅಧಿಕೃತವಾಗಿ ಅಥವಾ ಅನಧಿಕೃತವಾಗಿ ಪ್ರತ್ಯೇಕವಾಗಿ ಕುಳಿತು ಈ ಸದನಕ್ಕೆ ಮತ್ತು ದೇಶಕ್ಕೆ ಸಮ್ಮತವಾಗಬಲ್ಲ ಒಂದು ನೀತಿಯನ್ನು ರೂಪಿಸಲಾಗುವುದೆಂದು ಎಂದು ನಾನು ಆಶಿಸುತ್ತೇನೆ. ಬೇರೆ ಬೇರೆ ರಾಜ್ಯಗಳ ಮತ್ತು ರಾಜ್ಯಗಳ ಒಕ್ಕೂಟಗಳ ಸಂವಿಧಾನ ರಚನಾಸಭೆಗಳು

ನಿಸ್ಸಂಶಯವಾಗಿ ಈ ಸದನದಲ್ಲಿನ ರಾಜ್ಯಗಳ ಪ್ರತಿನಿಧಿಗಳು ಕೊಡಬಹುದಾದ ಸಲಹೆಯನ್ನು ತೆಗೆದುಕೊಳ್ಳುವರು. ಆದರೆ ನಾನು ಸ್ಪಷ್ಟಪಡಿಸಲು ಇಷ್ಟಪಡುವ ಮಾರ್ಗದಲ್ಲಿ ಕೆಲವು ಅಡೆತಡೆಗಳಿವೆ.

ಮಾನ್ಯರೆ, ತಾವು ತಿಳಿದಂತೆ ರಾಜ್ಯಗಳು ಬ್ರಿಟಿಷ್ ಆಡಳಿತದಲ್ಲಿ ಕೂಡ ಪ್ರಾಂತ್ಯಗಳು ಸ್ವಲ್ಪಮಟ್ಟಿಗೆ ಸ್ವಾಯತ್ತತೆಯನ್ನು ಅನುಭವಿಸಲು ಅವಕಾಶಮಾಡಿದ್ದರೂ, ಪ್ರಾಂತ್ಯಗಳು ಇದಕ್ಕಿಂತ ಹೆಚ್ಚಿನ ಸ್ವಾಯತ್ತತೆಯನ್ನು ಅನುಭವಿಸುತ್ತಿದ್ದವು ಮತ್ತು ಆ ಸ್ವಾಯತ್ತತೆಯನ್ನು ಎಂದೂ ದುರುಪಯೋಗಮಾಡಿಕೊಂಡಿರಲಿಲ್ಲ ಎಂದು ಹೇಳಬಹುದು. ಪ್ರತಿಯೊಂದು ರಾಜ್ಯವು ಅದರ ಸ್ವಾಯತ್ತತೆ ಎಷ್ಟೇ ಇರಲಿ, ಹೃದಯದಲ್ಲಿ ಭಾರತದ ಹಿತವನ್ನು ಯಾವಾಗಲೂ ಹೊಂದಿತ್ತು ಮತ್ತು ಅದಕ್ಕೆ ಅನುಗುಣವಾಗಿ ವರ್ತಿಸಿತು. ಒಕ್ಕೂಟದ ಘಟಕಗಳು ಅವು ಈಗ ಇರುವಂತೆ ತಮ್ಮ ವ್ಯವಹಾರಗಳನ್ನು ಚೆನ್ನಾಗಿ ಮತ್ತು ದಕ್ಷತೆಯಿಂದ ನಿರ್ವಹಿಸುತ್ತವೆ ಎಂದು ಕರಡಿನಲ್ಲಿ ಹೇಳಿದಂತೆ ಅವುಗಳಿಗೆ ಇನ್ನು ಸಾಕಷ್ಟು ಸ್ವಾಯತ್ತತೆ ಇರಲಾರದೆಂದು ರಾಜ್ಯಗಳ ಜನರಾದ ನಾವು ಭಾವಿಸುತ್ತೇವೆ. ಕರಡಿನಲ್ಲಿ ಹೇಳಿರುವಂತೆ–ನಾನು ಡಾ. ಅಂಬೇಡ್ಕರ್ ಅವರಿಗಿಂತ ಭಿನ್ನವಾದ ಅಭಿಪ್ರಾಯ ತಿಳಿಸಬೇಕಾಗಿದೆ ಎಂದರೆ, ಅದು ಅತಿಯಾದ ಕೇಂದ್ರೀಕೃತ ವ್ಯವಸ್ಥೆಯಾಗಿದೆ. ಅದು ವಾಸ್ತವಿಕವಾಗಿ ಭಾರತೀಯ ಒಕ್ಕೂಟವನ್ನು, ಏಕೀಕೃತ ಪ್ರಭುತ್ವದ ದೇಶವಾಗುವಂತೆ ಮಾಡುತ್ತದೆ ಮತ್ತು ಫೆಡರಲ್ ರಾಷ್ಟ್ರವಾಗಿ ಅಲ್ಲ. ಕೇಂದ್ರವನ್ನು ಬಲಗೊಳಿಸುವ ತಮ್ಮ ಕಾತರದಲ್ಲಿ, ಅವರು ಕೇಂದ್ರಕ್ಕೆ ಅತಿ ಹೆಚ್ಚು ಶಾಸನಾತ್ಮಕ ಮತ್ತು ಹಣಕಾಸು ಅಧಿಕಾರಗಳನ್ನು ನೀಡಿದ್ದಾರೆ ಹಾಗೂ ಪ್ರಾಂತ್ಯಗಳು ಮತ್ತು ರಾಜ್ಯಗಳನ್ನು, ಅವು ಕೇವಲ ಒಂದು ಪ್ರಾಂತ್ಯದ ಜಿಲ್ಲೆಗಳು ಎಂಬಂತೆ ನೋಡಿರುವರು, ಈ ಪ್ರವೃತ್ತಿಯಿಂದಾಗಿ ಕೇಂದ್ರದ ಸಾಮರ್ಥ್ಯ ಎಂದು ಕರೆಯಲಾಗುವಂಥ ವ್ಯವಸ್ಥೆ ನಿರ್ಮಾಣವಾಗುವುದೆಂದು ನನಗೆ ಭಯವಾಗಿದೆ. ಇಂಪೀರಿಯಲ್ ಸಚಿವಾಲಯದಲ್ಲಿ ಕಡತಗಳನ್ನು ಸಂಗ್ರಹಿಸುವುದರಿಂದ ಮಾತ್ರವೇ ಕೇಂದ್ರವನ್ನು ಬಲಪಡಿಸಿದಂತಾಗುವುದಿಲ್ಲ, ಎಂಬುದನ್ನು ಸಂವಿಧಾನದ ಕರಡನ್ನು ಸಿದ್ಧಪಡಿಸುವುದಕ್ಕೆ ಸಂಬಂಧಪಟ್ಟವರು ದಯವಿಟ್ಟು ನನಗೆ ತಿಳಿಸಿ. ಕೇಂದ್ರದ ಬಲ ಎಂದರೆ ಸಮರ್ಥ ಸೇನೆ, ಸಮರ್ಥ ನೌಕಾದಳ ಮತ್ತು ಸಮರ್ಥ ವಾಯುದಳ ಇರುವುದು ಎಂದು ನಾನು ಸರಿಯಾಗಿ ತಿಳಿದಿದ್ದೇನೆ ಮತ್ತು ಈ ಉದ್ದೇಶಗಳಿಗೆ ರಾಜ್ಯಗಳು ಮತ್ತು ಪ್ರಾಂತ್ಯಗಳ ಮುಂದೆ ಭಿಕ್ಷಾಪಾತ್ರೆ ಹಿಡಿಯುವ ಬದಲಿಗೆ ಸಾಕಷ್ಟು ಹಣ ತಮ್ಮಲ್ಲಿಟ್ಟುಕೊಂಡಿರಬೇಕು. ಇದನ್ನು ಬಿಟ್ಟುಬಿಟ್ಟು, ಅವರು ಅತಿಯಾದ ಅಧಿಕಾರ ತೆಗೆದುಕೊಂಡರೆ ಮತ್ತು ತಮ್ಮ ಶಾಸನ ರಚನಾಪಟ್ಟಿಗಳನ್ನು ಸಂಗ್ರಹಿಸಿದರೆ, ಆಗುವುದೇನೆಂದರೆ, ಪ್ರಾಂತ್ಯಗಳಿಂದ ನಿರೀಕ್ಷಿಸಿದ ಕಾರ್ಯತತ್ಪರತೆ ಇರುವುದಿಲ್ಲ ಮತ್ತು ಪ್ರಾಂತ್ಯಗಳು ಕೇವಲ ಸ್ವಯಂಚಾಲಿತ ಯಂತ್ರಗಳಾಗುತ್ತವೆ. ನಾನು, ಸಂವಿಧಾನಗಳ ತಜ್ಞರು ಹೇಳಿರುವುದನ್ನು ಓದಿದ್ದೇನೆ ಮತ್ತು ಈ ಬಗ್ಗೆ ಸಮ್ಮತವಾದ ಪರೀಕ್ಷೆ ಎಂದರೆ ದೇಶವು ಸ್ವಾತಂತ್ರ್ಯವನ್ನು ಅನುಭವಿಸುತ್ತಿದೆಯೇ ಎಂಬುದು ಅದರ ಘಟಕಗಳು ಮತ್ತು ಸ್ಥಳೀಯ ಸಂಸ್ಥೆಗಳು ಸ್ವಾತಂತ್ರ್ಯ ಮತ್ತು ಸ್ವಾಯತ್ತತೆ ಎಷ್ಟರ ಮಟ್ಟಿಗೆ ಅನುಭವಿಸುತ್ತಿವೆ ಎಂಬುದನ್ನು ನೋಡಬೇಕು. ಬೇರೆ ಬೇರೆ ಜನರು ಬೇರೆ ರೀತಿಯಲ್ಲಿ ಕೇಂದ್ರದ ಬಲದ ಬಗ್ಗೆ ಬೇರೆ ಬೇರೆಯಾಗಿ ತಿಳಿಯುತ್ತಾರೆ ಮತ್ತು ಸಂವಿಧಾನ ಕರಡು ರಚನಾಸಮಿತಿಯು, ಪರಮಾಧಿಕಾರವುಳ್ಳ (ಇಂಪೀರಿಯಲ್) ಸಚಿವಾಲಯದಲ್ಲಿ ಕೇವಲ ಕಡತಗಳ ಸಂಗ್ರಹಮಾತ್ರದಿಂದ ಕೇಂದ್ರದ ಬಲವರ್ಧಿಸುವುದು ಎಂದಷ್ಟೇ ತಿಳಿದಿರುವರು. ಘಟಕಗಳಿಗೆ ಸಂವಿಧಾನಾತ್ಮಕ ರಚನೆ ಇರಬೇಕು ಎಂದು ಒಪ್ಪುವ ರಾಜ್ಯಗಳ ಜನರಿಗೆ, ಅವರ ಮಾರ್ಗದಲ್ಲಿ ಇದೊಂದು ದೊಡ್ಡ ಅಡ್ಡಿಯೇ ಆಗಿದೆ. ರಾಜ್ಯಗಳು, ಪ್ರಾಂತ್ಯಗಳೊಂದಿಗೆ ಸಮಸಮನಾಗಿ ಬರಲು ಒಪ್ಪುವ ಮೊದಲು, ರಾಜ್ಯಗಳಿಗೆ ಹಾಗೂ ಪ್ರಾಂತ್ಯಗಳಿಗೆ ನಿಜವಾದ ಸ್ವಾಯತ್ತತೆಯ ಭರವಸೆ ಕೊಡಬೇಕಿದೆ. ಒಟ್ಟಾರೆ ರಾಜ್ಯದ ಹಿತಾಸಕ್ತಿಗಳಿಗೆ ಹಾನಿಯುಂಟುಮಾಡುವ ಸ್ವಾಯತ್ತತೆಯಲ್ಲ ಆದರೆ ತಮ್ಮ ವ್ಯವಹಾರಗಳನ್ನು ಚೆನ್ನಾಗಿ ಮತ್ತು ದಕ್ಷತೆಯಿಂದ ನಿರ್ವಹಿಸಲು ಬೇಕಾದ ಅಧಿಕಾರಗಳನ್ನು ಮತ್ತು ಜವಾಬ್ದಾರಿಗಳನ್ನು ನೀಡಬೇಕೆಂದು, ನಾನು ಎಲ್ಲ ಘಟಕಗಳನ್ನು ಕುರಿತು ಹೇಳುತ್ತೇನೆ. ನಾವು ಮೇಲಿಂದ ಮೇಲೆ "ರಾಷ್ಟ್ರಪಿತ" ಎಂದು ಯಾರನ್ನು

ಕರೆಯುತ್ತೇವೆಯೋ ಅವರನ್ನು ಮರೆತಿದ್ದೇವೆ. ಕೇಂದ್ರವು ತುದಿಯಲ್ಲಿರುವಂಥ ಸಂವಿಧಾನ ವ್ಯವಸ್ಥೆಯು ಒಂದು ಪಿರಮಿಡ್‌ನಂತಹ ರಚನೆ ಎಂದು ಅವರು ಹೇಳಿದ್ದಾರೆ. ಆದರೆ ಪ್ರಸ್ತುತ ವ್ಯವಸ್ಥೆ ಸಂಪೂರ್ಣವಾಗಿ ತಲೆಕೆಳಗಾಗಿದೆ, ಕೇಂದ್ರವು ಅತಿಯಾದ ಅಧಿಕಾರ ತೆಗೆದುಕೊಳ್ಳುತ್ತಿದೆ ಎಂಬ ಭಯ ರಾಜ್ಯಗಳ ಜನರಲ್ಲಿದೆ.

ಸಾಕಷ್ಟು ಬೆಳಕಿಗೆ ತಂದಿರದ ಇನ್ನೊಂದು ವಿಷಯವಿದೆ ಮತ್ತು ಈ ಹಿಂದೆ ರಾಜಕೀಯ ಇಲಾಖೆಯು ರಾಜ್ಯಗಳ ಜನರಿಗೆ ಹೆಚ್ಚು ಅತೃಪ್ತಿಯನ್ನುಂಟುಮಾಡಿದ್ದಕ್ಕಿಂತ ಹೆಚ್ಚು ರಾಜ್ಯಗಳ ಮಂತ್ರಾಲಯ ಉಂಟುಮಾಡಿದೆ, ಎಂದು ಹೇಳಿದರೆ ನನ್ನನ್ನು ತಪ್ಪಾಗಿ ತಿಳಿಯುವುದಿಲ್ಲ ಎಂದು ಭಾವಿಸುತ್ತೇನೆ. ಈ ಸದನದಲ್ಲಿನ ರಾಜ್ಯಗಳ ಜನರ ಪ್ರತಿನಿಧಿಗಳು ಹೇಳಿದುದೇನೆಂದರೆ, ರಾಜ್ಯಗಳ ಮಂತ್ರಾಲಯಗಳು ರಾಜ್ಯಗಳ ಜನರ ಅಭಿಪ್ರಾಯವನ್ನು ಪರಿಗಣಿಸಿಯೇ ಇಲ್ಲ ಎಂದು ಹೇಳಿದ್ದಾರೆ ಎಂದು ನಾನು ಕೇಳಿದ್ದೇನೆ. ಅವರು ರಾಜರು ಮತ್ತು ಅವರ ದಿವಾನರ ಬಗ್ಗೆ ಕಾಳಜಿ ಉಳ್ಳವರು. ಜನರು ನಿಜವಾಗಿಯೂ ಅವರಿಗೆ ಕಾಣಿಸುವುದೇ ಇಲ್ಲ. ರಾಜರಿಗೆ ಮತ್ತು ದಿವಾನರಿಗೆ ಎಲ್ಲವೂ ಸಿಗುತ್ತದೆ, ಜನರಿಗೆ ಏನೂ ಇಲ್ಲ, ಎಂದು ತೋರುತ್ತದೆ. ಈ ದಿನ ಎಲ್ಲ ಸಂಸ್ಥಾನಗಳ ಏಕೀಕರಣಕಾರ್ಯ ನಡೆದಿದೆ, ಎಂದರೆ ಅದನ್ನು ರಾಜರು ಬಯಸಿದರು ಎಂದಲ್ಲ ಮತ್ತು ಅವರ ದಿವಾನರು ಅದಕ್ಕಾಗಿ ಕಾರ್ಯಾಚರಣೆ ಮಾಡಿದರು ಎಂದಲ್ಲ, ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ ರಾಜ್ಯಗಳ ಜನರು ರಾಜರು ಈ ಮಾರ್ಗ ಅನುಸರಿಸದೆ ಅನ್ಯಮಾರ್ಗವಿಲ್ಲ ಎಂಬ ಒಂದು ಸ್ಥಿತಿಯನ್ನು ಸೃಷ್ಟಿಸಿದ್ದರಿಂದ ಅದು ಸಾಧ್ಯವಾಗಿದೆ. ಮತ್ತು ನಾವು, ರಾಜರನ್ನು ಮತ್ತು ದಿವಾನರನ್ನು ಶಾಂತಗೊಳಿಸಲು ನಮ್ಮ ಕಾತರತೆಯಲ್ಲಿ ಜನಗಳನ್ನು ಮರೆತಿದ್ದೇವೆ ಎಂಬುದು ದುಃಖಕರ ಸಂಗತಿ. ರಾಜ್ಯಗಳ ಮಂತ್ರಾಲಯಗಳ ಮಾನಸಿಕ ಪರಿಸ್ಥಿತಿಯನ್ನು ಜನರು ನಿಜವಾಗಿ ತಾವು ಭಾರತದ ಉಳಿದ ಜನರ ಜೊತೆಯಲ್ಲೇ ಇದ್ದೇವೆ, ಮತ್ತು ಅವರ ಜೊತೆ ಸುರಕ್ಷಿತವಾಗಿದ್ದೇವೆ ಎಂದು ಭಾವಿಸುವಂತೆ ಮಾಡಲು ಸಾಧ್ಯವಾದಷ್ಟು ಬೇಗನೇ ಬದಲಾಯಿಸಬೇಕು.

ಮಾನ್ಯರೆ, ತೆರಿಗೆ ಎಂಬ ವಿಷಯಗಳಲ್ಲಿ ರಾಜ್ಯಗಳು ಪ್ರಾಂತ್ಯಗಳಿಗಿಂತ ಹೆಚ್ಚಿನ ವ್ಯಾಪ್ತಿಯನ್ನು ಹೊಂದಿವೆ. ನಾವು ಮೂರು ವಿಷಯಗಳನ್ನು ಅಂಗೀಕರಿಸಿದ್ದೇವೆ ಮತ್ತು ಈ ಮೂರು ವಿಷಯಗಳಿಗೆ ಸಂಬಂಧಿಸಿದಂತೆ ಖರ್ಚನ್ನು ಭರಿಸಲು ತಕ್ಕಷ್ಟು ಹಣ ಒದಗಿಸಬಹುದಾಗಿದೆ. ಉದಾಹರಣೆಗೆ: ಬಹುತೇಕ ರಾಜ್ಯಗಳು ಆದಾಯ ತೆರಿಗೆಯನ್ನು ಈಗಷ್ಟೇ ಸಂಗ್ರಹಿಸುತ್ತಿವೆ, ಅದು ಕೇಂದ್ರಕ್ಕೆ ಹೋದರೆ ನಮ್ಮದೇನೂ ಆಕ್ಷೇಪವಿಲ್ಲ ಆದರೆ ಇತರ ತೆರಿಗೆ ಸಂಬಂಧಿತ ಮುಖ್ಯ ಬಾಬುಗಳನ್ನು ರಾಜ್ಯಗಳು ತಮ್ಮ ಖರ್ಚುವೆಚ್ಚಗಳನ್ನು ಭರಿಸಲು ಬಿಟ್ಟುಕೊಡಬೇಕಾಗುತ್ತದೆ, ವಾಸ್ತವವಾಗಿ ಇಂದು ವಿಲೀನಗೊಳ್ಳಲಿರುವ ರಾಜ್ಯಗಳು, ರಾಜರ ಕಾಲದಲ್ಲಿ ಸಂಸ್ಥಾನಗಳು ಅನುಭವಿಸುತ್ತಿದ್ದ ಫಲಾನುಭವವನ್ನು ಸರ್ಕಾರವಾಗಿ ಅನುಭವಿಸುತ್ತಿಲ್ಲ ಎಂಬ ದೂರು ಮೇಲಿಂದ ಮೇಲೆ ಕೇಳಿಬರುತ್ತಿದೆ. ಅದು ಜನಗಳ ಅಧಿಕೃತ ಮುನ್ನಣೆ ಪಡೆದಿರುವ ಪ್ರತಿನಿಧಿಗಳ ಅಭಿಪ್ರಾಯವಾಗಿದೆ, ಇದೊಂದು ತುಂಬ ದುಃಖಕರ ಲಕ್ಷಣ. ಹೋಗಿಯಾದ ಮೇಲೆ ಮತ್ತು ಸಂಸ್ಥಾನಗಳು ಪ್ರಾಂತ್ಯಗಳಲ್ಲಿ ವಿಲೀನಗೊಂಡ ಅನಂತರ ಈ ಹಿಂದೆ ಅವರಿಗೆ ಸಿಗುತ್ತಿದ್ದದಕ್ಕಿಂತ ಉತ್ತಮ ಸೌಕರ್ಯಗಳನ್ನು ಮತ್ತು ಉತ್ತಮ ಅವಕಾಶಗಳನ್ನು ಈಗ ಪಡೆಯುವರು ಎಂದು ನಾವು ನಿರೀಕ್ಷಿಸಿದ್ದೆವು. ಅದು ರಾಜ್ಯಗಳ ಪ್ರತಿನಿಧಿಗಳು ವ್ಯಕ್ತಪಡಿಸಿದ ಒಂದು ಕಹಿ ಸಂಗತಿ, ಒರಿಸ್ಸಾ ರಾಜ್ಯಗಳಲ್ಲಿ ಮತ್ತು ದಕ್ಷಿಣದ ರಾಜ್ಯಗಳಲ್ಲಿ ಕಾಂಗ್ರೆಸ್ ಸರ್ಕಾರಗಳಡಿಯಲ್ಲಿ ಆಡಳಿತವು ಹಿಂದಿನ ರಾಜರ ಕಾಲದಲ್ಲಿದ್ದುದಕ್ಕಿಂತ ಪ್ರಯೋಜನಕಾರಿಯಾಗಿಲ್ಲ. ಮೈಸೂರಿನ ಒಬ್ಬ ಪ್ರತಿನಿಧಿಯಾಗಿ ನಾನು ಮಾತನಾಡುತ್ತಿಲ್ಲ, ಆದರೆ ನಾನು ಇತರ ರಾಜ್ಯಗಳ ಪ್ರತಿನಿಧಿಗಳೊಂದಿಗೆ ಮಾತನಾಡುವ ಸಂದರ್ಭದಲ್ಲಿ ಅವರು ತಿಳಿಸಿದ ಅಭಿಪ್ರಾಯ ಇದಾಗಿದೆ.

ಮಾನ್ಯರೆ, ಈಗ ದೆಹಲಿಯು ರಾಜಧಾನಿಯಾಗಿದೆ, ನಮ್ಮಲ್ಲಿ ಬಹಳಷ್ಟು ಜನರು ದಕ್ಷಿಣದಿಂದ, ಬಂಗಾಳದಿಂದ ಮತ್ತು ದೇಶದ ಇತರ ಭಾಗಗಳಿಂದ ಬಂದಿರುವವರು, ಹಲವು ಕಾರಣಗಳಾಗಿ ದೆಹಲಿಯು

ಭಾರತದ ರಾಜಧಾನಿಯಾಗಿರಲು ಸೂಕ್ತವಲ್ಲ ಎಂದು ಭಾವಿಸುತ್ತೇವೆ. ಐತಿಹಾಸಿಕವಾಗಿ ದೆಹಲಿ ಸಾಕಷ್ಟು ಬೆಳೆದಿದೆ; ಅಲ್ಲಲ್ಲಿ ಇರುವ ಗೋರಿಗಳಲ್ಲಿ ಹೂತುಹೋದ ಅನೇಕ ಸಾಮ್ರಾಜ್ಯಗಳು ಇಲ್ಲಿ ಆಗಿ ಹೋಗಿವೆ ಮತ್ತು ನಮ್ಮ ಹೊಸ ಸರ್ಕಾರ ಆ ದಾರಿಯಲ್ಲಿಯೇ ಹೋಗಲು ನಾವು ಇಷ್ಟಪಡುವುದಿಲ್ಲ, ನಾನು ಕೇವಲ ಭಾವನಾತ್ಮಕ ಕಾರಣದಿಂದ ಹೇಳುತ್ತಿಲ್ಲ. ದೆಹಲಿಯಲ್ಲಿ ಎರಡು ತಿಂಗಳು ಬಿಟ್ಟರೆ, ಉಳಿದೆಲ್ಲ ಕಾಲದಲ್ಲಿ ನಾವು ಬೆವರಬೇಕು ಇಲ್ಲವೇ ನಡುಗಬೇಕು ಮತ್ತು ಈ ಅತೀವ ಹವಾಗುಣಗಳಲ್ಲಿ ಯಾವುದೇ ಶ್ರಮದ ಕೆಲಸಮಾಡಲು ಬಹುತೇಕ ಅಸಾಧ್ಯ. ಒಂದು ದೇಶದ ರಾಜಧಾನಿಯು, ದೇಶದ ಮಧ್ಯಭಾಗದಲ್ಲಿ ಇರಬೇಕು ಎಂದು ನಿರೀಕ್ಷಿಸುವುದು ಸಮರ್ಥನೀಯ ಮತ್ತು ನಾವು ನಮ್ಮ ರಾಜಧಾನಿಯನ್ನು ಮಧ್ಯಪ್ರಾಂತ್ಯದಲ್ಲಿ ಅಥವಾ ಅದಕ್ಕೆ ಸಮೀಪದಲ್ಲಿ ನೆಲೆಗೊಳಿಸಬಹುದು.

**ಶ್ರೀ ಬಿ.ಜಿ. ಖೇರ್** (ಬಾಂಬೆ : ಸಾಮಾನ್ಯ) : ಬಾಂಬೆ ಉತ್ತಮ ಸ್ಥಳ.

**ಶ್ರೀ ಕೆ. ಹನುಮಂತಯ್ಯ** : ಮಾನ್ಯರೆ, ನಾನು ನನ್ನ ಅನೇಕ ಸಹೋದ್ಯೋಗಿಗಳ ಅಭಿಪ್ರಾಯಗಳನ್ನು ಸಂಗ್ರಹಿಸಿದ ಅನಂತರ, ಮಧ್ಯಪ್ರಾಂತ್ಯ ಸೂಕ್ತ ಎಂದು ಹೇಳುತ್ತಿದ್ದೇನೆ. ಉದಾಹರಣೆ: ಅದು ಬೆಟುಲಿನ್ ಸಿ.ಪಿ. (ಮಧ್ಯಪ್ರಾಂತ್ಯ) ಆಗಿರಬಹುದು. ಮಾನ್ಯರೆ, ದೆಹಲಿ ಮೇಲೆ ಬಹಳಷ್ಟು ಹಣ ವೆಚ್ಚಮಾಡಿರುವಾಗ ಇನ್ನೊಂದು ರಾಜಧಾನಿಗೆ ಮತ್ತೆ ಹಣವನ್ನು ಖರ್ಚುಮಾಡುವುದು ಸರಿಯೇ? ಎಂಬ ಇನ್ನೊಂದು ವಾದವೂ ಇದೆ. ದೆಹಲಿಯಲ್ಲಿ ನಾವು ಇನ್ನೂ ಕೆಲವು ಕೇಂದ್ರ ಕಛೇರಿಗಳಿಗೆ ನೆಲೆ ಕಾಣಿಸಬಹುದು. ಈಗ ಪೂರ್ವ ಪಂಜಾಬ್ ರಾಜಧಾನಿಗಾಗಿ ಸ್ಥಳ ನೋಡುತ್ತಿದೆ ಮತ್ತು ಅವರು ಅಂಬಾಲವನ್ನು ರಾಜಧಾನಿಯಾಗಿ ಮಾಡಬಯಸುತ್ತಾರೆ. ನಾವು, ನಮ್ಮ ಸರ್ಕಾರದ ಕಟ್ಟಡಗಳ ಅರ್ಧದಷ್ಟು ಪೂರ್ವಪಂಜಾಬ್ ಸರ್ಕಾರಕ್ಕೆ ಕೊಟ್ಟು ಅವರಿಂದ ಹಣ ತೆಗೆದುಕೊಳ್ಳಬಹುದು. ಹಣಕಾಸಿನ ಪ್ರಸ್ತಾವಗಳಲ್ಲಿ ಪಂಜಾಬಿನ ವಿಭಜನೆಯಾದ ಅನಂತರ ಅದು ಆಗಷ್ಟೇ ಹಣಕಾಸನ್ನು ನಿರ್ವಹಿಸುವ ಸಾಮರ್ಥ್ಯ ಪಡೆದಿರಲಿಲ್ಲ ಮತ್ತು ಕೇಂದ್ರದಿಂದ ಸಹಾಯಧನ ಬಯಸುತ್ತಿತ್ತು ಎಂಬುದನ್ನು ನಾವು ನೋಡಿದ್ದೇವೆ. ನೀವು, ದೆಹಲಿಯನ್ನು ಪಂಜಾಬಿನ ಭಾಗವಾಗಿ ಮಾಡಿದರೆ, ನಮಗೆ ಸಹಾಯಧನ ಪಾವತಿಸುವ ಆವಶ್ಯಕತೆ ಇರುವುದಿಲ್ಲ, ಅನಂತರ ಅದೂ ಸ್ವಸಾಮರ್ಥ್ಯ ಪ್ರಾಂತ್ಯವಾಗುವುದು. ಈ ದೃಷ್ಟಿಯಿಂದ ಹಾಗೂ ಸಾರ್ವಜನಿಕ ಅಭಿಪ್ರಾಯದ ದೃಷ್ಟಿಯಿಂದ ಕೂಡ ದೆಹಲಿ ಭಾರತದ ರಾಜಧಾನಿಯಾಗುವುದು ನಿಲ್ಲಿಸಬೇಕು ಎಂಬುದು ದೇಶದ ಹಿತದೃಷ್ಟಿಯಿಂದ ಮತ್ತು ಅದರ ಭವಿಷ್ಯಕ್ಕಾಗಿ ಅತ್ಯುತ್ತಮ. ನಾವು ಒಂದು ಹೊಸ ರಾಜಧಾನಿಯನ್ನು ಮಧ್ಯಪ್ರಾಂತ್ಯಗಳಲ್ಲಿ ನಿರ್ಮಿಸುವ ಸಾಮರ್ಥ್ಯ ಪಡೆಯುವಂತಾಗಲಿ. ತಮ್ಮೆಲ್ಲರಿಗೂ ಅನಂತ ವಂದನೆಗಳು.

**ಮಾನ್ಯ ಉಪಸಭಾಧ್ಯಕ್ಷರು** : ಪಂಡಿತ್ ಗೋವಿಂದ ಮಾಳವೀಯ.

**ಪಂಡಿತ್ ಗೋವಿಂದ ಮಾಳವೀಯ** : ನಾವು ನಾಳೆವರೆಗೆ ಈ ವಿಷಯವನ್ನು ಮುಂದುವರಿಸುತ್ತಿದ್ದರೆ ನಾಳೆ ಮಾತನಾಡುವ ಸದಾವಕಾಶ ನನಗೆ ಸಿಕ್ಕಬಹುದೇ?

**ಮಾನ್ಯ ಉಪಸಭಾಧ್ಯಕ್ಷರು** : ನೀವು ಈಗ ಮಾತನಾಡುವುದು ಉತ್ತಮ ಎಂದು ನಾನು ತಿಳಿದಿದ್ದೇನೆ.

**ಪಂಡಿತ್ ಗೋವಿಂದ ಮಾಳವೀಯ** : ಮಾನ್ಯರೆ, ನಾನು ಏನಾದರೂ ಹೇಳುವ ಮೊದಲು, ನಮಗೇ ಮತ್ತು ಕರಡು ರಚನಾಸಮಿತಿಗೆ ಮತ್ತು ಅದರ ಸಮರ್ಥ ಅಧ್ಯಕ್ಷ, ನಮ್ಮ ಮಿತ್ರ ಡಾ. ಅಂಬೇಡ್ಕರ್ ಅವರು ಈ ಕರಡು ಸಂವಿಧಾನವನ್ನು ನಮಗೆ ಕೊಡುವಲ್ಲಿ ಮಾಡಿರುವ ತುಂಬ ಅತ್ಯುತ್ತಮ ಕಾರ್ಯಕ್ಕಾಗಿ ನನ್ನ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಲು ನನಗೆ ಸಂತೋಷವಾಗುತ್ತದೆ. ಅದು ಅವರು ಎದುರಿಸಬೇಕಾದ ಒಂದು ಕಷ್ಟದ ಸಮಸ್ಯೆಯಾಗಿತ್ತು ಮತ್ತು ಅದನ್ನು ಅತ್ಯಂತ ಉತ್ತಮವಾಗಿ ಅವರು ನಿಭಾಯಿಸಿದ್ದಾರೆ. ಕರಡು ಸಂವಿಧಾನದಲ್ಲಿ ವಿಷಯಗಳು ಸ್ವಲ್ಪ ವಿಭಿನ್ನವಾಗಿರಬೇಕು ಎಂದು ಯಾರೇ ಆಗಲಿ ಆಶಿಸಬಹುದು. ಆದರೆ, ಆಗ ಅದು ಎಲ್ಲಿ ಬೇಕಾದರೂ ಯಾವುದನ್ನಾದರೂ ಕೊಡಬಹುದಾದುದಂಥದ್ದು ಆಗಿರಬೇಕು.

ಮಾನ್ಯರೆ, ಈ ಸದನದ ಕಾಲಾವಕಾಶದಲ್ಲಿ ಕೆಲವು ನಿಮಿಷಗಳ ಕಾಲಾವಕಾಶ ಕೊಡಿರೆಂದು ನಾನು ಏಕೆ ತಮ್ಮಲ್ಲಿ ಕೋರಿದೆನೆಂದರೆ, ಈ ಸದನದ ಮುಂದೆ ಮಂಡಿಸುವ ಕರಡು ತುಸು ವಿಭಿನ್ನವಾಗಿರಬೇಕಿತ್ತು ಎಂಬ ನನ್ನ ಆಶಯವನ್ನು ಸಮರ್ಥಿಸುವ ಅಂಶಗಳನ್ನು ಇಡುವುದಕ್ಕಲ್ಲ. ಅಂತಹ ವಿಷಯಗಳಲ್ಲಿ, ಭಿನ್ನತೆಗಳು ಉಳಿಯಬಹುದು. ಆದರೆ ಹಾಗೆ ನೋಡಿದರೆ ಅವು ಅಷ್ಟೇನೂ ದೊಡ್ಡದಲ್ಲದಿರಬಹುದು. ಅವುಗಳ ಬಗ್ಗೆ ಮೌನದಿಂದ ಇರುವಷ್ಟರವರೆಗೂ ಹೆಚ್ಚು ಗಂಭೀರವಾಗಿರುವುದಿಲ್ಲ. ಉದಹಾರಣೆಗೆ: ಈ ಕರಡು ಸಂವಿಧಾನದಲ್ಲಿ ಕೆಲವು ವಿಷಯಗಳು ತುಸು ಭಿನ್ನವಿರಬೇಕಾಗಿತ್ತೆಂದು ನಾನು ವೈಯಕ್ತಿಕವಾಗಿ ಬಯಸಿದ್ದು ಇರುತ್ತವೆ. ಮಾನ್ಯರೆ, ಅನುಪಾತೀಯ ಪ್ರಾತಿನಿಧ್ಯದ ಮೂಲಕ ವರ್ಗಾವಣೆ ಮಾಡಬಹುದಾದ ಏಕಮತದ ಮೂಲಕವಾಗಿ ರಾಷ್ಟ್ರಪತಿಗಳ ಚುನಾವಣೆ ನಡೆಯುತ್ತದೆ. ಇದು ಸಂತೋಷದ ಸಂಗತಿಯಲ್ಲ. ಇದಕ್ಕಾಗಿ ನೇರಮತದಾನ ಇರಬೇಕಾಗಿತ್ತೆಂದು ನಾನು ಇಷ್ಟಪಡುತ್ತೇನೆ. ಅನುಪಾತೀಯ ವಿಧಾನ ಅತ್ಯಂತ ಅನಾರೋಗ್ಯಕರ ಎಂದು ಸಾಬೀತುಮಾಡಬಹುದು, ಆದರೆ, ನಾನು ಆವಶ್ಯಕತೆಗಿಂತ ಹೆಚ್ಚಿಗೆ ಒಂದು ಕ್ಷಣವೂ ನಿಮ್ಮ ಸಮಯವನ್ನು ತೆಗೆದುಕೊಳ್ಳಬಯಸುವುದಿಲ್ಲ. ನಾನು ಮಾರ್ಗವನ್ನು ಸೂಚಿಸುತ್ತೇನೆ ಅಷ್ಟೆ. ಮಾನ್ಯರೆ, ಮೇಲ್ಮನೆಗೆ ಹದಿನೈದು ಸದಸ್ಯರನ್ನು ನಾಮಕರಣ ಮಾಡುವ ಹಕ್ಕು ರಾಷ್ಟ್ರಪತಿಗಳ ಕೈಗಳಲ್ಲಿ ಇದೆ. ಅದಿಲ್ಲದಿದ್ದರೆ ಸಂತೋಷವಾಗುತ್ತಿತ್ತೆಂದು ಭಾವಿಸುತ್ತೇನೆ. ಫೆಡರಲ್ ನ್ಯಾಯಾಂಗ ವ್ಯವಸ್ಥೆಗೆ ಒಂದು ನಿಶ್ಚಿತ ಕನಿಷ್ಠಮಿತಿ ಇದೆ. ಆದರೆ ನಮಗೆ ಗರಿಷ್ಠಮಿತಿ ಇಲ್ಲ. ಮಾನ್ಯರೆ ಕ್ಷಮಿಸಿ, ನಾನು ಇವತ್ತಷ್ಟೆ ಬಂದೆ. ಈ ಚರ್ಚೆ ಮುಂದುವರೆಯುತ್ತಿರುವ ಚರ್ಚೆಯೇ ಎಂಬುದು ನನಗೆ ತಿಳಿದಿರಲಿಲ್ಲ. ನಾನು ನನ್ನ ಲಿಖಿತ ಕಾಗದಪತ್ರಗಳು ಮೊದಲಾದವುಗಳನ್ನು ತಂದಿಲ್ಲ. ನಾನು ಈಗ ಮಾತನಾಡಲು ತಯಾರಿಲ್ಲ. ನನಗೆ ತಿಳಿದಷ್ಟರಮಟ್ಟಿಗೆ ಕೆಲವು ವಿಷಯಗಳನ್ನಷ್ಟೆ ಹೇಳುತ್ತೇನೆ. ಕನಿಷ್ಠಮಿತಿ ಇದೆ. ಆದರೆ, ಅದಕ್ಕೆ ನಿಶ್ಚಿತವಾದ ಗರಿಷ್ಠಮಿತಿ ಇಲ್ಲ, ನಾನು ಒಂದು ಸನ್ನಿವೇಶದ ಬಗ್ಗೆ ಹೇಳುತ್ತೇನೆ, ಕಾರ್ಯಾಂಗ ಎಂದರೆ, ಭಾರತ ಸರ್ಕಾರವು, ಫೆಡರಲ್ ನ್ಯಾಯಾಂಗಕ್ಕೆ ಸಂಬಂಧಿಸಿದಂತೆ ಕೆಲವು ಹೊಸ ನ್ಯಾಯಾಧೀಶರನ್ನು ಸೇರಿಸಿಕೊಂಡು ಅವರಿಂದ ಕೆಲಸಮಾಡಿಸುವುದಕ್ಕಾಗಿ ಇರುವ ಉಪಬಂಧವನ್ನು ದುರುಪಯೋಗಿಸಿಕೊಂಡು ಅನನುಕೂಲಕರ ಹಳೆಯ ನ್ಯಾಯಾಂಗ ವ್ಯವಸ್ಥೆಯನ್ನು ಕಡೆಗಣಿಸಿ ಅನನುಕೂಲ ಉಂಟುಮಾಡಬಹುದು. ಅದು ಹಾಗೆಯೇ ಆಗುತ್ತದೆಂದು ನಾನು ಹೇಳುತ್ತಿಲ್ಲ. ಆದರೆ, ನಾವು ದೇಶದ ಭವಿಷ್ಯತ್ ಆಡಳಿತಕ್ಕಾಗಿ ಸಂವಿಧಾನವನ್ನು ರೂಪಿಸುತ್ತಿರುವಾಗ, ಹೆಚ್ಚು ಎಚ್ಚರವಿರುವುದು ನಮಗೇ ಒಳ್ಳೆಯದು, ಆದುದರಿಂದ ನಾನು ಫೆಡರಲ್ ನ್ಯಾಯಾಂಗದ ನ್ಯಾಯಾಧೀಶರ ಸಂಖ್ಯೆಗೂ ಒಂದು ಗರಿಷ್ಠಮಿತಿ ಇರಬೇಕೆಂದು ಇಚ್ಛಿಸುತ್ತೇನೆ.

ಮಾನ್ಯರೆ, ಸಂವಿಧಾನದಲ್ಲಿ ಇನ್ನೂ ಇಂತಹ ವಿಷಯಗಳು ಹಲವು ಇವೆ. ಅವುಗಳನ್ನು ನಾನು ತಿಳಿಸಬಹುದಿತ್ತು. ನಾನು ಈಗಾಗಲೇ ಹೇಳಿದಂತೆ, ಅವು ಸ್ವಲ್ಪ ವಿಭಿನ್ನವಾಗಿದ್ದಿದ್ದರೆ ನನಗೆ ಸಂತೋಷವೆನಿಸುತ್ತಿತ್ತು. ಆದರೆ, ಈ ಸದನದ ಸಮಯವನ್ನು ಆ ಉದ್ದೇಶಕ್ಕಾಗಿ ನಾನು ತೆಗೆದುಕೊಳ್ಳುತ್ತಿಲ್ಲ ಮತ್ತು ನಾನು ಅದನ್ನು ನಿಮ್ಮ ಮೇಲೆ ಹೊರಿಸುವುದಿಲ್ಲ. ಮಾನ್ಯರೆ, ನಾನು, ನಿರ್ದಿಷ್ಟವಾಗಿ ಹೇಳುವುದೇನೆಂದರೆ ಈ ಸಂವಿಧಾನದ ಪೀಠಿಕೆ ಕುರಿತು ಹೇಳುವುದು. ನಾವು ಕರಡು ಸಂವಿಧಾನದಲ್ಲಿ ಹೇಳಿರುವ ಆ ಬೋಳು ಪೀಠಿಕೆಯನ್ನು ಅಳವಡಿಸಿದರೆ ನಮ್ಮ ದೇಶಕ್ಕಾಗಿ ನಮ್ಮ ಕರ್ತವ್ಯ ನಿರ್ವಹಿಸುವಲ್ಲಿ ವಿಫಲರಾಗುತ್ತೇವೆ, ನಮ್ಮ ದೇಶದ ಇಡೀ ಇತಿಹಾಸಕ್ಕೆ, ನಮ್ಮ ದೇಶದ ಇಡೀ ಸಂಸ್ಕೃತಿಗೆ ಮತ್ತು ನಾಗರಿಕತೆಗೆ ನಮ್ಮ ಜನರ ಇಡೀ ಸಿದ್ಧಾಂತಕ್ಕೆ ನಮ್ಮ ಕರ್ತವ್ಯ ನಿರ್ವಹಣೆಯಲ್ಲಿ ವಿಫಲರಾಗುತ್ತೇವೆ.

ಇಡೀ ವಿಶ್ವದ ಭವಿತವ್ಯಗಳನ್ನು ನಿರ್ದೇಶಿಸುವ ಪರಮೋಚ್ಚ ಅಧಿಕಾರವನ್ನು ತಿಳಿಸುವ ವಿಷಯವನ್ನು ನಾವು ತಿಳಿದಿರಬೇಕು ಎಂದು ಹೇಳಲು ನನಗೆ ಬಹಳ ಸಂತೋಷವಾಗುತ್ತದೆ. ಈ ಸಲಹೆಯನ್ನು ನಾನು ಏಕೆ ಕೊಡುತ್ತಿದ್ದೇನೆಂದರೆ, ವಿಶ್ವದಲ್ಲಿ ಹಲವು ಸಂವಿಧಾನಗಳು ಇರುವಂತೆ ನಮ್ಮಲ್ಲಿಯೂ ಸಂವಿಧಾನ ಇದೆ ಎಂಬುದಕ್ಕಾಗಿಯಷ್ಟೆ ಅಲ್ಲ, ಈ ಕಾರಣಕ್ಕಾಗಿಯೇ ನಾನು ಸಲಹೆ ಮಾಡುತ್ತಿಲ್ಲ, ನಾನು ಈಗಾಗಲೇ ಹೇಳಿದಂತೆ,

ಈ ದೇಶದ ಸಮಗ್ರ ಹಿನ್ನೆಲೆಯಲ್ಲಿ ನಾವು ಈ ಮಹಾನ್ ಕಾರ್ಯವನ್ನು ಮಾಡುವುದು ಅಗತ್ಯವಾಗಿತ್ತು. ನಾನು, ಅದನ್ನು ಕುರಿತು ಕೇವಲ ನಿವೇದನೆ ಮಾಡಿಕೊಳ್ಳುವುದೇಕೆಂದರೆ, ಸದನದ ಸಮಯವನ್ನು ಹೆಚ್ಚಿಗೆ ತೆಗೆದುಕೊಳ್ಳಲು ಇಷ್ಟಪಡುವುದಿಲ್ಲ ಮತ್ತು ಸಾಧ್ಯವಾದಷ್ಟು ಸಂಕ್ಷಿಪ್ತವಾಗಿ ತಿಳಿಸಲು ಇಚ್ಛಿಸುತ್ತೇನೆ. ನಾವು ಇಲ್ಲಿ ಭಾರತದ ಜನರ ಪ್ರತಿನಿಧಿಗಳಾಗಿ ಕುಳಿತಿದ್ದೇವೆ. ಇಂದು ಈ ದೇಶದಲ್ಲಿ ನಾವು ಆ ವಿಷಯದಲ್ಲಿ ಜನರ ಅಭಿಪ್ರಾಯಗಳೇನು ಎಂಬುದನ್ನು ಕಂಡುಕೊಳ್ಳಲು ಯಾವುದಾದರೂ ವಿಧಾನವನ್ನು ರೂಪಿಸುವುದಿದ್ದರೆ, ನಮ್ಮ ಜನರಲ್ಲಿ ಶೇಕಡಾ ತೊಂಬತ್ತರಷ್ಟು ಅಥವಾ ಇನ್ನೂ ಹೆಚ್ಚು ಜನ ದೇವರಲ್ಲಿ ಅಪಾರ ನಂಬಿಕೆ ಇಟ್ಟಿರುವುದು ಖಂಡಿತ ಎಂದು ನಾನು ಭಾವಿಸಿದ್ದೇನೆ. ನಮ್ಮ ಸಂವಿಧಾನದ ಪೀಠಿಕೆಯಲ್ಲಿ ಅಂತಹ ಒಂದು ಮಾತು ಇರಬೇಕೆಂದು ಆ ಜನರು ಅಪೇಕ್ಷಿಸುತ್ತಾರೆ. ನಾವು, ನಮ್ಮಲ್ಲಿ ಕೆಲವರಾದರೂ, ಹಾಗೂ ನಾವೆಲ್ಲರೂ ಕೂಡ ದೇವರಲ್ಲಿ ನಂಬಿಕೆ ಇಲ್ಲ ಎಂದು ಹೇಳುವುದಾದರೆ ನಾವು ನಮ್ಮ ಕರ್ತವ್ಯದಲ್ಲಿ ವಿಫಲರಾಗುತ್ತೇವೆ ಎಂದು ನಾನು ನಿವೇದಿಸಿಕೊಳ್ಳುತ್ತಿದ್ದೇನೆ. 'ನಾನು' ಕೂಡ ಎಂದು ಹೇಳುತ್ತೇನೆ, ಎಂದರೆ, ಒಬ್ಬ ವ್ಯಕ್ತಿಯಾಗಿ ಅಲ್ಲ ಎಂದು ಹೇಳುವುದಿಲ್ಲ, ಆದರೆ, ಅದು ಹಾಗೆ ಅಂದುಕೊಂಡರೂ ಕೂಡ, ನಾನು ಗೌರವದಿಂದ ನಿವೇದಿಸುವುದೇನೆಂದರೆ, – ನಾವು, ಜನರ ನಂಬಿಕೆಯನ್ನು ಪೀಠಿಕೆಯಲ್ಲಿ ತರದಿದ್ದರೆ, ನಾವು ನಮ್ಮ ಜನರಿಗೆ ಮತ್ತು ನಮ್ಮ ದೇಶಕ್ಕೆ, ನಾವು ಯಾರನ್ನು ಇಲ್ಲಿ ಪ್ರತಿನಿಧಿಸುತ್ತೇವೆಯೊ ಅವರಿಗೆ ಸಲ್ಲಿಸುವ ನಮ್ಮ ಕರ್ತವ್ಯದಲ್ಲಿ ವಿಫಲವಾಗುತ್ತೇವೆ. ಏಕೆಂದರೆ ನಾನು ಹೇಳಿದಂತೆ, ಈ ದೇಶದ ಜನರಲ್ಲಿ ಶೇಕಡ ತೊಂಬತ್ತರಷ್ಟಕ್ಕೂ ಹೆಚ್ಚು ಜನ ದೇವರಲ್ಲಿ ಅಪಾರ ನಂಬಿಕೆ ಇಟ್ಟಿರುವವರು ಮತ್ತು ಸಂವಿಧಾನ ಪೀಠಿಕೆಯಲ್ಲಿ ಭಗವಂತನ ಬಗ್ಗೆ ಒಂದು ಮಾತು ಹೇಳಬೇಕೆಂದು ಇಷ್ಟಪಡುತ್ತಾರೆ. ಅದು ನಮ್ಮ ಸಂಸ್ಕೃತಿಯ ನಮ್ಮ ತತ್ತ್ವಜ್ಞಾನದ ನಮ್ಮ ಸಾಮಾಜಿಕ ರಚನೆಯ ಅತ್ಯಂತ ಮಹತ್ತ್ವದ ಲಕ್ಷಣ. ನಮಗಿರುವ ಅಪಾರ ಸಹಿಷ್ಣುತೆಯೇ ಸಾಮಾಜಿಕ ಚಿಂತನೆಯ ಪ್ರತಿಯೊಂದು ಸಿದ್ಧಾಂತಕ್ಕೂ ನಿರೀಶ್ವರವಾದಿಗೂ ಮತ್ತು ದೈವತ್ವದ ಬಗ್ಗೆ ತಿಳಿವಳಿಕೆ ಇಲ್ಲದವನಿಗೆ ತೊಂದರೆ ಕೊಡದೇ ಜೀವಿಸಲು ಅವಕಾಶಮಾಡಿದ್ದೇವೆ, ಆದರೂ, ಒಟ್ಟಾರೆ ಶ್ರೀಸಾಮಾನ್ಯರಾಗಿ ನಾವು ಯಾವಾಗಲೂ ನಮಗೆ ಮಾರ್ಗದರ್ಶನಮಾಡುವ ಅದ್ಭುತಶಕ್ತಿಯಲ್ಲಿ ದೃಢವಾಗಿ ಮತ್ತು ಭಾವನಾಪೂರ್ಣವಾಗಿ ನಂಬಿಕೆ ಇಟ್ಟಿದ್ದೇವೆ. ಎಲ್ಲೆಡೆ ವ್ಯಾಪ್ತನಾಗಿರುವ ಕ್ರಿಯಾಶೀಲನಾಗಿರುವ ದೇವರಲ್ಲಿ ಜೀವಂತ–ನಂಬಿಕೆ ಇಟ್ಟಿರುವುದು ಮತ್ತು ದೈವಭಕ್ತಿ. ಇವು, ನಮ್ಮ ಸುದೀರ್ಘ ಮತ್ತು ವೈಭವಯುತ ಇತಿಹಾಸದ ಆರಂಭದಿಂದಲೂ ಇದ್ದು, ಅದು ನಮ್ಮ ಜನರ ಜೀವನದ ಮೂಲಭೂತ ಆಧಾರವೂ ಅತ್ಯಂತ ಶ್ರೇಷ್ಠವಾದ ಸಾರವೂ ಆಗಿದೆ. ಇಂದು ಅದಕ್ಕೆ ಸಾಕ್ಷಿಯಾಗಿರುವ ನಮ್ಮ ರಾಷ್ಟ್ರನಿರ್ಮಾತೃ ಮಹಾತ್ಮ ಗಾಂಧಿಯವರ ಜೀವನ ಸುಂದರ ಆದರ್ಶಪ್ರಾಯವಾಗಿದೆ. ಅವರು ದೇವರ ಸ್ಮರಣೆ ಮಾಡುತ್ತಲೇ ಕೊನೆ ಉಸಿರೆಳೆದರು. ಪ್ರತಿ ನಿತ್ಯ ಅವರು ರಾಮಧ್ಯಾನಮಾಡುತ್ತಿದ್ದರು ಮತ್ತು ನಮ್ಮ ಮಹಾನ್ ಪ್ರಧಾನಮಂತ್ರಿಗಳು, ವಿಶ್ವದೆಲ್ಲೆಡೆಗಳಲ್ಲಿ, ಅಂತಾರಾಷ್ಟ್ರೀಯ ವಲಯಗಳಲ್ಲಿ ಮತ್ತು ಸಮ್ಮೇಳನಗಳಲ್ಲಿ ಇತ್ತೀಚೆಗೆ ಕಾಮನ್‌ವೆಲ್ತ್ ದೇಶಗಳ ಪ್ರತಿನಿಧಿಗಳು ಉಪಸ್ಥಿತರಿದ್ದ ಸಮ್ಮೇಳನಗಳಲ್ಲಿ ಮಾಡಿದ ಭಾಷಣಗಳಲ್ಲಿ ನಮ್ಮ ದೇಶದ ಭವ್ಯ ಪರಂಪರೆಯ ಕೀರ್ತಿಯನ್ನು ಪ್ರತಿಬಿಂಬಿಸಿದ್ದಾರೆ. ಅದಕ್ಕೆ ನಮ್ಮ ದೇಶದ ತತ್ತ್ವಶಾಸ್ತ್ರದ ಹಿನ್ನೆಲೆ ಕಾರಣ ಎಂದು ನಿವೇದಿಸುತ್ತಿದ್ದೇನೆ. ಇದು ಮಹಾತ್ಮ ಗಾಂಧಿಯವರ ನಾಯಕತ್ವದಲ್ಲಿ ನಮ್ಮ ನೆಚ್ಚಿನ ಪ್ರಧಾನಮಂತ್ರಿಗಳ ಪ್ರತಿಭಾಪೂರ್ಣ ಮತ್ತು ಪ್ರಶಾಂತ ನೀತಿಯ ರೂಪದಲ್ಲಿ ಅಂತಿಮವಾಗಿ ಪ್ರಕಟವಾಗಿದೆ. ಮಾನ್ಯರೆ, ನಾವು ಅದನ್ನು ಸಾಧಿಸದಿದ್ದರೆ ನಮ್ಮ ಜನರಿಗೆ ಮತ್ತು ನಮ್ಮ ದೇಶಕ್ಕೆ, ನ್ಯಾಯ ದೊರಕಿಸಿಕೊಟ್ಟಂತಾಗುವುದಿಲ್ಲ ಎಂದು ನಾನು ಹೇಳಿಕೊಳ್ಳುತ್ತಿದ್ದೇನೆ. ಆದುದರಿಂದ ನನ್ನ ಮಿತ್ರರಾದ ಡಾ. ಅಂಬೇಡ್ಕರ್ ಹಾಗೂ ಮತ್ತಿತರರು ಈ ಅಂಶವನ್ನು ಪರಿಗಣಿಸುವರೆಂದು ಅಥವಾ ಲೋಪದೋಷ ಏನಾದರೂ ಇದ್ದರೆ ಅದನ್ನು ಪರಿಹರಿಸುವರೆಂದು ಆಶಿಸುತ್ತೇನೆ.

ನಾನು ಹೇಳಬೇಕಿರುವ ಇನ್ನೊಂದು ವಿಷಯವೆಂದರೆ ನಮ್ಮ ಸಂವಿಧಾನದಲ್ಲಿ ನಾವು ನಮ್ಮ ದೇಶದ ಹೆಸರನ್ನೇ ನಮೂದಿಸಬೇಕು. ನಮ್ಮ ಸಂವಿಧಾನದಲ್ಲಿ ನಮ್ಮ ದೇಶವನ್ನು 'ಇಂಡಿಯಾ' ಎಂದು ಏಕೆ ಕರೆಯಬೇಕು

ಎಂಬುದು ನನಗೆ ಅರ್ಥವಾಗುತ್ತಿಲ್ಲ, ನಾನು ಯಾವುದೇ ನಿರ್ದಿಷ್ಟ ಹೆಸರನ್ನು ಸಲಹೆ ಮಾಡುವುದಿಲ್ಲ, ಇಡೀ ಸದನಕ್ಕೆ ಒಪ್ಪಿಗೆಯಾಗುವ ಯಾವುದೇ ಹೆಸರಿಟ್ಟರೂ ನನಗೆ ತೃಪ್ತಿಯಾಗುತ್ತದೆ. ಆದರೆ, ನಾನು ನಿವೇದಿಸಿಕೊಳ್ಳುವುದೆಂದರೆ, ನಮ್ಮ ದೇಶದ ಹೆಸರನ್ನು 'ಇಂಡಿಯಾ' ಎಂದು ಹೇಳುವುದು ತಪ್ಪಾಗುತ್ತದೆ, ಅವಶ್ಯವಾದರೆ, ನಾವು ಕೆಲಕಾಲದ, ನಮ್ಮ ಸ್ವಂತ ದೇಶದ ಹೆಸರಿನ ಅನಂತರ ಆವರಣದಲ್ಲಿ 'ಇಂಡಿಯಾ' ಎಂದು ಹಾಕಬಹುದು ಅಥವಾ ಐರಿಷ್‌ನವರು ಮಾಡಿದಂತೆ (ಇಂಗ್ಲಿಷಿನಲ್ಲಿ "ಇಂಡಿಯಾ") ಎಂದು ಹೇಳಬಹುದು, ಆದರೆ ನಮ್ಮ ದೇಶದ ಹೆಸರನ್ನು "ಇಂಡಿಯಾ" ಎಂದು ಹೇಳುವುದು ನನಗೆ ಹಾಸ್ಯಾಸ್ಪದವಾಗಿ ತೋರುತ್ತದೆ. ನಾನು ಈ ಸದನದ ಮುಂದೆ ಪರಿಗಣನೆಗಾಗಿ ತರಬೇಕೆಂದು ಆಶಿಸಿದ್ದ ಎರಡನೆಯ ಅಂಶ ಇದೇ ಆಗಿದೆ.

ಮಾನ್ಯರೆ, ನಾನು ನಿವೇದಿಸಲು ಇಷ್ಟಪಡುವ ಮೂರನೆಯ ಅಂಶ ಸ್ವಲ್ಪ ಸೂಕ್ಷ್ಮವಾಗಿದೆ. ನನ್ನ ಸ್ನೇಹಿತರಾರೂ ನನ್ನನ್ನು ತಪ್ಪು ತಿಳಿಯಬಾರದೆಂದು ನಾನು ಆಶಿಸುತ್ತೇನೆ. ನನ್ನ ಮಿತ್ರ ಡಾ. ಅಂಬೇಡ್ಕರ್ ಅವರು ತಮ್ಮ ಭಾಷಣದಲ್ಲಿ ಅಲ್ಪಸಂಖ್ಯಾತರ ಪ್ರಶ್ನೆ ಕುರಿತು ಉಲ್ಲೇಖಿಸಿದ್ದಾರೆ. ವಿಭಜನೆ ಕುರಿತು ಅವರು ಐರಿಷ್ ಸಮ್ಮೇಳನಗಳ ನಡವಳಿಗಳನ್ನು ಪ್ರಸ್ತಾಪಿಸಿದ್ದಾರೆ. ಆದರೆ ಆ ತೀವ್ರ ವಿರೋಧವಿದ್ದುದನ್ನು ಅಲ್ಲಿ ಹೇಳಿದ ಮಾತು ಹೀಗಿದೆ: "ನಿಮ್ಮ ಸೈನ್ಯದೊಂದಿಗೆ ಹಾಳಾಗಿ ಹೋಗಿ, ನಿಮ್ಮಿಂದ ಆಳಲ್ಪಡಲು ನಾವು ಬಯಸುವುದಿಲ್ಲ" ಎಂದು ಹೇಳಿದ್ದಾರೆ. ಅವರಿಗೆ ಬೆಂಬಲವಾಗಿ ಇಡೀ ಆಂಗ್ಲ ಸರ್ಕಾರ ಇತ್ತು ಎಂಬುದನ್ನು ಅವರು ಮರೆತಿರುವಂತಿದೆ. ಅಂಥವರು ಇಲ್ಲಿ ಯಾರೂ ಇಲ್ಲ. ಯಾವ ಅಲ್ಪಸಂಖ್ಯಾತರೂ ಈಗ ಅಂತಹ ಯಾವುದೇ ಪ್ರತ್ಯೇಕ ರಾಜ್ಯ ಬೇಕೆಂದು ಪ್ರಾಮಾಣಿಕವಾಗಿ ಆಶಿಸುವುದಿಲ್ಲ ಎಂದು ನಾನು ದೃಢವಾಗಿ ಹೇಳುತ್ತೇನೆ. ಆದುದರಿಂದ, ನಾನು ಒಂದು ನಿವೇದನೆ ಮಾಡುವುದಿದೆ, ಅಲ್ಪಸಂಖ್ಯಾತರಿಗೆ ರಕ್ಷಣೆ ಒದಗಿಸಬಾರದೆಂದು ನಾನು ಹೇಳುವುದಿಲ್ಲ. ಎಲ್ಲ ರೀತಿಯಿಂದಲೂ ನಾವು ಹಾಗೆ ಮಾಡೋಣ; ನಾವು ಅವರಿಗೆ ಸಾಧ್ಯವಿರುವ ಪ್ರತಿಯೊಂದು ಭರವಸೆ ಕೊಡೋಣ, ಮಾತುಗಳಲ್ಲಿ ಮಾತ್ರವಲ್ಲ, ವಾಸ್ತವಿಕ ಕಾರ್ಯದಲ್ಲಿಯೂ ಸಹ; ಆದರೆ ಮಾನ್ಯರೆ, ನಾನು ಹೇಳಿಕೊಳ್ಳುವುದೆಂದರೆ, ಕರಡು ಸಂವಿಧಾನದಲ್ಲಿ ಸ್ಥಾನಗಳ ಮೀಸಲಾತಿ ಕುರಿತ ಅನುಚ್ಛೇದಗಳಲ್ಲಿ ಮತ್ತೊಂದು ಅನುಚ್ಛೇದವನ್ನು ಅದಕ್ಕೆ ಸೇರಿಸಬೇಕು – ನಾನು ಅದಕ್ಕೆ ಅಡ್ಡಿಪಡಿಸಲು ಇಚ್ಛಿಸುವುದಿಲ್ಲ–ನಾನು ಅದರಿಂದ ಏನನ್ನೂ ತೆಗೆದು ಹಾಕಲು ಯಾವುದೇ ಅನ್ಯಥಾ ಆ ಬಗ್ಗೆ ಬಯಸುವುದಿಲ್ಲ, ಎಲ್ಲ ರೀತಿಯಿಂದಲೂ ಅಲ್ಪ ಸಂಖ್ಯಾತರಿಗೆ ಅಂಥ ಮೀಸಲಾತಿ ಇರಲಿ. ಇಂದು ಆ ಖಂಡದಲ್ಲಿ ಇರುವಂತೆ, ಅನ್ಯಥಾ ಆ ಬಗ್ಗೆ ನಿರ್ಧಾರ ಮಾಡುವವರೆಗೂ ಮೀಸಲಾತಿಯು ಹತ್ತು ವರ್ಷಗಳ ಅನಂತರ ತಾನೇ ತಾನಾಗಿ ಹೋಗುತ್ತದೆ ಎಂದು ಹೇಳಲಾಗಿದೆ. ನಾನು ಬಯಸುವುದು ಇಷ್ಟೆ ಮಾನ್ಯರೆ, ಅಲ್ಪಸಂಖ್ಯಾತರು ತಾವೇ ಆಗಲಿ ಅಥವಾ ಅಲ್ಪಸಂಖ್ಯಾತರ ಯಾವುದೇ ಪಂಗಡವಾಗಲಿ ಹತ್ತು ವರ್ಷಗಳು ಕಳೆಯುವುದಕ್ಕೂ ಮೊದಲೇ ತಾವೇ ಬಯಸಿದರೆ ಈ ಮೀಸಲಾತಿ ಅಥವಾ ವಿಶೇಷ ಪ್ರಾತಿನಿಧ್ಯವು ಇಲ್ಲವಾಗಿರುತ್ತದೆ. ಆಗ ಸಂವಿಧಾನ ಆ ಉಪಬಂಧದ ಮೂಲಕ ಏನನ್ನೂ ಮಾಡಲಾಗುವುದಿಲ್ಲ. ನಾನು ಹೇಳಿದಂತೆ ನನ್ನನ್ನು ತಪ್ಪಾಗಿ ತಿಳಿಯಬಾರದು ಎಂದು ಆಶಿಸುತ್ತೇನೆ. ಒದಗಿಸಿರುವ ರಕ್ಷಣೆಗಳನ್ನು ಹಿಂತೆಗೆದುಕೊಳ್ಳುವುದು ಎಳ್ಳಷ್ಟು ಸರಿಯಲ್ಲ ಎಂಬುದು ಇಚ್ಛಿಸುವ ನಾನಾದರೂ ಬಯಸುವುದು, ಅಲ್ಪಸಂಖ್ಯಾತರು ತಾವಾಗಿಯೇ ಮೀಸಲಾತಿಯನ್ನು ಕೈಬಿಡಲು ಇಚ್ಛಿಸುವ ಮತ್ತು ನಿರ್ಧರಿಸಿರುವ ಸಾಧ್ಯತೆಯನ್ನು ಅಲ್ಲಗಳೆಯುವ ರೀತಿಯಲ್ಲವೆಂಬುದು ನನ್ನ ಇಚ್ಛೆ, ಮಾನ್ಯರೆ, ಇದನ್ನು ಮಾಡಲಾಗುವುದೆಂಬ ಭರವಸೆ ನನಗಿದೆ.

ಮಾನ್ಯರೆ, ನಮ್ಮ ಸಂವಿಧಾನದ ಕೊನೆಯಲ್ಲಿ, ಒಂದು ನಿಶ್ಚಿತ ಅವಧಿಯ ಅನಂತರ ಒಂದು ಶಾಸನ ಬದ್ಧ ಪರಿಷ್ಕರಣೆಗೆ ಅವಕಾಶ ಇರಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಸಾಕಷ್ಟು ಯೋಚನೆಮಾಡಿ ಸಂವಿಧಾನಕ್ಕೆ ತಿದ್ದುಪಡಿ ಮಾಡಲು ಉಪಬಂಧಗಳನ್ನು ಸಿದ್ಧಪಡಿಸಲಾಗಿದೆ ಎಂದು ನಾನು ಬಲ್ಲೆ. ಆದರೆ,

ಏನೇ ಹೇಳಿದ್ದರೂ, ಹಾಗೆ ಉಪಬಂಧವನ್ನು ಸಿದ್ಧಪಡಿಸುವ ಕಾರ್ಯ ಸುಲಭವಾದುದೇನಲ್ಲ ಎಂದೂ ಭಾವಿಸುತ್ತೇನೆ. ಸಂವಿಧಾನದಕ್ಕೆ ಬದಲಾವಣೆಗಳಿಗಾಗಿ ಅಥವಾ ತಿದ್ದುಪಡಿಗಳಿಗಾಗಿ ಉಪಬಂಧಗಳನ್ನು ವ್ಯತ್ಯಾಸಗೊಳಿಸುವುದು ಬಹು ಸುಲಭವಲ್ಲ ಎಂಬ ನಂಬಿಕೆ ನನಗೆ ಇಲ್ಲ ಎಂದು ಸ್ಪಷ್ಟಪಡಿಸಲು ಇಚ್ಛಿಸುತ್ತೇನೆ. ಸಂವಿಧಾನಕ್ಕೆ ಯಾವುದೇ ತಿದ್ದುಪಡಿಯನ್ನು ಅಂಗೀಕರಿಸುವಂತೆ ಮಾಡುವುದು ಬಹಳ ಕಷ್ಟದ ಕೆಲಸವೆಂದು ನಾನು ನಂಬಿದ್ದೇನೆ. ಆದರೆ, ಮೊದಲ ಬಾರಿಗೆ ಆರಂಭದಲ್ಲಿ, ಒಮ್ಮೆಯಷ್ಟೆ, ಕೆಲವು ವರ್ಷಗಳ ಅನುಭವದ ಅನಂತರ ನಮ್ಮ ಸಂವಿಧಾನದಲ್ಲಿ ಒಂದು ಶಾಸನಬದ್ಧ ಅವಕಾಶವಿರಬೇಕು ಎಂಬುದಾಗಿ ನಾನು ಇಚ್ಛಿಸುತ್ತೇನೆ. ಮತ್ತು ಪುನರ್‌ಪರಿಶೀಲನೆ ಮಾಡಲು ಸಲಹೆ ಮಾಡಲಾದ ಯಾವುದೆ ಬದಲಾವಣೆಗಳನ್ನು ಪರಿಗಣಿಸಬೇಕು ಮತ್ತು ಸರಳ ಬಹುಮತದ ವಿಧಾನದ ಮೂಲಕ ಅಂಗೀಕರಿಸಬೇಕು. ಈ ಅವಕಾಶವನ್ನು ಒಮ್ಮೆ ಮಾತ್ರ ಕಲ್ಪಿಸಲು ನಾನು ಇಷ್ಟಪಡುತ್ತೇನೆ. ಸಲಹೆಯ ವಿವರಗಳನ್ನು ಕುರಿತು ಮಾತನಾಡಲು ನಾನು ತತ್ತ್ವಸಿದ್ಧಾಂತ ವಾದಿಯಲ್ಲ. ಬಹುಶಃ ಮೂರು ವರ್ಷಗಳ ಅನಂತರ ಐದು ವರ್ಷಗಳ ಅಥವಾ ಏಳು ವರ್ಷಗಳ ಅನಂತರ ಇರಬಹುದು. ಆದರೆ, ನನ್ನ ಉದ್ದೇಶ ಏನಿದ್ದರೂ ಮೂರು ಅಥವಾ ಐದು ವರ್ಷಗಳ ನಮ್ಮ ಅನುಭವದ ಅನಂತರ ಕಡೇಪಕ್ಷ ಒಮ್ಮೆ ನಾವು ಶಾಸನಬದ್ಧ ಪುನರ್‌ಪರಿಶೀಲನೆ ಮಾಡಬೇಕು. ಅದು ಸ್ವಯಂಚಾಲಿತವಾಗಿ ಮುಂದುವರಿಯಬೇಕು ಮತ್ತು ಪ್ರಾಂತ್ಯಗಳ ಮತ್ತು ಕೇಂದ್ರದಲ್ಲಿ, ಜನರ ಅನುಭವ ಕುರಿತು ಸಮಾಲೋಚಿಸಿದ ಅನಂತರ ನಾವು ಆವಶ್ಯಕವಿರುವ ಬದಲಾವಣೆಗಳನ್ನು ಅಳವಡಿಸಬೇಕು. ತದನಂತರ, ಸಂವಿಧಾನಕ್ಕೆ ಮಾಡಬೇಕಾದ ತಿದ್ದುಪಡಿಗಳ ಬಗ್ಗೆ ಸಾಧ್ಯವಿದ್ದಷ್ಟು ಕಠಿಣ ಮತ್ತು ಕಟ್ಟುನಿಟ್ಟಾದ ಉಪಬಂಧಗಳನ್ನು ಮಾಡಲು ನಾನು ವೈಯಕ್ತಿಕವಾಗಿ ಇಷ್ಟಪಡುತ್ತೇನೆ. ಮಾನ್ಯರೆ, ನೀವು ಗಂಟೆ ಬಾರಿಸುವ ಮೊದಲೇ ನನ್ನ ಮಾತುಗಳನ್ನು ಮುಕ್ತಾಯಮಾಡಲು ನಾನು ಕಾತರನಿದ್ದೇನೆ. ಆದ್ದರಿಂದ ನಾನು ಇಲ್ಲಿಗೆ ನಿಲ್ಲಿಸುತ್ತೇನೆ. ಈ ಸದನದ ಮುಂದೆ ನಾನು ಕೆಲವು ಸಲಹೆಗಳನ್ನು ಇಡಬಯಸಿದ್ದುದಾಗಿದೆ. ಈ ಸಲಹೆಗಳನ್ನು ಮುಂದಿಡಲು ನನಗೆ ಈ ಅವಕಾಶ ಕೊಟ್ಟುದಕ್ಕಾಗಿ ನಾನು ಆಭಾರಿಯಾಗಿದ್ದೇನೆ.

**ಶ್ರೀ ಆರ್.ಕೆ. ಸಿಧ್ವಾ** (ಸಿ.ಪಿ ಮತ್ತು ಬೇರಾರ್ : ಸಾಮಾನ್ಯ) : ಮಾನ್ಯರೆ, ನಾನು ಸಭೆಯನ್ನು ಮುಂದೂಡುವ ಮೊದಲು ಈಗ ನಡೆಯುತ್ತಿರುವ ಚರ್ಚೆ ಕೊನೆಯ ಕಾರ್ಯಕ್ರಮವೆಂದು ನಾನು ತಿಳಿಯಬಹುದೆ?

**ಮಾನ್ಯ ಉಪಸಭಾಧ್ಯಕ್ಷರು** : ನಾಳೆ ಅನಂತರ ಯಾರೂ ಹೆಚ್ಚು ಸಮಯ ಬೇಕು ಎಂದು ಹೇಳಲು ಇಲ್ಲಿ ಯಾರೂ ಇರುವುದಿಲ್ಲ.

ಸದನವನ್ನು ನಾಳೆ ಬೆಳಗ್ಗೆ ೧೦ ಗಂಟೆವರೆಗೆ ಮುಂದೂಡಲಾಗಿದೆ.

ಅನಂತರ ಸಭೆಯನ್ನು ೧೯೪೮ರ ನವೆಂಬರ್ ೯ರ ಮಂಗಳವಾರ ಬೆಳಗ್ಗೆ ೧೦ ಗಂಟೆವರೆಗೆ ಮುಂದೂಡಲಾಯಿತು.

*[ಹಿಂದೂಸ್ಥಾನಿ ಭಾಷಣದ ಇಂಗ್ಲಿಷ್ ಅನುವಾದ]*